ಸಂವಾದ

ಜನವರಿ ೨೦೦೬ ರೂ.೨೦

ಕೆರೆಯ ಚಿಕನ್ಯಾ
ಗಲೂರಿನ
ನ ಮಿಡಿಯೂ

ಂದ
ಚೆ

ಒಳ ಮೀಸಲಾತಿ ಬೇಕೆ?

ೇಶ್ವರಯ್ಯ:
ವಾಸ್ತವಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೩

ಜನವರಿ ೨೦೦೬

ಸಂಪಾದಕ:

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾ ನಗರ, ಮಾಗಡಿ ರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

© ೨೩೨೮೭೯೪೩ / ೯೪೪೮೦ ೪೮೩೦೬

ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

© 080-23287943, 94480 48306

e- mail : samvaada@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಹೊಸ ಪುಸ್ತಕ ೪
- ಅಂತರಂಗ ೫
- ಮೋಕ್ಷಗುಡಂ ವಿಶ್ವೇಶ್ವರಯ್ಯ: ಕೆಲ ವಾಸ್ತವ ಸಂಗತಿಗಳು ೬
  - ಸನತ್ ಕುಮಾರ ಬೆಳಗಲಿ
- ವಿಯೆಟ್ನಾಂ: ಜನತೆಯ ಮಹಾ ಯುದ್ಧ ೮
  - ರಾಯ್ ಮತ್ತು ಜಯ
- ಒಳ ಮೀಸಲಾತಿ ಬೇಕೆ? ೧೦
  - ಡಾ.ಎಚ್.ಟಿ. ಪೋತೆ

- ತರೀಕೆರೆಯ ಚಿಕನ್ನೂ ಮಂಗಳೂರಿನ ಮಾವಿನ ಮಿಡಿಯೂ ೧೪
  - ಅರವಿಂದ ಚೊಕ್ಕಾಡಿ
- ಕೇಳುವವರಿಲ್ಲದ ಕೊರಗರು ೧೮
  - ಡಾ. ಎಚ್. ನಾಗವೇಣಿ
- ದೇವರಾಯ ೨೦
  - ಡಾ.ಸರಜೂ ಕಾಟ್ಕರ್
- ಅಹಿಂದ ಚರ್ಚೆ ೨೪
  - ಡಾ. ಬಂಜಗೆರೆ ಜಯಪ್ರಕಾಶ
  - ಡಾ. ಲಕ್ಷ್ಮೀಪತಿ ಸಿ.ಜಿ
  - ಡಿ. ಡೊಮಿನಿಕ್
  - ಡಾ. ಜೋಗನ್ ಶಂಕರ್
- ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು ೩೦
  - ಡಾ. ಶೈಲಜಾ ಹಿರೇಮಠ

- ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ ೩೪
  - ಡಾ॥ ಮೊಗಳ್ಳಿ ಗಣೇಶ್
- ದಲಿತ್ ಡೈರಿ ೩೮
  - ಚಂದ್ರಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ.ಎಚ್. ರಾಜಶೇಖರ್

ಕವನಗಳು : ❑ ಕುಬ್ಜವಾಗಿ ಬಿಟ್ಟಿದೆ ಗಿಡ ೧೩ ❑ ನಾಗಬೆತ್ತದ ಹುಡುಗಿ ೨೩

ಮುಖಪುಟ ಕಲೆ: ಪುರಾತನ ಪರ್ಷಿಯನ್ ಶಿಲ್ಪ ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮಾಹಿತಿ ತಂತ್ರ ಜ್ಞಾನ ಮತ್ತು ಮೂಲ ಸೌಲಭ್ಯ

ಪ್ರೀತಿಯ ಹೊನ್ನಾಪುರ ಅವರಿಗೆ

ಡಿಸೆಂಬರ್ ತಿಂಗಳ 'ಸಂವಾದ' ದಲ್ಲಿ ಡಾ|| ಜಿ. ಪಾಂಡುನಾಯಕ್ ಅವರು ಬರೆದಿರುವ ಮಾಹಿತಿ ತಾಂತ್ರಿಕರ ಮೂಲ ಸೌಲಭ್ಯ ಲೇಖನ ಓದಿ ಈ ಪ್ರತಿಕ್ರಿಯೆ ನೀಡುತ್ತಿರುವೆನು.

ಮೇಲು ನೋಟಕ್ಕೆ ಲೇಖನ ಪೂರ್ವಾಗ್ರಹ ಪೀಡಿತವಾಗಿರುವಂತೆ ಕಾಣುತ್ತದೆ. ನಮ್ಮಲ್ಲಿ ಒಂದು ಅಪಾಯ ವನ್ನು ನಾನು ಯಾವಾಗಲು ಗುರುತಿಸುತ್ತೇನೆ. ಅದೆಂದರೆ, ಯಾವುದೇ ಅಭಿವೃದ್ಧಿ ಕೆಲಸ ಆರಂಭವಾದಗಲೂ ನಮ್ಮ ಪ್ರಗತಿಪರರು, ಹೋರಾಟಗಾರರು ಅದರ ಬಗೆಗೆ Negative ಆಗಿ ಪ್ರತಿಕ್ರಿಯಿಸುತ್ತಾರೆ. ಅಭಿವೃದ್ಧಿಯ ಪರಿಕಲ್ಪನೆಯನ್ನು ಗ್ರಹಿಸುವುದಲ್ಲೇ ನಾವು ಎಡವುತ್ತೇವೆ.

ಮಾಹಿತಿ ತಂತ್ರಜ್ಞಾನದಿಂದಾಗಿ ಉದ್ಯೋಗಾವಕಾಶಗಳು ನಾಶವಾಗುತ್ತವೆ ಎಂಬ ಸುಳ್ಳು ಪ್ರಚಾರವನ್ನು ಇದೇ ಪ್ರಗತಿಪರರು ಹತ್ತಾರು ವರ್ಷಗಳಿಂದ ಮಾಡಿ ಮಾಡಿ ಸುಸ್ತಾಗಿ ಎಲ್ಲರೂ ಈಗ ಅನಿವಾರ್ಯವಾಗಿ ಅದನ್ನೇ ಅಪ್ಪಿಕೊಂಡಿದ್ದಾರೆ. ಪೆನ್ನು-ಪೇಪರ್‌ಗಳಿಗಿದ್ದ ಸಂಬಂಧ ಈಗ ಕೇವಲ ಕಂಪ್ಯೂಟರ್ ಕೀಬೋರ್ಡ್‌ಗೆ ಸೀಮಿತವಾಗುತ್ತಿದೆ. ಕಂಪ್ಯೂಟರ್‌ಗಳಿಂದ ನಿರುದ್ಯೋಗ ಹೆಚ್ಚಾಗುತ್ತದೆ ಅಂದವರೇ ಈಗ ಕಂಪ್ಯೂಟರ್ ಇಲ್ಲದೆ ಬದುಕು ಸಾಧ್ಯವಿಲ್ಲ ಅನ್ನುತ್ತಿದ್ದಾರೆ.

ಇನ್ನು ಮೂಲ ಸೌಕರ್ಯದ ವಿಷಯಕ್ಕೆ ಬರೋಣ. ಬೆಂಗಳೂರಿನ ಇಂದಿನ ಸ್ಥಿತಿ ನೋಡಿದರೆ ಯಾರಿಗಾದರೂ ಏನಾದರೂ ಸಾಧಿಸಬಹುದು ಅನ್ನಿಸುತ್ತದೆಯೆ? ಬೆಳ್ಳಗ್ಗೆ ೧೦ ಗಂಟೆಗೆ ಕಚೇರಿ ಇದ್ದರೆ ೮ ಗಂಟೆಗೆ ಮನೆ ಬಿಡಬೇಕು. ಮಾತೆತ್ತಿದರೆ 'ಟ್ರಾಫಿಕ್ ಜಾಮ್' ಆಗುವುದರಿಂದ ಸರಿಯಾದ ಸಮಯಕ್ಕೆ ಕಚೇರಿ ಮುಟ್ಟುವ ಯಾವ ಗ್ಯಾರಂಟಿಯೂ ಇಲ್ಲ. ಸರ್ಕಾರಿ ಕೆಲಸವಾದರೆ ಎಷ್ಟು ಹೊತ್ತಾದರೂ ನಡೆಯುತ್ತದೆ! ಆದರೆ ಖಾಸಗಿಯವರು ಏನು ಮಾಡಬೇಕು? ಕನಿಷ್ಟ ಓಡಾಡುವ ರಸ್ತೆಗಳೂ ಸರಿಯಿಲ್ಲದಿದ್ದರೆ ಜನ ಕೆಲಸ ಮಾಡುವುದಾದರೂ ಹೇಗೆ? ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದಾದರೂ ಹೇಗೇ?



ಈ ದೃಷ್ಟಿಯಿಂದ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಅಭಿವೃದ್ಧಿಯನ್ನೇ ಗುರಿಯಾಗಿರಿಸಿ ಕೊಂಡಿರುವುದರಿಂದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕೇಳುವುದು ಸರಿಯಾಗಿಯೇ ಇದೆ. ಯಾವುದೇ ಮಾಹಿತಿ ತಂತ್ರಜ್ಞಾನ ಸಂಸ್ಥೆ ನಮಗಷ್ಟೇ ರಸ್ತೆ-ನೀರು-ವಿದ್ಯುತ್ ಒದಗಿಸಿ ಎಂದು ಕೇಳುತ್ತಿಲ್ಲ. ಅವರ ತೊಂದರೆಯನ್ನು ಅವರು ಹೇಳುತ್ತಿದ್ದಾರೆ. ಅದನ್ನು ಸರಿಪಡಿಸಬೇಕಾದ್ದು ಸರ್ಕಾರದ ಕರ್ತವ್ಯ. ಬೆಂಗಳೂರೇನು; ಇಡೀ ದೇಶಕ್ಕೇ ಮೂಲಭೂತ ಸೌಕರ್ಯಗಳನ್ನು ಸಮರ್ಥವಾಗಿ ಒದಗಿಸುವುದು ಸರ್ಕಾರದ ಕರ್ತವ್ಯ. ಅದಕ್ಕಾಗಿ ನಾವುಗಳು ಹೋರಾಡಬೇಕಾಗಿದೆಯೇ ವಿನಾಃ ಅವರಿಗೇಕೆ ಇವರಿಗೇಕೆ ಅನ್ನುವುದಲ್ಲ.

ದೇವೇಗೌಡರ ಹೊಟ್ಟೆ ಉರಿಯೇ ಬೇರೆ. ಅವರಿಗೆ ದಕ್ಕ ಬೇಕಾದದ್ದು ಬೇರೆಯವರಿಗೆ ದಕ್ಕಿದೆ! ಹಾಗಾಗಿ ಅವರು 'ಕ್ಯಾತೆ' ತೆಗೆಯುತ್ತಿದ್ದಾರೆ. ಬಿಲ್ ಗೇಟ್ಸ ಬಂದಾಗ ತಬ್ಬಿಕೊಳ್ಳುವ ಅವರಿಗೇಕೆ ನಾರಾಯಣ ಮೂರ್ತಿ ಮಾತ್ರ ವೈರಿಯಾಗಿ ಕಾಣಿಸುತ್ತಾರೆ. ಅದು ಹೊಳೆನರಸೀಪುರದ ರಾಜಕೀಯ! ದೇವೇಗೌಡ ಎಂದಾದರೂ ರಾಜಕೀಯ ಔದರ್ಯ ತೋರಿದ ಉದಾಹರಣೆಗಳಿವೆಯೆ? ಎಸ್.ಎಂ.ಕೃಷ್ಣ ಯಾರೊಂದಿಗೆ ಚೆನ್ನಾಗಿದ್ದರೋ ಅವರೆಲ್ಲ ದೇವೇಗೌಡರಿಗೆ ವೈರಿಗಳು ಅಷ್ಟೆ! ಅದಕ್ಕೇ ನಮ್ಮವರೇ ಆದ ನಾರಾಯಣ ಮೂರ್ತಿ ಗಿಂತ ಅಮೇರಿಕಾದ ಬಿಲ್ ಗೇಟ್ಸ್ ಅವರಿಗೆ ಮಹಾತ್ಮನಂತೆ ಕಾಣಿಸುತ್ತಿರುವುದು.

'ಸಂವಾದ' ಈ ಎಲ್ಲವನ್ನು ತೂಗಿ ನೋಡಬೇಕೆಂಬುದೇ ನನ್ನ ಅಪೇಕ್ಷೆ. ನಾವೀಗ ಜಗತ್ತಿನೊಂದಿಗೆ ಸ್ಪರ್ಧಿಸಬೇಕಾಗಿದೆ. ಪಕ್ಕದ ಬಡಪಾಯಿ ಬೋರೇಗೌಡನೊಂದಿಗೆ ಅಲ್ಲ. ಹಲವು ದಶಕಗಳ ಪತ್ರಿಕೋದ್ಯಮದ ಅನುಭವ, ಸಾಮಾಜಿಕ ಚಳವಳಿಗಳ ಒಡನಾಟ ಇರುವ ನಿಮಗೆ ಇವನ್ನು ವಿವರಿಸಿ ಹೇಳಬೇಕಾದ ಅಗತ್ಯ ಇಲ್ಲ ಅಂದು ಕೊಂಡಿರುವೆ.

ವಂದನೆಗಳು

ಮಹಾಂತೇಶ ಎನ್. ಬಡಿಗೇರ
ಬೆಂಗಳೂರು

ಕೊರಗರು ದಲಿತರಲ್ಲವೆ?

ಮಾನ್ಯ ಸಂಪಾದಕರೇ,

'ಕೇಳುವವರಿಲ್ಲದ ಕೊರಗರು' ಲೇಖನ ಓದಿ ಕರುಳು ಕುಯ್ದಂತಾಯಿತು. ಅದರಲ್ಲೂ ನಾಗವೇಣಿ ಅವರ ಸಾಹಿತ್ಯಕ ನಿರೂಪಣೆ ಲೇಖನದ ತೀವ್ರತೆಯನ್ನು ಇತ್ತಷ್ಟು ಗಾಢವಾಗಿಸಿದೆ. ನಾನು ದಕ್ಷಿಣ ಕನ್ನಡದವಳೇ ಆಗಿರುವುದರಿಂದ ಕೊರಗರ ದುರ್ಗತಿಯನ್ನು ನೇರವಾಗಿ ಕಂಡು ಅನುಭವಿಸಿದ್ದೇನೆ. ಆದರೆ ನನಗೆ ಈಗಲೂ ಆಶ್ಚರ್ಯವಾಗುವುದು ಕೊರಗರು ದಲಿತರಲ್ಲವೇ ಅಂತ. ಯಾಕೆ ಅಂದರೆ ಯಾವೊಬ್ಬ ದಲಿತ ಮುಖಂಡರೂ ಈ ಕೊರಗರ ಜೀವನವನ್ನು ನೋಡಿ ಪ್ರತಿಕ್ರಿಯಿಸಿದ್ದನ್ನು ನಾನು ನೋಡಿಯೇ ಇಲ್ಲ. ದಲಿತ ಸಂಘರ್ಷ ಸಮಿತಿಯಾಗಲಿ, ದಲಿತ ಮಂತ್ರಿ ಶಾಸಕರಾಗಲಿ ಇವರ ಬಗ್ಗೆ ಎಂದೂ ಹೋರಾಟ ಮಾಡಿದ್ದು ಕಂಡಿಲ್ಲ. ಯಾಕೆ ಇಂಥ ಪರಿಸ್ಥಿತಿ ಎಂಬುದೇ ಅರ್ಥವಾಗುತ್ತಿಲ್ಲ.

ಈಚೆಗೆ ಒಂದೆರಡು ಎನ್.ಜಿ.ಓ ಗಳು ಕೊರಗರ ಬಗ್ಗೆ ಕೆಲಸ ಮಾಡುತ್ತಿರುವುದನ್ನು ಓದಿ ತಿಳಿದಿದ್ದೇನೆ. ಏನೇ ಆದರೂ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಕೊರಗರು ಶೈಕ್ಷಣಿಕವಾಗಿ-ಸಾಮಾಜಿಕವಾಗಿ ಮುಂದೆ ಬರದಿದ್ದರೆ ಅವರ ಅಭಿವೃದ್ಧಿ ಸಾಧ್ಯವಿಲ್ಲ. ಅಲ್ಲದೆ ಅವರು ಸ್ವಯಂ ಸಂಘಟಿತರಾಗಿ ಹೋರಾಟ ಆರಂಭಿಸುವುದು ಅತೀ ಮುಖ್ಯವಾಗಿದೆ. ದಲಿತ ಕಲ್ಪನೆ ಕೂಡ ಇಂದು ಸೀಮಿತ 'ಜಾತಿ' ಅರ್ಥ ಪಡೆದುಕೊಂಡು ಅಪಾರ್ಥಕ್ಕೆ ಒಳಗಾಗಿದೆ. ಬಹುತೇಕ ಎಲ್ಲ ದಲಿತ ಜಾತಿಗಳು ಇಂದು ಪ್ರತ್ಯೇಕವಾಗಿ ಸಂಘಟಿತವಾಗಿ ತಮ್ಮ ಜಾತಿಯ ಅಭಿವೃದ್ಧಿಗೆ ಮಾತ್ರ ಹೋರಾಡುತ್ತಿವೆ. ಆದುದರಿಂದ ಕೊರಗರು ತಮ್ಮದೇ ನಾಯಕತ್ವ ಹಾಗೂ ಸಂಘಟನೆ ರೂಪಿಸಿಕೊಂಡ ಬೆಳೆಯಬೇಕಾದ ಅನಿವಾರ್ಯತೆ ಇಂದು ಎದುರಾಗಿದೆ. ಇಲ್ಲದಿದ್ದರೆ ಬೇರೆಯವರು ಇವರಿಗಾಗಿ ಹೋರಾಡುವುದು ಅಸಾಧ್ಯದ ಮಾತಾಗುತ್ತದೆ. ಕೇಳುವವರಿಲ್ಲದ ಕೊರಗರು ನಿರಂತರವಾಗಿ ಹಾಗೇ ಉಳಿಯಬೇಕಾಗುತ್ತದೆ. 'ಸಂವಾದ' ಇಂಥ ಅರ್ಥಪೂರ್ಣ ಕಾರ್ಯಕ್ಕೆ ಪ್ರೇರಣೆ ನೀಡಲಿ ಎಂದು ಹಾರೈಸುತ್ತೇನೆ.

ಸುಶೀಲ ದೇವಶೆಟ್ಟಿ
ರಾಯಭಾಗ

ಪತ್ರಗಳು

ಕಾವ್ಯ ಚಿತ್ರ

ಪ್ರೀತಿಯ ಸಂಪಾದಕರೇ,

'ಸಂವಾದ'ದಲ್ಲಿ ಪ್ರಕಟಿಸುವ ಕವನಗಳು ಉತ್ತಮವಾಗಿವೆ. ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ವಿ.ಎಂ. ಮಂಜುನಾಥ್ ಅವರ 'ಡೀಸೆಲ್ ಫ್ಯಾಕ್ಟರಿಯ ಹಿಂಬೆಳಕಿನಲ್ಲಿ' ಕವನವಂತೂ ತುಂಬಾ ಸುಂದರವಾಗಿ ಮೂಡಿ ಬಂದಿದೆ. ಕವನ ಓದುತ್ತಿರುವಂತೆ ಕಣ್ಣ ಮುಂದೆ ಬರುವ ಚಿತ್ರಗಳು ಡಿಸ್ಟರ್ಬ್ ಮಾಡುತ್ತವೆ. ಈಚಿನ ಕವಿಗಳಲ್ಲೆ ಅದ್ಬುತ ಪ್ರತಿಭೆ ಮಂಜುನಾಥ್ ಅವರದು.

ಸಿ.ಎಂ. ರಾಮಚಂದ್ರ
ಮೈಸೂರು

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. / ಡಿ.ಡಿ. ಮಾತ್ರ ಕಳುಹಿಸಬೇಕು.

ಹೊಸ ಪುಸ್ತಕ

ಸುಗ್ಗಿಯಕಥೆ

ಲೇ: ಎಲ್. ರಂಗನಾಥ್ ಶಿರಾ

ಬೆಲೆ: ರೂ ೧೦೦/

'ಕತ್ತಲ ನಾಡಿನ ಹಾಡು' ಕವನ ಸಂಕಲನದ ಮೂಲಕ ಕನ್ನಡ ಕಾವ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದ ರಂಗನಾಥ್ ಅವರ ಕಥನ ಕಾವ್ಯ ಇದು. ಕಥನ ಕಾವ್ಯ ಕನ್ನಡ ಕಾವ್ಯ ಕ್ಷೇತ್ರಕ್ಕೆ ಅಪರಿಚಿತವಲ್ಲವಾದರೂ ಅಪರೂಪ. 'ಸುಗ್ಗಿಯ ಕಥೆ'ಯಲ್ಲಿ ಪ್ರಾದೇಶಿಕ ಪರಿಸರ ಮತ್ತು ಭಾಷೆ ಹಾಗೂ ವ್ಯವಸ್ಥೆಯ ಒಳಸುಳಿಗಳನ್ನು ಕಥಾ ಹಂದರದಲ್ಲಿ ಅಂತರ್ಗತಗೊಳಿಸುವ ಅಭಿವ್ಯಕ್ತಿ ಪ್ರಧಾನವಾಗಿ ಕಾಣಿಸುತ್ತವೆ. ಸುಗ್ಗಿಯ ಕಥೆಯನ್ನು ಹೇಳುತ್ತಲೇ ಸಾಮಾಜಿಕ- ಆರ್ಥಿಕ ದುರಂತಗಳನ್ನು ಒಳಗೊಳ್ಳುವ ಕಥನ ಕ್ರಮ ಆಕರ್ಷಕವಾಗಿದೆ.

ಪ್ರಕಾಶಕರು: ಪಂಚಮ ಪ್ರಕಾಶನ
ಶಿರಾ ಟೌನ್-೫೭೨೧೩೭,



ಬಹಿಷ್ಕೃತ

ಲೇ: ನರೇಂದ್ರ ಜಾಧವ್

ಅನು: ಸುಮಾ ದ್ವಾರಕಾನಾಥ್

ಬೆಲೆ: ರೂ.೧೫೦/-

ಮರಾಠಿಯಲ್ಲಿ ದಲಿತ ಆತ್ಮ ಕಥೆಗಳಲ್ಲಿ 'ಬಹಿಷ್ಕೃತ' ಅತ್ಯಂತ ಹೆಚ್ಚು ಜನಪ್ರಿಯವಾದ ಹಾಗೂ ಹೆಚ್ಚು ಮಾರಾಟವಾದ ದಲಿತ ಆತ್ಮ ಕಥೆ.ಸಾವಿರಾರು ವರ್ಷಗಳಿಂದ ವರ್ಣ-ಜಾತಿ ವ್ಯವಸ್ಥೆಯಲ್ಲಿ ತುಳಿತಕ್ಕೊಳಗಾಗಿದ್ದ, ಆಗ ಮಹಾರಾಷ್ಟ್ರದಲ್ಲಿ ಪ್ರಬಲವಾಗುತ್ತಿದ್ದ ಅಂಬೇಡ್ಕರ್ ಚಳವಳಿಯ ಬೆಳಕಿನಲ್ಲಿ ಜಾಗೃತಗೊಂಡು ನಿಜವಾದ 'ಮನುಷ್ಯರು' ಹುಟ್ಟಿ ಬಂದ ಅದ್ಭುತ ಕಥಾನಕ ಈ ಕೃತಿಯಲ್ಲಿದೆ. ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲೂ ಪ್ರಕಟವಾಗಿರುವುದು ಈ ಕೃತಿಯ ಹೆಗ್ಗಳಿಕೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಬೆಂಗಳೂರು-೧

ಫಿಸಿಕ್ಸ್ ಮತ್ತು ಐನ್‌ಸ್ಟೈನ್

ಲೇ: ಅಡ್ಯನಡ್ಕ ಕೃಷ್ಣ ಭಟ್

ಬೆಲೆ: ರೂ. ೭೦/-

ಇದು ವಿಜ್ಞಾನ ಲೋಕದ ವಿಶಿಷ್ಟ ಕಥೆ. ಅಲ್ಬರ್ಟ್ ಐನ್‌ಸ್ಟೈನ್ ನಡೆಸಿದ ಸಂಶೋಧನೆಗಳಿಗೆ ನೂರು ವರ್ಷ ತುಂಬಿದ ಈ ಸಂದರ್ಭದಲ್ಲಿ ಜಗತ್ತಿನೆಲ್ಲೆಡೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಈ ಕುರಿತ ಸಂಕ್ಷಿಪ್ತ ಕಥೆಯನ್ನು ಕನ್ನಡ ಓದುಗರಿಗಾಗಿ ಈ ಕೃತಿಯಲ್ಲಿ ನೀಡಲಾಗಿದೆ. ಮನುಷ್ಯನ ಅನುಭವಕ್ಕೆ ಬರುವ ಅನಂತ ವೈವಿಧ್ಯದ ತಿಳಿವಿಗಾಗಿ ನಡೆಸಿದ ಹುಡುಕಾಟದಿಂದ ಫಿಸಿಕ್ಸ್ ಅಥವಾ ಭೌತ ವಿಜ್ಞಾನ ಎಂಬ ಅಧ್ಯಯ ಬೆಳೆದ ರೀತಿಯನ್ನು ಶ್ರೇಷ್ಠ ವಿಜ್ಞಾನಿಯೊಬ್ಬ ಕಂಡ ಬಗೆ ಈ ಕೃತಿಯಲ್ಲಿ ಅದ್ಭುತವಾಗಿ ಮೂಡಿಬಂದಿವೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಬೆಂಗಳೂರು – ೧

ಸರಸ್ವತೀ ನದಿ

ಲೇ: ಟಿ.ಆರ್.ಅನಂತರಾಮು

ಬೆಲೆ: ರೂ.೪೫/-

ಇತ್ತೀಚೆಗೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿರುವ ಸರಸ್ವತೀ ನದಿಯ ಅಸ್ತಿತ್ವ ಕುರಿತ ಪುಸ್ತಕ ಇದು. ಭೌಗೋಳಿಕ ಮತ್ತು ಪ್ರಾಕೃತಿಕ ಕಾರಣಗಳಿಂದ ನದಿಗಳು ತಮ್ಮ ಪಾತ್ರದ ದಿಕ್ಕು ಬದಲಿಸಿಕೊಳ್ಳುವುದು, ಬತ್ತಿ ಹೋಗುವುದು, ಭೂಮಿಯೊಳಗೆ ಇಂಗಿ ಹೋಗುವುದು ಅಚ್ಚರಿಯ ವಿಷಯವಲ್ಲ. ಹಿಮಾಲಯದ ಉತ್ಥಾನದೊಂದಿಗೆ ಸರಸ್ವತೀ ನದಿಯ ಬದುಕು ಸಾಗಿದುದರಿಂದ ಇದು ಅಚ್ಚರಿಯ ವಿಷಯವಲ್ಲ ಎಂಬುದನ್ನು ಇಲ್ಲಿ ಭೂವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಣೆ ನಡೆಸಲಾಗಿದೆ. ಅತ್ಯಂತ ಅಪರೂಪದ ಪುಸ್ತಕ ಇದು.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಬೆಂಗಳೂರು – ೧



ನಿಂತ ಮಳೆ ಹನಿ

ಲೇ: ನಾಗಣ್ಣ ಕಿಲಾರಿ

ಬೆಲೆ: ರೂ. ೩೦/-

ದೊಡ್ಡ ಕಾವ್ಯ ಚಳವಳಿಗಳಿಲ್ಲದ ಈ ಕಾಲ ಇದೀಗ ಬರೆಯ ಹೊರಟ ಕವಿಯೊಬ್ಬನಿಗೆ ಸವಾಲಿನಂತೆ ಅಥವಾ ವಿಚಿತ್ರ ಸ್ವಾತಂತ್ರ್ಯ ನೀಡುವ ಬಯಲಿನಂತೆ ಕಂಡರೆ ಅಚ್ಚರಿಯಿಲ್ಲ. ಸುಡುವ ಸೌದೆ ಹೊತ್ತು ತಣ್ಣಗೆ ಒಲೆಯತ್ತ ನಡೆಯುವ ಮುದುಕಿಯರು, ಋಷಿಯಂತೆ ಉರಿಯುವ ದೀಪ, ಮುಂತಾದ ಚಿತ್ರಗಳಲ್ಲಿ ಕಿಲಾರಿಯವರ ಕಾವ್ಯ ಚಾತುರ್ಯ ಎದ್ದು ಕಾಣುತ್ತದೆ. 'ಬದುಕುವುದು ಕಷ್ಟವೂ ಅಲ್ಲ, ಸುಖವೂ ಅಲ್ಲ' ಎಂಬ ಗುಟ್ಟು ಬಲ್ಲ ಈ ಕವಿಯ ಕಾವ್ಯ ಹೊಸ ತಲೆಮಾರಿನ ಕಾವ್ಯ ವಲಯದಲ್ಲಿ ಗಟ್ಟಿದ್ವನಿಯಾಗಿದೆ.

ಪ್ರಕಾಶಕರು: ಸುಮುಖ ಪ್ರಕಾಶನ
ವಿದ್ಯಾರಣ್ಯ ನಗರ, ಬೆಂಗಳೂರು-೨೨



ಕನ್ನಡದಲ್ಲಿ ದಲಿತ-ಬಂಡಾಯ ಕಾದಂಬರಿಗಳು

ಲೇ: ಡಾ॥ ಎ.ಎಚ್.ಚಂದ್ರಶೇಖರ್

ಬೆಲೆ: ರೂ.೧೮೦/-

ಕನ್ನಡ ಸಾಹಿತ್ಯದಲ್ಲಿ ಮೂಡಿ ಬಂದ ದಲಿತ-ಬಂಡಾಯ ಕಾದಂಬರಿಗಳನ್ನು ಕುರಿತ ಪಿ.ಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಪ್ರೌಢ ಪ್ರಬಂಧವಿದು. ಪಿಎಚ್.ಡಿಗಳು ಅರ್ಥ ಕಳೆದುಕೊಳ್ಳುತ್ತಿರುವ ಈ ಕಾಲದಲ್ಲಿ ನಿಜವಾದ ಅಧ್ಯಯನದ ಮೂಲಕ, ಸಂಶೋಧನೆಯ ಮೂಲಕ ಸಿದ್ಧಪಡಿಸಿದ ಕೃತಿ ಇದು ಎನ್ನುವುದು ಹೆಮ್ಮೆಯ ವಿಚಾರ. ತಾತ್ವಿಕ ಹಾಗೂ ವಸ್ತುನಿಷ್ಠ ಅಧ್ಯಯನದ ನೆಲೆಗಳು ಇಲ್ಲಿ ಎದ್ದು ಕಾಣುತ್ತವೆ. ಸ್ಥಳೀಯ ಪ್ರಾದೇಶಿಕ ಹಾಗೂ ಸಮಗ್ರ ಭಾರತೀಯ ನೆಲೆಗಳ ಮೂಲಕ ಇಲ್ಲಿ ಅಧ್ಯಯನ ನಡೆಸಲಾಗಿದ್ದು, ಕೃತಿಗಳನ್ನು ವಸ್ತು ನಿಷ್ಠವಾಗಿ ವಿಮರ್ಶಿಸಲಾಗಿದೆ.

ಪ್ರಕಾಶಕರು: ಸ್ನೇಹ ಪ್ರಕಾಶನ,
ವಿಜಯನಗರ, ಮೈಸೂರು.



ಸಂಪಾದಕೀಯ



ಅಂತರಂಗ

ಚಳವಳಿಗಳ ಆದ್ಯತೆಗಳೇನು?

ಈ ಸಾರಿಯ 'ಅಂತರಂಗ'ವನ್ನು ಬರೆಯಲು ಕುಳಿತಾಗ ನನ್ನನ್ನು ತೀವ್ರವಾಗಿ ಕಾಡಿಸಿದ್ದು ಮೇಲಿನ ಪ್ರಶ್ನೆ. ಯಾಕೆಂದರೆ ಸಮಕಾಲೀನ ಚಳವಳಿಗಳ ಆಶಯ ದೀರ್ಘಕಾಲದ ಸಾಮಾಜಿಕ ಪರಿಣಾಮಗಳನ್ನು ಅಲಕ್ಷಿಸಿ, ಈ ಕ್ಷಣದ ಲಾಭಗಳಿಗೆ ಅಥವಾ ಸ್ವ ಅಹಂಕಾರದ ಶಮನಕ್ಕೆ ಬಳಕೆಯಾಗುತ್ತಿರುವುದೇನೋ ಅನ್ನುವುದು ನನ್ನನ್ನು ಕಾಡುತ್ತಿದೆ.

ಬೆಳಗಾವಿ ಮೇಯರ್ ಮೋರೆಗೆ ಮಸಿಬಳಿದ ಪ್ರಕರಣವಾಗಲಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ವಿಚಾರವಾಗಲಿ, ಪಕ್ಕದ ತಮಿಳುನಾಡಿನಲ್ಲಿ ಖುಷ್ಬು ಎಂಬ ಚಿತ್ರನಟಿಯ ವಿರುದ್ಧ ದಲಿತರು ನಡೆಸಿದ ಹೋರಾಟವಾಗಲಿ-ಇವುಗಳೆಲ್ಲ ತಮ್ಮ ದೀರ್ಘಕಾಲೀನ ಗುರಿ ಮತ್ತು ಆಶಯಗಳಿಗೆ ವಿರುದ್ಧವಾಗಿಯೇ ನಡೆಯುತ್ತಿರುವುದು ನನಗೆ ಸ್ಪಷ್ಟವಾಗುತ್ತಿದೆ.

ಬೆಳಗಾವಿ ವಿಚಾರದಲ್ಲಿ ಒಂದು ಅವಿವೇಕದ ನಡತೆಗೆ ಇನ್ನೊಂದು ಅಂಥದ್ದೇ ಅವಿವೇಕದ ಪ್ರತಿಕ್ರಿಯೆ ಉತ್ತರವಾದದ್ದು ಸಹಜವೇ ಆಗಿತ್ತು. ಯಾಕೆಂದರೆ ಇಂಥ ಸಂದರ್ಭದಲ್ಲೆಲ್ಲ ಅವಿವೇಕದ್ದೇ ಪರಮಾಧಿಕಾರ. ಆದರೆ ಇಂಥ ಅವಿವೇಕಕ್ಕೆ ನಮ್ಮ 'ಪ್ರಜ್ಞಾವಂತ ಸಾಹಿತಿ'ಗಳು ವ್ಯಕ್ತ ಪಡಿಸಿದ ಅಭಿಪ್ರಾಯಗಳು ಮಾತ್ರ ಪ್ರಜ್ಞಾವಂತರನ್ನೇ ದಂಗು ಬಡಿಸುವಂತಿದ್ದವು. ತೇಜಸ್ವಿ-ಅನಂತ ಮೂರ್ತಿಯವರಂಥ ಚಿಂತನ ಶೀಲರಿಂದ ಹಿಡಿದು ಚಂಪಾರಂಥ ಹೋರಾಟಗಾರರವರೆಗೆ ಯಾರೂ ತಾಳ್ಮೆ-ವಿವೇಕದಿಂದ ವರ್ತಿಸದಿದ್ದದು ನಮ್ಮ ದೌರ್ಭಾಗ್ಯವೇ ಸರಿ. ಹಿರಿಯರಾದ ದೇಜಗೌ ಅವರು ಇವರೆಲ್ಲರಿಗಿಂತ ಮುಂದೆ ಹೋಗಿ ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಟ್ಟು ಬಿಟ್ಟರು.

ವಿಚಿತ್ರವೆಂದರೆ ಕನ್ನಡದ ವಿಷಯ ಬಂದಾಗ ನಮ್ಮ ಸಾಹಿತಿ ಕಲಾವಿದರು ಮತ್ತು ಕನ್ನಡ ಪರ ಹೋರಾಟಗಾರರಿಗೆ ಮುಖ್ಯವಾಗುವುದು ಕನ್ನಡದ ಕಾಳಜಿಗಿಂತ ವೈಯಕ್ತಿಕ ಕಾಳಜಿಗಳು. ಕನ್ನಡದ ಹೋರಾಟ ಕನ್ನಡಿಗರೆಲ್ಲರ ಒಟ್ಟಾಸೆಯ ಹೋರಾಟವಾಗಿ ರೂಪುಗೊಳ್ಳುವ ಪ್ರತಿ ಅವಕಾಶಗಳನ್ನು ಇವರು ಹಾಳುಗೆಡುವುತ್ತಿರುವುದು ದೊಡ್ಡ ದುರಂತವಾಗಿದೆ. ಅನಂತ ಮೂರ್ತಿ ಅವರಿಗೆ ಬಂದ ಜ್ಞಾನಪೀಠದ ಬಗ್ಗೆ ದೇಜಗೌ ಆಡಿದ ಮಾತಿಗೆ ಅನಂತ ಮೂರ್ತಿ ಅವರು ಕುವೆಂಪು ಅವರನ್ನು ಎಳೆದು ತಂದುದಂತೂ ಅಸಹನೆಯ ಪರಾಕಾಷ್ಟೆ. ಸದಾ ಮಾತಿನ ಬಗ್ಗೆ ನಿಗಾ ಇಡುವ ಅನಂತ ಮೂರ್ತಿಯವರಿಂದ ಇಂಥ ಮಾತು ಬರಬಾರದಾಗಿತ್ತು. ದೇಜಗೌ ಅವರ ಟೀಕೆಗೆ ಅನಂತ ಮೂರ್ತಿಯವರ ಮೌನವೇ ಸಮರ್ಥ ಉತ್ತರವಾಗುತ್ತಿತ್ತು!

ಆದರೆ ದುರಂತ ನೋಡಿ. ಇವರೆಲ್ಲರಿಗೂ ಕನ್ನಡದ ಬಗ್ಗೆ ನಿಜವಾದ ಕಾಳಜಿ ಇದೆ. ಕನ್ನಡ ಉಳಿದು-ಬೆಳೆಯಬೇಕೆನ್ನುವ ಬಗೆಗೆ, ಕನ್ನಡವೇ ನಾಡಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕನ್ನು ಕಟ್ಟಿಕೊಡಬೇಕೆಂಬ ಬಗೆಗೆ ಇವರಲ್ಲಿ ಎರಡು ಮಾತಿಲ್ಲ. ಆದರೆ ಯಾರೂ 'ಕನ್ನಡ ಬದುಕು' ಕಟ್ಟುವ ಕೆಲಸಕ್ಕೆ ಮುಂದಾಗುತ್ತಿಲ್ಲ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೇಳುವವರಿಗೂ ಕನ್ನಡ ಬದುಕನ್ನು ಕಟ್ಟುವ ಸೃಜನಾತ್ಮಕ ಕನ್ನಡ ಚಳವಳಿಯನ್ನು ಕಟ್ಟುವ ಕಾರ್ಯಕ್ರಮಗಳಿಲ್ಲ. ಈ ಕ್ಷಣದ 'ಚಲಾವಣೆ' ಮಾತ್ರ ಎಲ್ಲ ಸಂದರ್ಭದಲ್ಲೂ ಮುಖ್ಯವಾಗುತ್ತಿದೆ. ಇಡೀ ಕರ್ನಾಟಕದಲ್ಲಿ ಒಂದಾದರೂ 'ಪ್ರತಿಷ್ಠಿತ ಕನ್ನಡ ಶಾಲೆ' ತೆರೆಯುವ ಮನಸ್ಸು ಇವರಿಗೆ ಈ ವರೆಗೆ ಬಂದಿಲ್ಲ. ಕನ್ನಡದಲ್ಲಿ ವ್ಯವಹಾರ ಮಾಡದಿದ್ದರೆ. ಬದುಕು ನಡೆಯುವುದಿಲ್ಲ ಎಂಬ ವಾತಾವರಣ ಸೃಷ್ಟಿಸಲು ಸಾಧ್ಯವಾಗಿಲ್ಲ. ಹಾಗಾಗಿ ದೂರ ದೃಷ್ಟಿಯ ಕೊರತೆ ಕನ್ನಡ ಚಳವಳಿಯನ್ನು ಹೊಸಕಿ ಹಾಕುತ್ತಿದೆ. ಯಾವುದೆ ಭಾಷೆ ಉಳಿಯುವುದು ಅದು ದೈನಂದಿನ ಬದುಕಿಗೆ ಎಷ್ಟು ಅನಿವಾರ್ಯವಾಗಿದೆ ಅನ್ನುವುದರಿಂದ ಮಾತ್ರ. ಅದು ಶಾಸ್ತ್ರೀಯವೋ ಅಲ್ಲವೋ ಅನ್ನುವುದರಿಂದಲ್ಲ. ಜಾಗತಿಕ ಮಟ್ಟದಲ್ಲಿ ಶಾಸ್ತ್ರೀಯ ಭಾಷೆಗಳೆಂದು ಕರೆಸಿಕೊಳ್ಳುವ ಸಂಸ್ಕೃತ, ಪಾಲಿ, ಪ್ರಾಚೀನ ಗ್ರೀಕ್, ಲ್ಯಾಟಿನ್ ಇವುಗಳೆಲ್ಲ ಇಂದು ಏನಾಗಿವೆ ಅನ್ನುವುದನ್ನು ನಾವು ಗಮನಿಸಬೇಕು. ಹಾಗೆಂದಾಕ್ಷಣ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಮಾನ ಬೇಡವೆಂದಲ್ಲ. ಆದರೆ ನಮ್ಮ ಚಳವಳಿ-ಹೋರಾಟಗಳ ಆದ್ಯತೆ ಏನಾಗಬೇಕು ಅನ್ನುವುದು ಹೆಚ್ಚು ಮುಖ್ಯ. ದೈನಂದಿನ ಚಟುವಟಿಕೆ ಹಾಗೂ ಬದುಕಿನ ಅಗತ್ಯಗಳಿಂದ ಕನ್ನಡ ದೂರವಾಗುತ್ತಿರುವಾಗ ನಾವು ಯಾವುದಕ್ಕೆ ಆದ್ಯತೆ ನೀಡಬೇಕೆಂಬುದೇ ನಮಗೆ ಅರ್ಥವಾಗುತ್ತಿಲ್ಲ ಎಂದಾಗುತ್ತದೆ. ಕೇವಲ ಜನಪ್ರಿಯ ತಂತ್ರಗಾರಿಕೆಯಲ್ಲೇ ಜೀವನ ಕಳೆದು ಬಿಟ್ಟರೆ ನಾಡು-ನುಡಿ ಸಂಸ್ಕೃತಿಗಳು ಉಳಿಯುವುದಾದರೂ ಹೇಗೆ?

ಕನ್ನಡ ಚಳವಳಿ ಕೇವಲ ನಗರವಾಸಿಗಳ, ಸಾಹಿತಿ, ಕಲಾವಿದರ ಹಾಗೂ ಭಾಷಾಪಂಡಿತರ ಚಳವಳಿಯಾದರೆ ಅದಕ್ಕೆ ಉಳಿಗಾಲವಿಲ್ಲ. ಯಾಕೆಂದರೆ ಇವರೆಲ್ಲರ ಆದ್ಯತೆಗಳು ಕಾಲಕ್ರಮೇಣ ಬದಲಾಗುತ್ತಲೇ ಇರುತ್ತವೆ. ಕನ್ನಡ ಚಳವಳಿ ನಿಜವಾಗಿಯೂ, ದುಡಿಯುವ ವರ್ಗದ, ರೈತ ವರ್ಗದ, ದಲಿತ ವರ್ಗದ ಚಳವಳಿಯಾಗಿ ಮೂಡಿದಾಗ ಮಾತ್ರ ಅದು ನಾಡಿನ ಬದುಕನ್ನು-ಸಂಸ್ಕೃತಿಯನ್ನು ಕಟ್ಟಿಕೊಡುವಂಥದ್ದಾಗುತ್ತದೆ. ಅಂದರೆ ನಾಡು-ನುಡಿಗಾಗಿ ಹೋರಾಡುವವರು, ಈ ಎಲ್ಲಾ ವರ್ಗದ ಆಶಯಗಳನ್ನು ಜತೆಯಲ್ಲಿಟ್ಟುಕೊಂಡು ಹೋರಾಟವನ್ನು ರೂಪಿಸಬೇಕು. ಆಗಮಾತ್ರ ಚಳವಳಿಯ ಆಶಯ ಸಾರ್ಥಕವಾಗುತ್ತದೆ.

ತಮಿಳುನಾಡಿನ ದಲಿತ ಚಳವಳಿಯ ಪರಿಸ್ಥಿತಿಯನ್ನು ನೋಡಿ. ದಲಿತ ಮತ್ತು ದುರ್ಬಲ ವರ್ಗಗಳ ಹಿತಕ್ಕಾಗಿ ಹುಟ್ಟಿದ ಐ.ಎಂ.ಕೆ ಮತ್ತು ದಲಿತ ಪ್ಯಾಂಥರ್ಸ್ ಆಫ್ ಇಂಡಿಯಾ ಇಂದು ಸಂಘ ಪರಿವಾರದ ವಕ್ತಾರರಂತೆ ವರ್ತಿಸತೊಡಗಿವೆ. ವೈಯಕ್ತಿಕ ದ್ವೇಷಾಸೂಯೆಗೆ ತಮ್ಮ ಸಿದ್ಧಾಂತಗಳನ್ನು ಧಾರೆ ಎರೆದಿವೆ. ಪೆರಿಯಾರ್ ಮತ್ತು ಅಂಬೇಡ್ಕರರ ತತ್ವ ಆದರ್ಶಗಳನ್ನು ಹೇಳುವ ಈ ಪಕ್ಷಗಳು ಮಹಿಳೆಯೊಬ್ಬಳ ಪ್ರಾಮಾಣಿಕ ಅಭಿಪ್ರಾಯಕ್ಕೆ ಇಡೀ ತಮಿಳು ಸಂಸ್ಕೃತಿಯೇ ನಾಶವಾಗುತ್ತಿದೆ ಎಂದು ಅರಚುತ್ತಿವೆ! ಇದೇ 'ತಮಿಳು ಸಂಸ್ಕೃತಿ' ಶತಮಾನಗಳಿಂದ ದಲಿತರನ್ನು, ಶೂದ್ರರನ್ನು, ಮಹಿಳೆಯನ್ನು ತುಳಿದು ನಿಂತಿದ್ದು ಇವರಿಗೆ ಕಾಣುತ್ತಲೇ ಇಲ್ಲ. ಪುರೋಹಿತ ಸಂಸ್ಕೃತಿಯ ಇನ್ನೊಂದು ರೂಪವೇ ಈ 'ತಮಿಳು ಸಂಸ್ಕೃತಿ' ಎಂಬುದೂ ಅವರಿಗೆ ಮರೆತು ಹೋಗಿದೆ! ಯಾಕೆಂದರೆ ಇದೊಂದು ಹೊಸ ಬಗೆಯ ರಾಜಕಾರಣ!

ಪುರೋಹಿತ ಶಾಹಿಯ ವಿರುದ್ಧ ದನಿ ಎತ್ತಿ ಸಮಸ್ತ ಶ್ರಮಜೀವಿಗಳ ಸಾಂಸ್ಕೃತಿಕ ಶಕ್ತಿ ರಾಜಕಾರಣವನ್ನು ಕಟ್ಟಿ ಬೆಳೆಸಿದ ದ್ರಾವಿಡ ಕಳಗಂ ಇಂದು ಡಿ.ಎಂ.ಕೆ, ಎಐಎಡಿಎಂಕೆ ಮುಂತಾದ ಹತ್ತು ಹಲವು ತುಂಡಾಗಿ ಪುರೋಹಿತರ ಪಾದ ತೊಳೆಯುವ ಕೆಲಸವನ್ನು ಮಾಡುತ್ತಿವೆ. ಪಿ.ಎಂ.ಕೆ, ಡಿ.ಪಿ.ಐ ಗಳು ಈಗ ಹೊಸ ಸೇರ್ಪಡೆಯಾಗಿವೆ. ಇದು ಕಾಲಮಾನದ ಘೋರ ವ್ಯಂಗ್ಯ. ಅಂಬೇಡ್ಕರ್-ಪೆರಿಯಾರರ ವಿಕೃತ ರೂಪದಲ್ಲಿ ಈ ಚಳವಳಿಗಳು ಇಂದು ನಡೆಯುತ್ತಿವೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕುತ್ತು ತರುವ ಇಂಥ ಚಳವಳಿಗಳಿಗೆ ಏನೆನ್ನಬೇಕು?

○ ಇಂದೂಧರ ಹೊನ್ನಾಪುರ

ಮೋಕ್ಷಗುಡಂ ವಿಶ್ವೇಶ್ವರಯ್ಯ: ಕೆಲ ವಾಸ್ತವ ಸಂಗತಿಗಳು

ಮೈಸೂರು ದಿವಾನರಾಗಿದ್ದ ಸರ್. ಎಂ.ವಿಶ್ವೇಶ್ವರಯ್ಯನವರ ಬಗ್ಗೆ ಈಗ ಬಿಂಬಿಸುತ್ತಿರುವ ರೀತಿಯನ್ನು ನೋಡಿದಾಗ ಅಂದಿನ ಅರಸು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪು ನನಗಾಯಿತು. ಬರಗೂರು ರಾಮಚಂದ್ರಪ್ಪನವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ 'ಸಾಮಾಜಿಕ ಚಿಂತನ ಮಾಲೆ' ಎಂಬ ಶೀರ್ಷಿಕೆಯಡಿ ಜನತೆಗಾಗಿ ಶ್ರಮಿಸಿದ ಹೋರಾಟಗಾರರ ಚಿಂತಕರ ಜೀವನ ಚರಿತ್ರೆಗಳನ್ನು ಪ್ರಕಟಿಸುವ ಯೋಜನೆ ಹಮ್ಮಿಕೊಂಡಿದ್ದರು. ಆಗ ನನಗೆ ಮೈಸೂರು ಅರಸು ನಾಲ್ವಡಿ ಕೃಷ್ಣರಾಜ ಒಡೆಯರ ಬಗ್ಗೆ ಪುಸ್ತಕ ಬರೆಯಲು ಹೇಳಿದ್ದರು. ಈ ಪುಸ್ತಕಕ್ಕಾಗಿ ನಾನು ಇತಿಹಾಸ ಗ್ರಂಥಗಳನ್ನು ಹಾಗೂ ಪತ್ರಾಗಾರದ ಹಳೆಯ ದಾಖಲೆಗಳನ್ನು ತಡಕಾಡಿದಾಗ ಅನೇಕ ಸಂಗತಿಗಳು ಗೊತ್ತಾದವು.'



ಅನೇಕರು ವ್ಯಾಖ್ಯಾನಿಸಿದಂತೆ ಭಾರತ ರತ್ನ ವಿಶ್ವೇಶ್ವರಯ್ಯ ನವರು ಕರ್ನಾಟಕದ ಕೈಗಾರಿಕೀಕರಣದ ರೂವಾರಿ ಎಂಬುದು ನಿಜ. ಅವರ ಕಾಲದಲ್ಲಿ ಭದ್ರಾವತಿ ಉಕ್ಕಿನ ಕಾರ್ಖಾನೆ, ಕೃಷ್ಣರಾಜ ಸಾಗರ ಅಣೆಕಟ್ಟು ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರ, ಸಾಬೂನು ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಕೆ.ಆರ್.ಮಿಲ್ ಹೀಗೆ ಸಾರ್ವ ಜನಿಕ ರಂಗದ ಹಲವು ಉದ್ದಿಮೆಗಳು ತಲೆ ಎತ್ತಿದ್ದು ಖರೆ. ಆದರೆ ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂಥ ದೊರೆ ಒತ್ತಾಸೆಯಾಗಿ ನಿಂತಿದ್ದರೆಂಬುದು ಕೂಡ ಅಷ್ಟೇ ಸತ್ಯ. ಅವರ ಹೆಸರನ್ನೇ ಮರೆ ಮಾಚಿ ವಿಶ್ವೇಶ್ವರಯ್ಯನವರೊಬ್ಬರನ್ನೇ ವೈಭವೀಕರಿಸುವ ಜಾಣ ತನದ ಹುನ್ನಾರ ನಡೆಯುತ್ತಲೇ ಬಂದಿದೆ.

ವಿಶ್ವೇಶ್ವರಯ್ಯ ಜಾತಿವಾದಿಗಳಲ್ಲದಿದ್ದರೂ ಜಾತಿವಾದಿಗಳೆಂಬ ಅಪವಾದ ಅವರ ಮೇಲೆ ಬಂತು ಎಂದು ಅವರ ಅಭಿಮಾನಿಗಳು ಹೇಳುತ್ತಾರೆ ನಿಜ. ವೈಯಕ್ತಿಕ ಸಂಬಂಧ ವ್ಯವಹಾರಗಳಲ್ಲಿ ವಿಶ್ವೇಶ್ವರಯ್ಯ ಜಾತಿಯವಾದಿಯಾಗಿರಲಿಕ್ಕಿಲ್ಲ. ಆದರೆ ಅವರು ಸಾಮಾಜಿಕ ನ್ಯಾಯದ ಪರವಾಗಿರಲಿಲ್ಲ ಎಂಬುದು ಮಾತ್ರ ಹಗಲಿನಷ್ಟೇ ನಿಚ್ಚಳ. ಅತ್ಯಂತ ಮುಖ್ಯವಾದ ತಾಂತ್ರಿಕ ದಕ್ಷತೆಯ ಅವಶ್ಯಕತೆಯುಳ್ಳ ಕ್ಷೇತ್ರಗಳಲ್ಲಿ ಮೀಸಲಾತಿಗಿಂತ ಜ್ಞಾನ ದಕ್ಷತೆಯೇ ಅರ್ಹ ಎಂದು ಅವರು ಪ್ರತಿಪಾದಿಸುತ್ತಿದ್ದರೆಂದು ಅವರನ್ನು ಶ್ಲಾಘಿಸುವವರು ಹೇಳುತ್ತಾರೆ. ಈ ವಾದವೇ ಅವೈಜ್ಞಾನಿಕ ಮಾತ್ರವಲ್ಲ ಮನುವಾದಿ ಮನೋಸ್ಥಿತಿಗೆ ಸಾಕ್ಷಿಯಾಗಿದೆ.

ದಲಿತ ಹಿಂದುಳಿದವರ ಮೀಸಲಾತಿಗೆ ವಿಶ್ವೇಶ್ವರಯ್ಯ ವಿರೋಧಿಯಾಗಿರಲಿಲ್ಲ ಮಾತ್ರವಲ್ಲ ಶಿಕ್ಷಣದಲ್ಲಿ, ಉದ್ಯೋಗದಲ್ಲಿ, ಮೀಸಲಾತಿ ದೊರಕುವಂತೆ ಮಾಡಿದರು ಎಂದು ಹೇಳುವುದು ಚರಿತ್ರೆಗೆ ಬಗೆವ ಅಪಚಾರವಾಗಿದೆ. ವಾಸ್ತವವಾಗಿ ರಷ್ಯದ ಅಕ್ಟೋಬರ್ ಕ್ರಾಂತಿಯಿಂದ ಪ್ರಭಾವಿತರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ತುಳಿತಕ್ಕೊಳಗಾದ ಜನರಿಗೆ ಮೊದಲ ಮೀಸಲಾತಿ ಸೂತ್ರ ಜಾರಿಗೆ ತಂದರು. ಅದಕ್ಕಾ 'ಮಿಲ್ಲರ್ ಸಮಿತಿ'ಯನ್ನು ರಚಿಸಿದರು.

ಮೈಸೂರು ಮಹಾರಾಜರು ಸುಮ್ಮನೆ ಇದನ್ನು ರಚಿಸಲಿ ೧೯೧೭ರ ನವೆಂಬರ್ ೧೮ ರಂದು ಬೆಂಗಳೂರಿನಲ್ಲಿ ಹಿಂದುಳಿ ವರ್ಗಗಳ ಮೊದಲ ಸಮಾವೇಶ ನಡೆಯಿತು. ಈ ಸಮಾವೇಶಕ್ಕೆ ಸಾವಿರ ಪ್ರತಿನಿಧಿಗಳು ಬಂದಿದ್ದರು. ಈ ಸಮಾವೇಶದಲ್ಲಿ ಮೈಸೂರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಪ್ರಾತಿನಿ ಇಲ್ಲ ಎಂಬ ಟೀಕೆ ಕೇಳಿಬಂತು. ಅದೇ ವರ್ಷ ಕೊನೆಯಲ್ಲಿ ಮೈಸೂ ರಿನಲ್ಲಿ ರಾವ್ ಸಾಹೇಬ್ ಮತ್ತು ಚನ್ನಯ್ಯ ಹಿಂದುಳಿದ ವರ್ಗಗ ಇನ್ನೊಂದು ಸಮಾವೇಶವನ್ನ ಸಂಘಟಿ ದರು. ಈ ಸಮ್ಮೇಳನದಲ್ಲಿ ಸರ್ಕಾರದ ಶಾಸಕಾಂಗ, ಕಾರ್ಯಾಂಗಗಳಲ್ಲಿ ಎ ಜಾತಿ ಜನಾಂಗಗಳಿಗೆ ಪ್ರಾತಿನಿಧ ನೀಡಲು ಒತ್ತಾಯಿಸಲಾಯಿತು.

ಹಿಂದುಳಿದ ವರ್ಗಗಳ ಬೇಡಿಕೆಗ ಳಿಗೆ ಸ್ಪಂದಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಿಂದುಳಿದ ವರ್ಗ ಗಳ ಬೇಡಿಕೆ ಈಡೇರಿಸಲು ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ವರದಿ ನೀಡುವಂತೆ ಮೈಸೂರು ಉಚ್ಚನ್ಯಾಯಾ ಲಯದ ಮುಖ್ಯ ನ್ಯಾಯಾಧೀಶ ಸರ್ ವೆಸ್ಲಿಮಿಲ್ಲರ್ ಅವರ ಅಧ್ಯಯಕ್ಷತೆಯಲ್ಲಿ ವಿಶೇಷ ಸಮಿತಿ ರಚಿಸಿದರು. ಈ ಸಮಿ ತಿಯಲ್ಲಿ ಎಚ್.ಚನ್ನಯ್ಯ, ಎಂ.ಬಸ ವಯ್ಯ, ಶ್ರೀಕಂಠೇಶ್ವರ ಅಯ್ಯಂಗಾರ್ ಹಾಗೂ ಗುಲಾಮ ಮಹಮದ್ ಸದಸ್ಯರಾಗಿದ್ದರು. ಮಿಲ್ಲರ್ ಸಮಿತಿ ಪ್ರಾತಿನಿಧ್ಯ ಪ್ರಮಾಣವನ್ನು ಶೇ.೩೦ಕ್ಕೆ ಹೆಚ್ಚಿಸಲು ಮಹಾರಾಜರಿಗೆ ಶಿಫಾರಸು ಮಾಡಿತು.

ಈ ಮಿಲ್ಲರ್ ಸಮಿತಿಯ ವರದಿಯಿಂದ ಸಂಪ್ರದಾಯವಾದಿ ಪುರೋಹಿತಶಾಹಿ ಶಕ್ತಿಗಳಿಗೆ ಬ್ರಹ್ಮಾಂಡ ಕೋಪ ಬಂತು. ಈ ಅಡ್ಡಿ ಆತಂಕಗಳಿಗೆ ಸೊಪ್ಪು ಹಾಕದ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹು ಸಂಖ್ಯಾತರಾದ ಹಿಂದುಳಿದವರು ನನ್ನ ಪ್ರಜೆಗಳು ಅವರ ಉನ್ನತಿಗೆ ನೀವು ಅಡ್ಡ ಬರಬಾರದು ಎಂದು ಖಂಡತುಂಡವಾಗಿ ಹೇಳಿ ದರು. ಇದರಿಂದಾಗಿ ೧೯೨೧ರಲ್ಲಿ ಶೇ.೩೦ ರಷ್ಟಿದ್ದ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ೧೯೨೬ ರಲ್ಲಿ ಶೆ.೪೨ಕ್ಕೆ ಏರಿತು. ಮಹಿಳೆಯರನ್ನು ತಾರತಮ್ಯದಿಂದ ಕಾಣುವ ಹಿಂದೂ ಕಾನೂನಿಗೆ ತಿದ್ದುಪಡಿ ತರಲು ಮಹಾರಾಜರು ಮುಂದಾದರು.

ವಿಶ್ವೇಶ್ವರಯ್ಯನವರ ರಾಜೀನಾಮೆ ಪ್ರಕರಣ

ಮೀಸಲಾತಿಗಿಂತ ಜ್ಞಾನ ದಕ್ಷತೆಗೆ ಆದ್ಯತೆ ನೀಡಬೇಕೆಂಬ ಸಂಬಂಧದಲ್ಲಿ ಮಹಾರಾಜರೊಂದಿಗೆ ಭಿನ್ನಾಭಿಪ್ರಾಯ ತಾಳಿ ವಿಶ್ವೇಶ್ವರಯ್ಯ ರಾಜೀನಾಮೆ ನೀಡಿದರು ಎಂದು ಕೆಲವರು ಹೇಳುತ್ತಾರೆ. ಇದು ಅರ್ಧ ಸತ್ಯದಿಂದ ಕೂಡಿದ ಮಾತು.

ಮೈಸೂರು ಸಂಸ್ಥಾನದಲ್ಲಿ ಆಡಳಿತದ ಎಲ್ಲ ಹಂತಗಳಲ್ಲಿ ಬ್ರಾಹ್ಮಣೇತರರಿಗೆ ಪ್ರಾತಿನಿಧ್ಯವೇ ದೊರಕಿರಲಿಲ್ಲ. ಇದನ್ನು ಮನಗಂಡು

ವಾಸ್ತವ

ಭಾರತ ರತ್ನ ವಿಶ್ವೇಶ್ವರಯ್ಯನವರು ಕರ್ನಾಟಕದ ಕೈಗಾರಿಕೀಕರಣದ ರೂವಾರಿ ಎಂಬುದು ನಿಜ. ಅವರ ಕಾಲದಲ್ಲಿ ಭದ್ರಾವತಿ ಉಕ್ಕಿನ ಕಾರ್ಖಾನೆ, ಕೃಷ್ಣರಾಜ ಸಾಗರ ಅಣೆಕಟ್ಟು ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರ, ಸಾಬೂನು ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಕೆ.ಆರ್.ಮಿಲ್ ಹೀಗೆ ಸಾರ್ವಜನಿಕ ರಂಗದ ಹಲವು ಉದ್ದಿಮೆಗಳು ತಲೆ ಎತ್ತಿದ್ದು ಖರೆ. ಆದರೆ ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂಥ ದೊರೆ ಒತ್ತಾಸೆಯಾಗಿ ನಿಂತಿದ್ದರೆಂಬುದು ಕೂಡ ಅಷ್ಟೇ ಸತ್ಯ. ಅವರ ಹೆಸರನ್ನೇ ಮರೆ ಮಾಚಿ ವಿಶ್ವೇಶ್ವರಯ್ಯನವರೊಬ್ಬರನ್ನೇ ವೈಭವೀಕರಿಸುವ ಜಾಣತನದ ಹುನ್ನಾರ ನಡೆಯುತ್ತಲೇ ಬಂದಿದೆ.

○ಸನತ್ ಕುಮಾರ ಬೆಳಗಲಿ

...ಲ್ವಡಿ ಅವರು ೧೯೧೪ ರಲ್ಲಿ ಅಮಲ್ದಾರ ಹುದ್ದೆಗಳಿಗೆ ...ರುಕ ಮಾಡುವಾಗ ಬ್ರಾಹ್ಮಣೇತರರಿಗೆ ಕಡಿಮೆ ಅರ್ಹತೆ ...ದಿಪಡಿಸಿ ಅವರು ಆಯ್ಕೆ ಯಾಗುವಂತೆ ಮಾಡಿದರು. ... ರೀತಿ ಅನೇಕ ಕ್ರಮಗಳನ್ನು ಕೈಗೊಂಡರು. ಉಳಿದ ...ಹ್ಮಣರಂತೆ ವಿಶ್ವೇ ಶ್ವರಯ್ಯನವರೂ ಇದನ್ನು ವಿರೋಧಿ... ಚಾರಿತ್ರಿಕ ಸತ್ಯ.

... ಮೊದಲ ಬಾರಿ ಪರೀಕ್ಷಾರ್ಥಿ ಕಮೀಷನರುಗಳ ...ರುಕಾತಿಯಲ್ಲಿ ವಿಶ್ವೇಶ್ವರಯ್ಯನವರು ಸ್ವಜಾತಿ ಪ್ರೇಮ...ದ ಆರು ಜನ ಬ್ರಾಹ್ಮಣ ಅಭ್ಯರ್ಥಿಗಳ ಪಟ್ಟಿನೀಡಿದರು. ...ರೆ ಮಹಾರಾಜರು ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ...ಮ ಅಂಕ ಪಡೆದಿರುವುದೇ ಸಾರ್ವಜನಿಕ ಸೇವೆಗೆ

೧೯೧೭ರ ನವೆಂಬರ್ ೧೮ ರಂದು ...ಂಗಳೂರಿನಲ್ಲಿ ಹಿಂದುಳಿದ ವರ್ಗಗಳ ...ೊದಲ ಸಮಾವೇಶ ನಡೆಯಿತು. ಈ ...ಮಾವೇಶಕ್ಕೆ ೩ ಸಾವಿರ ಪ್ರತಿನಿಧಿಗಳು ಬಂದಿದ್ದರು. ಪ್ರತಿನಿಧಿಗಳು ಈ ...ಮಾವೇಶದಲ್ಲಿ ಮೈಸೂರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಿಂದುಳಿದ ...ರ್ಗಗಳಿಗೆ ಪ್ರಾತಿನಿಧ್ಯ ಇಲ್ಲ ಎಂಬ ಟೀಕೆ ...ಳಿಬಂತು. ಅದೇ ವರ್ಷ ಕೊನೆಯಲ್ಲಿ ...ೈಸೂರಿನಲ್ಲಿ ರಾವ್ ಸಾಹೇಬ್ ಮತ್ತು ...ಚನ್ನಯ್ಯ ಹಿಂದುಳಿದ ವರ್ಗಗಳ ...ಇನ್ನೊಂದು ಸಮಾವೇಶವನ್ನ ಸಂಘ...ದರು. ಈ ಸಮ್ಮೇಳನದಲ್ಲಿ ಸರ್ಕಾರದ ...ಸಕಾಂಗ, ಕಾರ್ಯಾಂಗಗಳಲ್ಲಿ ಎಲ್ಲ ...ತಿ ಜನಾಂಗಗಳಿಗೆ ಪ್ರಾತಿನಿಧ್ಯ ನೀಡಲು ಒತ್ತಾಯಿಸಲಾಯಿತು.

...ಖ ಅರ್ಹತೆ ಆಗಬಾರದು ಎಂದು ದಿವಾನ್ ವಿಶ್ವೇಶ್ವ...ನವರ ಶಿಫಾರಸು ಕಡೆಗಣಿಸಿ ಆರು ಜನರಲ್ಲಿ ...ವರು ಬ್ರಾಹ್ಮಣೇತರ ಅಭ್ಯರ್ಥಿಗಳನ್ನು ಆಯ್ಕೆ ...ದರು.

... ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಇಬ್ಬರು ...ರನ್ನು ನೇಮಕ ಮಾಡುವಾಗ ವಿಶ್ವೇಶ್ವರಯ್ಯನವರು ...ಣರಾದ ಹಿರಿಯಣ್ಣ ಹಾಗೂ ಕ್ರೈಸ್ತರಾದ ವಿ.ಎಲ್. ...ೀಜ ಅವರ ಹೆಸರನ್ನು ಶಿಫಾರಸು ಮಾಡಿದರು. ಆಗ ...ರಾಜರು ಆ ಇಬ್ಬರು ಅಧಿಕಾರಿಗಳ ಹೆಸರನ್ನು ತಿರ...ದರು. ಇದರ ಬದಲಾಗಿ ಕ್ರೈಸ್ತ ಹಾಗೂ ಲಿಂಗಾ... ಮುಖಂಡರಾಗಿದ್ದ ಕೆ.ಮ್ಯಾಥನ್ ಹಾಗೂ ಎಂ.ಬಸ...ನವರನ್ನು ನೇಮಕ ಮಾಡಿದರು. ಆಗ ವಿಶ್ವೇಶ್ವರಯ್ಯ...ಮಾಧಾನಗೊಂಡರು. ವಿದ್ಯೆ ಹಾಗೂ ರಾಜಕೀಯ ...ರದಿಂದ ವಂಚಿತರಾಗಿದ್ದ ಶೂದ್ರ ಜನಾಂಗಗಳಿಗೆ ...ಾಜಿಕ ನ್ಯಾಯ ಒದಗಿಸಲು ನಾಲ್ವಡಿಯವರು ...ರ್ ಆಯೋಗ ರಚನೆ ಮಾಡಿದಾಗ ವಿಶ್ವೇಶ್ವರಯ್ಯ...ಷ್ಟು ಅಸಮಾಧಾನಗೊಂಡರು. ಜಾತಿ ಆಧರಿತ ಮೀಸ... ನೀಡುವುದರಿಂದ ಪ್ರತಿಭೆಗೆ ಧಕ್ಕೆ ಉಂಟಾಗುತ್ತದೆ. ...ಶದಲ್ಲಿ ದಕ್ಷತೆ ಹಾಳಾಗುತ್ತದೆ.

'ಅದ್ಯಾವುದಕ್ಕೂ ಅವಕಾಶ ನೀಡಬಾರದು' ಎಂದು ಪಟ್ಟು ಹಿಡಿದರು. ಆಗ ನಾಲ್ವಡಿ ಅವರು ವಿಶ್ವೇಶ್ವರಯ್ಯನವರನ್ನು ಕರೆದು "ನಿಮ್ಮ ವಾದ ಸರಿಯಲ್ಲ. ದಲಿತ ಹಿಂದುಳಿದವರ ಅಭಿವೃದ್ಧಿಗೆ ನೀವು ಅಡ್ಡಿಯಾಗಬಾರದು" ಎಂದು ಹಿತವಚನ ಹೇಳಿದರು. ತಮ್ಮ ವಾದಕ್ಕೆ ಮಹಾರಾಜರು ಸೊಪ್ಪು ಹಾಕದಿರುವುದನ್ನು ತಿಳಿದ ವಿಶ್ವೇಶ್ವರಯ್ಯನವರು ತಮ್ಮನ್ನು ನಿವೃತ್ತಿಗೊಳಿಸುವಂತೆ ಕೋರಿದರು. ಆದರೆ ದಲಿತ ಹಿಂದುಳಿದ ಜನತೆಯ ಉನ್ನತಿ ಪ್ರಶ್ನೆಯಲ್ಲಿ ಮಹಾರಾಜರು ರಾಜಿ ಮಾಡಿಕೊಳ್ಳಲು ತಯಾರಿರಲಿಲ್ಲ.

ಮೋಕ್ಷಗುಡಂ ವಿಶ್ವೇಶ್ವರಯ್ಯನವರ ಮೇಲೆ ನಾಲ್ವಡಿಯವರಿಗೆ ಅಪಾರ ವಿಶ್ವಾಸವಿತ್ತು. ಇಂಥ ದಕ್ಷ ಪ್ರಾಮಾಣಿಕ ಅಧಿಕಾರಿಯನ್ನು ಕಳೆದುಕೊಳ್ಳಲು ಅವರಿಗೂ ಮನಸ್ಸಿರಲಿಲ್ಲ. ಆಗತಾನೆ ತಲೆ ಎತ್ತಿದ್ದ ಕೈಗಾರಿಕೋದ್ಯಮದ ರೂವಾರಿ ವಿಶ್ವೇಶ್ವರಯ್ಯ ಎಂಬುದು ಅವರಿಗೆ ಗೊತ್ತಿತ್ತು. ಆದರೆ ಹಿಂದುಳಿದ ಜನರಿಗಾಗಿ ಮೀಸಲು ನೀಡುವ ಮಿಲ್ಲರ್ ಆಯೋಗದ ವರದಿ ಸಂಬಂಧದಲ್ಲಿ ವಿಶ್ವೇಶ್ವರಯ್ಯನವರು ಪದೇಪದೇ ಬರೆಯುತ್ತಿದ್ದ ಪತ್ರಗಳಿಂದ ಮಹಾರಾಜರು ರೋಸಿ ಹೋದರು. ಕಡೆಗೆ ಬೇಸತ್ತ ಅವರು "ನನ್ನ ವಿವರಣೆಗಳು ನಿಮ್ಮನ್ನು ತೃಪ್ತಿಗೊಳಿಸದಿದ್ದರೆ ಇನ್ನುಳಿದಿರುವುದು ಒಂದೇ ಮಾರ್ಗ ನೀವು ರಾಜೀನಾಮೆ ಸಲ್ಲಿಸುವುದು ನಾನು ಅಂಗೀಕರಿಸುವುದು" ಎಂದು ಸ್ಪಷ್ಟವಾಗಿ ತಿಳಿಸಿದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡುವುದಕ್ಕೆ ವಿಶ್ವೇಶ್ವರಯ್ಯನವರು ವಿರೋಧ ಮಾಡಿರಲಿಕ್ಕಿಲ್ಲ. ಆದರೆ ಆಡಳಿತದ ನೇಮಕಾತಿಯಲ್ಲಿ ಅಸ್ಪೃಶ್ಯ ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡುವುದನ್ನು ಅವರು ವಿರೋಧಿಸಿದರು. ವಿದ್ಯೆಯನ್ನೇ ನಂಬಿದ ತನ್ನ ಜನಾಂಗ ಕಡೆಗಣಿಸಲ್ಪಡಬಹುದೆಂಬ ಸಹಜ ಆತಂಕ ವಿಶ್ವೇಶ್ವರಯ್ಯನವರಿಗಿದ್ದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಚರಿತ್ರೆಯ ಸಂಗತಿಯನ್ನು ವಿಶ್ಲೇಷಿಸುವಾಗ ವಸ್ತುನಿಷ್ಠವಾಗಿರಬೇಕಾಗುತ್ತದೆ. ಆಧುನಿಕ ಮೈಸೂರು ಪ್ರಾಂತದ ನಿರ್ಮಾಪಕ ಎಂದು ವಿಶ್ವೇಶ್ವರಯ್ಯನವರನ್ನು ಮಾತ್ರ ವೈಭವೀಕರಿಸಿ ಅದಕ್ಕೆ ಒತ್ತಾಸೆಯಾಗಿ ನಿಂತ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಮುಚ್ಚಿಹಾಕುವುದು ಅನ್ಯಾಯದ ಪರಮಾವಧಿ. ಈ ವಾಸ್ತವ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ಸಾರ್ವಜನಿಕ ರಂಗದ ರಕ್ಷಣೆಗಾಗಿ ಆರ್ಥಿಕ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಪ್ರಗತಿಪರರು ಹೋರಾಟ ಮುಂದುವರಿಸಬೇಕಾಗಿದೆ. ವಿಶ್ವೇಶ್ವರಯ್ಯನವರು ದಕ್ಷ ಪ್ರಾಮಾಣಿಕ ದಿವಾನರು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕರ್ನಾಟಕದ ಸಾರ್ವಜನಿಕ ರಂಗದ ಉದ್ಯಮಗಳಿಗೆ ಅವರ ಕೊಡುಗೆ ಅಪಾರವಾದುದು. ಆದರೆ ಈ ಹೊಗಳಿಕೆಯ ಆವೇಶದಲ್ಲಿ ಅವರು ಸಾಮಾಜಿಕ ನ್ಯಾಯದ ಪ್ರತಿಪಾದಕ ಎಂದು ಹೇಳುವುದು ಮಾತ್ರ ಸರಿಯಲ್ಲ.

ಈ ಶತಮಾನದ ಆರಂಭದ ಅಂದಿನ ಜಗತಿಕ ಸನ್ನಿವೇಶ. ಲೆನಿನ್ ನೇತೃತ್ವದಲ್ಲಿ ನಡೆದ ರಷ್ಯದ ಸಮಾಜವಾದಿ ಕ್ರಾಂತಿ, ಬಂಡವಾಳಶಾಹಿ ಬಿಕ್ಕಟ್ಟು ಇವೆಲ್ಲವುಗಳ ಪರಿಣಾಮವಾಗಿ ನಾಲ್ವಡಿ ಅವರು ಸಾಮಾಜಿಕ ನ್ಯಾಯದ ಪರವಾಗಿ ಹಾಗೂ ವಿಶ್ವೇಶ್ವರಯ್ಯನವರು ಸಾರ್ವಜನಿಕ ರಂಗದ ಉದ್ಯಮದ ಪರವಾಗಿ ಚಿಂತಿಸುವುದು ಅನಿವಾರ್ಯವಾಗಿತ್ತು ಎಂಬುದು ವಾಸ್ತವ ಸತ್ಯ. □



ಸೃಜನಾತ್ಮಕ ಹಾಗೂ ವೈಚಾರಿಕ
ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ವಿಯೆಟ್ನಾಂ: ಜನತೆಯ ಮಹಾ ಯುದ್ಧ

ವಿಯೆಟ್ನಾಂ ಜನತೆಯು ನ್ಯಾಯಕ್ಕಾಗಿ ಹೋರಾಡುವ ವಿಶ್ವದ ಸೈನಿಕರು. ಅವರ ಹೋರಾಟವೊಂದು ಮಹೋಗಾಥೆ. ಉದಾತ್ತ ಧ್ಯೇಯಕ್ಕಾಗಿ ಮಾನವರು ತಮ್ಮನ್ನು ಅರ್ಪಿಸಿಕೊಂಡಾಗ ಎಂತಹ ಯಶೋಗಾಥೆಯನ್ನು ಸಾಧಿಸಬಲ್ಲರೆಂದು ಶಾಶ್ವತವಾಗಿ ಇದು ನೆನಪಿಸುತ್ತದೆ. ವಿಯೆಟ್ನಾಂ ಜನತೆಗೆ ತಲೆಬಾಗೋಣ.

–ಬರ್ಟ್ರಾಂಡ್ ರಸಲ್.

ಇದೇ 2005ನೇ ವರ್ಷಕ್ಕೆ ಅಮೆರಿಕಾದ ಸೇನೆಯನ್ನು ಇನ್ನಿಲ್ಲದಂತೆ ಮಣ್ಣು ಮುಕ್ಕಿಸಿ ದಾರಿ ಹಿಡಿಯುವಂತೆ ಮಾಡಿದ ವಿಯೆಟ್ನಾಂ ಜನತೆಯ ಈ ಚಾರಿತ್ರಿಕ ಘಟನೆ ನಡೆದು 30 ವರ್ಷಗಳಾಗಿವೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಪ್ರಜಾ ಪ್ರಭುತ್ವಕ್ಕೆ ಬೆಂಕಿ ಬಿದ್ದಾಗ ಅದನ್ನು ನಂದಿಸುವ 'ಸ್ವಯಂಸೇವಕ ಅಗ್ನಿ ಶಾಮಕ ಇಲಾಖೆ'ಗೆ ಅಮೆರಿಕಾದ ವಿದೇಶಿ ನೀತಿಯನ್ನು ಜಾನ್ ಎಫ್.ಕೆನಡಿಯವರು ಒಂದೊಮ್ಮೆ ಹೋಲಿಸಿದ್ದರು. ಅದೇ ಅಗ್ನಿ ಶಾಮಕ ಇಲಾಖೆಗೆ ಬೆಂಕಿ ನಂದಿಸುವುದು ಹೇಗೆಂದು ವಿಯೆಟ್ನಾಂ ಪಾಠ ಕಲಿಸಿದೆ. ಭಾರತ ಸರ್ಕಾರವು ಅದೆಷ್ಟೆ ತಡವಾಗಿ ವಿಯೆಟ್ನಾಂ ಹೋರಾಟವನ್ನು ಅರ್ಥ ಮಾಡಿಕೊಂಡರೂ ಸಹ ಭಾರತೀಯ ಜನತೆ ಮಾತ್ರ ವಿಯೆಟ್ನಾಂ ಕ್ರಾಂತಿಕಾರರಿಗೆ ನಿರಂತರ ಬೆಂಬಲ ನೀಡುತ್ತಾ ಬಂದಿದ್ದಾರೆ.

ಗಾಳಿಯನ್ನು ವಿಷಮಯಗೊಳಿಸುವ ಸ್ಫೋಟಕಗಳು, ಕಡಲನ್ನು ಭೋರ್ಗರೆಸುವ ಸಿಡಿಮದ್ದುಗಳು, ಜಗತ್ತನ್ನೇ ನಿಮಿಷ ಮಾತ್ರದಲ್ಲ ಬೂದಿಯಾಗಿಸಿ ಬಿಡಬಲ್ಲ ಯುದ್ಧ ಸಾಮಗ್ರಿಗಳನ್ನು ಜಳಪಿಸುತ್ತಾ ಅಬ್ಬರಿಸುತಿದ್ದ ಸಾಮಾಜ್ರ್ಯಶಾಹಿಯನ್ನು ಯುದ್ಧ ಭೂಮಿಯಿಂದ ಭಯ ಭೀತವಾಗಿ ಓಡಿಹೋಗುವಂತೆ ಮಾಡಿದ್ದು ಕೇವಲ ವಿಯೆಟ್ನಾಂನ ರೈತಾಪಿ ಸೈನ್ಯ ಎಂಬುದು ಸೋಜಿಗ. ವಿಯೆಟ್ನಾಮಿನ ಪ್ರತಿಯೊಬ್ಬ ಪುರುಷ, ಮಹಿಳೆ, ಮಗು, ಪಶು–ಪಕ್ಷಿ ಮತ್ತು ಆ ಭೂಮಿಯ ಮೇಲೆ ಜೀವಿಸಿದ್ದ ಎಲ್ಲದರ ಮೇಲೂ ಅಮೆ ಯುದ್ಧಸಾರಿತ್ತು. ಅಮೆರಿಕಾವು ತನ್ನ ಶೇ.60 ರಷ್ಟು ಸೈನ್ಯವ ಶೇ.50 ರಷ್ಟು ಜಲಾಂತರ್ಗಾಮಿಗಳನ್ನು, ಶೇ.50 ರಷ್ಟು ವಾ ಸೇನೆಯನ್ನು ಈ ಯುದ್ಧದಲ್ಲಿ ಬಳಸಿತ್ತು. 10 ಮಿಲಿಯನ್ ಟ ಬಾಂಬುಗಳನ್ನು ಸುರಿಸಿತು (ಇದು ಪ್ರತಿ ವಿಯಾಟ್ನಾಮಿ ಪ್ರಜೆಗೆ 5 ಪೌಂಡ್‌ನಷ್ಟು). ಅದು ವಿಯೆಟ್ನಾಮಿನ ಇಂಚಿಂಚೂ ಭೂಮಿಯ ರಂಜಕದಿಂದ ಸುಟ್ಟಿತು, ಫಲವತ್ತಾದ ಭೂಮಿಯನ್ನು ವಿಷಮಯ ಳಿಸಿತು, (ನೋಮ್ ಚಾಮ್‌ಸ್ಕಿರವರ ಅಟ್ ವಾರ್ ವಿಥ್ ಏಷ ಎರಡು ಮಿಲಿಯನ್ ನ್ಯೂಕ್ಲಿಯರ್ ಶಕ್ತಿ ಸ್ಫೋಟಕಗಳು ಮ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಬಲ ಹೊಂದಿದ್ದ ಅಮೆರಿಕಾವು ಹಿಂದ ದಿದ್ದ, ತನ್ನ ಟೆಕ್ಸಾಸ್ ರಾಜ್ಯದ ಅರ್ಧದಷ್ಟಿದ್ದು, ಪಾಶ್ಚಿಮಾತ್ಯ ವಸಾಹ ಆಳ್ವಿಕೆಯಿಂದ ವಿನಾಶವೊಂದಿದ್ದ, ಕೇವಲ 32 ಮಂದಿ ಪ್ಲಟೂ ಕ್ರಾಂತಿಕಾರಿ ಸೈನ್ಯ ಹೊಂದಿದ್ದ ವಿಯೆಟ್ನಾಂ ಮೇಲೆ ಆಕ್ರಮ ಮಾಡಿತು. ಆ ಕ್ರಾಂತಿಕಾರಿ ಸೈನ್ಯದ ಬಳಿಯಿದ್ದ ಶಸ್ತ್ರಾಸ್ತ್ರಗಳೆಂದ ಬಿದಿರು ಬಂಬಿನ ಆಯುಧ, ಕಡಗೋಲುಗಳು ಮತ್ತು ಬೇಟೆಗಾರ ನೀಡಿದ್ದ ಕೆಲವು ಶಸ್ತ್ರಗಳಷ್ಟೆ.

ಜಿನೇವಾ ಒಪ್ಪಂದದಂತೆ ವಿಯೆಟ್ನಾಂನಲ್ಲಿ ಚುನಾವ ನಡೆಸಲು ಅಮೆರಿಕಾ ಸಾರಾಸಗಟಾಗಿ ಒಪ್ಪದಿದ್ದಕ್ಕೆ ಬಹು ಮು ಕಾರಣವೆಂದರೆ ಶೇ. 80 ರಷ್ಟು ಮತವನ್ನು ವಿಯೆಟ್ನಾಂ ದು ಯುವ ಜನತೆಯ ಮಹಾನ್ ನಾಯಕ ಹೊ.ಚಿ.ಮಿನ್ ಗಳಿಸು ರೆಂಬುದು. ಅಮೆರಿಕಾದ ಅಧ್ಯಕ್ಷ ರಿಚರ್ಡ್ ನಿಕ್ಸನ್ ವಿಯೆಟ್ನಾಮ ಅನ್ನು ಹಿಂದೊಮ್ಮೆ 'ನಾಲ್ಕನೇ ದರ್ಜೆ ಶಕ್ತಿ' ಎಂದು ಜರೆದಿದ್ದ ಉತ್ತರವೇನೋ ಎಂಬಂತೆ, ಫ್ರಾನ್ಸ್‌ನ ಮಹಾಶಕ್ತಿಯನ್ನು ಸೋ ಸಿತು, ಮುರಿಯಲಾಗದ ವಾಯು ರಕ್ಷಣಾ ಕೋಟೆ, 600 ಮೈ ಯುದ್ಧಕ್ಕೂ ಪ್ರತಿರೋಧನಾ ಯುದ್ಧ, 140 ನಗರಗಳಲ್ಲಿ ಏ ಕಾಲ

ನೆನಪು

೨೦೦೫ನೇ ವರ್ಷಕ್ಕೆ ಅಮೆರಿಕಾದ ಸೇನೆಯನ್ನು ಇನ್ನಿಲ್ಲದಂತೆ ಮಣ್ಣು ಮುಕ್ಕಿಸಿ ದಾರಿ ಹಿಡಿಯುವಂತೆ ಮಾಡಿದ ವಿಯೆಟ್ನಾಂ ಜನತೆಯ ಈ ಚಾರಿತ್ರಿಕ ಘಟನೆ ನಡೆದು ೩೦ ವರ್ಷಗಳಾಗಿವೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಪ್ರಜಾ ಪ್ರಭುತ್ವಕ್ಕೆ ಬೆಂಕಿ ಬಿದ್ದಾಗ ಅದನ್ನು ನಂದಿಸುವ 'ಸ್ವಯಂ ಸೇವಕ ಅಗ್ನಿ ಶಾಮಕ ಇಲಾಖೆ'ಗೆ ಅಮೆರಿಕಾದ ವಿದೇಶಿ ನೀತಿಯನ್ನು ಜಾನ್ ಎಫ್. ಕೆನಡಿಯವರು ಒಂದೊಮ್ಮೆ ಹೋಲಿಸಿದ್ದರು. ಅದೇ ಅಗ್ನಿ ಶಾಮಕ ಇಲಾಖೆಗೆ ಬೆಂಕಿ ನಂದಿಸುವುದು ಹೇಗೆಂದು ವಿಯೆಟ್ನಾಂ ಪಾಠ ಕಲಿಸಿದೆ. ಭಾರತೀಯ ಜನತೆ ಮಾತ್ರ ವಿಯೆಟ್ನಾಂ ಕ್ರಾಂತಿಕಾರರಿಗೆ ನಿರಂತರ ಬೆಂಬಲ ನೀಡುತ್ತಾ ಬಂದಿದ್ದಾರೆ.

ರಾಯ್ ಮತ್ತು ಜಯ

ಳಿ ಇವೆಲ್ಲವನ್ನೂ ಯಶಸ್ವಿಯಾಗಿ ನಿಗ್ರಹಿಸಲು ಇದೇ ಲ್ಕನೇ ದರ್ಜೆ ಶಕ್ತಿ'ಗೆ ಸಾಧ್ಯವಾಯಿತು. ಇದು ಮಿಲಿ ಇತಿಹಾಸದಲ್ಲಿ ಹಿಂದೆಂದೂ ಕೇಳರಿಯದ ಹಿರಿಮೆ ಗಿದೆ. (ವಿಲ್‌ಫ್ರೆಡ್ ಬರ್ಚೆಟ್: ವಿಯೆಟ್ನಾಂ ವಿಲ್‌ವಿನ್).

ದರಿಂದ ಹುಚ್ಚೆದ್ದ ಅಮೆರಿಕಾ ಅಧ್ಯಕ್ಷ ನಿಕ್ಸನ್ ಸಿಕ್ಕೆಡೆ ಲ್ಲೆಲ್ಲ ದಾಳಿಯಾರಂಭಿಸಿ ಶಾಲೆಗಳು, ಆಸ್ಪತ್ರೆಗಳು: ವಸ ಹಗಳಂತಹ ಸೂಕ್ಷ್ಮ ಪ್ರದೇಶಗಳ ಮೇಲೆ ಸಿಡಿಮದ್ದಿನ ಳೆ ಸುರಿಸಿದ. ಅದೆಷ್ಟೆ ವಿಶ್ವ ಪ್ರಯತ್ನ ನಡೆಸಿದರೂ ಮೆರಿಕಾದ ಸೇನೆ ಇನ್ನಿಲ್ಲದಂತೆ ನೆಲಕಚ್ಚಿತು. ಅಮೆರಿಕಾದ ನಾಯ ಸೋಲಿಗೆ ವಿಯೆಟ್ನಾಂ ಜನತೆಯ ಉನ್ನತ ದ್ಧಿವಂತಿಕೆ, ಯುದ್ಧತಂತ್ರ ಮತ್ತು ಆತ್ಮ ವಿಶ್ವಾಸಗಳೇ ರಣ ಇಲ್ಲಿಯವರಿಗೆ.

ವಿಯೆಟ್ನಾಂ ಜನತೆಯ ಮಹಾನ್ ಜಯದ ಬಗ್ಗೆ ವಾರು ವಿಶ್ಲೇಷಣೆಗಳು ನಡೆದಿವೆ. ವಿಯೆಟ್ನಾಂ ಷ್ಟ್ರವು ಈ ಸಲ ವಿದೇಶಿಯರ ವಿರುದ್ಧ ಯುದ್ಧಕ್ಕಿಳಿ ೂ, ರಾಜ ಪ್ರಭುತ್ವದ ವಂಶಪಾರಂಪರ್ಯವನ್ನೂ ಸಹ ತ್ತೊಗೆಯುವ ಕ್ರಾಂತಿಕಾರಿ ತಳಹದಿಯ ಮೇಲೆ ಜಯ ದಿದೆ. ವಸಾಹತುಶಾಹಿ ವಿರೋಧಿ ಯುದ್ಧದ ಅಂತಿಮ ಯು ವಿಯೆಟ್ನಾಮಿನ ಜಮೀನ್ದಾರಿ ಮತ್ತು ಉದ್ಯಮಿ ಆಳ್ವಿಕೆಗೆ ಬೆಂಕಿಯಿಡುವುದೇ ಆಗಿತ್ತು. ವಸಾಹತುಶಾಹಿ ರೋಧಿ ಯುದ್ಧದ ಚಾಲನೆಗೆ ಸಮಾಜವಾದ ಬೆಸೆದು ಂಡಿತ್ತು. ಅತ್ಯಾಧುನಿಕ ಶಸ್ತ್ರಾಸ್ತ್ರ ಹೊಂದಿರದಿದ್ದರೂ ಯೆಟ್ನಾಂ ಕ್ರಾಂತಿಕಾರರ ಯುದ್ಧತಂತ್ರ, ಚಾಣಕ್ಷತೆ ತ್ತು ಯೋಜನಾ ಸಾಮರ್ಥ್ಯ ಅಮೆರಿಕನ್ನರಿಗಿಂತ ಅತ್ಯು ಮಟ್ಟದಲ್ಲಿತ್ತು. ಅವರೇ ಹೇಳುವಂತೆ, ದಾಳಿ ಕೋರರ ಹಚ್ಚುವ ಉಪಕರಣಗಳು ಎಷ್ಟೊಂದು ಶಕ್ತಿಯುತವಾ ವೆಂದರೆ, ಗೊತ್ತಾಗದಂತೆ ಮಡಿಕೆ ಅಕ್ಕಿ ಬೇಯಿಸು ೂ ಅಸಾಧ್ಯವಿತ್ತು.

ಇದರ ನಡುವೆಯೂ ವಿಯೆಟ್ನಾಂ ವೀರರು ತ್ತೂ ಸುಳಿವು ಸಿಗದ ರೀತಿಯಲ್ಲಿ 140 ನಗರಗಳಿಗೆ ಶಸ್ತ್ರ ಮತ್ತು ಭಾರವುಳ್ಳ ಯುದ್ಧೋಪಕರಣಗಳನ್ನು ಸಿ 600 ಮೈಲಿಯುದ್ದಕ್ಕೂ ಏಕಕಾಲಕ್ಕೆ ಸಂಯೋಜಿತ ನಡೆಸಿದರು. ಸಮಗ್ರ ಜನತೆ ಇದರಲ್ಲಿ ಭಾಗಿಯಾಗದಿ ಸಾಧ್ಯವಾಗುತ್ತಿರಲ್ಲಿಲ್ಲ ವಿದೇಶಿಯರ ಬಳಿ ಅತ್ಯಾಧುನಿಕ ಹಚ್ಚುವ ಯುದ್ಧೋಪಕರಣಗಳಿದ್ದರೂ ಸಹ, ವುದೇ ಒಬ್ಬ ವಿಯೆಟ್ನಾಂ ನಾಯಕನನ್ನಾಗಲಿ ಅಥವಾ ುಗಳಲ್ಲಿ ಅಡಗಿದ್ದ ಕ್ರಾಂತಿಕಾರರನ್ನಾಗಲಿ ಪತ್ತೆ ಹಚ್ಚಲು ವಾಗಲಿ ಲ್ಲವೆಂಬುದು ಅತ್ಯಂತ ಸೋಜಿಗವನ್ನುಂಟು ುತ್ತದೆ.

ಯುದ್ಧದಲ್ಲಿ ವಿಯೆಟ್ನಾಂ ರಾಷ್ಟ್ರದ ಎಲ್ಲ ವರ್ಗಗಳ ತೆಯು ಭಾಗವಹಿಸಿದ್ದು, ಜನತಾ ಸೈನ್ಯ ಯುದ್ಧದ ಚೂಣಿ ಯಲ್ಲಿತ್ತು ಯುದ್ಧದ ಬಹುತೇಕ ನಾಯಕರು ೇ ಆಗಿದ್ದರು. ಅಮೆರಿಕಾದ ಸೋಲಿಗೆ ಮತ್ತೊಂದು ಣವೆಂದರೆ ಆಂತರಿಕವಾಗಿ ಅಮೆರಿಕದ ಜನತೆಯೇ ದೇಶದ ಆಳುವ ವರ್ಗದ ಸುಲಿಗೆ ಕೋರ ಯನ್ನು ನಿರಂತರವಾಗಿ ಪ್ರತಿರೋಧಿಸಿ ವಿರೋಧ ಪಡಿಸಿದರು. 'ನಾನೊಂದು ಗೌರವಯುತ ಜೀವನ ುವ ಸಲುವಾಗಿ ನನ್ನ ಮಗ/ಗಂಡ ವಿಯೆಟ್ನಾಮ್‌ನಲ್ಲಿ ಗೆ ಹಂತಕನಾಗಿ ಕೆಲಸ ಮಾಡಿ ಹಣ ಸಂಪಾದಿಸ ೇನು?' ಎಂಬಂಥ ಪ್ರಶ್ನೆಗಳು ಏಳಲಾರಂಭಿಸಿದವು. ೀಯವಾಗಿ, ಕಪ್ಪು ನಾಯಕರುಗಳ ಮುಂದೆ ಪ್ರಶ್ನೆ ಉದ್ಭವವಾಗಲು ಯುದ್ಧ ಕಾರಣವಾಯಿತು: ಕಪ್ಪು ಜನರನ್ನು ಆಂತರಿಕವಾಗಿ ಮತ್ತು ವಸಾಹತು ಶಾಹಿ ಹಿಡಿತ ದಿಂದ ವಿಮೋಚನೆಗಾಗಿ ಹೋರಾಡುತ್ತಿರುವ ವಿಯೆಟ್ನಾಂ ಜನತೆಯನ್ನು ವ್ಯವಸ್ಥಿತವಾಗಿ ಕೊಲ್ಲುತ್ತಿರುವ ವ್ಯವಸ್ಥೆಯೊ ಳಗೇ ಇದ್ದು ವ್ಯವಸ್ಥೆಯನ್ನು ಬದಲಿಸುವುದೋ ಅಥವಾ ಮೌನವಹಿಸುವುದೋ, ಇತ್ಯಾದಿ. ವರ್ಗ ಪ್ರಜ್ಞೆಯುಳ್ಳ, ಮುಂದಾಳುಗಳಾಗಿರುವ ಮತ್ತು ಸಾಮ್ರಾಜ್ಯ ಶಾಹಿ

ವಿಯೆಟ್ನಾಂ ಜನತೆಯ ಮಹಾನ್ ಜಯದ ಬಗ್ಗೆ ಹಲವಾರು ವಿಶ್ಲೇಷಣೆಗಳು ನಡೆದಿವೆ. ವಿಯೆಟ್ನಾಂ ರಾಷ್ಟ್ರವು ಈ ಸಲ ವಿದೇಶಿಯರ ವಿರುದ್ಧ ಯುದ್ಧಕ್ಕಿಳಿದರೂ, ರಾಜ ಪ್ರಭುತ್ವದ ವಂಶಪಾರಂಪರ್ಯವನ್ನೂ ಸಹ ಕಿತ್ತೊಗೆಯುವ ಕ್ರಾಂತಿಕಾರಿ ತಳಹದಿಯ ಮೇಲೆ ಜಯ ತಂದಿದೆ. ವಸಾಹತುಶಾಹಿ ವಿರೋಧಿ ಯುದ್ಧದ ಅಂತಿಮ ಗುರಿಯು ವಿಯೆಟ್ನಾಮಿನ ಜಮೀನ್ದಾರಿ ಮತ್ತು ಉದ್ಯಮಿಗಳ ಆಳ್ವಿಕೆಗೆ ಬೆಂಕಿಯಿಡುವುದೇ ಆಗಿತ್ತು. ವಸಾಹತುಶಾಹಿ ವಿರೋಧಿ ಯುದ್ಧದ ಚಾಲನೆಗೆ ಸಮಾಜವಾದ ಬೆಸೆದು ಕೊಂಡಿತ್ತು. ವಿಯೆಟ್ನಾಂ ಕ್ರಾಂತಿಕಾರರ ಯುದ್ಧತಂತ್ರ, ಚಾಣಕ್ಷತೆ ಮತ್ತು ಯೋಜನಾ ಸಾಮರ್ಥ್ಯ ಅಮೆರಿಕನ್ನರಿಗಿಂತ ಅತ್ಯು ನ್ನತ ಮಟ್ಟದಲ್ಲಿತ್ತು. ಅವರೇ ಹೇಳುವಂತೆ, ದಾಳಿ ಕೋರರ ಪತ್ತೆ ಹಚ್ಚುವ ಉಪಕರಣಗಳು ಎಷ್ಟೊಂದು ಶಕ್ತಿಯುತವಾ ಗಿದ್ದವೆಂದರೆ, ಗೊತ್ತಾಗದಂತೆ ಮಡಿಕೆ ಅಕ್ಕಿ ಬೇಯಿಸುವುದೂ ಅಸಾಧ್ಯವಿತ್ತು.

ವಿರೋಧಿ ಕಪ್ಪು ಜನಾಂಗದ ನಾಯಕರು ತಮ್ಮ ಸಂಕಷ್ಟ ಗಳನ್ನು ವಿಯೆಟ್ನಾಂ ಜನತೆಯ ಸ್ವಾತಂತ್ರ್ಯ ಹೋರಾಟ ದೊಂದಿಗೆ ಬೆಸೆದು ಒಟ್ಟಾರೆ ಜಾಗತಿಕ ಹೋರಾಟದಂತೆ ಅರ್ಥೈಸಿದರು. ಕಪ್ಪು ಜನತೆ ಅಮೆರಿಕಾದ ಪೋಲಿಸ ರಿಂದ ದೌರ್ಜನ್ಯಗಳಿಂದ ನೊಂದರೆ, ವಿಯೆಟ್ನಾಂ ಜನತೆ ಅಮೆರಿಕಾದ ಸೇನೆಯಿಂದ ನರಳುತ್ತಿತ್ತು. 13,000 ಮೈಲು ಗಳ ದೂರದಲ್ಲಿರುವ ವಿಯೆಟ್ನಾಂ ನಲ್ಲಿ ಬಾಂಬಿನ ಸುರಿ ಮಳೆಗೈಯ್ಯುವ ಅಮೆರಿಕ ಅದೇ ವೇಳೆ ತನ್ನದೇ ರಾಜ್ಯಗ ಳಲ್ಲೂ ಕಪ್ಪು ನಾಗರಿಕರ ಮೇಲೆ ಟಿಯರ್ ಗ್ಯಾಸ್, ಸ್ಫೋಟಕಗಳನ್ನು ಸುರಿದು ಹಿಂಸಿಸುತ್ತಿತ್ತು. ಕಪ್ಪು ಮಂದಿ ಯಾರೂ ಯುದ್ಧದಲ್ಲಿ ಭಾಗವಹಿಸ ಬಾರದೆಂದು ಧಿಕ್ಕರಿಸಿದರೆ, ಬಿಳಿಯರಲ್ಲೂ ಸಹ ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು ಮತ್ತು ಕಾರ್ಮಿಕರು ಅದ್ಭುತವಾದ ಪ್ರತಿರೋಧ ವ್ಯಕ್ತಪಡಿಸಿದರು. ಬೃಹತ್ ಮಟ್ಟದ ನಾಗರಿಕ ಅಸಹಕಾರ ಚಳುವಳಿಗಳು ಘಟಿಸಿ ವಿಶ್ವ ವಿದ್ಯಾಲಯಗಳ ಕೇಂದ್ರಗಳಲ್ಲಿ ಸೇನಾ ನೇಮಕಾತಿ ಧಿಕ್ಕರಿಸಿದಾಗ ಕೆಂಟ್ ರಾಜ್ಯದ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳನ್ನು ಕೊಂದ ಅಮೆರಿಕಾದ ಸಂಸ್ಕೃತಿ ಪ್ರಪಂಚದ ಇತರೆ ರಾಷ್ಟ್ರಗಳನ್ನು ಬೆಚ್ಚಿಬೀಳಿಸಿತು.

ಅಮೆರಿಕಾದ ಸೇನೆಯೊಳಗೇ ಅನೈಕ್ಯತೆ ಉಂಟಾಗಿ ಸೈನಿಕರ ನಡುವೆ ಮೇಲಧಿಕಾರಿಗಳಲ್ಲಿ ಕೈ-ಕೈ ಮಿಲಾಯಿ ಸುವ, ಗುಂಡಾರಿಸುವ ಯುದ್ಧ-ವಿರೋಧಿ ಚರ್ಚೆ, ಅಸಹನೆ ಮಿತಿ ಮೀರಿದವು. ಒಟ್ಟಾರೆ ಅಮೆರಿಕದಲ್ಲಿ ವಿಯೆಟ್ನಾಂ ರೋಗ ಶುರುವಾಗಿ ಅಮೆರಿಕದ ಅಜೇಯ ಸ್ಥಾನಕ್ಕೆ ಕೊಡಲಿ ಪೆಟ್ಟು ಬೀಳಲಾರಂಭವಾಯಿತು. ಅಮೆರಿಕ ಸೋಲನುಭವಿಸಿದ ನಂತರ ಸೋಲಿನ ಮುಖ ಭಂಗ ತೊಡೆದು ಹಾಕಲು ಸರ್ಕಾರವು ಮನೋರಂಜನಾ ಉದ್ಯಮ, ಮಾಧ್ಯಮ, ಬುದ್ಧಿ ಜೀವಿಗಳು, ಎಲ್ಲರನ್ನು ಉಪ ಯೋಗಿಸಿಕೊಂಡು ರಾಜಕೀಯವಾಗಿ ಮತ್ತು ಮಾನಸಿಕ ವಾಗಿ ತೇಪೆ ಹಾಕಲು, ಮತ್ತು ವಿಯೆಟ್ನಾಂ ರೋಗ ವಾಸಿಗಾಗಿ ಯತ್ನಿಸಿತು. ಆದರೆ ಇವೆಲ್ಲದರ ತಳಪಾಯ ಹಸಿ ಸುಳ್ಳು ಮತ್ತು ಕುಟಿಲೋಪಾಯಗಳಷ್ಟೆ.

ಅಷ್ಟಕ್ಕೂ ವಿಯೆಟ್ನಾಂ ಮೇಲೆ ಯುದ್ಧ ಸಾರಿದ್ದೇ ಕೆಂದರೆ, ಏಷ್ಯಾದ ರಾಷ್ಟ್ರಗಳೆಲ್ಲವೂ ಕಮ್ಯುನಿಸ್ಟ್ ಸಿದ್ಧಾಂತದ ಸುಂಟರಗಾಳಿಯೊಳಗೆ ಸಿಲುಕಿ ಬಂಡವಾಳ ಶಾಹಿ ಹಿಡಿತ ದಿಂದ ತಪ್ಪಿಸಿಕೊಳ್ಳುತ್ತವೆಂಬ ಭಯ. ಮೂತಿಗಿರಿಸಿಕೊಂಡ ಈ ಯುದ್ಧದಿಂದ ಅಮೆರಿಕಗೆ ಆದ ನಷ್ಟ ಕೂಡ ಕಡಿಮೆ ಪ್ರಮಾಣದ್ದಲ್ಲ. 60,000 ಅಮೆರಿಕನ್ನರು ಸತ್ತು, 3,07,000 ಗಾಯಗೊಂಡಿದ್ದು, ಲಕ್ಷ್ಯಾಂತರ ಜನ ಮಾನಸಿಕ ಯಾತನೆ ಗೊಳಗಾಗಿದ್ದಾರೆ. ಮಹಾನ್ ದಾರ್ಶನಿಕ ಬರ್ಟ್ರಾಂಡ್ ರಸೆಲ್‌ರವರು 40 ವರ್ಷಗಳ ಹಿಂದೆಯೇ ಅಮೆರಿಕಾದ ದಾಳಿಕೋರತನವನ್ನು ಅರ್ಥೈಸಿರುವುದು ಈ ರೀತಿಯಿದೆ: ಇತರೆ ರಾಷ್ಟ್ರಗಳ ಅಂತಾರಾಷ್ಟ್ರೀಯ ವಿಷಯಗಳಲ್ಲಿ ಮಧ್ಯ ಪ್ರವೇಶಿಸುವ ಅಮೆರಿಕಾದ ಪಾತ್ರವನ್ನು ಪಾವಿತ್ರ್ಯತೆ ಎಂದು ಪರಿಗಣಿಸಲಾಗುತ್ತಿದೆ. ಈ ರಾಷ್ಟ್ರಗಳ ಸಾಮಾಜಿಕ ಮತ್ತು ರಾಜಕೀಯ ನೀತಿಗಳು ಖಾಸಗಿ ಆರ್ಥಿಕ ಶಕ್ತಿಗಳ ಹಿತಾ ಸಕ್ತಿಗಳಿಗೆ ಹೊಂದಾಣಿಕೆ ಯಾಗದಿದ್ದಾಗ ಅಮೆರಿಕಾದ ಮಧ್ಯಪ್ರವೇಶವನ್ನು ಒಪ್ಪಿ ಕೊಳ್ಳಲಾಗುತ್ತಿದೆ. ಅಮೆರಿಕಾದ ರಾಷ್ಟ್ರೀಯ ಹಿತಾಸಕ್ತಿಗಳೊಂದಿಗೆ ಖಾಸಗಿ, ಕಾರ್ಪೊರೇಟ್ ಬಂಡವಾಳ ಶಾಹಿ ಮತ್ತು ಅದರ ವಿದೇಶಿ ಬದ್ಧತೆಗಳು ಹೇಗೆ ಗುರುತಿಸಿಕೊಂಡಿವೆ ಎಂಬುದನ್ನು ಪ್ರಶ್ನಿಸುವ ಬದಲು ವಿಚಾರವಾದಿಗಳು ಮತ್ತು ಹಲವು ಸಮಾಜವಾದಿ ಗಳು ಈ ದುಷ್ಟ ಶಕ್ತಿಗಳ ಕೈವಾಡವನ್ನು ಮೌನವಾಗಿ ಒಪ್ಪುತ್ತಾರೆ "ಖಾಸಗಿ ಬಂಡವಾಳಕ್ಕೆ ಅಪಾಯ ಒದಗಿ ಬಂದಾಗ ಮಾತ್ರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ ಎನ್ನುತ್ತಾರೆ, ಮತ್ತು ಅಮೆರಿಕಾದ ಸೇನೆಯನ್ನು ಅಲ್ಲಿಗೆ ಕರೆ ತರುತ್ತಾರೆ."

ವಿಯೆಟ್ನಾಂ ಜನತೆಯ ಮಹಾನ್ ಸ್ವಾಭಿಮಾನಿ ಯುದ್ಧದ ದಂತಕಥೆಯಾದ ಮಹಾನಾಯಕನ ಬಗ್ಗೆ ಕೆಲವು ಮಾತಾದರೂ ಹೇಳದಿದ್ದರೆ ವಿಯೆಟ್ನಾಂ ಬಗೆಗಿನ ಚರ್ಚೆ ಸಂಪೂರ್ಣವಲ್ಲ. ಇವರು ಒಬ್ಬ ಬಡ ರೈತರಾಗಿದ್ದು ತಮ್ಮೆಲ್ಲ ಜೀವನ ಪೂರ್ತಿ ಹೋರಾಡಿದ್ದಾರೆ. ಇವರು ಹಡ ಗಿನಲ್ಲಿ ಕೆಲಸದವನಾಗಿ, ಅಡುಗೆಯವನಾಗಿ ಫೋಟೋಗ್ರಫಿ ಕಲಾವಿದರೂ ಆಗಿದ್ದರು; ಗುಹೆಗಳಲ್ಲಿ, ಜಿಗಣೆಗಳು ತುಂಬಿ ರುವ ಕಾಡುಗಳಲ್ಲಿ ವಾಸ ಮಾಡಿದ್ದಾರೆ; ಕವನ ರಚಿಸುತ್ತಿದ್ದ ಇವರು ಫ್ರೆಂಚ್, ಇಂಗ್ಲಿಷ್, ರಷ್ಯನ್ ಮತ್ತು ಚೈನೀಸ್ ಭಾಷೆ ಮಾತನಾಡಬಲ್ಲವರಾಗಿದ್ದರು. ರಾಷ್ಟ್ರದ ಅನೇಕ ಕಮ್ಯುನಿಷ್ಟ್ ಪಕ್ಷಗಳ ಸ್ಥಾಪಕರಾಗಿದ್ದಾರೆ; ಬರಿಗಾಲಿನಲ್ಲಿ ಸಾವಿರಾರು ಕಿಲೋ ಮೀಟರ್ ದೂರ ಸವೆಸಿದ್ದಾರೆ; ಅನೇಕ ವೇಳೆ ಮರಣದಂಡನೆಗೊಳಗಾಗಿ ಹಲವು ತಿಂಗಳು ಸೆರೆವಾಸ ಅನುಭವಿಸಿದ್ದಾರೆ. ಅದೂ ಕೊರಳಿಗೆ ಖೈದಿ ಬೋರ್ಡ್ ನೇತುಹಾಕಿಕೊಂಡು ಮತ್ತು ಕಾಲುಗಳಿಗೆ ಸರಪಳಿ ಬಿಗಿಸಿಕೊಂಡು. "ಸಿಡಿಲ ಹೊಡೆತಕ್ಕಿಂತ ಶಕ್ತಿಯು ತವಾದ, ಹೂವಿಗಿಂತಲೂ ಮೃದುವಾದ" ಅವರೇ ಹೊ ಚಿ ಮಿನ್ – ಅಂದರೆ 'ಎಲ್ಲರನ್ನು ಜ್ಞಾನೋದಯ ಗೊಳಿ ಸುವವನು.' □

ಒಳ ಮೀಸಲಾತಿ ಬೇಕೆ?

ಚಿಂತನೆ

ಆಧುನಿಕ ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಅಸ್ಪೃಶ್ಯರು ಮತ್ತು ದುರ್ಬಲ ವರ್ಗದ ಜನರಲ್ಲಿ ಮನೋಬಲ ಹೆಚ್ಚಿಸುವ ಸಲುವಾಗಿ, ತಮ್ಮ ಸಂಸ್ಥಾನದಲ್ಲಿ ಛತ್ರಪತಿ ಶಾಹು ಮಹಾರಾಜರು ಮೀಸಲಾತಿ ಜಾರಿಗೆ ತರುವುದರ ಮೂಲಕ ಭಾರತದಲ್ಲಿಯೇ ಮೊದಲಿಗರೆನಿಸಿದರು. ಕನ್ನಡದ ನಾಲ್ವಡಿ ಕೃಷ್ಣರಾಜ ಒಡೆಯರ್ ಎರಡನೆಯವರು. ದಲಿತ ಹಾಗೂ ಮಹಿಳೆಯರಿಗೆ ಅಕ್ಷರ ಸಂಸ್ಕೃತಿಗೆ ತಂದವರು ಮಹಾತ್ಮ ಜ್ಯೋತಿಬಾ ಫುಲೆಯವರು ಎನ್ನುವುದು ಮರೆಯುವಂತಿಲ್ಲ. ಪ್ರಭಾವಿತರಾದ ಡಾ|| ಅಂಬೇಡ್ಕರ್ ಅವರು ಆಂಗ್ಲರೊಂದಿಗೆ ಸೈದ್ಧಾಂತಿಕ ಹೋರಾಟ ಮಾಡಿ ದಲಿತರಿಗೆ ಮೀಸಲಾತಿ ಕಲ್ಪಿಸಿಕೊಟ್ಟರು.

○ಡಾ.ಎಚ್.ಟಿ.ಪೋತೆ

ನಮ್ಮ ಸಾಮಾಜಿಕ ವ್ಯವಸ್ಥೆ ಅಖಂಡವಾದುದು. ದೇಶದುದ್ದಕ್ಕೂ ಹರಡಿಕೊಂಡಿರುವ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ಕೇರಳ, ಆದಿ ದ್ರಾವಿಡ, ಮಹಾರ್, ಮಾಂಗ್, ಮಾಲಾ, ಮೋಚಿ ಸಮಗಾರ್, ಡೋಹರ್, ಚಮ್ಮಾರ್ ಈ ಮುಂತಾದ ಹೆಸರುಗಳಿಂದ ಗುರುತಿಸುವವರನ್ನು ಅಸ್ಪೃಶ್ಯರೆಂದು ಕರೆದು ಶತಶತಮಾನಗಳಿಂದಲೂ ಅವಮಾನಿಸುತ್ತ ಬರಲಾಗಿದೆ. ಇಲ್ಲಿಯ ಗುಡ್ಡ ಗಾಡುಗಳಲ್ಲಿ ವಾಸಿಸುವವರನ್ನು ಆದಿ ವಾಸಿಗಳೆಂದು ಮೂಲ ನಿವಾಸಿಗಳೆಂದು ಕರೆದು ಕಾಡು ಜೀವನಕ್ಕೆ ಸೀಮಿತಗೊಳಿಸಿ ನಾಗರಿಕ ಬದುಕಿನಿಂದ ದೂರ ತಳ್ಳಲಾಗಿದೆ. ಇದಕ್ಕೆಲ್ಲ ಕಾರಣರಾದವರು ವಲಸಿಗ ಆರ್ಯರು. ವಲಸಿಗರ ವ್ಯವಸ್ಥಿತವಾದ ಕುತಂತ್ರದಿಂದಾಗಿ ಇಲ್ಲಿಯ ಮೂಲ ನಿವಾಸಿ, ಆದಿವಾಸಿ, ಅಸ್ಪೃಶ್ಯ ಎಂದು ಕರೆಯಿಸಿಕೊಳ್ಳುವ ದಲಿತ, ಹಿಂದುಳಿದ ಹಾಗೂ ಬುಡಕಟ್ಟಿನ ಸಮುದಾಯವು ಅನ್ಯಾಯಕ್ಕೆ ಗುರಿಯಾಗಿದೆ. ವಾಸ್ತವವಾಗಿ ಈ ತಿರಸ್ಕೃತರೇ ಮೂಲ ಭಾರತೀಯರಾಗಿದ್ದಾರೆಂಬುದನ್ನು ಇಂದಿನ ಚರಿತ್ರಕಾರರು ಒಪ್ಪಿಕೊಳ್ಳಬೇಕಾಗಿದೆ.

ಈ ರೀತಿಯ ವ್ಯವಸ್ಥಿತ ಸಾಮಾಜಿಕ ಅಸಮಾನ ವ್ಯವಸ್ಥೆಯನ್ನು ಸಮಾನಗೊಳಿಸುವಲ್ಲಿ ದುಡಿದ ಬುದ್ಧ, ಬಸವ ಆಧುನಿಕ ಕಾಲದ ಅಂಬೇಡ್ಕರ್ ಈ ಎಲ್ಲ ಮಹನೀಯರನ್ನು ಸ್ಮರಿಸಲೇ ಬೇಕು. ಆಧುನಿಕ ಭಾರತದ ಸ್ವಾತಂತ್ರ್ಯಪೂರ್ವದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಅಸ್ಪೃಶ್ಯರು ಮತ್ತು ದುರ್ಬಲ ವರ್ಗದ ಜನರಲ್ಲಿ ಮನೋಬಲ ಹೆಚ್ಚಿಸುವ ಸಲುವಾಗಿ, ತಮ್ಮ ಸಂಸ್ಥಾನದಲ್ಲಿ ಛತ್ರಪತಿ ಶಾಹು ಮಹಾರಾಜರು ಮೀಸಲಾತಿ ಜಾರಿಗೆ ತರುವುದರ ಮೂಲಕ ಭಾರತದಲ್ಲಿಯೇ ಮೊದಲಿಗರೆನಿಸಿದರು.

ಕನ್ನಡದ ನಾಲ್ವಡಿ ಕೃಷ್ಣರಾಜ ಒಡೆಯರ್ ಎರಡನೆಯವರು. ದಲಿತ, ಶೋಷಿತ ಹಾಗೂ ಮಹಿಳೆಯರಿಗೆ ಅಕ್ಷರ ಸಂಸ್ಕೃತಿಗೆ ತಂದವರು ಮಹಾತ್ಮ ಜ್ಯೋತಿಬಾ ಫುಲೆಯವರು ಎನ್ನುವುದು ಮರೆಯುವಂತಿಲ್ಲ. ಈ ಎಲ್ಲರ ಚಿಂತನೆಗಳಿಗೆ ಪ್ರಭಾವಿತರಾದ ಡಾ|| ಅಂಬೇಡ್ಕರ್ ಅವರು ಆಂಗ್ಲರೊಂದಿಗೆ ಸೈದ್ಧಾಂತಿಕ ಹೋರಾಟ ಮಾಡಿ ದಲಿತ, ಶೋಷಿತರಿಗೆ ಮೀಸಲಾತಿ ಕಲ್ಪಿಸಿಕೊಟ್ಟರು. ಮೀಸಲಾತಿ ಭಿಕ್ಷೆಯಲ್ಲ ಅದು ಹಕ್ಕು ಎಂದು ಹೇಳುತ್ತ ಸಂವಿಧಾನದತ್ತಗೊಳಿಸಿದರು. ದಲಿತರು ಶತಶತಮಾನಗಳಿಂದಲೂ ಅವಮಾನಕ್ಕೊಳಗಾದುದರ ಫಲವಾಗಿ ಮೀಸಲಾತಿ ಪಡೆದರೂ, ಅದು ಕೂಡ ಅವಮಾನವೆಂದು ಹೀಗಳೆದವರು ಇಲ್ಲಿಯ ಮೇಲು ವರ್ಗದವರು. ಮೀಸಲಾತಿ ಎಂದರೆ ಅಸ್ಪೃಶ್ಯರು, ಅಸ್ಪೃಶ್ಯರೆಂದರೆ ಮೀಸಲಾತಿ ಎನ್ನುವ ಕಾಲವೊಂದಿತ್ತು. ಅದೊಂದು ರೀತಿಯ ಅವಮಾನದ ಸಂಕೇತವೂ ಎಂದೆನಿಸಿಕೊಂಡಿತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ಮೀಸಲಾತಿ ಒಂದೇ ನೆಲೆಗೆ ಸೀಮಿತಗೊಂಡಿಲ್ಲ. ಹಿಂದುಳಿದ ವರ್ಗದ ಮೀಸಲಾತಿ, ಅಲ್ಪಸಂಖ್ಯಾತರ ಮೀಸಲಾತಿ, ಮಹಿಳಾ ಮೀಸಲಾತಿ ಮುಂದುವರೆದ ಜಾತಿಗಳಲ್ಲಿರುವ ಬಡವರಿಗೆ ಮೀಸಲಾತಿ ಗ್ರಾಮೀಣ ಕೃಪಾಂಕ ಹೀಗೆ ಎಲ್ಲ ವರ್ಗದವರಿಗೆ ಮೀಸಲಾತಿ ಅವಕಾಶ ಲಭಿಸಿದೆ. ಅದು ಶೇಕಡಾ



೫೦ ದಾಟಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಹೇ
ಮಂಡಲ ವರದಿ ಜಾರಿಯಾದಾಗ ಹಿಂದುಳಿದ ವರ್ಗದ
ತಮಗೂ ಅದರಲ್ಲಿ ಪಾಲಿದೆ ಎನ್ನುವುದನ್ನೇ ಮರೆತು ಅದು ದ
ಸಲುವಾಗಿ ಜಾರಿಯಾದ ಕಾನೂನೆಂದು ಹಿಂದುಳಿದವರ ತಪ್ಪು
ಯಿಂದಾಗಿ ತಮ್ಮ ಹಕ್ಕಿನ ವಿರುದ್ಧ ತಾವೇ ಹೋರಾಟ ಮಾಡಿ
ಇತ್ತೀಚಿಗಷ್ಟೆ 'ಅಹಿಂದ ಚಳವಳಿ' ಪ್ರಾರಂಭವಾದ ತಕ್ಷಣ ಮ
ಭೂತವಾದಿಗಳು ದೇಶದಾದ್ಯಂತ ಮೀಸಲಾತಿಯಲ್ಲಿ ಮೀಸ
ವಿಂಗಡಣೆ ಮಾಡುವಲ್ಲಿ ಕೂದಲೆಳೆಯನ್ನು ಸೀಳಲು ಹೊರ
ವುದನ್ನು ಕಾಣುತ್ತಿದ್ದೇವೆ.

ದಲಿತರ ಮಹಾಚೇತನ ಡಾ. ಅಂಬೇಡ್ಕರ್ ೧೯೩೬
ಮತಾಂತರ ಆಂದೋಲನವನ್ನು ಪ್ರಾರಂಭಿಸಿದಾಗ 'ನನ್ನ ದುರಾ
ವೆಂದರೆ ನಾನು ಹಿಂದುವಾಗಿ ಹುಟ್ಟಿದ್ದು. ಏಕೆಂದರೆ ಅದನ್ನು
ಯುವುದು ನನ್ನ ಕೈಯಲ್ಲಿರಲಿಲ್ಲ. ಆದರೆ ಇಂದು ನಾನು ಪ್ರಮ
ಮಾಡಿ ಹೇಳುವುದೇನೆಂದರೆ, ನಾನು ಹಿಂದುವಾಗಿ ಮಾತ್ರ ಸಾ
ಲಾರೆ' ಎಂಬ ಘೋಷಣೆ ಹೊರಡಿಸಿದರು. ಇದು ಅವರ ನೋ
ನಾಳದಿಂದ ಬಂದ ನುಡಿ. ಈ ಹಿನ್ನೆಲೆಯಲ್ಲಿ ಮುಕ್ತಿ ಮಾರ್ಗ ಎ
ಅವರ ಲೇಖನವನ್ನು ಓದಿದಾಗ ಶೋಷಣೆ, ದೌರ್ಜನ್ಯ ದಬ್ಬಾಳಿಕೆ
ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ನೆಲೆಗಳ ಮೂಲಕ ದಿನನಿ
ವ್ಯವಹಾರಗಳಲ್ಲಿಯೂ ದಲಿತರು ಇಂದು ಹೇಗೆ ಅವಮಾನಿತರಾ
ದ್ದಾರೆ ಎನ್ನುವುದನ್ನು ವಸ್ತುಶಃ ವಿವರಿಸಿರುವುದು ಗೊತ್ತಾಗುತ್ತದೆ.
ಎಲ್ಲ ಕಾರಣಗಳಿಂದಾಗಿ ಅಂದು ನಾವೇಕೆ ಮತಾಂತರವಾಗಬಾರ
ಎಂದು ಅಂಬೇಡ್ಕರರು ಪ್ರಶ್ನಿಸಿದ್ದರು.

'ಬಂಧುಗಳೇ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ನೀ
ಅತ್ಯಂತ ದೈನ್ಯಾವಸ್ಥೆಯಲ್ಲಿ ಇದ್ದೀರಿ. ಬಾವಿಯಿಂದ ನೀರು ಸೇದಿ
ಕಾರಣಕ್ಕೆ, ಬಾವಿ ನೀರು ಕುಡಿದಿದ್ದಕ್ಕೆ ನಿಮ್ಮನ್ನು ಬಡಿಯಲಾಗಿ
ಒಳ್ಳೆಯ ಬಟ್ಟೆಯನ್ನು ಧರಿಸಿದ್ದಕ್ಕೆ, ಒಳ್ಳೆಯ ಪಾತ್ರೆಯಲ್ಲಿ ನೀ
ತುಂಬಿಕೊಂಡಿದ್ದಕ್ಕೆ ಒದಿಸಿಕೊಳ್ಳುತ್ತಿದ್ದೀರಿ. ಸತ್ತ ದನಗಳನ್ನು ಊ
ನಿಂದ ಹೊರಹಾಕದಿದ್ದುದಕ್ಕೆ, ಸತ್ತ ದನದ ಮಾಂಸ ತಿನ್ನುತ್ತಿದ್ದು
ನೀವು ನಿಮ್ಮ ಮಕ್ಕಳು ಜೀತದಾಳುಗಳಾಗದಿದ್ದುದಕ್ಕೆ, ಮೇಲುಜಾ
ಯವರಿಗೆ ನಮಸ್ಕಾರ ಮಾಡದಿರುವುದಕ್ಕೆ ಹೀಗೆ ಹತ್ತು ಹಲವಾ
ಕಾರಣಗಳಿಗೆ ನಿಮ್ಮನ್ನು ಶತಮಾನಗಳಿಂದ ಅವಮಾನಿಸುತ್ತ ಬಂ
ದ್ದಾರೆ. ಮೇಲಾಗಿ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ'.
ತರಹದ ಘಟನೆಗಳು ಆಧುನಿ
ಸಂದರ್ಭದಲ್ಲಿಯೂ ಶೋ
ಣೆಯ ಹೊಸ ಮುಖಗ
ಕಾಣಿಸಿಕೊಂಡು ದಲಿತರ
ಸುಡುವ ಸುಟ್ಟಿರುವ, ಗುಂಡ
ಕೊಂದಿರುವ ಘಟನೆಗಳು ಲ
ವಿಲ್ಲದಷ್ಟು. ಈ ಹಿನ್ನೆಲೆಯ
ದಲಿತರಿಗೆ ಮೀಸಲಾತಿ ಅಗ
ತೆಯ ಇನ್ನಷ್ಟು ಕಾರಣಗಳನ
ಕೊಡುವುದು ಅಥವಾ ಆ ಸಂ
ರ್ಭವನ್ನು ನೆನಪಿಸಿಕೊಳ್ಳುವುದ
ಅನಿವಾರ್ಯವೆಂದಿನಿಸುತ್ತದೆ.

ಅಸ್ಪೃಶ್ಯರ ಸಾಮಾಜಿ
ಒಡನಾಟವನ್ನು ಪ್ರತಿಬಂಧಿಸಿ
ಕ್ಕಾಗಿ ಸತ್ತ ದನಗಳನ್ನು ಹೊ

...ಕು, ಹೇಲು ಹೊತ್ತು ಸಾಗಿಸಬೇಕು, ಹೆಣವನ್ನು ಸುಡ ...ಕು. ಗೋರಿ ತೋಡಬೇಕು. ಊರ ಪ್ರವೇಶ ಮಾಡುವ ...ರ್ಭದಲ್ಲಿ ಬೀದಿಯಲ್ಲಿ ಹೆಜ್ಜೆ ಗುರುತು ಮೂಡದಂತೆ ...ಂಟಕ್ಕೆ ಪರಕೆ ಕಟ್ಟಿಕೊಂಡು ಓಡಾಡಬೇಕು. ಬೀದಿ ...ಲ್ಲಿ ಉಗುಳದಂತೆ ಕೊರಳಿಗೆ ಮಡಿಕೆ ಕಟ್ಟಿಕೊಂಡು ...ಡಿಕೆಯಲ್ಲಿಯೇ ಉಗುಳಬೇಕು, ದೇವಸ್ಥಾನ ಪ್ರವೇಶ ...ಡಬಾರದು ಎಂಬ ಮುಂತಾದ ಕಾರಣಗಳಿಂದಾಗಿ ...ರನ್ನು ಸಮಾಜದಿಂದ ಬಹಿಷ್ಕರಿಸಿದ್ದಕ್ಕಾಗಿ ಎಲ್ಲಕ್ಕಿಂತ ...ಗಿಲಾಗಿ ಈ ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ...ರ ಶ್ರಮದ ಪಾತ್ರ ಗಮನಾರ್ಹವಾಗಿದ್ದಾಗ್ಯೂ ಆ ...ದ ಬೆಲೆ ಅವರಿಗೆ ದಕ್ಕದಂತೆ ದೋಚಿದ್ದಕ್ಕಾಗಿ ಇಂದು ...ರಿಗೆ ಮೀಸಲಾತಿ ನಿಯಮವನ್ನು ವಿಸ್ತರಿಸಿಕೊಂಡು ...ಲಾಗುತ್ತಿದೆ. ಬರಬೇಕು ಕೂಡ. ಯಾರಾದರೂ ಮೀಸ ...ತಿ ಎನ್ನುವುದು ಮೇಲು ಜಾತಿಯವರು ದಲಿತರಿಗೆ ...ರಿಸುವ ಅನುಕಂಪ, ಕೊಡುವ ಭಿಕ್ಷೆ ಎಂದು ಭಾವಿ ...ರೆ ಅದು ಅವರ ತಪ್ಪು ಗ್ರಹಿಕೆ ಎಂದೇ ಹೇಳಬೇಕು.

ಮೀಸಲಾತಿ ಶತಮಾನಗಳ ಶೋಷಣೆಗಾಗಿ ...ತರು ಗಳಿಸಿರುವ ಹಕ್ಕೇ ಹೊರತು ಅದು ಭಿಕ್ಷೆಯಲ್ಲ. ...ಸ ಲಾತಿ ಅಳವಡಿಕೆಯಿಂದ ಪ್ರತಿಭೆ, ಅರ್ಹತೆ, ...ಗ್ಯತೆಗಳು ಹಾಳಾಗುತ್ತಿವೆ, ನಿರುದ್ಯೋಗ ಹೆಚ್ಚುತ್ತಿದೆ ...ದು ಕೆಲವು ಬಂಡವಾಳ ಶಾಹಿಗಳು ಬೊಬ್ಬೆ ...ಕುತ್ತಿದ್ದಾರೆ. ಹಾಗೆಯೇ ಚಿನ್ಮಯಾನಂದ ಎಂಬ ...ಧಾರಿ ಮಹಾಶಯನೊಬ್ಬ 'ಮೂರನೆ ದರ್ಜೆಯ ಜನ ...ರನೆ ದರ್ಜೆಯ ರಾಷ್ಟ್ರ ವನ್ನು ನಿರ್ಮಾಣ ...ಡುತ್ತಾರೆ' ಎಂದು ಅರಚಿದ ಮಾತು ಇನ್ನು ನನ್ನ ...ಯಲ್ಲಿ ಪ್ರತಿಧ್ವನಿಸುತ್ತಿದೆ ಎಂದು ಜಿ. ಕೃಷ್ಣಪ್ಪ ನವರು ...ಪಿಸಿದ್ದಾರೆ. ಈ ತರಹದ ಮಾತುಗಳು ...ನೋವೈಕಲ್ಯದಿಂದ ಬಳಲುತ್ತಿರುವ ರೋಗಿಗಳಿಂದ ...ವಂತ ವಿಚಾರಗಳಾಗಿವೆ. ಪ್ರತಿಭೆ ಎನ್ನುವುದು ಯಾರ ...ತ್ತ ಅಲ್ಲ. ಯಾವುದೇ ಕೋಮಿನ ಹಕ್ಕೂ ಅಲ್ಲ. ...ಭೆಗೂ ಅರ್ಹತೆಗೂ ಯಾವುದೇ ರೀತಿಯ ಸಂಬಂಧ ... ಅವಕಾಶ ಸಿಕ್ಕರೆ ಎಲ್ಲರೂ ಜಾಣರೆಂದು ಪ್ರತಿಪಾದಿಸ ...ರು. ಅವಕಾಶದಿಂದ ವಂಚಿತರಾದವರೆ ಈ ತರಹದ ...ನನೆಗಳಿಗೆ ಗುರಿಯಾಗಿದ್ದಾರೆ. ಬಲಿಯಾಗುತ್ತಿದ್ದಾರೆ.

ಈ ದೇಶವನ್ನು ಆಳಿದ ಮುಸ್ಲಿಮರ ಹಾಗೂ ...ಗ್ಲರ ಕಾಲದಲ್ಲಿದ್ದ ಅಧಿಕಾರಿಗಳೆಲ್ಲ ಭೂಸುರರೇ ಆಗಿ ... ಭೂಸುರರೆಂದು ಹೇಳಿಕೊಳ್ಳುವವರು ಅವ ...ದಿಗೆ ಬೆರೆತು ದೇಶವನ್ನು ಹಾಳುಗೆಡವಿದರು. ...ಚಿನ ಸಂದರ್ಭದ ಘಟನೆಗಳನ್ನು ವಿವರಿಸುವುದಾದರೆ, ...ಜಿ ಪ್ರಧಾನಿ ಪಿ. ವಿ. ನರಸಿಂಹರಾವ್ ಭ್ರಷ್ಟಾಚಾರದ ...ಲಕ ದೇಶವನ್ನು ಹಾಳುಗೆಡುವಲಿಲ್ಲವೆ? ಜಯ ...ತಾ. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಮಾಡಿ ...ದು? ಮಠಾಧೀಶರು ಮಾಡುತ್ತಿರುವುದೇನು? ಇವರೆ ... ಉಚ್ಚ ಕುಲದವರಾದರೂ ದೇಶದ ಘನತೆ ಗೌರವ ... ಧಕ್ಕೆ ತರಲಿಲ್ಲವೆ? ಆರ್.ಎಸ್.ಎಸ್, ಭಜರಂಗ ದಳ, ...ಚ್.ಪಿ.ಬಿಜೆಪಿಯವರು ಮಾಡುತ್ತಿರುವದೇನು? ಆದರೇ ...ದೇಶದ ದಲಿತರು ಹಿಂದುಳಿದವರು ಈ ನಾಡಿಗಾಗಿ ...ತ್ಯಾಗ, ತ್ಯಾಗಮಾಡಿದ್ದಾರೆ. ಶ್ರಮ ಜೀವಿಗಳಾದ ...ರು ಕಟ್ಟಿದ ಆಣೆಕಟ್ಟುಗಳು ಕುಸಿದಿವೆಯೇ, ಅವರು ... ಬಾವಿಗಳು ನೀರು ಕೊಡುತ್ತಿಲ್ಲವೆ? ಅವರು ...ಳಿದ ಚಪ್ಪಲಿಗಳನ್ನು ನೀವು ಮೆಟ್ಟುತ್ತಿಲ್ಲವೆ? ಗುಡಿ

ಅಸ್ಪೃಶ್ಯರ ಸಾಮಾಜಿಕ ಒಡನಾಟವನ್ನು ಪ್ರತಿಬಂಧಿಸಿದ್ದಕ್ಕಾಗಿ ಸತ್ತ ದನಗಳನ್ನು ಹೊರಬೇಕು, ಹೇಲು ಹೊತ್ತು ಸಾಗಿಸಬೇಕು, ಹೆಣವನ್ನು ಸುಡ ಬೇಕು, ಗೋರಿ ತೋಡಬೇಕು. ಊರ ಪ್ರವೇಶ ಮಾಡುವ ಸಂದರ್ಭದಲ್ಲಿ ಬೀದಿಯಲ್ಲಿ ಹೆಜ್ಜೆ ಗುರುತು ಮೂಡದಂತೆ ಸೊಂಟಕ್ಕೆ ಪರಕೆ ಕಟ್ಟಿಕೊಂಡು ಓಡಾಡಬೇಕು. ಬೀದಿಯಲ್ಲಿ ಉಗುಳದಂತೆ ಕೊರಳಿಗೆ ಮಡಿಕೆ ಕಟ್ಟಿಕೊಂಡು ಮಡಿಕೆಯಲ್ಲಿಯೇ ಉಗುಳ ಬೇಕು, ದೇವಸ್ಥಾನ ಪ್ರವೇಶ ಮಾಡಬಾರದು ಎಂಬ ಮುಂತಾದ ಕಾರಣಗಳಿಂದಾಗಿ ಅವರನ್ನು ಸಮಾಜದಿಂದ ಬಹಿಷ್ಕರಿಸಿದ್ದಕ್ಕಾಗಿ ಈ ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ಅವರ ಶ್ರಮದ ಬೆಲೆ ಅವರಿಗೆ ದಕ್ಕದಂತೆ ದೋಚಿದ್ದಕ್ಕಾಗಿ ಮೀಸಲಾತಿ ನಿಯಮವನ್ನು ವಿಸ್ತರಿಸಿಕೊಂಡು ಬರಲಾಗುತ್ತಿದೆ.

ಗುಂಡಾರಗಳು, ಮನೆ ಮಸೀದಿಗಳು ಕುಸಿದಿವೆಯೇ? ದಲಿತರು ಮುಖ್ಯಮಂತ್ರಿಯಾದರೆ ರಾಜ್ಯಗಳು ಹಾಳಾಗಿವೆಯೇ? ದಲಿತರಾದವರು ವೈದ್ಯರಾಗಿ, ಅಧಿಕಾರಿಗಳಾಗಿ ದುಡಿಯುತ್ತಿಲ್ಲವೆ? ದಲಿತರು ಅಲ್ಪಸಂಖ್ಯಾತರು ಮೀಸಲಾತಿ ಪಡೆದುಕೊಂಡು ಅಲ್ಪಸ್ವಲ್ಪ ಪ್ರಮಾಣದಲ್ಲಿ ಮುಂದೆ ಬರುತ್ತಿರುವುದನ್ನು ಸಹಿಸದವರು ಅತೃಪ್ತರಾಗಿದ್ದವರು ಈ ತರಹದ ಆಪಾದನೆಗಳನ್ನು ಮಾಡುತ್ತಿರುವುದು ಕಾಣುತ್ತೇವೆ.

೧೯೫೦ ರಲ್ಲಿ ಸಂವಿಧಾನವನ್ನು ಭಾರತ ಅಂಗೀಕರಿಸಿದಾಗ ಪರಿಶಿಷ್ಟ ಜಾತಿ ಪಂಗಡಗಳು ಅಂದರೆ ದಲಿತರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಮಾಜದ ಮುಂದುವರೆದ ಜಾತಿಗಳ ಸಮಾನ ಮಟ್ಟಕ್ಕೆ ತರುವ ಸಲುವಾಗಿ ಮೀಸಲಾತಿಯನ್ನು ನಿಗದಿತ ಸಮಯದವರೆಗೆ ಮೊದಲು ೧೦ ವರ್ಷಗಳು ಎಂದು ನಿಗದಿಪಡಿಸಲಾಗಿತ್ತು ಎನ್ನುವ ಮಾತಿದೆ. ನಂತರ ೫೦ ವರ್ಷಗಳು: ಹೀಗೆ ಜಾರಿಗೊಳಿಸಿತ್ತಾ ನಡೆದಿದೆ. ನಿಗದಿತ ಸಮಯದಲ್ಲಿ ವಿಸ್ತರಣೆಗೊಳ್ಳುತ್ತಲೇ ನಡೆದಿದೆ. ಮೀಸಲಾತಿಗೆ ಭಾಜನರಾದ ಪರಿಶಿಷ್ಟ ಜಾತಿ ಪಂಗಡಗಳ ಜೊತೆಗೆ ೧೯೯೦ರ ಮಂಡಲ್ ವರದಿಯ ನಂತರ ಹಿಂದುಳಿದ ವರ್ಗದ ಸಮೂಹವೇ ಸೇರ್ಪಡೆಯಾಗಿದೆ. ಆದರೆ ಮೀಸಲಾತಿ ಉದ್ದೇಶ ಈಡೇರಿದೆಯೇ? ಸಂವಿಧಾನ ಜಾರಿಗೆ ಬಂದು ಅರ್ಧ ಶತಮಾನ ಕಳೆದರೂ ದಲಿತರ ಸ್ಥಿತಿ ಬದಲಾಗಿಲ್ಲ.

ಜಾಗತೀಕರಣ ಉದಾರೀಕರಣ ನೀತಿಗಳ ಅನುಷ್ಠಾನದ ನಂತರವಂತೂ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಇನ್ನೂ ಹದಗೆಡುತ್ತಿದೆ. ಪ್ರಸ್ತುತ ಸರಕಾರಗಳ ಬಂಡವಾಳ ಹಿಂತೆ ಗೆತ ಪ್ರಕ್ರಿಯೆಯಡಿ ಬೃಹತ್ ಸರ್ಕಾರಿ ಕೈಗಾರಿಕಾ ಸಂಸ್ಥೆಗಳನ್ನು ಒಂದಾದರೊಂದರ ನಂತರ ಮಾರಾಟ ಮಾಡುವ ಮೂಲಕ ದಲಿತರ ಉದ್ಯೋಗಗಳಿಗೆ ಸಂಚಕಾರ ಉಂಟು ಮಾಡುತ್ತಿದ್ದಾರೆ. ಮೀಸಲಾತಿ ನೀತಿ ಸಂಪೂರ್ಣ ಯಶಸ್ವಿಯಾಗದೆ, ವೈಫಲ್ಯಗೊಂಡಿರುವುದು ನಿಜ. ಅದರಂತೆ ಹಿಂದುಳಿದ ವರ್ಗಗಳ ಉದ್ಧಾರದ ಹೆಸರಿನಲ್ಲಿ ಮೀಸಲಾತಿ ರಾಜಕಾರಣ ನಡೆದಿರುವುದನ್ನು ನೋಡಬಹುದು.ಈ ದೇಶದ ಹಿಂದುಳಿದವರಿಗೆ ಮುಟ್ಟಿಸಿಕೊಳ್ಳದ ಕೆಲವು ಸ್ಪೃಶ್ಯ ಜಾತಿಯವರನ್ನು ಈ ಪಟ್ಟಿಯಲ್ಲಿ ಸೇರಿಸಿದ ಕಾರಣ ನಿಜವಾದ ಅಸ್ಪೃಶ್ಯರು ಇಂದಿಗೂ ನರಳಾಡುವಂತಾಗಿದೆ.

ಜಾಗತೀಕರಣ ಉದಾರೀಕರಣ ನೀತಿಗಳ ಅನುಷ್ಠಾನದ ನಂತರವಂತೂ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಇನ್ನೂ ಹದಗೆಡುತ್ತಿದೆ. ಪ್ರಸ್ತುತ ಸರಕಾರಗಳ ಬಂಡವಾಳ ಹಿಂತೆ ಗೆತ ಪ್ರಕ್ರಿಯೆಯಡಿ ಬೃಹತ್ ಸರ್ಕಾರಿ ಕೈಗಾರಿಕಾ ಸಂಸ್ಥೆಗ ಳನ್ನು ಒಂದಾದರೊಂದರ ನಂತರ ಮಾರಾಟ ಮಾಡುವ ಮೂಲಕ ದಲಿತರ ಉದ್ಯೋಗಗಳಿಗೆ ಸಂಚಕಾರ ಉಂಟು ಮಾಡುತ್ತಿದ್ದಾರೆ. ಮೀಸಲಾತಿ ನೀತಿ ಸಂಪೂರ್ಣ ಯಶಸ್ವಿ ಯಾಗದೆ, ವೈಫಲ್ಯಗೊಂಡಿರುವುದು ನಿಜ. ಅದರಂತೆ ಹಿಂದುಳಿದ ವರ್ಗಗಳ ಉದ್ಧಾರದ ಹೆಸರಿನಲ್ಲಿ ಮೀಸಲಾತಿ ರಾಜಕಾರಣ ನಡೆದಿರುವುದನ್ನು ನೋಡಬಹುದು. ಈ ದೇಶದ ಹಿಂದುಳಿದವರಿಗೆ ಅಲ್ಲದೆ ವಿಶೇಷವಾಗಿ ಅಸ್ಪೃಶ್ಯರಿಗೆ ಸಾಮಾಜಿಕ ಸ್ಥಾನಮಾನಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಮೀಸಲಾತಿ ಏನೋ ಜಾರಿಗೆ ಬಂತು. ಆಳುವ ಸರಕಾರಗಳು ಅಸ್ಪೃಶ್ಯರಲ್ಲದ; ಹೊಲೆಮಾದಿಗರನ್ನು ಸವರ್ಣೀಯರು ಹೇಗೆ ಮುಟ್ಟಿಸಿಕೊಳ್ಳುವುದಿಲ್ಲವೋ ಅವರಂತೆಯೇ ಮುಟ್ಟಿಸಿಕೊಳ್ಳದ ಕೆಲವು ಸ್ಪೃಶ್ಯ ಜಾತಿಯವರನ್ನು ಈ ಪಟ್ಟಿಯಲ್ಲಿ ಸೇರಿಸಿದ ಕಾರಣ ನಿಜವಾದ ಅಸ್ಪೃಶ್ಯರು ಇಂದಿಗೂ ನರಳಾಡುವಂತಾಗಿದೆ.

ಓಟ್‌ಬ್ಯಾಂಕನ್ನಾಗಿ ಮಾಡಿಕೊಳ್ಳುವ ಸಲುವಾಗಿ ಹಲವಾರು ಜಾತಿಗಳನ್ನು ಈ ಪಟ್ಟಿಗೆ ಸೇರುತ್ತಿರುವುದು ಗಣನೀಯವಾಗಿದೆ. ಈ ಕಾರಣದಿಂದಾಗಿ ಮೂಲ ಪರಿಶಿಷ್ಟ ಜಾತಿಯವರು ಹಿಂದುಳಿಯಲು ಕಾರಣವಾದರೆ, ಇನ್ನೊಂದೆಡೆ ಪರಿಶಿಷ್ಟ ಜಾತಿ ಹೆಸರಿನಲ್ಲಿ ಢೋಂಗಿ ಜಾತಿ ಪ್ರಮಾಣ ಪತ್ರ ಪಡೆದು ದಲಿತರ ಹಕ್ಕನ್ನು ಆಸ್ವಾದಿಸುತ್ತಿರುವವರ ಕುರಿತು ಯಾರೂ ಚಕಾರವೆತ್ತುತ್ತಿಲ್ಲ. ಮೀಸಲಾತಿ ಸೋರಿಕೆಯಾಗುತ್ತಿರುವುದನ್ನು ನೋಡಿಯೂ ನೋಡದಂತೆ ಜಾಣ ಕುರುಡರ ಹಾಗೆ ಸರಕಾರಗಳು ವರ್ತಿಸುತ್ತಿರುವುದು ಕಾಣುತ್ತೇವೆ. ಇದಕ್ಕೆಲ್ಲ ಮೂಲಭೂತವಾದಿ ಅಧಿಕಾರಶಾಹಿ ವರ್ಗದವರ ಪರೋಕ್ಷ ಬೆಂಬಲವೂ ಇಲ್ಲದಿಲ್ಲ.

ಈ ಎಲ್ಲದರ ನಡುವೆ ಒಳಮೀಸಲಾತಿ ಹೋರಾಟ ನಡೆದು ಅದು ಆಯೋಗ ರಚನೆಯಾಗುವುದರ ಮೂಲಕ ಚಳುವಳಿ ಶಾಂತವಾಗಿದೆ. ಆಂಧ್ರಪ್ರದೇಶದಲ್ಲಿ ಪರಿಶಿಷ್ಟ ಜಾತಿ ಸಂಖ್ಯೆ ೫೬ ರಷ್ಟಿದ್ದರೆ, ಕರ್ನಾಟಕ ರಾಜ್ಯದಲ್ಲಿ ೧೦೧ ಜಾತಿಗಳನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಆಂಧ್ರ ಪ್ರದೇಶದಲ್ಲಿರುವ ಅನೇಕ ಪರಿಶಿಷ್ಟರಲ್ಲದವರು ಕರ್ನಾಟಕದಲ್ಲಿ ಸ್ಪೃಶ್ಯರೆನಿಸಿಕೊಂಡೂ ಈ ಪಟ್ಟಿಗೆ ಸೇರಿದ್ದಾರೆ. ನಿಜವಾದ ದಲಿತರನ್ನು ಅಮಾನವೀಯವಾಗಿ ನಡೆಸಿಕೊಳ್ಳುವವರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದಾರೆ. ಆ ಮೂಲಕ ಮೀಸಲಾತಿ ಕಬಳಿಸುತ್ತಿರುವುದು ಎಲ್ಲೆಲ್ಲೂ

ತಿಳಿದ ವಿಷಯವಾಗಿದೆ. ಹಾಗಿದ್ದು ಅವರ ಕುರಿತು ಪ್ರಶ್ನೆ ಎತ್ತದೆ ಎಲ್ಲ ಉಪಜಾತಿಗಳ ಹೆಸರಿನಲ್ಲಿ ಮೀಸಲಾತಿ ಕಬಳಿಸುತ್ತಿರುವವರು ಪರಿಶಿಷ್ಟ ಜಾತಿಯ ಒಂದು ಗುಂಪಿನವರನ್ನೂ ವೃಥಾ ಆರೋಪ ಮಾಡುತ್ತಿದ್ದಾರೆ. ಈಗ ಹಿಂದುಳಿದ ವರ್ಗದ ಈಡಿಗ ಮತ್ತು ಕುರುಬರು ಈ ಆರೋಪಕ್ಕೆ ಗುರಿಯಾಗಿದ್ದಾರೆ. ಇದು ಪಕ್ಕಾ ರಾಜಕೀಯ ಸೇಡಿನ ಕ್ರಮವಲ್ಲದೆ ಮತ್ತೇನು ಅಲ್ಲ. ಸಿದ್ಧರಾಮಯ್ಯ ಪಕ್ಷದಿಂದ ಹೊರಹೋದ ತಕ್ಷಣವೇ ಜಾತಿ ರಾಜಕಾರಣಕ್ಕೆ ಹೆಸರಾದ ದೇವೇಗೌಡರು ಹಾವುಗಾರನಾಟ ಪ್ರಾರಂಭಿಸಿದ್ದಾರೆ. ಹಿಂದುಳಿದವರಲ್ಲಿ ಕೆಲವರು, ದಲಿತರಲ್ಲಿ ಕೆಲವರು ಉಳಿದವರಿಗಿಂತ ಹೆಚ್ಚಿನ ಸೌಲಭ್ಯಗಳನ್ನು ಪಡೆದಿರಬಹುದು. ಅವರು ಶಿಕ್ಷಣಕ್ಕೆ ಕೊಟ್ಟ ಗೌರವದಿಂದಾಗಿ ಅವರಿಗೆ ಗೌರವ ಸಿಕ್ಕಿರುವುದು ಸಹಜ. ಆದರೆ ಬೇರೆ ಬೇರೆ ಒಳಪಂಗಡದವರನ್ನೂ ವಂಚಿಸುವ ಕೀಳುಮಟ್ಟಕ್ಕೆ ಇಳಿದಿಲ್ಲವೆನ್ನುವುದು ಪ್ರಜ್ಞಾವಂತರನೇಕರ ಗ್ರಹಿಕೆ. ಈ ಹಿನ್ನೆಲೆಯಲ್ಲಿ ತಿಳಿದವರು ಮಾಡುವ ಆರೋಪ ಪೂರ್ವಾಗ್ರಹ ಪೀಡಿತವಾದುದು.

ಪ್ರತ್ಯೇಕ ಮೀಸಲಾತಿ ಹಂಚಿಕೆಯಿಂದ ಆಯಾ ಒಳಪಂಗಡಗಳ ಅಭಿವೃದ್ಧಿಯಾಗುತ್ತದೆ ಎನ್ನುವುದಾದರೆ, ಖಂಡಿತವಾಗಲೂ ಒಳ ಮೀಸಲಾತಿ ಎಲ್ಲ ಹಂತದಲ್ಲೂ ವಿಂಗಡಣೆಯಾಗಬೇಕು. ಅದು ನ್ಯಾಯಸಮ್ಮತವಾದುದು ಕೂಡ. ಈ ಹಿನ್ನೆಲೆಯಲ್ಲಿ ಆಯೋಗ ರಚನೆಯಾಗಿ ಆಯೋಗದ ತೀರ್ಪಿನಂತೆ ಯಾರು ಹೆಚ್ಚು ಸಂಖ್ಯೆವುಳ್ಳವರು ಅವರಿಗೆ ಮೀಸಲಾತಿ ಸಿಗುವುದರಲ್ಲಿ ಯಾರದೂ ವಿರೋಧವಿಲ್ಲ. ಅಸ್ಪೃಶ್ಯರಲ್ಲದ, ಹಿಂದುಳಿದವರಲ್ಲದ ಅನೇಕರು ಎಲ್ಲ ಲಾಭಗಳನ್ನು ಕಬಳಿಸುತ್ತಿರುವುದು ಯಾರಿಗೂ ಕಾಣುತ್ತಿಲ್ಲವೇ? ಸ್ಪೃಶ್ಯರಾದವರು ಈಗಾಗಲೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದು ಅವರಿಗೆ ಮೀಸಲಾತಿ ಕೊಡಬಾರದು ಮತ್ತು ಈ ಪಟ್ಟಿಯಿಂದ ಹೊರಹಾಕಬೇಕೆಂಬ ವಾದ ನನ್ನದಲ್ಲ. ಅವರನ್ನು ಮತ್ತು ಮೂಲ ಪರಿಶಿಷ್ಟ ಜಾತಿಯವರನ್ನು ಪ್ರಗತಿ ಪಥದತ್ತ ಕೊಂಡೊಯ್ಯುದಾದರೆ ಶೇಕಡ ೧೮ ರ ಮೀಸಲಾತಿ ಕೋಟಾವನ್ನು ಹೊರತು ಪಡಿಸಿ ಮೀಸಲಾತಿ ಹಂಚಿಕೆಯಾಗಬೇಕು. ಅಥವಾ ಸ್ಪೃಶ್ಯರನ್ನು ಇಲ್ಲಿಯೇ ಇಡುವುದಾದರೆ ಮೀಸಲಾತಿ ಸಂಖ್ಯೆ ಹೆಚ್ಚಿಸಬೇಕು. ಆಗ ಮಾತ್ರ ಸರಕಾರದ ಕ್ರಮಕ್ಕೆ ಆಯೋಗದ ಶಿಫಾರಸ್ಸಿಗೆ; ಇಲ್ಲಿಯವರೆಗೆ ನಡೆದ ಹೋರಾಟಕ್ಕೆ ಬೆಲೆ ಬರುತ್ತದೆ. ಅಲ್ಲದೆ ನ್ಯಾಯ ದೊರೆ ತಂತಾಗುತ್ತದೆ. ಒಂದು ವೇಳೆ ಸ್ಪೃಶ್ಯ, ಅಸ್ಪೃಶ್ಯರೆಲ್ಲರನ್ನೂ ಒಳಗೊಂಡು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸದೆ ಮೀಸಲಾತಿ ವಿಂಗಡಣೆಯಾದದ್ದೇ ಆದರೆ ಮೂಲ ಪರಿಶಿಷ್ಟ ಜಾತಿಯವರಿಗೆ ಖಂಡಿತ ಲಾಭವಾಗಲಾರದು. ಈ ನೆಲೆಯಲ್ಲಿ ಮೂಲ ಪರಿಶಿಷ್ಟ ಜಾತಿಯವರಿಂದ ಮತ್ತೊಂದು ಹೋರಾಟ ನಡೆದರೆ ಆಶ್ಚರ್ಯ ಪಡಬೇಕಾಗಿಲ್ಲ.

ಜನಸಂಖ್ಯೆಗನುಗುಣವಾಗಿ ಮೀಸಲಾತಿ ವಿಂಗಡಣೆ ಕ್ರಮ ಕೇವಲ ಪರಿಶಿಷ್ಟಜಾತಿ ಮತ್ತು ಹಿಂದುಳಿದ ವರ್ಗಗಳಿಗೆ ಸೀಮಿತಗೊಳಿಸುವುದು ನ್ಯಾಯಯುತವಾದ ಕ್ರಮವಲ್ಲ. ಭಾರತೀಯ ಸಮಾಜದ ಒಟ್ಟು ಜನಸಂಖ್ಯೆಗನುಗುಣವಾಗಿ ಸಮಗ್ರ ಮೀಸಲಾತಿ ಹಂಚಿಕೆಯಾಗಬೇಕು. ಈ ದೇಶದ ಅಲ್ಪ ಸಂಖ್ಯೆಯ ಕೋಮಿನವರು ನೂರಕ್ಕೆ ತೊಂಬತ್ತರಷ್ಟು ಸೌಲಭ್ಯವನ್ನು ಪಡೆದಿದ್ದಾರೆ. ಆ ಹಿನ್ನೆಲೆಯಲ್ಲಿ ಜನಸಂಖ್ಯಾ ಧಾರಿತ ಮೀಸಲಾತಿ ಹಂಚಿಕೆಯಾಗಬೇಕೆನ್ನುವುದು ಡಾ॥ ಅಂಬೇಡ್ಕರ್ ಅವರ ವಾದವಾಗಿತ್ತು. ಈ ನಿಟ್ಟನಲ್ಲಿ ಚಿಂತಿಸದ ದಲಿತರು ಹಿಂದುಳಿದವರು ಆಂತರಿಕ ಆರೋಪ ಪ್ರತ್ಯಾರೋಪದಲ್ಲಿ ಕಾಲ ಕಳೆಯುತ್ತಿದ್ದರೆ, ಸ್ಪೃಶ್ಯನಾದ ಮೂರನೆಯವನಿಗೆ ಲಾಭವಾಗುತ್ತಿದೆ ಎನ್ನುವುದರತ್ತ ಗಮನಕೊಡದೇ ಹೋಗಿದ್ದೇವೆ. ಉದಾತ್ತ ನೆಲೆಯಲ್ಲಿ ತಾಯಿತನದ ಕಾಳಜಿಯಿಂದ ದುಡಿದ ಡಾ॥ ಅಂಬೇಡ್ಕರ್ ಅವರಿಗೆ ನಾವು ಸಲ್ಲಿಸಿದ ಗೌರವವಾದರೂ ಎಂತಹದ್ದು? ಅವರ ಹೋರಾಟ ನೆಲೆಯನ್ನು ಗುಮಾನಿಯಿಂದ ನೋಡುವ ಹಂತಕ್ಕೆ ಪದ ದಲಿತರು ತಲುಪಿರುವುದು ಹೆತ್ತಮ್ಮನನ್ನು ವಂಚಿಸಿದಂತೆ. ದಲಿತರ ಈ ಕಿತ್ತಾಟಕ್ಕೆ ಕಾಣದ ಕೈಯೊಂದು ಶ್ರಮಿಸುತ್ತಿದೆ. ದಲಿತರಲ್ಲಿ ಆಂತರಿಕ ಜಗಳ ಹಚ್ಚಿದವರೆ ಹಿಂದುಳಿದವರಲ್ಲಿಯೂ ಜ ಹಚ್ಚಿ ತೃಪ್ತಿ ಪಡುತ್ತಿದ್ದಾರೆ. ಹಿಂದುಳಿದವರಿಂದಲೇ ಹಿಂ ಳಿದ ವರನ್ನು ಗಲ್ಲಿಗೇರಿಸಲಾಗುತ್ತಿದೆ.



ಪರಿಶಿಷ್ಟಜಾತಿ ಮತ್ತು ಹಿಂದುಳಿದ ವರ್ಗಗಳಿಗೆ ಸೀಮಿತಗೊಳಿಸುವುದು ನ್ಯಾಯಯುತವಾದ ಕ್ರಮವಲ್ಲ. ಭಾರತೀಯ ಸಮಾಜದ ಒಟ್ಟು ಜನ ಸಂಖ್ಯೆಗನು ಗುಣವಾಗಿ ಸಮಗ್ರ ಮೀಸಲಾತಿ ಹಂಚಿಕೆಯಾಗಬೇಕು. ಈ ದೇಶದ ಅಲ್ಪಸಂಖ್ಯೆಯ ಕೋಮಿನವರು ನೂರಕ್ಕೆ ತೊಂಬತ್ತರಷ್ಟು ಸೌಲಭ್ಯವನ್ನು ಪಡೆದಿದ್ದಾರೆ. ಆ ಹಿನ್ನೆಲೆಯಲ್ಲಿ ಜನಸಂಖ್ಯಾ ಧಾರಿತ ಮೀಸಲಾತಿ ಹಂಚಿಕೆಯಾಗ ಬೇಕೆನ್ನುವುದು ಡಾ॥ ಅಂಬೇಡ್ಕರ್ ಅವರ ವಾದವಾಗಿತ್ತು. ಈ ನಿಟ್ಟಿನಲ್ಲಿ ಚಿಂತಿಸದ ದಲಿತರು ಹಿಂದುಳಿದವರು ಆಂತರಿಕ ಆರೋಪ ಪ್ರತ್ಯಾರೋಪದಲ್ಲಿ ಕಾಲ ಕಳೆಯುತ್ತಿದ್ದರೆ, ಸ್ಪೃಶ್ಯನಾದ ಮೂರನೆ ಯವನಿಗೆ ಲಾಭವಾಗುತ್ತಿದೆ ಎನ್ನುವುದರತ್ತ ಗಮನ ಕೊಡದೇ ಹೋಗಿದ್ದೇವೆ.

ಪ್ರಸ್ತುತ ಸಂದರ್ಭದ ಕೋಮುವಾದಿ ಯುಗ ಜಾಗತೀಕರಣ, ಖಾಸಗೀಕರಣಗಳ ದಾಳಿಯಿಂದ ಮೀಸಲಾತಿ ಎನ್ನುವುದು 'ಟೈಟಾನಿಕ್' ಹಡಗಿದ್ದ ಮುಳುಗುವ ಹಡಗಿನಲ್ಲಿ ಪ್ರಯಾಣಿಸುತ್ತಿರುವ ನಾ ಆಂತರಿಕ ಕಚ್ಚಾಟಕ್ಕಿಳಿದಿರುವುದು ಯಾವ ಪುರುಷಾ ಕ್ಕಾಗಿ ಎಂದು ಚಿಂತಿಸಬೇಕಾದ ತುರ್ತು ಅನಿವಾರ್ಯ ನಮಗಿದೆ. ಕೋಮುವಾದಿಗಳು ದೇಶ ಆಳುವು ಮೂಲಕ ಮತ್ತದೇ ಮನುವಾದಿ ಚಿಂತನೆಗಳ ಸಾರ್ವ ಕರಣಕ್ಕೆ ಹವಣಿಸುತ್ತಿರುವ ಸಂದರ್ಭದಲ್ಲಿ ಅರೆ ಮಂ ನಲ್ಲಿರುವಂತೆ ನಟಿಸುವ ನಮಗೆ ಒಳಮೀಸಲಾತಿ ಸು ತರುತ್ತದೆಂಬ ಹುಸಿ ಕನಸಿನಲ್ಲಿರುವವರೆಲ್ಲರಿಗೂ ಕ ಪಾಠವನ್ನು ಕಲಿಸಿಯೇ ಕಲಿಸುತ್ತದೆ.

ಸುಲಭವಾಗಿ ಸಿಗುವುದನ್ನು ಯಾವಾಗಲ ತಾತ್ಸಾರ ಭಾವನೆಯಿಂದ ನೋಡು ಗುಣ ಮನುಷ್ಯನದು. ಸ್ಪೃಶ್ಯರಿಗೆ ಪರಿ ಜಾತಿಯ ಸೌಲಭ್ಯ ಸಿಕ್ಕಿರುವುದರಿಂ 'ಅದು ನಾವು ಕೇಳಿ ಪಡೆದದ್ದಲ್ಲ' ಎಂ ಸ್ಪೃಶ್ಯ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರು ಮಠಾಧೀಶರು ಹೇಳಿ ಕೊಂಡದ್ದೂ ಇ ಮಹಿಳಾ ಸಾಹಿತಿಯೊಬ್ಬರು ವೇದಿ ಯೊಂದರಲ್ಲಿ ಮಾತಾಡುತ್ತಾ 'ನಾ ದಲಿತ ಸಂಘರ್ಷ ಸಮಿತಿಯವರೊಂದಿ ತಿರುಗಾಡುತ್ತಾ ಕೆಲಸ ಮಾಡುತ್ತಿದ್ದೆ. ಸಂದರ್ಭದಲ್ಲಿ ನಮ್ಮವರ ಮನೆ ಹೋದಾಗ ನನ್ನನ್ನೂ ಸ ಮನೆಯೊಳಗೆ ಬಿಟ್ಟುಕೊಳ್ಳಲಿ ಯಾಕೆಂದರೆ ನೀನು ಹೊಲೆಯ ಮಾದಿಗರ ಜಾತಿಯವ ರೊಂದಿ ಓಡಾಡುತ್ತಿಯಂತೆ' ಎಂದರಂತೆ. ಅಸ್ಪೃ ರನ್ನು ಮುಟ್ಟಿಸಿಕೊಳ್ಳದಂತವರು ಪರಿಶಿಷ್ಟ ಪಟ್ಟಿಯಲ್ಲಿ ಜಾ ಪಡೆದು ಮಾತಾಡುವ ಜನರ ಮಾತಿದು.

ಪ್ರಸ್ತುತ ಸಂದರ್ಭದಲ್ಲಿ ವ್ಯಕ್ತಿನಿಷ್ಠ ಹಿತವೇ ಪ್ರಾಮುಖ್ಯೆ ಪಡೆದುಕೊಂಡು ಸಮಷ್ಟಿ ಹಿ ಕ್ಷೀಣಿಸುತ್ತಿರುವುದು ದಲಿತ ಹಿಂದುಳಿದ ಸಮುದಾಯಗ ಬೆಳವಣಿಗೆ ಕುಂದಿಸುವಲ್ಲಿ ಯಶಸ್ವಿ ಯಾಗಿದೆ. ವ್ಯಕ್ತಿನಿ ಹಿತಕ್ಕಿಂತಲೂ ಸಮಷ್ಟಿ ಹಿತ ಇಂದು ಅನಿವಾರ್ಯವಾದಾಗ ನಮ್ಮ ಸಮಾಜೋಧಾರ್ಮಿ ಚಳುವಳಿ ಸಫಲವಾಗುವುದರಲ್ಲಿ ಸಂದೇಹವಿಲ್ಲ.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುವ ಒಳಪಂಗಡಗಳ ಎಲ್ಲ ದಲಿತರು ತಮ್ಮ ತಮ್ಮ ಏಳಿಗೆಗೆ ಸಂಘಟಿತರಾಗುವುದು, ಹೋರಾಟ ಮಾಡುವುದು ಅಪರಾಧವೇನಲ್ಲ ಹಾಗೆ ಹಿಂದುಳಿದ ವರ್ಗದವರು ಕೂಡ ನಡೆದುಕೊ ಬೇಕಾಗಿದೆ. ಆದರೆ ಯಾವುದೇ ನಿಶ್ಚಿತ ಜಾತಿಯವರನ್ನು ನಿಂದಿಸುವುದಕ್ಕಾಗಲಿ, ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಸ್ವಯಂ ನ್ಯಾಯನಿರ್ಣಯ ಕಂಡುಕೊಳ್ಳುವದಿದೆಯಲ್ಲ ಅದು ಘೋರ ಅಪರಾಧವಾಗುತ್ತದೆ. ಸರಕಾರದ ಪರಿಶಿಷ್ಟರ ಪಟ್ಟಿ ಯಲ್ಲಿರುವ ಟಚೇಬಲ್ ಜಾತಿಯವರು ಸೌಲಭ್ಯಾಕಾಂಕ್ಷಿ ಗಳೇ ವಿನಃ ಮೀಸಲಾತಿ ಸಾಧಕ ಬಾಧಕಗಳ ಕುರಿತು

ತಿಸಿದವರಲ್ಲ. ತಲೆ ಕೆಡಿಸಿಕೊಂಡವರೂ ಅಲ್ಲ. ಏಕೆಂದರೆ ಅವರಿಗೆ ಅಸ್ಪೃಶ್ಯತೆಯಂತಃ ಅಪಮಾನದ ವಿಲ್ಲ. ಆದರೆ ಅಸ್ಪೃಶ್ಯರು ಮೀಸಲಾತಿ ಸಾಧಕ ಬಾಧಕ ಕುರಿತು ಚಿಂತಸಲೇ ಬೇಕಾಗುತ್ತದೆ. ಯಾಕೆಂದರೆ ಸ್ಪೃತ್ತಿನ ಪೀಳಿಗೆಯ ಉಳುವಿಗಾಗಿ ಅವರೇ ಅದರ ನೆಗೆ ನಿಲ್ಲಬೇಕು. ಒಂದೆಡೆ ಕೋಮುವಾದಿಗಳು, ನ್ನೊಂದೆಡೆ ಜಾಗತೀಕರಣ, ಖಾಸಗೀ ಕರಣ, ಸ್ಲ್ಯುಟರೀಕರಣಗಳ ನೇರ ಸುಳಿಗೆ ಸಿಲುಕಿದ ಅಸ್ಪೃಶ್ಯರು ಲ್ಲವನ್ನು ಅರಗಿಸಿಕೊಳ್ಳುವ ದೊಡ್ಡ ಶಕ್ತಿಯಾಗಿ ರಹೊಮ್ಮಬೇಕಾದರೆ ಅಲ್ಪಸಂಖ್ಯಾತ, ಹಿಂದುಳಿದವರ ಳಿಗೆ ಹೆಗಲು ಕೊಡ ಬೇಕು. ಆಧುನಿಕ ಶಿಕ್ಷಣದ ತ್ರಗಾರಿಕೆ ಅರಿತುಕೊಳ್ಳುವುದರ ಮೂಲಕ ಆಳುವ ವಾದಾಗ ಎಲ್ಲ ಕುತಂತ್ರಗಳನ್ನು ಎದುರಿಸಲು ಧ್ಯವಿದೆ. ಈ ನಿಟ್ಟಿನಲ್ಲಿ ಅನೇಕ ಹಿರಿಕಿರಿಯ ಪ್ರಗತಿಪರ ಹ ಗಾರರು ಚಿಂತಿಸುತ್ತಿದ್ದರೂ, ಒಳಪಂಗಡ ಧಾರದಿಂದ ಚಳುವಳಿ ತನ್ನ ಪ್ರಖ ರತೆ ರುಕೊಂಡದ್ದಂತೂ ನಿಶ್ಚಿತ. ಈ ಕಾರಣದಿಂದಾಗಿ ಮುವಾದಿಗಳು ಭದ್ರರಾಗುತ್ತಿರುವುದು ಸಹಜ. ಅನೇಕ ತ ಚಿಂತಕರು, ನಾಯಕರು, ಕಮ್ಯುನಿಷ್ಟರು ೀಹಿಯಾ, ಪೆರಿಯಾರ್, ಅಂಬೇಡ್ಕರ್ ವಾದ; ಂತಾದ ಚಿಂತನೆಗಳೆಲ್ಲವು ತಮ್ಮ ಆದರ್ಶವೆಂದು ಬದು ದರು ಕೋಮುವಾದಿ ಪಕ್ಷಗಳನ್ನು ಅಪ್ಪಿಕೊಳ್ಳುವುದ ಸೆಕ್ಯೂಲರ್ ಚಿಂತನೆಗೆ ಹಿನ್ನೆಡೆಯಾಗುತ್ತಿದೆ ಎಂದೆನಿ ಸಿ, ಇನ್ನೊಂದೆಡೆ ಸ್ವಾರ್ಥಿಗಳ ಬಣ್ಣ ಬೇಗ ಬಯಲಾಗಿ ದರಿಂದ ಮುಂದಾಗುವ ದೊಡ್ಡ ಅಪಾಯ ರಂತಾಗಿದೆ.

ಈ ಕಳವಳಕಾರಿ ಸಂದರ್ಭದಲ್ಲಿ ದಲಿತರು, ಹಿಂದು ದರು ಒಳಮೀಸಲಾತಿ ಪಡೆದರೂ ಬೇರೆ ಬೇರೆಯಾಗಿ ಗದೆ ಎಲ್ಲರೂ ಒಂದಾಗಿ ಒಟ್ಟು ಮೀಸಲಾತಿ ಉಳಿವಿ ಮುಂದಾಗಬೇಕು. ಈ ಹಿನ್ನೆಲೆಯ ಹೋರಾಟಕ್ಕೆ ುತಂದುಕೊಡಬೇಕು. ಸುಮಾರು ಎರಡು ಸಾವಿರ ಗಳಿಂದಲೂ ನಮ್ಮ ಶ್ರಮವನ್ನು ಹರಣ ಮಡಿದ್ದನ್ನು ುಬೇಕಾದರೆ ಪ್ರತಿಶತ ಎರಡರಂತೆ ಸುಮಾರು ಕುನೂರು ವರ್ಷಗಳಾದರೂ ಮೀಸಲಾತಿಯ ಅನಿವಾ ತೆ ನಮಗಿದೆ. ಅದನ್ನು ಉಳಿಸಿಕೊಳ್ಳದ ಹೊರತು ವರಿಗೆ ಉಳಿಗಾಲವಿಲ್ಲ. ಅಸ್ಪೃಶ್ಯರು ಸಾಮಾಜಿಕ ಮತ್ತು ಸ್ಕೃತಿಕ ನೆಲೆಯಲ್ಲಿ ಅಭಿನ್ನರಾಗಿರುವುದರಿಂದ ಾಗುವುದು ಒಂದು ರೀತಿಯಿಂದ ನಮ್ಮನ್ನು ನಾವು ಕ್ಕ ತಳ್ಳಿಕೊಂಡಂತಾಗುತ್ತದೆ. ನಮ್ಮ ಆಂತರಿಕ ಸಮಸ್ಯೆ ಸವಾಲುಗಳನ್ನು ಮುಖಾಮುಖಿಗೊಳಿಸಿಕೊಳ್ಳುವ ಮೂಲಕ ಒಂದೇ ನೆಲೆ ಕಂಡುಕೊಳ್ಳಬೇಕಾದುದು ಅಗತ್ಯವೆಂದು ನನ್ನ ಭಾವನೆ. ಈಗೆದ್ದಿರುವ ಜಾತ್ಯಾ ತ ಮೀಸಲಾತಿಯ ಬದಲಾಗಿ ವಿಪ್ರನಿಂದ ಹಿಡಿದು ನವರೆಗೆ ಜನಸಂಖ್ಯಾಧಾರಿತ ಮೀಸಲಾತಿ ವಿಂಗಡಣೆ ಗಬೇಕು. ರಾಷ್ಟ್ರದಾದ್ಯಂತ ಏಕರೂಪ ಕಾನೂನಿನಡಿ ಮೀಸಲಾತಿ ಜಾರಿಗೆ ಬಂದಾಗ ತಬ್ಬಲಿ ಜಾತಿ ಂಗದವರಿಗೆ ನ್ಯಾಯ ಸಿಗುವ ಸಾಧ್ಯತೆಯನ್ನು ತಳ್ಳಿಹಾಕ ಪುದಿಲ್ಲ. ರಾಜಕೀಯ ಪ್ರೇರಿತ ಒಣಮಾಯೆಯಾ ನೆಮ್ಮದಿಯಿಂದಿಡಲಾರದು. ಅಂತಹವರ ಒಣಮಾ ದಲಿತರು ಹಿಂದುಳಿದವರು ಮರುಳಾಗಿ ಕಲಹಕ್ಕಿಳಿ ಒಗ್ಗಟ್ಟಾಗಿ ಜನಸಂಖ್ಯಾಧಾರಿತ ಮೀಸಲಾತಿ ವಿಂಗ ಹೊಸ ಚರಮ ಗೀತೆಯನ್ನು ಹಾಡಬೇಕು. □

ಕುಬ್ಜವಾಗಿ ಬಿಟ್ಟಿದೆ ಗಿಡ



ಮರಳು ಭುವಿಯಲ್ಲಿ
ನೀರು ಹುಡುಕಲು ಹೊರಟ್ಟಿದ್ದೇವೆ,
ಮುಂದೆ ಮುಂದೆ ಸಾಗುತಲಿರುವಾಗ
ಬಾಯಾರಿ ಸುಸ್ತಾಗಿ ಕಾಲು ಜಾರಿ
ದಾರಿ ಸಾಗದೆ ಕುಳಿತಾಗ.

ನಮ್ಮ ಗುಂಪಲ್ಲಿ ನನ್ನೊಳಗಿರುವವನು
ಬಲು ಮಾತುಗಾರ
ಆಕಾಶಕ್ಕೆ ಕೈ ತೋರಿಸಿ
ನೋಡಿ ಸ್ವಲ್ಪ ಮುಗಿಲಲ್ಲಿ
ಹಕ್ಕಿ ಹಾರಾಡುತ್ತಿದೆ
ಹೋರಾಟ ಅಷ್ಟು ಎತ್ತರಕ್ಕೇರ ಬೇಕು.
ದೂರದಿ ದೃಷ್ಠಿಯಿಡಿ
ಸೂರ್ಯಸ್ತ ವಾಗ ಬೇಡಿ ಎಂದ.

ನಮ್ಮ ಕೇರಿಯದ ಅರ್ಥವಾಗದವನು.
ಮಾತಾಡಿದರೆ ಇನ್ನೊಬ್ಬರಿರ ಬೇಕು.
ಅರ್ಥ ಬಿಡಿಸಿ ಹೇಳಲು.
ನನ್ನೊಳಗಿರುವವನ ಮಾತು ಮೊಟಕುಗೊಳಿಸಿ.
ಗಾಡವಾಗಿ ಯೋಚಿಸುತ್ತಾ, ನುಡಿದ

ಕುಬ್ಬವಾಗಿ ಬಿಟ್ಟಿದೆ ಗಿಡ
ಅದನ್ನು ನಾವೆ ಬೆಳಸ ಬೇಕು.
ಹಿರಿಯರೆಳೆದು ತಂದು ತೇರ
ನಾವೆಲ್ಲರು ಮುನ್ನಡೆಸ ಬೇಕು.
ಗಿಡ, ಗಿಡಕ್ಕೆ ನೀರು, ಹಕ್ಕಿಗೆ ರೆಕ್ಕೆ
ಸೂರ್ಯನ ಬೆಳಕು ಎಲ್ಲ ನಾವೆ.

○ಚಿಕ್ಕಹಾಗಡೆ ಪುರುಷೋತ್ತಮ

ಲಹರಿ

ತರೀಕೆರೆಯ ಚಿಕನ್ನೂ ಮಂಗಳೂರಿನ ಮಾವಿನ ಮಿಡಿಯೂ

ಪಡ್ರೆಯವರ ಕುಸುಲಕ್ಕಿ ಗಂಜಿಗೂ ತರಿಕೆರೆಯವರ ಚಿಕನ್‌ಗೂ ನನ್ನ ದೃಷ್ಟಿಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಯಾಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಸುಲಕ್ಕಿ ಗಂಜಿಯ ಜೊತೆ ಮಾಂಸಾಹಾರಿಗಳೂ ಮೀನನ್ನೂ, ಸಸ್ಯಾಹಾರಿಗಳು ಹಸಿ ಮೆಣಸು ಅಥವಾ ಮಾವಿನ ಮಿಡಿ ಅಥವಾ ಉಪ್ಪಿನಕಾಯಿ ಇಟ್ಟುಕೊಳ್ಳುತ್ತಾರೆ. ಆದ್ದರಿಂದಲೇ ನನ್ನ ಮಟ್ಟಿಗೆ ಬಾಲ್ಯದಲ್ಲಿ ಉಣ್ಣುತ್ತಿದ್ದ ಕುಸುಲಕ್ಕಿ ಗಂಜಿಗೂ ತರಿಕೆರೆಯವರ ಚಿಕನ್‌ಗೂ ಯಾವ ವ್ಯತ್ಯಾಸವೂ ಇಲ್ಲ. ಮೇಲಾಗಿ ತರಿಕೆರೆಯ ಚಿಕನ್ ಬಾಲ್ಯದ ನೆನಪಿನೊಂದಿಗೆ ವಿಹರಿಸುವಂತೆ ಮಾಡಿತು. ಬಾಲ್ಯದಲ್ಲಿ ನಾವು ಉಂಡದ್ದಕ್ಕಿಂತ ಬೇರೆ ಯಾವ ಸಸ್ಯಾಹಾರಿ ತಿಂಡಿ ತಿನಿಸುಗಳನ್ನು ಕೂಡ ತಿನ್ನಲು ನನಗೆ ಸಾಧ್ಯವಾಗುವುದಿಲ್ಲ.

○ಅರವಿಂದ ಚೊಕ್ಕಾಡಿ

ಒಬ್ಬ ಬರಹಗಾರನಿಗೆ ಆತನ ಬರಹವೇ ಕೆಲವು ಸ್ನೇಹಿತರನ್ನೂ ಕೆಲವು ಶತ್ರುಗಳನ್ನೂ ತಂದುಕೊಡುತ್ತದೆ. ಅದು ಬರಹಗಾರನಿಗಷ್ಟೆ ಸಿಗುವ ಸದವಕಾಶ. ನನ್ನ ಮತ್ತು ಕನ್ನಡದ ಪ್ರಮುಖ ಚಿಂತಕರಲ್ಲೊಬ್ಬರಾದ ಡಾ॥ ರೆಹಮತ್ ತರಿಕೆರೆಯವರೊಂದಿಗೆ ಬೆಳೆದ ಸ್ನೇಹ ಈ ಬಗೆಯದು. ಹಾಗಂತ ನಾನವರನ್ನು ಸ್ನೇಹಿತ ಎನ್ನುವುದು ಕಷ್ಟ. ಯಾಕೆಂದರೆ ತರಿಕೆರೆಯೆನಿದ್ದರೂ ನನಗಿಂತ ಸುಮಾರು ಇಪ್ಪತ್ತು ವರ್ಷಕ್ಕೆ ಹಿರಿಯರು. ಹಾಗಾಗಿ ಹಿರಿಯ ಸ್ನೇಹಿತ ಅಂದರೆ ಸೂಕ್ತವಾದೀತು.

ಬಹಳ ಸಮಯದಿಂದ ತರಿಕೆರೆ ನನ್ನನ್ನು ಆಹ್ವಾನಿಸುವುದು ನಾವು ಅವರನ್ನು ಆಹ್ವಾನಿಸುವುದು ನಡೆದೇ ಇತ್ತು. ಮೊನ್ನೆ ಮೊನ್ನೆ ಶೈಕ್ಷಣಿಕ ವಿಚಾರ ಸಂಕಿರಣಕ್ಕೆ ಎಂದು ಕೊಪ್ಪಳಕ್ಕೆ ಹೋಗಿದ್ದಾಗ ಅಲ್ಲಿಂದ ಹೊಸಪೇಟೆಗೆ ಹೋಗಿ ಸುಮಾರು ೫ ಗಂಟೆಗಳ ಕಾಲ ತರಿಕೆರೆಯವರ ಜೊತೆ ಕಳೆಯಲು ಸಾಧ್ಯವಾಯಿತು. ಈ ಭೇಟಿ ನನಗೆ ಯಾಕೆ ಮುಖ್ಯವಾಗುತ್ತದೆ ಎಂಬುದನ್ನು ತರಿಕೆರೆಯ ಚಿಕನ್ ಮೂಲಕವೇ ಹೇಳಲು ಪ್ರಯತ್ನಿಸುತ್ತೇನೆ. ನನ್ನ ಊಟಕ್ಕೆ ಅಂತ ತರಿಕೆರೆ ಚಿಕನ್ ಮಾಡಿಸಿದ್ದರು. ಆದರೆ ನಾನು ಚಿಕನ್ ತಿನ್ನುವುದಿಲ್ಲ. ಮುಖ್ಯ ವಿಚಾರ ಇರುವುದೇ ಇಲ್ಲಿ. ಬಹಳ ಬಾರಿ ನಾನವರ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಪತ್ರ ಸಂವಾದ ನಡೆದಿದೆ. ನನ್ನ ಮದುವೆಗೆ ಅವರನ್ನೂ ಅವರ ಗೃಹಪ್ರವೇಶಕ್ಕೆ ನನ್ನನ್ನೂ ಕರೆದಿದ್ದೂ ನಡೆದಿದೆ.

ಆದರೆ ನಾನವರ ಮನೆಗೆ ಊಟಕ್ಕೆ ಹೋಗುತ್ತೇನೆ ಅಂತ ಗೊತ್ತಿದ್ದರೂ ನನ್ನ ಬಳಿ ಬಿಡಿ; ಬೇರೆ ಯಾರ ಬಳಿಯಾದರೂ ನನ್ನ ಜಾತಿಯನ್ನು, ನನ್ನ ಫುಡ್ ಹ್ಯಾಬಿಟ್ ಅನ್ನು ಕೇಳಿ ತಿಳಿಯುವ ಪ್ರಯತ್ನವನ್ನು ಅವರು ಮಾಡಲಿಲ್ಲ. ತೀರಾ ಸಹಜವಾಗಿ ತಮ್ಮಲ್ಲಿಗೆ ಯಾವ ಅತಿಥಿ ಬಂದರೂ ಹೇಗೆ ವರ್ತಿಸುತ್ತಾರೋ ಹಾಗೇ ವರ್ತಿಸಿದರು. ಬಹಳ ದೊಡ್ಡ ಸುಸಂಸ್ಕೃತ ಮನಸು ಇದು. ಕೇವಲ ಕುತೂಹಲಕ್ಕಾಗಿಯಾದರೂ ಜಾತಿಯ ಹಿನ್ನೆಲೆಯನ್ನು ತಿಳಿಯುವ ಆಸಕ್ತಿ ಇಲ್ಲದ ಮನೋಧರ್ಮವನ್ನು ಹೆಚ್ಚು ಜನರಲ್ಲಿ ಕಾಣಲು ನನಗೆ ಸಾಧ್ಯವಾಗಿಲ್ಲ. ಆಮೇಲೆ ಏನಾಯಿತು ಎನ್ನುವುದು ಮುಖ್ಯವೇ. ಜೊತೆಯಾಗಿ ಕುಳಿತು ಅವರು ಚಿಕನ್ ಹೊಡೆದರು.

ನಾವು ಚಿಕನ್ ಇಲ್ಲದ ಊಟ ಹೊಡೆದೆ. ಆಗ ಕೂಡ ತರಿಕೆರೆ "ಅಯ್ಯಯ್ಯೋ ಮೊದಲೇ ಗೊತ್ತಿದ್ದರೆ ಬೇರೆನಾದರೂ ಮಾಡಿಸುಬಹುದಿತ್ತು" ಅಂತ ಪರತಪಿಸಲಿಲ್ಲ. ಅಂತಹ ಮನೋಧರ್ಮ ಸಾಧ್ಯವಾಗಬೇಕಾದರೆ, ನಾನು ತಿನ್ನದೆ ಇದ್ದರೂ ನನಗಾಗಿ ಚಿಕನ್ ತರಿಸಿರುವುದರ ಹಿಂದೆ ಇರುವ ಪ್ರೀತಿ ತಿನ್ನುವ ಚಿಕನ್‌ಗಿಂತ ದೊಡ್ಡದು ಎನ್ನುವುದು ನನಗೆ ಅರ್ಥವಾಗಬೇಕು. ಅದು ನನಗರ್ಥವಾಗಿದೆಯೆಂಬುದು ಅವರಿಗೂ ಅರ್ಥವಾಗಬೇಕು. ಅದು ಸಾಧ್ಯವಾಗಿದೆ ಎನ್ನುವುದು ಬಹಳ ಮುಖ್ಯ ವಿಚಾರ. ಅಂತರಂಗಕ್ಕೆ ಅರಿವಾಗುವುದು ಎಂದರೆ ಇದೇ ಇರಬೇಕು. ಯಾವ ಔಪಚ
ಕತೆಯೂ ಇಲ್ಲದ ಇಲ್ಲಿನ ಸಹಜತೆ ನನಗೆ ಬಹಳ ಇಷ್ಟವಾಗುತ್ತ
ತರಿಕೆರೆಯವರನ್ನು ಭೇಟಿ ಮಾಡಿದ ಒಂದಿನ ದಿನ ಹೊಸಪೇ
ನನ್ನ ಟಿಕೆಟ್ ಅನ್ನು ಸ್ನೇಹಿತ 'ಉದಯವಾಣಿ' ದಿನ ಪತ್ರಿಕೆಯ ಉ
ಸಂಪಾದಕ ನಿತ್ಯಾನಂದ ಪಡ್ರೆ ರಿಸರ್ವ್ ಮಾಡಿ ಇರಿಸಿದ್ದರು. ಆ ದ
ಅವರ ಮನೆಯಲ್ಲಿ ಊಟ.

ಪಡ್ರೆ ದಂಪತಿಗಳು ಮನೆಗೆ ಬಂದದ್ದೇ ತೀರಾ ತಡವ
ಎಂದು ಹೇಳದೆ ಅಲ್ಲಿ ಕುಸುಲಕ್ಕಿ ಗಂಜಿ ಉಂಡು ಹೊರ
ಎಂದು ಹೇಳಿದರೆ ನನಗೆ ಏನೂ ಬೇಸರವಿಲ್ಲ. ಆದರೆ ಅವರಿಗ
ಚುರುಕ್ ಎನ್ನಬಹುದು. ಪಡ್ರೆಯವರ ಕುಸುಲಕ್ಕಿ ಗಂಜಿಗೂ ತರಿ
ಯವರ ಚಿಕನ್‌ಗೂ ನನ್ನ ದೃಷ್ಟಿಯಲ್ಲಿ ಯಾವ ವ್ಯತ್ಯಾಸವೂ ಇ

ಾಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಸುಲಕ್ಕಿ ಜೆಯ ಜೊತೆ ಮಾಂಸಾಹಾರಿಗಳೂ ಮೀನನ್ನೂ, ್ಯಾಹಾರಿಗಳು ಹಸಿಮೆಣಸು ಅಥವಾ ಮಾವಿನ ಮಿಡಿ ಥವಾ ಉಪ್ಪಿನಕಾಯಿ ಇಟ್ಟುಕೊಳ್ಳುತ್ತಾರೆ. ಆದ್ದರಿಂದಲೇ ್ನ ಮಟ್ಟಿಗೆ ಬಾಲ್ಯದಲ್ಲಿ ಉಣ್ಣುತ್ತಿದ್ದ ಕುಸುಲಕ್ಕಿ ಗಂಜಿಗೂ ಕೆರೆಯವರ ಚಿಕನ್‌ಗೂ ಯಾವ ವ್ಯತ್ಯಾಸವೂ ಇಲ್ಲ. ಲಾಗಿ ತರಿಕೆರೆಯ ಚಿಕನ್ ಬಾಲ್ಯದ ಮಂಗಳೂರಿನ ವಿನ ಮಿಡಿಯ ಜೊತೆಗಿನ ನೆನಪಿನೊಂದಿಗೆ ವಿಹರಿ ನಂತೆ ಮಾಡಿತು.

ಆದರೂ ನಾನು ಚಿಕನ್ ತಿನ್ನುವುದಿಲ್ಲ. ಚಿಕನ್ ತ್ರವಲ್ಲ' ಬಾಲ್ಯದಲ್ಲಿ ನಾವು ಉಂಡದ್ದಕ್ಕಿಂತ ವಿಚಿತ್ರ-ಪದ, ವಿಚಿತ್ರ ಸ್ಟೈಲ್‌ನ ಸಸ್ಯಾಹಾರಿ ತಿಂಡಿ ಸುಗಳನ್ನು ಕೂಡ ತಿನ್ನಲು ನನಗೆ ಸಾಧ್ಯವಾಗುವುದಿಲ್ಲ. ಕೆ? ಮೊದಲನೆಯದಾಗಿ ಆ ರೀತಿಯ ಫುಡ್ ಬಿಟ್‌ಗೆ ನನ್ನ ಬದುಕು ರೂಢಿಯಾಗಿಲ್ಲ. ಬದುಕಿಗಿಂತ ಖ್ಯವಾಗಿ ಜೀವನ ದೃಷ್ಟಿ ರೂಢಿಯಾಗಿಲ್ಲ. ಹೆಚ್ಚು ಬೆಲೆ ಳುವ ಆಹಾರ ಪದಾರ್ಥಗಳನ್ನು ಕೊಳ್ಳಲು ಬೇಕಾದಷ್ಟು ಪತ್ತಿಕ ಶಕ್ತಿ ನನಗೆ ಇಲ್ಲದಿರುವುದೂ ಅದಕ್ಕೆ ಕಾರಣ ಬಹುದು. ಆದರೆ ಪ್ರಧಾನವಾದ ಕಾರಣ ಜಾತಿಯು ಲ್ಯದ ಮೇಲೆ ಬೀರಿದ ಪ್ರಭಾವವೇ ಆಗಿದೆ ಎಂಬುದನ್ನು ಮಾಚಬೇಕಾದ ಅಗತ್ಯವೇನೂ ನನಗಿಲ್ಲ.

ಈ ಫುಡ್ ಹ್ಯಾಬಿಟ್ ಸಮಾಜದೊಂದಿಗೆ ನಾನು ತ್ರವಾಗಿ ಬೆರೆಯಲು ಏನಾದರೂ ತೊಂದರೆ ಕೊಟ್ಟಿ ಯಾ? ನನ್ನ ಧೋರಣೆಗೂ ಫುಡ್ ಹ್ಯಾಬಿಟ್‌ಗೂ ವೆ ವಿರುದ್ಧಾತ್ಮಕ ನೆಲೆಗಳಿವೆಯಾ? ಖಚಿತ ಉತ್ತರ ತ್ತಿಲ್ಲ. ಆದರೆ ಮಾಂಸಾಹಾರವನ್ನು ಒಲ್ಲದವರು ಂಸಾಹಾರಿಗಳಾದರೆ ಜಾತ್ಯತೀತರು, ಪ್ರಗತಿಪರರು ತ್ತಾರೆ ಎಂದು ಭಾವಿಸುವುದಾದರೆ ಇವತ್ತು ತುಂಬಾ ಬ್ರಾಹ್ಮಣರು ಪ್ರಗತಿಪರರಾಗಿದ್ದಾರೆ, ವೇದಕಾಲೀನ ್ಮಣರು ಪ್ರಗತಿಪರರಾಗಿದ್ದರು ಎಂದು ಭಾವಿಸಬೇಕಾ ದೆ. ಆದರೆ ಅದು ಸತ್ಯವಲ್ಲ. ಆದ್ದರಿಂದಲೆ ನನ್ನ ಗೆ ಉತ್ತರ ಸಿಗುತ್ತಿಲ್ಲ. ಬದಲಿಗೆ ಇನ್ನೊಂದು ಯನ್ನು ಹುಟ್ಟಿಸುತ್ತದೆ. ಅದು ಮಾನವ ಸ್ವಭಾವಗಳು ತವಾಗುವ ರೀತಿಗೆ ಸಂಬಂಧಿಸಿದ್ದು. ನಾನು ಹುಟ್ಟಿದ್ದು ್ಮಣನಾಗಿ ಎಂದು ಹೇಳಲು ನನಗೆ ಯಾವ ಅಂಜಿ ೂ ಇಲ್ಲ.

ಅದರಿಂದಾಗಿ ನಾನು ಶ್ರೇಷ್ಠನೂ ಆಗುವುದಿಲ್ಲ. ಷ್ಟನೂ ಆಗುವುದಿಲ್ಲ. ಹುಟ್ಟು ಯಾರೊಬ್ಬರಿಗೂ ಆಯ್ಕೆ . ಆದ್ದರಿಂದ ತಮ್ಮ ಹುಟ್ಟಿಗೆ ತಾವು ಜವಾಬ್ದಾರರಾಗ ದ ಅಗತ್ಯವಿಲ್ಲ. ಆದರೆ ಧೋರಣೆಗಳು ಅವರವರ . ಅದಕ್ಕೆ ಮಾತ್ರ ಜವಾಬ್ದಾರರಾಗಿರಲೇಬೇಕು ವ ನಿಲುವೇ ನನ್ನದಾಗಿದ್ದರೂ, ಬ್ರಾಹ್ಮಣ ಶೂದ್ರ-ತ-ಹಿಂದೂ-ಮುಸ್ಲಿಂ ಎಲ್ಲರ ಬಗ್ಗೆಯೂ ನಾನು-ರೆ ಮಾತನಾಡಿದರೂ ನಾನು ನನ್ನ ಬ್ರಾಹ್ಮಣ ಹಿನ್ನೆಲೆ ್ನು ಇಟ್ಟುಕೊಂಡು ತರಿಕೆರೆ ತಮ್ಮ ಮುಸ್ಲಿಂ ಪರಿಸರ ಟ್ಟುಕೊಂಡು ಮಾತನಾಡಲು ಶುರುಮಾಡಬೇಕಾದರೆ ಾರು ಒಂದೂವರೆ ಗಂಟೆ ಕಾಲಕಳಿಯಬೇಕಾಯಿತು.

ಪರ್ಸನಲ್ ಹಿನ್ನೆಲೆಯಿಂದ ನಮ್ಮ ವಿಚಾರಗಳನ್ನು ಡಲು ಅಷ್ಟು ಹೊತ್ತು ಯಾಕೆ ಬೇಕಾಯಿತು ಎನ್ನುವು ಉತ್ತರವಿಲ್ಲ. ಬಹುಶಃ ಜಾತಿ-ಮತ-ಧರ್ಮ ಎಂಬ ಾಜಿಕ ಸತ್ವಗಳು ಉಂಟು ಮಾಡುವ ಬ್ಲಾಕ್ ಇರ ಆದು. ತರಿಕೆರೆಯ ಚಿಕನ್ ಮತ್ತು ಮಂಗಳೂರಿನ ಮಾವಿನ ಮಿಡಿ ಎರಡೂ ಒಂದೇ ಎಂಬ ಭಾವ ಸ್ಫುರಿಸಿ ದಾಗ ಈ ಸಾಮಾಜಿಕ ಸತ್ವಗಳ ಬ್ಲಾಕ್ ಒಡೆದು ಹೊರ ಬಂದು ಅನಾವರಣಗೊಳ್ಳಲು ಸಾಧ್ಯವಾಗುತ್ತದೆ.

ಆದರೆ ತರಿಕೆರೆಯಂತಹವರೊಂದಿಗೆ ಅನಾವರಣ ಗೊಂಡಷ್ಟು ಸುಲಭವಾಗಿ ಒಂದು ವೈಚಾರಿಕ ಧೋರ ಣೆಯ ಬ್ಲಾಕ್‌ನಿಂದ ಅನಾವರಣಗೊಳ್ಳಲು ಸಾಧ್ಯವಾಗು ದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಕೆಲವು ತಾತ್ವಿಕ ಕಾರಣಗಳಿಗಾಗಿ ನನಗೆ ವೇದಗಳು, ಉಪನಿಷತ್ತು, ಆರಣ್ಯ ಗಳು ಜನಪದೀಯ ಆಕೃತಿಗಳು, ಪೈಗಂಬರ, ಏಸು, ಮಹಾವೀರರೆಲ್ಲ ಪ್ರಿಯರಾಗುತ್ತಾರೆ. ಕೊಂಚ ವೈಚಾರಿಕವಾ ಗುತ್ತಾ ಹೋದ ಹಾಗೆ ಬುದ್ಧ, ಬಸವಣ್ಣ ಮುಖ್ಯರಾಗು ತ್ತಾರೆ. ವೈಚಾರಿಕ ಧೋರಣೆಯನ್ನು ರೂಪಿಸಿಕೊಳ್ಳುವಾಗ ಲೋಹಿಯಾ, ಅಂಬೇಡ್ಕರ್ ಬೇಕು ಎನಿಸುತ್ತದೆ.

ಒಂದು ವೈಚಾರಿಕ ಆದರ್ಶವನ್ನು ಕಟ್ಟಿಕೊಳ್ಳಲು ಹೊರಟಾಗ ಎಲ್ಲರಿಗಿಂತಲೂ ಗಾಂಧಿಯೇ ನನಗೆ ಬಹಳ ಪ್ರಿಯರಾಗುತ್ತಾರೆ. ಹಾಗಿದ್ದರೆ ಮಾರ್ಕ್ಸ್ ಮತ್ತು ಮಾರ್ಕ್ಸ್ ವಾದಿಗಳು? ಕ್ರಾಂತಿಯಾಗಬೇಕು ಎನ್ನುವ ಮಾರ್ಕ್ಸ್ ಕ್ರಾಂತಿ ಪ್ರಾರಂಭಿಸಿ ಮುಕ್ತಾಯವಾಗುವ ತನಕ ಊಟ ಹೇಗೆ ಮಾಡಬೇಕೆಂದು ಹೇಳುವುದಿಲ್ಲವೆಂದು ಮಾರ್ಕ್ಸ್ ಅನ್ನು ನಾನು ಆಕ್ಷೇಪಿಸುತ್ತೇನೆ.

'ಜಾಗತೀಕರಣದಲ್ಲಿ ಸ್ವಲ್ಪ ಒಳ್ಳೆಯದಿದೆ, ಅದನ್ನು ಡೆಮಾಕ್ರಟೈಸ್ ಮಾಡುತ್ತೇವೆ" ಎನ್ನುತ್ತಾ ವಿಚಿತ್ರ ನಿಲುವು ತಳೆಯುವ ಮಾರ್ಕ್ಸ್‌ವಾದಿಗಳ ಮೇಲೆ ಅಸಾಧ್ಯ ಸಿಟ್ಟು ಬಂದು, "ನಿಮ್ಮ ಪಕ್ಷದವನಲ್ಲದಿದ್ದರೂ ತಾತ್ವಿಕವಾಗಿ ನಿಮ್ಮನ್ನು ಬೆಂಬಲಿಸಿದ್ದೇನೆ. ಆದಕ್ಕೆ ನೀವು ಬಡವರ ಪರ ಇದ್ದೀರಿ ಎನ್ನುವುದು ಕಾರಣ. ಯಾವುದೆ ರೂಪದಲ್ಲಿ ಜಾಗತೀಕರಣವನ್ನು ಒಪ್ಪುವುದೆಂದರೆ ಆದು ರೈತರ ಆತ್ಮ ಹತ್ಯೆಯನ್ನು ಒಪ್ಪಿದ ಹಾಗೆಯೇ. ನಿಜವಾಗಿಯೂ ನೀವು ಯಾವ ಕಡೆಗಿದ್ದೀರಿ? ಜಾಗತೀಕರಣದ ಕಡೆಗೇ ಇರುವು ದಾದರೆ ನಿಮ್ಮ ದಾರಿ ನಿಮಗೆ ನನ್ನದಾರಿ ನನಗೆ" ಎಂದು ಹೇಳಬೇಕೆನಿಸುತ್ತದೆ. (ನನ್ನ ಮಾತಿಗಾಗಿ ಮಾರ್ಕ್ಸಿಸ್ಟರು ತಲೆ ಕಡಿಸಿಕೊಳ್ಳುವಂತಹ ದೊಡ್ಡ ಮನುಷ್ಯ ನಾನಲ್ಲದಿದ್ದರೂ).

ಆದರೂ ನನ್ನ ವೈಚಾರಿಕ ಧೋರಣೆಯ ಅತ್ಯಂತಿಕ ಮತ್ತು ನಿರ್ಣಾಯಕ ಹಂತದಲ್ಲಿ ನಾನು ಮಾರ್ಕ್ಸಿಸಂನ ಪ್ರಜ್ಞೆಯ ಕಡೆಗೆ ಹೋಗುತ್ತೇನೆ. ಮಾರ್ಕ್ಸಿಸ್ಟರ ಪರವಾಗಿ ಬಿಡುತ್ತೇನೆ. ನಾನು ಮಾರ್ಕ್ಸಿಸ್ಟರನ್ನು ಟೀಕಿಸುತ್ತಿದ್ದರೂ ಬೇರೆಯವರು ಅವರನ್ನು ಟೀಕಿಸಿದಾಗ ಟೀಕಿಸಿದವರನ್ನು ನಾನು ಆಕ್ಷೇಪಿಸಲು ಪ್ರಾರಂಭಿಸಿಬಿಡುತ್ತೇನೆ.

ಯಾಕೆ ಹೀಗೆ? ಇದು ಜಾತಿ ಹಿನ್ನೆಲೆಯಿಂದ ಬಂದ ಕಾರಣವೆಂದೇ ತೋರುತ್ತದೆ. ಒಬ್ಬ ನಿರ್ಗತಿಕ ಬ್ರಾಹ್ಮಣನಿಗೆ ದೊರಕುವ ಏಕೈಕ ಆಶ್ರಯವೆಂದರೆ ಮಾರ್ಕ್ಸಿಸಂ. ಯಾಕೆಂದರೆ ಮಾರ್ಕ್ಸ್ ವಾದಕ್ಕೆ ಜಾತಿ ಬೇಕಾಗಿಲ್ಲ. ಅದರದೇನಿದ್ದರೂ ವರ್ಗವೇ. ಹಾಗಿದ್ದರೆ ಗಾಂಧಿ? ಬಹುಶಃ ಒಂದು ನಿರ್ಣಾಯಕ ಹಂತದಲ್ಲಿ ಗಾಂಧಿಯನ್ನು ಬಿಟ್ಟು ನಾನು ಮಾರ್ಕ್ಸ್ ಕಡೆಗೆ ಹೊರಳಿಕೊಳ್ಳಲು ಕಾರಣ ಜಾತಿಯಾಗಿರದೆ ಅನುಭವಗಳು ಕಾರಣವೆಂದು ತೋರುತ್ತದೆ.

೨೬ ವರ್ಷಗಳಲ್ಲಿ ಏನೆಲ್ಲ ಅನುಭವಗಳಾದವು. ಹಾಕುವುದಕೆ, ಚೆಡ್ಡಿ ಇಲ್ಲದೆ, ಮಧ್ಯಾಹ್ನ ಊಟವಿಲ್ಲದೆ ಶಾಲೆ ಕಲಿತದ್ದಾಗಿತ್ತು. ಒಬ್ಬ ಬ್ರಾಹ್ಮಣನಾಗಿ ಬ್ರಾಹ್ಮಣರ ಮನೆಯಲ್ಲೆ ಲ್ಯಾಟ್ರೀನ್ ಕ್ಲೀನ್ ಮಾಡುವ ಕೆಲಸ ಮಾಡಿಯೂ ನಾಯಿ ಕಟ್ಟುವ ಜಗಲಿಯಲ್ಲಿ ಉಂಡು ಮಲಗಿದ್ದಾಗಿತ್ತು. ಒಬ್ಬ ದಲಿತ ಹೊರಗಿದ್ದು ಅಸ್ಪೃಶ್ಯನಾಗಿದ್ದರೆ ಒಬ್ಬ ನಿರ್ಗತಿಕ ಬ್ರಾಹ್ಮಣ ಒಳಗಿದ್ದುಕೊಂಡೇ ಅಸ್ಪೃಶ್ಯತೆಯ ಅಪಾರ ವೇದನೆಯನ್ನು ಅನುಭವಿಸಬೇಕಾ ಗುತ್ತದೆ. ಶೂದ್ರ ಯುವತಿಯೊಂದಿಗೆ ಪ್ರೀತಿ ಇದೆ ಅಂತ ಒಂದು ರೀತಿ ವಿಶ್ವಸಿಕರಾದವರೇ ಮನೆಯಿಂದ ಹೊರ ಹಾಕಿದ್ದೂ ಆಗಿತ್ತು. ಯಾರು ಏನೇ ಹಿಂಸೆ ಕೊಟ್ಟರೂ ಪೆಟ್ಟುತಿಂದು ನಾಯಿಯ ಹಾಗೆ ಸಹಿಸಿಕೊಂಡಿದ್ದಾಗ ಮತ್ತಷ್ಟು ಹಿಂಸೆ ಕೊಟ್ಟು ಸಂತೋಷ ಅನುಭವಿಸಿದರೆ ಹೊರತು ಕನಿಕರ ತೋರಲಿಲ್ಲ.

ಆದರೆ ಸಹಿಸಲು ಸಾಧ್ಯವೇ ಇಲ್ಲದೆ ತೀಕ್ಷ್ಣವಾಗಿ ಒಂದೇ ಒಂದು ಬಾರಿ ಪ್ರತಿಭಟಿಸಿದೆ ನೋಡಿ, ಎಲ್ಲರೂ ತೆಪ್ಪಗಾದರು. ಆಮೇಲೆ ಯಾರು ನನ್ನ ತಂಟೆಗೆ ಬರಲಿಲ್ಲ. ಹಾಗಿರುವಾಗ ಸಹಜವಾಗಿ ನನಗೆ ಗಾಂಧಿಗಿಂತ ಮಾರ್ಕ್ಸೇ ಕರೆಕ್ಟು ಅನಿಸಲು ಶುರುವಾಗುತ್ತದೆ.

ಈ ಅಂಶಗಳ ಮೂಲಕ ನಾನು ಏನನ್ನು ಹೇಳಲು ಹೊರಟಿದ್ದೇನೆ ಎನ್ನುವ ಮೊದಲು ಇನ್ನೆರಡು ಸಂಗತಿಗ ಳನ್ನು ಪ್ರಸ್ತಾಪಿಸಬೇಕು. ತರಿಕೆರೆ ತಾವು ಮಂಗಳೂರಿನಿಂದ ಹಿಂದಿರುಗುತ್ತಿದ್ದಾಗಿನ ಒಂದು ಅನುಭವವನ್ನು ಹೇಳಿದರು. ಮೂರು ಮಂದಿ ಯುವಕರು ಉದ್ಯೋಗವಿಲ್ಲದೆ ಅಲೆದಾ ಡುತ್ತ, ಫುಟ್ ಪಾತ್‌ನಲ್ಲಿ ಮಲಗಿದರೆ ಪೋಲೀಸರಿಂದ ಒದೆ ತಿನ್ನುವ ಸ್ಥಿತಿಯನ್ನು ಕಂಡು ರಾತ್ರಿ ಬಸ್‌ನಲ್ಲಿ ಕುಳಿತ ತರಿಕೆರೆ ಎಷ್ಟು ಡಿಸ್ಟರ್ಬ್ ಆಗಿದ್ದರೆಂದು ಹೇಳಿದರು.

ಜಾಗತೀಕರಣದ ಬಗ್ಗೆ ಮಾತನಾಡುವುದೆಲ್ಲ ನಿಷ್ಪ್ರಯೋಜಕ ಎನ್ನುವ ಸಾಹಿತಿಯೊಬ್ಬರ ಬಗ್ಗೆ ಕೇಳಿದಾಗ

ನಾನು ಹುಟ್ಟಿದ್ದು ಬ್ರಾಹ್ಮಣನಾಗಿ ಎಂದು ಹೇಳಲು ನನಗೆ ಯಾವ ಅಂಜಿಕೆಯೂ ಇಲ್ಲ. ಅದರಿಂದಾಗಿ ನಾನು ಶ್ರೇಷ್ಠನೂ ಆಗುವುದಿಲ್ಲ. ನಿಕೃಷ್ಟನೂ ಆಗುವುದಿಲ್ಲ. ಹುಟ್ಟು ಯಾರೊಬ್ಬರಿಗೂ ಆಯ್ಕೆಯಲ್ಲ. ಆದ್ದರಿಂದ ತಮ್ಮ ಹುಟ್ಟಿಗೆ ತಾವು ಜವಾಬ್ದಾರರಾಗಬೇಕಾದ ಅಗತ್ಯವಿಲ್ಲ. ಆದರೆ ಧೋರಣೆಗಳು ಅವರವರ ಆಯ್ಕೆ. ಅದಕ್ಕೆ ಮಾತ್ರ ಜವಾಬ್ದಾರರಾಗಿರಲೇಬೇಕು ಎನ್ನುವ ನಿಲುವೇ ನನ್ನದಾಗಿದ್ದರೂ, ಬ್ರಾಹ್ಮಣ ಶೂದ್ರ-ದಲಿತ-ಹಿಂದೂ-ಮುಸ್ಲಿಂ ಎಲ್ಲರ ಬಗ್ಗೆಯೂ ನಾನು-ತರಿಕೆರೆ ಮಾತನಾಡಿದರೂ ನಾನು ನನ್ನ ಬ್ರಾಹ್ಮಣ ಹಿನ್ನೆಲೆಯನ್ನು ಇಟ್ಟುಕೊಂಡು ತರಿಕೆರೆ ತಮ್ಮ ಮುಸ್ಲಿಂ ಪರಿಸರ ವನ್ನಿಟ್ಟುಕೊಂಡು ಮಾತನಾಡಲು ಶುರುಮಾಡಬೇಕಾದರೆ ಸುಮಾರು ಒಂದೂವರೆ ಗಂಟೆ ಕಾಲಕಳಿಯಬೇಕಾಯಿತು. ಪರ್ಸನಲ್ ಹಿನ್ನೆಲೆಯಿಂದ ನಮ್ಮ ವಿಚಾರಗಳನ್ನು ತೆರೆದಿಡಲು ಅಷ್ಟು ಹೊತ್ತು ಯಾಕೆ ಬೇಕಾಯಿತು ಎನ್ನುವುದಕ್ಕೆ ಉತ್ತರವಿಲ್ಲ. ಬಹುಶಃ ಜಾತಿ-ಮತ-ಧರ್ಮ ಎಂಬ ಸಾಮಾಜಿಕ ಸತ್ವಗಳು ಉಂಟು ಮಾಡುವ ಬ್ಲಾಕ್ ಇರಬೇಕು.

ತರೀಕೆರೆ ಸಾಪೇಕ್ಷವಾಗಿ ಈ ವಿಚಾರವನ್ನು ತಂದಿದ್ದರು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರಿಂದ ಡಿಸ್ಟರ್ಬ್ ಆಗದೆ ಇರುವ ಸ್ಥಿತಿಯಿಂದ ನಾವು ಡಿಸ್ಟರ್ಬ್ ಆಗಬೇಕಾದ ಇವತ್ತಿನ ಸ್ಥಿತಿಯ ಬಗ್ಗೆ ಒಂದಷ್ಟು ಚರ್ಚಿಸಿದವು. ಇಲ್ಲಿ ತರೀಕೆರೆ ಡಿಸ್ಟರ್ಬ್ ಆದ ಸಂಗತಿಗಳು ನನ್ನ ಅನುಭವವೂ–ಗ್ರಹಿಕೆಯೂ ಹೌದು. ಉದ್ಯೋಗ ಹುಡುಕುತ್ತಾ ಹೋಗಿ ಕಡಲೆ–ನೀರು ಸೇವಿಸಿ ಮಂಗಳೂರಿನ ನೆಹರೂ ಮೈದಾನದ ಕಲ್ಲು ಬೆಂಚಿನ ಮೇಲೆ ಎರಡು ರಾತ್ರಿ ಕಳೆದ ಅನುಭವ ನನಗಿದೆ ಆ ಅನುಭವದಿಂದ ಸಮಾಜವನ್ನು ನಾನು ಗ್ರಹಿಸಲು ಪ್ರಯತ್ನಿಸುತ್ತೇನೆ.

ನಾನು ಬಿಎಡ್ ಮಾಡುತ್ತಿದ್ದಾಗ ಮಂಗಳೂರಿನ ಫುಟ್‌ಪಾತ್‌ನಲ್ಲಿ ತನ್ನ ಕೊಳೆತ ಶಾಲನ್ನು ತನ್ನಂತಹ ಮತ್ತೊಬ್ಬ ವ್ಯಕ್ತಿಗೆ ಒಂದು ರೂಪಾಯಿಗೆ ಮಾರಾಟ ಮಾಡಿ ಆರಾತ್ರಿಯ ಊಟಕ್ಕೆ ಪರಿತಪಿಸುತ್ತಿದ್ದವನನ್ನು ಕಂಡಿದ್ದೇನೆ. ಪೇಪರ್ ಮಾರುವ ಹುಡುಗ ಎಲ್ಲಿಂದಲೋ ಒಂದೆರಡು

ಸಹಜ ಪ್ರಜ್ಞೆಯಾಗಿ ಬಂದಿರುವ ಬ್ರಾಹ್ಮಣ ಪ್ರಜ್ಞೆ, ಹಿಂದೂ ಪ್ರಜ್ಞೆಯನ್ನು ಒಡೆದು ಹೊರಬರಲು ಸಾಧ್ಯವಾಗ ಬೇಕು. ಎಲ್ಲೋ ಒಂದು ಕಡೆ ಅಂತಹ ಸಾಧ್ಯತೆ ಇದೆ ಅನಿಸುತ್ತದೆ. ನನಗೆ ಸರಿ ಎನಿಸದಿದ್ದರೆ, ಪ್ರತಿಕ್ರಿಯೆಸುವುದು ಬೇಡವೆನಿಸದೆ ಇದ್ದರೆ ದಲಿತ ಶೂದ್ರ, ಹಿಂದೂ, ಮುಸ್ಲಿಂ, ಬ್ರಾಹ್ಮಣ, ಮಹಿಳೆ ಎನ್ನುವ ಯಾವ ನೆಲೆಗಳನ್ನೂ ನೋಡದೆ ಟೀಕಿಸಿದ್ದೇನೆ. ನನ್ನನ್ನು 'ಪುರೋಹಿತಶಾಹಿ' ಎಂದರೂ ನಾನು ತೆಪ್ಪಗಾಗುವವನಲ್ಲ. ಬದಲು ಡಬ್ಬಲ್ ಸ್ಪೀಡ್‌ನಲ್ಲಿ ವಾದ ಮಾಡಲು ಶುರುಮಾಡುತ್ತೇನೆ. ತೀರಾ ಅನಿವಾರ್ಯ ಎನಿಸಿದರೆ ತರೀಕೆರೆ ಹೇಳುವ ಹಾಗೆ ದಕ್ಷಿಣ ಕನ್ನಡದವರಿಗೆ ರಕ್ತಗತವಾಗಿ ಬಂದಿರುವ ಯಕ್ಷಗಾನ ಶೈಲಿಯಲ್ಲಿ ತರ್ಕ ಮುಂದಿಟ್ಟು ಎದುರಾಳಿಗೆ ನನ್ನ ವಾದದೊಳಗೆ ಪ್ರವೇಶಿಸಲು ಸಾಧ್ಯವಾಗದಂತಹ ತರ್ಕವನ್ನು ಇಟ್ಟು ಬಿಡುತ್ತೇನೆ.

ಎಕ್ಸ್‌ಟ್ರಾ ಪೇಪರನ್ನು ಕದ್ದೋ, ಬೇಡಿಯೋ ತಂದು "ಒಂದೇ ರೂಪಾಯಿ ಕೊಡಿ ಸಾಕು ಸಾರ್" ಅಂತ ನನ್ನ ಮಡಿಲಿಗೇ ಎಸೆದದ್ದೂ ಉಂಟು. ಒಂದು ಬಾರಿ ನಾನು–ಸ್ನೇಹಿತ ಹಮೀದ್ ಮಂಜೇಶ್ವರ್ ರೈಲಿನಲ್ಲಿ ಹೋಗುತ್ತಿರಬೇಕಾದರೆ ಭಿಕ್ಷೆ ಬೇಡುವ ಹುಡುಗನಿಗೆ ಎರಡು ರೂ. ನಾಣ್ಯ ಹಾಕಿದ್ದೆ. ಆಗ ಹಮೀದ್, "ಚೊಕ್ಕಾಡಿ ನೀವು ತಪ್ಪು ಮಾಡುತ್ತಿದ್ದೀರಿ. ಆತ ಶಾಲೆಗೆ ಹೋಗಬೇಕು. ನೀವು ದುಡ್ಡು ಕೊಟ್ಟರೆ ಆತ ಶಾಲೆಗೆ ಹೋಗುವುದಿಲ್ಲ" ಎಂದು ಸರಿಯಾಗಿಯೇ ಹೇಳಿದ್ದರು.

ನಾನು ಕೂಡ ಅದೇ ತತ್ವವನ್ನು ಹೇಳುತ್ತಿದ್ದೇನೆ. ಆದರೆ ಒಬ್ಬ ಹುಡುಗ ಬಂದು ಕೈಚಾಚುವ ನಿರ್ಣಾಯಕ ಹಂತದಲ್ಲಿ ಶಾಲೆಗಿಂತ ಆತನಿಗೆ ನನ್ನ ಯಥಾನು ಶಕ್ತಿ ಎರಡು ರೂಪಾಯಿ, ಒಂದು ರೂಪಾಯಿ, ಐವತ್ತು ಪೈಸೆ ಕೊಡುವುದೇ ಅಗತ್ಯವೆಂದು ನನಗನಿಸುತ್ತದೆ. ಯಾಕೆಂದರೆ ಆಗ ನನಗಲ್ಲಿ ೧೫–೨೦ ವರ್ಷಗಳ ಹಿಂದಿನ ಅರವಿಂದ ಕಂಡುಬಿಡುತ್ತಾನೆ. ಇದು ನನ್ನ ದೌರ್ಬಲ್ಯವೂ ಹೌದು. ಯಾಕೆಂದರೆ ನಾನು ನೊಂದವರೊಂದಿಗೆ ಸಂವಾದಿಸುವುದು ನನ್ನ ಅನುಭವಗಳ ಮೂಲಕವೇ ಹೊರತು ಅವರ ಅನುಭವಗಳ ಮೂಲಕ ಅಲ್ಲ. ಆದ್ದರಿಂದಲೇ ನನ್ನ ಧೋರಣೆಯ ಅತ್ಯಂತಿಕ ಆಯ್ಕೆ ಮಾರ್ಕ್ಸ್ ಆಗಿಬಿಡುತ್ತಾರೆ. ಸದ್ಯಕ್ಕೆ ನನಗನಿಸುತ್ತಿರುವುದು ನನ್ನ ಅನುಭವಗಳ ಮಿತಿಯಿಂದ ಜಿಗಿದು ಮತ್ತೊಬ್ಬನ ಅನುಭವವಾಗಿ ನಿಂತು ಆತನ ವೇದನೆಗಳನ್ನು ಗ್ರಹಿಸಲು ಸಾಧ್ಯವಾಗಬೇಕು. ಅದಾಗಬೇಕಾದರೆ ಬ್ರಾಹ್ಮಣ, ಹಿಂದೂ ಸಮುದಾಯಗಳಿಂದ ಹೊರಗೆ ನಿಂತರೆ ಸಾಲದು.

ಸಹಜ ಪ್ರಜ್ಞೆಯಾಗಿ ಬಂದಿರುವ ಬ್ರಾಹ್ಮಣ ಪ್ರಜ್ಞೆ, ಹಿಂದೂ ಪ್ರಜ್ಞೆಯನ್ನು ಒಡೆದು ಹೊರಬರಲು ಸಾಧ್ಯವಾಗಬೇಕು. ಎಲ್ಲೋ ಒಂದು ಕಡೆ ಅಂತಹ ಸಾಧ್ಯತೆ ಇದೆ ಅನಿಸುತ್ತದೆ. ಯಾಕೆಂದರೆ ಬ್ರಾಹ್ಮಣ ಹಿನ್ನೆಲೆಯಿಂದ ಬಂದ ಕೆಲವು ಬರಹಗಾರರಿಗಿರುವ ಅಳುಕು ಅಥವಾ ಜಾಣತನ ನನ್ನಗಿಲ್ಲ. ನನಗೆ ಸರಿ ಎನಿಸದಿದ್ದರೆ, ಪ್ರತಿಕ್ರಿಯೆಸುವುದು ಬೇಡವೆನಿಸದೆ ಇದ್ದರೆ ದಲಿತ ಶೂದ್ರ, ಹಿಂದೂ, ಮುಸ್ಲಿಂ, ಬ್ರಾಹ್ಮಣ, ಮಹಿಳೆ ಎನ್ನುವ ಯಾವ ನೆಲೆಗಳನ್ನೂ ನೋಡದೆ ಟೀಕಿಸಿದ್ದೇನೆ. ನನ್ನನ್ನು 'ಪುರೋಹಿತ ಶಾಹಿ' ಎಂದರೂ ನಾನು ತೆಪ್ಪಗಾಗುವವನಲ್ಲ. ಬದಲು ಡಬ್ಬಲ್ ಸ್ಪೀಡ್‌ನಲ್ಲಿ ವಾದ ಮಾಡಲು ಶುರುಮಾಡುತ್ತೇನೆ. ತೀರಾ ಅನಿವಾರ್ಯ ಎನಿಸಿದರೆ ತರೀಕೆರೆ ಹೇಳುವ ಹಾಗೆ ದಕ್ಷಿಣ ಕನ್ನಡದವರಿಗೆ ರಕ್ತಗತವಾಗಿ ಬಂದಿರುವ ಯಕ್ಷಗಾನ ಶೈಲಿಯಲ್ಲಿ ತರ್ಕ ಮುಂದಿಟ್ಟು ಎದುರಾಳಿಗೆ ನನ್ನ ವಾದದೊಳಗೆ ಪ್ರವೇಶಿಸಲು ಸಾಧ್ಯವಾಗದಂತಹ ತರ್ಕವನ್ನು ಇಟ್ಟು ಬಿಡುತ್ತೇನೆ. ಆದರೆ ಬರಿಯ ತರ್ಕದಲ್ಲಿ ಸತ್ಯ ಇರುವುದಿಲ್ಲವೆಂದು ನನಗೂ ಗೊತ್ತಿರುತ್ತದೆ. ಈ ಸ್ವಭಾವ ನನಗೆ ಬಂದದ್ದು ನನ್ನಲ್ಲಿರುವ ಬ್ರಾಹ್ಮಣ ಪ್ರಜ್ಞೆಯಿಂದಲ್ಲ.

ಶೂದ್ರ ಪ್ರಜ್ಞೆಯಿಂದ. ನನಗೆ ವಿಶೇಷವೆನಿಸುವುದೆಂದರೆ ಈ ಶೂದ್ರ ಪ್ರಜ್ಞೆ ನನಗೆ ಬಂದದ್ದು ಶೂದ್ರ ಸಮುದಾಯಕ್ಕೆ ಸೇರಿದ ಪತ್ನಿಯಿಂದಲ್ಲ. ಬದಲು ಬ್ರಾಹ್ಮಣ ಹೆಂಗಸೇ ಆಗಿರುವ ತಾಯಿಯಿಂದ. ತಾಯಿ ಕಸ ಮುಸುರೆ ತಿಕ್ಕಿ ಬದುಕಿದ್ದಲ್ಲ. ಬದಲು ಬಾವಿಕೆಲಸ, ಮಣ್ಣು ಅಗೆಯುವ ಕೆಲಸ, ಸಿಮೆಂಟು ಸಾರಣೆ ಕೆಲಸ, ರಸ್ತೆಗೆ ಡಾಂಬರು ಹಾಕುವ ಕೆಲಸ ಮಾಡುತ್ತಿದ್ದರು. ನಾನು ಕೂಡ ಕಲ್ಲು ಕುಟ್ಟಲು ಹೋಗುತ್ತಿದ್ದೆ.

ಈ ಕೂಲಿ ಕೆಲಸದಿಂದಾಗಿ ಅಪ್ಪ, ಅಮ್ಮ, ನಾನು ಅಘೋಷಿತ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದದ್ದೂ ಉಂಟು. ಆಗ ಜಾಗೃತವಾದ ಶೂದ್ರ ಪ್ರಜ್ಞೆ ಈಗಲೂ ನನ್ನ ಜೊತೆ ಇದೆ. ಅದಕ್ಕೆ ಸಾಂಕೇತಿಕವಾಗಿ ಬ್ರಾಹ್ಮಣರ ಹಾಗೆ ನಾನು ಬೆಳಿಗ್ಗೆ ಸ್ನಾನ ಮಾಡುವುದಿಲ್ಲ. ನಮ್ಮ ಕಡೆಯ ಶೂದ್ರರ ಹಾಗೆ ರಾತ್ರಿಯೇ ಸ್ನಾನ ಮಾಡುತ್ತೇನೆ. ಈ ಪ್ರಜ್ಞೆಯನ್ನು ಸ್ವಲ್ಪ ಬಲಗೊಳಿಸಿಕೊಂಡರೆ ನೊಂದ ವ್ಯಕ್ತಿಯನ್ನು ಆತನ ಅನುಭವಗಳ ಮೂಲಕವೇ ಗ್ರಹಿಸಲು ಸಾಧ್ಯವೆನಿಸುತ್ತದೆ. ಆದರೆ ಮರುಕ್ಷಣವೇ ಬ್ರಾಹ್ಮಣ ಪ್ರಜ್ಞೆ ಅಡ್ಡ ಬಂದು ಬಿಡುತ್ತದೆ. ಅದು ಹೇಗೆಂದರೆ ನನ್ನನ್ನು ಹೀನಾಯವಾಗಿ ನೋಯಿಸಿದವರ ಬಗ್ಗೆ ನನಗೆ ಸಿಟ್ಟು ಇದೆಯೇ ಹೊರತು ದ್ವೇಷವಿಲ್ಲ.

ಆದರೆ ಕ್ರಿಯೆಗೆ ತೊಡಗಬೇಕಾದರೆ ಸಿಟ್ಟು ಸಾಲುವುದಿಲ್ಲ. ತಾತ್ಕಾಲಿಕ ದ್ವೇಷ ಬೇಕಾಗುತ್ತದೆ. ಅಂದರೆ ಚಿಂತನೆಯು ವರ್ಟಿಕಲ್ ಶೇಪ್ ತಳೆಯಬೇಕು. ಆದರೆ ಹಾಗೆ ಯೋಚಿಸಿದ ತಕ್ಷಣ ಚಿಂತನೆಯು ಹ[ಾರಿ]ಝಾಂಟಲ್ ಶೇಪ್ ತಳೆದುಬಿಡುತ್ತದೆ. ಚಿಂತನೆಗೆ ಹ[ಾರಿ]ಝಾಂಟಲ್ ಶೇಪ್ ಕೊಡುವ ಬಹಳ ಮುಖ್ಯ ಪ್ರ[ಜ್ಞೆಗ]ಳೆಂದರೆ ಬ್ರಾಹ್ಮಣ ಪ್ರಜ್ಞೆ ಮತ್ತು ಕ್ರಿಶ್ಚಿಯನ್ ಪ್ರಜ್ಞೆಗ[ಳು]. ಇದನ್ನು ಮೀರದಿದ್ದರೆ ಚಿಂತನೆಗೆ ತೀವ್ರತೆ ಸಿಗುವುದಿ[ಲ್ಲ]. ತೀವ್ರತೆ ಸಿಗದಿದ್ದರೆ ಶೂದ್ರ, ದಲಿತ, ಅಲ್ಪಸಂಖ್ಯಾತ ಪ್ರಜ್ಞೆ[ಗ]ಳನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. [ಈ] ಸಮಸ್ಯೆಗೆ ಏನಾದರೂ ಪರಿಹಾರವಿದೆಯಾ? ಇರಬಹುದು. ಯಾಕೆಂದರೆ ಮಂಗಳೂರಿನ ಮಾವಿನ ಮಿಡಿಯಾ–ತ[ರಕಾ]ರೆಯ ಚಿಕ್ಕನ್ ಎರಡೂ ನನಗಿಷ್ಟವಾಗುತ್ತದೆ. ಇಷ್ಟ ಆಗ[ದೆ] ಇರುವುದೆಂದರೆ ಅಮೆರಿಕದ 'ಫಿಝ್ಝು' ಮಾತ್ರ. ಬಹು[ಶಃ] ಅದಕ್ಕೆ 'ಫಿಝ್ಝು' ಕಾರಣವಾಗಿರದೆ 'ಫಿಝ್ಝು'ದ ಹಿಂದಿರು[ವ] ವ್ಯವಸ್ಥೆ ಕಾರಣವಿರಬೇಕು

ಇಡೀ ವಿಶ್ವವೇ ಒಂದು ಎಂಬ ಆದರ್ಶ ಸದಾ ಸ್ವಾಗತಾರ್ಹ. ಅಂಥಲ್ಲಿ ಅಮೆರಿಕನ್ನರು, ಬ್ರಿಟಿಷರು ಕೇವ[ಲ]

ನಾನು ಶೂದ್ರ ಸಮುದಾಯಕ್ಕೆ ಸೇರಿದ ಯುವತಿಯನ್ನು ಮದುವೆಯಾದಾಗ ಭಾರೀ ಪ್ರೋಗ್ರೆಸಿವ್ ಎನಿಸಿಕೊಂಡವರೊಬ್ಬರು "ಅ[..]ವಿಂದ ಶೂದ್ರ ಹುಡುಗಿಯನ್ನು ಮದುವೆಯಾ[ದ]ದುದರಿಂದ ಆತನಿಗೆ ಊರಿನಲ್ಲಿ ಯಾರ ಮನೆಯಲ್ಲೂ ಕುಡಿಯಲು ನೀರೂ ಕೊಡುವುದಿಲ್ಲ" ಎಂದು ಹೇಳುತ್ತಾ ಬಂದುದನ್ನು ಖಚಿತ ಪಡಿಸಿಕೊಂಡಿದ್ದೇನೆ. ಅಫ್‌ಕೋರ್ಸ್ ಅವರ ಈ ನಡವಳಿಕೆಗೆ ಜಾತಿವಾದಿ ನಿಲುವು ಕಾರಣವಾಗಿರದೆ ಒಂದು ಕಾಲದಲ್ಲಿ ಅವರಿಂದ ನೂರೈವತ್ತು ರೂಪಾಯಿಗಳ ಸಹಾಯ ಪಡೆದ ನಾನು ಅವರ ಬೌದ್ಧಿಕ ಪಾರಮ್ಯವನ್ನು ಒಪ್ಪಿಕೊಳ್ಳಲಿಲ್ಲ ಎನ್ನುವ ಕೋಪವೇ ಕಾರಣವಾಗಿದೆ. ಒಬ್ಬ ಪ್ರೊಗ್ರೆಸಿವ್ ಥಿಂಕರ್‌ಗೂ ಬಾರದೆ ಇರುವುದಕ್ಕೆ ಕಾರಣವು ಪುರೋಹಿತಶಾಹಿಯು ಬಯಸುವ ದಾಸ್ಯದ ಧೋರಣೆಯ ಮುಸುಕು ಎಂದು ನನಗನಿಸುತ್ತದೆ.

ಮನುಷ್ಯರಾಗಿ ಸ್ನೇಹದಿಂದ ಈ ದೇಶಕ್ಕೆ ಬಂದರೆ ಖಂಡಿತವಾಗಿಯೂ ಅವರು ತರುವ 'ಫಿಝ್ಝು' ಕೂಡ ಇಷ್ಟವಾಗುತ್ತದೆ. ಆದರೆ ಪ್ರಭುತ್ವದ ದೃಷ್ಟಿ ಇಟ್ಟುಕೊಂಡು ಬರುವುದಾದರೆ ಆಗ ಅಮೆರಿಕನ್ ಡಾಮಿನೇಷನ್‌ಗೆ ಪ್ರತಿಭಟನೆ ತೋರಿಸಬೇಕಾಗುತ್ತದೆ. ಎಲ್ಲ ಜಾತಿ ಮತ್ತು ಧರ್ಮಗಳಲ್ಲಿರುವ ಪುರೋಹಿತಶಾಹಿ ಧೋರಣೆಗೂ ಸದ್ಯಕ್ಕೆ ಅಮೆರಿಕದ, ಹಿಂದೆ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಗೂ ಇರುವ ವ್ಯತ್ಯಾಸ ಸಣ್ಣದು. ಪುರೋಹಿತಶಾಹಿ ಧೋರಣೆ ತನ್ನ ವ್ಯಾಪ್ತಿಗೆ ಒಳಪಡುವ ಜನ ಸಮುದಾಯವನ್ನು ತನ್ನ ಬಿಗಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ಬಯಸುತ್ತದೆ. ಅದಕ್ಕಾಗಿ ಸಹಾಯ ಮಾಡುವುದೂ ಉಂಟು. ದಂಡನೆ ವಿಧಿಸುವುದೂ ಉಂಟು. ಅದು ಬೇರೆ ಬೇರೆ ಪುರೋಹಿತಶಾಹಿ ವ್ಯವಸ್ಥೆಗಳು ಅನುಸರಿಸುವ ತಂತ್ರವಾಗಿರುತ್ತವೆ ಹೊರತು ಮೂಲ ಮನೋಧರ್ಮದಲ್ಲಿ ವ್ಯತ್ಯಾಸವೇನಿಲ್ಲ.



ಇಂತಹ ಮನೋಧರ್ಮ ಪ್ರೋಗ್ರೆಸಿವ್ ಥಿಂಕರ್ಸ್ ಅನ್ನುವ ಕೆಲವರಲ್ಲಾದರೂ ಟುತ್ತದೆ. ಎನ್ನುವುದು ನನ್ನ ಅನುಭವ. ನಾನು ಶೂದ್ರ ಸಮುದಾಯಕ್ಕೆ ಸೇರಿದ ುವತಿಯನ್ನು ಮದುವೆಯಾದಾಗ ಭಾರೀ ಪ್ರೋಗ್ರೆಸಿವ್ ಎನಿಸಿಕೊಂಡವರೊಬ್ಬರು ರವಿಂದ ಶೂದ್ರ ಹುಡುಗಿ ಯನ್ನು ಮದುವೆಯಾದುದರಿಂದ ಆತನಿಗೆ ಊರಿನಲ್ಲಿ ಾರ ಮನೆಯಲ್ಲೂ ಕುಡಿಯಲು ನೀರೂ ಕೊಡುವುದಿಲ್ಲ" ಎಂದು ಹೇಳುತ್ತಾ ಬಂದು ು ಖಚಿತ ಪಡಿಸಿ ಕೊಂಡಿದ್ದೇನೆ. ಅಫ್‌ಕೋರ್ಸ್ ಅವರ ಈ ನಡವಳಿಕೆಗೆ ಜಾತಿವಾದಿ ುವು ಕಾರಣವಾಗಿರದೆ ಒಂದು ಕಾಲದಲ್ಲಿ ಅವರಿಂದ ನೂರೈವತ್ತು ರೂಪಾಯಿಗಳ ಾಯ ಪಡೆದ ನಾನು ಅವರ ಬೌದ್ಧಿಕ ಪಾರಮ್ಯವನ್ನು ಒಪ್ಪಿಕೊಳ್ಳಲಿಲ್ಲ ಎನ್ನುವ ಪವೇ ಕಾರಣವಾಗಿದೆ.

ಬೌದ್ಧಿಕ ಪಾರಮ್ಯವನ್ನು ಒಪ್ಪಿಕೊಳ್ಳದೆಯೂ ಕೃತಜ್ಞತೆ ಉಳಿಸಿಕೊಳ್ಳಲು ಸಾಧ್ಯವಿದೆ ಬ ಸಂಗತಿ ಒಬ್ಬ ಪ್ರೊಗ್ರೆಸಿವ್ ಥಿಂಕರ್‌ಗೂ ಬಾರದೆ ಇರುವುದಕ್ಕೆ ಕಾರಣವು ಪುರೋ ಶಾಹಿಯು ಬಯಸುವ ದಾಸ್ಯದ ಧೋರಣೆಯ ಮುಸುಕು ಎಂದು ನನಗನಿಸುತ್ತದೆ. ಥಿಂಕರ್ ಒಂದಷ್ಟು ಮಂದಿ ಶೂದ್ರ ಸಮುದಾಯಕ್ಕೆ ಸೇರಿದ ಪ್ರೊಗ್ರೆಸಿವ್ ಥಿಂಕರ್ ನ್ನೂ ಶಿಷ್ಯಂದಿರಾಗಿ ಇರಿಸಿಕೊಂಡಿದ್ದು ಅವರು ಕಾನೂನು ರೀತ್ಯಾಸ್ವೀಕೃತವಾದ ನನ್ನ ುವೆಯನ್ನು "ಒಬ್ಬ ಬ್ರಾಹ್ಮಣ ಹುಡುಗ ಶೂದ್ರ ಹುಡುಗಿಯನ್ನು ಲಪಟಾಯಿಸಿದ" ುವ ಮಟ್ಟಕ್ಕೂ ಇಳಿದದ್ದುಂಟು. ಇಲ್ಲಿ ಮಾತ್ರ ಮೂರು ಸಂಗತಿಗಳು ಕೆಲಸ ಮಾಡಿದ್ದು ನಕ್ಕೆ ತಂದುಕೊಂಡಿದ್ದೇನೆ.

ಮೊದಲನೆಯದು ಜಾತಿ. ಎರಡನೆಯದು ತಮ್ಮ ಗುರುವಿನ ಬೌದ್ಧಿಕ ಪಾರಮ್ಯವನ್ನು ಕೊಳ್ಳದ, ತಮ್ಮನ್ನು ಜಾಲ್ಯಸದ ಅವಮಾನ, ಮೂರನೆಯದು ನನ್ನೆದುರು ಬೌದ್ಧಿಕ ಸದ್ದು ಹೊಡೆಯಲು ಸಾಧ್ಯವಾಗದ ಅಸಹಾಯಕತೆ. ಇಂತಹ ಪ್ರೊಗ್ರೆಸಿವ್ ಥಿಂಕ ಹೆಸರು ಹೇಳಿದರೆ ನೀವೆಲ್ಲ ಆಶ್ಚರ್ಯದಿಂದ ಬೆಚ್ಚಿ ಬೀಳುತ್ತೀರಿ. ಆದರೆ ಅವರ ಹೆಸರು ಹೇಳಿ ಅವರ ಬಗ್ಗೆ ಇರುವ ಸದಾಭಿಪ್ರಾಯವನ್ನು ಕೆಡಿಸಿ ನನಗೆ ಆಗಬೇಕಾದ್ದೇನೂ ಇಲ್ಲ. ಅಂದರೆ ಪ್ರೊಗ್ರೆಸಿವ್ ಥಿಂಕರ್‌ಗಳಲ್ಲಿ ಕೂಡ ಜಾತಿ–ಧರ್ಮಗಳ ಆಚೆಗೆ ಪುರೋಹಿತಶಾಹಿ ವ್ಯವಸ್ಥೆ ಬಯಸುವ ದಾಸ್ಯದ ಅಪೇಕ್ಷೆ ಇರುತ್ತದೆ. ಅದು ನನ್ನಲ್ಲಿ ನಿಮ್ಮಲ್ಲಿ ಕೂಡ ಇರಬಾರದೆಂದೇನೂ ಇಲ್ಲ. ಆದರೆ ಬೇರೆಯವರು ಹೇಳದ ಹೊರತು ನಮಗದು ಅರ್ಥವಾಗುವುದಿಲ್ಲ, ಅಷ್ಟೆ. ಆದಾಗ್ಯೂ ಇಂಡಿವಿಜುವಲ್ ನೆಲೆಯಲ್ಲಿರುವ ಈ ಧೋರಣೆ ಸಾಮುದಾಯಿಕವಾಗಿ ಜಾತಿ–ಧರ್ಮಗಳ ಉಪಕರಣದ ಮೂಲಕ ಜಾರಿಯಾಗುವುದು ಅಪಾಯಕಾರಿ ಸ್ಥಿತಿಯಾಗಿರುತ್ತದೆ.

ಅಂತಹ ಪುರೋಹಿತ ಶಾಹಿ ತನ್ನ ವ್ಯಾಪ್ತಿಗೆ ಒಳಪಡುವವರಿಗೆ ಮೆಟೀರಿಯಲಿಸ್ಟಿಕ್ ಅಭ್ಯುದಯವನ್ನು ಕೋರುವುದಿಲ್ಲ. ಆದರೆ ತನ್ನ ವ್ಯಾಪ್ತಿಯ ಜನರ ಜ್ಞಾನ ಸಂಕೇತಗಳನ್ನು ನಾಶಪಡಿಸುವುದಿಲ್ಲ. ಸಾಮ್ರಾಜ್ಯ ಶಾಹಿತ್ವದ ಸ್ವಭಾವ ಹೀಗಲ್ಲ. ದಾಸ್ಯವನ್ನು ಹೇರಲು ಅದರ ಬಳಿ ಜಾತಿ–ಧರ್ಮಗಳ ಉಪಕರಣಗಳಿಲ್ಲ. ಅದನ್ನು ಬೇರೆ ರೀತಿಯಲ್ಲಿ ಸಮದೂಗಿಸಿಕೊಳ್ಳುವ ಕೆಲಸವನ್ನು ಅದು ಮಾಡುತ್ತದೆ. ಅದು ತನ್ನ ವ್ಯಾಪ್ತಿಗೆ ಒಳಪಡುವ ಜನರ ಮೆಟೀರಿಯಲಿಸ್ಟಿಕ್ ಅಭ್ಯುದಯಕ್ಕೆ ಅವಕಾಶ ಕೊಡುತ್ತದೆ. ಆದರೆ ಆ ಜನ ಸಮುದಾಯಗಳ ಜ್ಞಾನ ಸಂಕೇತಗಳನ್ನು ನಾಶಪಡಿಸಿ ಆ ಸಮುದಾಯಗಳನ್ನು ತನ್ನ ಧೋರಣೆಯನ್ನು ಪ್ರತಿಪಾದಿಸಲು ಉಪಕರಣಗಳನ್ನಾಗಿ ಬಳಸಿಕೊಳ್ಳುತ್ತದೆ. ಅಂತಲೇ ಇವೆರಡೂ ಸಮಾನ ರೀತ್ಯ ಅಪಾಯಕಾರಿಗಳು. ಅದಕ್ಕಾಗಿಯೇ ನಮ್ಮೆಲ್ಲ ಜ್ಞಾನ ಸಂಕೇತಗಳನ್ನು ನಾವು ಕಲ್ಚರ್ ಆಗಿ ಅರ್ಥೈಸಿಕೊಳ್ಳಬೇಕೇ ಹೊರತು ರಿಲಿಜನ್ ಆಗಿಯಾಗಲಿ, ದಾಸ್ಯದ ಸಂಕೇತವಾಗಿಯಾಗಲಿ ಅಲ್ಲ. ಮಂಗಳೂರಿನ ಮಾವಿನ ಮಿಡಿಯೂ ತರಿಕೆರೆಯ ಚಿಕನ್ನೂ ಮುಖ್ಯವಾಗುವುದು ಆವಾಗ.

ತರಿಕೆರೆಯವರ ಭೇಟಿಯಲ್ಲಿ ನಾನು ತುಂಬ ಇಷ್ಟಪಟ್ಟ ಇನ್ನೊಂದು ಸಂಗತಿಯನ್ನು ಹೇಳದಿದ್ದರೆ ತಪ್ಪಾಗುತ್ತದೆ. ಈ ಪ್ರೊಫೆಸರ್‌ಗಳಲ್ಲಿ ಸಾಮಾನ್ಯವಾಗಿ ಒಂದು ಮನೋಭಾವ ಇರುತ್ತದೆ. ಅದೆಂದರೆ ಹೈಸ್ಕೂಲ್ ಟೀಚರ್‌ಗಳು, ಪ್ರೈಮರಿ ಸ್ಕೂಲ್ ಟೀಚರ್‌ಗಳೆಲ್ಲ ಎಷ್ಟಾದರೂ ತಮ್ಮಷ್ಟು ಗೊತ್ತಿಲ್ಲದವರು ಎಂಬ ಮನೋಭಾವ. ನನ್ನನ್ನೊ ಅಥವಾ ಇನ್ನೊಬ್ಬ ಶಿಕ್ಷಕರನ್ನೋ ದೃಷ್ಟಿಯಲ್ಲಿಟ್ಟುಕೊಂಡು ತಿಳಿವಳಿಕೆಯನ್ನು ಪರಿಶೀಲಿಸಿ ಈ ರೀತಿಯ ಮನೋಭಾವ ತಳೆದರೆ ತಪ್ಪಿಲ್ಲ.

ಆದರೆ ಒಬ್ಬ ಟೀಚರ್ ಆತ ಹೈಸ್ಕೂಲು, ಪ್ರೈಮರಿ ಸ್ಕೂಲ್‌ಗಳಲ್ಲಿ ಇರುವವನು ಎಂಬ ಕಾರಣಕ್ಕಾಗಿಯೇ ಇಂತಹ ಮನೋ ಭಾವ ತಳೆಯುವುದು ತಪ್ಪು. ಹಾಗಂತ ಪ್ರೊಫೆಸರ್‌ಗಳೆಲ್ಲ ತಾರತಮ್ಯ ಮಾಡುತ್ತಾರೆ ಎಂದು ನನ್ನ ಅಭಿಪ್ರಾಯವಲ್ಲ. ಅವರು ಆತ್ಮೀಯ ರಾಗಿಯೇ ಇರುತ್ತಾರೆ, ಪ್ರೀತಿಯಿಂದ, ಸೌಜನ್ಯದಿಂದ ನಡೆದು ಕೊಳ್ಳುತ್ತಾರೆ. ಆದರೆ ಅವರಿಗೇ ಅರಿವಿಲ್ಲದ ಹಾಗೆ ಈ ಮನೋಭಾವ ಪ್ರಕಟವಾಗಿ ಬಿಡುತ್ತದೆ. ಅದೇನು ಪ್ರಾರಬ್ಧವೋ ಸ್ವಲ್ಪ ಸೂಕ್ಷ್ಮವಾಗಿ ಮನುಷ್ಯನ ವರ್ತನೆಯನ್ನು ಗಮನಿಸುವ ನನ್ನಂತಹವನಿಗೆ ಅವರ ನಡವಳಿಕೆಯಿಂದ ಇದು ಗೊತ್ತಾಗಿಬಿಡುತ್ತದೆ. ಅದರೆ ತರಿಕೆರೆಯವರಲ್ಲಿ ಈ ಮನೋಭಾವ ಇಲ್ಲ. ಹಾಗೆ ನೋಡಿದರೆ ವಯಸ್ಸಿನಲ್ಲಿ ಮತ್ತು ತಿಳಿವಳಿಕೆಯಲ್ಲಿ ಅವರಿಗಿಂತ ಸಣ್ಣವನೇ ಆದ ನನ್ನ ಜೊತೆ ಹಾಗೆ ವರ್ತಿಸಿದ್ದರೆ ತಪ್ಪೇನೂ ಇರಲಿಲ್ಲ.

ಆದರೆ ತರಿಕೆರೆ ಚರ್ಚೆಗೆ ಎತ್ತಿಕೊಂಡ ವಿಷಯಗಳು ಮತ್ತು ಚರ್ಚೆ ನಡೆದ ಕ್ರಮವೇ ಸ್ವಭಾವ ಸಹಜವಾಗಿಯೇ ಅವರಲ್ಲಿ ಈ ರೀತಿಯ ತಾರತಮ್ಯದ ಮನೋಭಾವ ಇಲ್ಲ ಎನ್ನುವುದನ್ನು ಸೂಚಿಸುತ್ತಿತ್ತು. ಆದರೆ ಸಮಸ್ಯೆಗಳನ್ನು ಚರ್ಚಿಸಲು, ಜೀವಪರ ಚಿಂತನೆಯನ್ನು ಜೀವಂತವಾಗಿಡುವ ಪ್ರಯತ್ನವನ್ನು ಮಾಡುವ ಮಾರ್ಗಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತೇ ಹೊರತು ನಮ್ಮೆಲ್ಲ ಸಹಜೀವಿಗಳ ಒಳಿತಿಗಾಗಿ ಏನನ್ನು ಮಾಡ ಬೇಕು ಎಂಬ ಪ್ರಶ್ನೆಗೆ ನನಗೂ; ಬಹುಶಃ ತರಿಕೆರೆಗೂ ಉತ್ತರ ಸಿಗಲಿಲ್ಲ. ಆದರೆ ಒಬ್ಬ ಕ್ಷುಲ್ಲಕ ಜೀವಿಯಾಗಿ ಏನನ್ನಾದರೂ ಮಾಡಬೇಕು ಎನ್ನುವ ನನ್ನ ಯೋಚನೆಗೆ ಒಂದು ಭದ್ರ ಸಂವಿಧಾನವನ್ನು ಹುಡುಕಲು ಈ ಭೇಟಿ ತುಂಬಾ ಪ್ರಯೋಜನವಾಯಿತು. ಅಂತಹ ನೆನಪು ಹೊತ್ತೇ ಹಿಂದಿರುಗಿದೆ–ನನ್ನ ದಕ್ಷಿಣ ಕನ್ನಡಕ್ಕೆ. □

'**ಕೊ**ರಗರ ಅಜಲು ಚಾಕರಿಯು ಅವರ ಸಂಪಾದನೆಯ ಮೂಲ, ಅದಕ್ಯಾಕೆ ಕಲ್ಲು ಹಾಕುತ್ತೀರಿ' ಎಂದು ಮೇಲ್ಜಾತಿಯವರು ಇಂದಿಗೂ ವಾದಿಸುತ್ತಿದ್ದರೆ, ಕೊರಗ ಜನಾಂಗದ ನಾಯಕರು ಕಣ್ಣಲ್ಲೇ ಅಸಹನೆ, ಆಕ್ರೋಶದ ಕಿಡಿ ಹಾರಿಸುತ್ತ ಆ ವಾದಕ್ಕೆ ಕೊಡುವ ಪ್ರತಿಕ್ರಿಯೆ ಹೀಗಿದೆ. 'ಮೇಲ್ಜಾತಿಯವರು ಅನ್ನುವಂತೆ ಅಜಲು ಚಾಕರಿ ಕೊರಗರ ಸಂಪಾದನೆಯ ಮೂಲವೆಂದಾದರೆ ಕೊರಗರು ಇಂದು ಎಲ್ಲರಂತೆ ಒಂದು ಸಣ್ಣ ಮನೆಯನ್ನಾದರೂ, ಸರಕಾರದ ಸಹಾಯ ಇಲ್ಲದೆಯೇ ಕಟ್ಟಿಸಿಕೊಳ್ಳುತ್ತಿದ್ದರು. ಇತರ ಸಮುದಾಯಗಳಂತೆ ಕೊರಗ ಸಮುದಾಯದಿಂದಲೂ ಒಂದಿಷ್ಟು ವೈದ್ಯರು, ಇಂಜಿನಿಯರುಗಳು ಹೊರಬರುತ್ತಿದ್ದರು. ಆದರೆ ಇದುವರೆಗೂ ಈ ಸ್ವತಂತ್ರ ಭಾರತದಲ್ಲಿ ನಮ್ಮ ಸಮುದಾಯದಿಂದ ಹೊರಬಂದಿರುವುದು ಒಬ್ಬನೇ ಒಬ್ಬ ಇಂಜಿನಿಯರ್ ಮತ್ತೊಬ್ಬ ವಕೀಲ ಮಾತ್ರ; ಇನ್ನು ವಿಶ್ವವಿದ್ಯಾಲಯದ ಮೆಟ್ಟಿಲೇರಿದವರು ಬೆರಳೆಣಿಕೆಯಷ್ಟು ಮಂದಿ ಮಾತ್ರ.'

ಸ್ವತಂತ್ರ ಭಾರತದ ಸಂವಿಧಾನದತ್ತ ಶಾಸನಗಳು, ನಗರದ ಆಸುಪಾಸಿನಲ್ಲಿ ಬದುಕುತ್ತಿರುವ ಕೊರಗರಲ್ಲಿ ಒಂದಷ್ಟು ಆತ್ಮವಿಶ್ವಾಸವನ್ನು ಹುಟ್ಟುಹಾಕಿ ಅವರ ಬದುಕಿನ ಶೈಲಿಯನ್ನು ಸಾಕಷ್ಟು ಬದಲಿಸಿದರೂ, ಗ್ರಾಮೀಣ ಪ್ರದೇಶದ ಕೊರಗರು ಇಂದಿಗೂ ನಾವು ಈ ಭೂಮಿಗೆ ಭಾರವಾದವರು, ಯಾರಿಗೂ ಬೇಡವಾದ ನತದೃಷ್ಟರು ಎಲ್ಲರಿಗಿಂತಲೂ ಕೀಳು ಕುಲದವರು ಎಂಬ ಭಾವನೆಯಿಂದ ಮಾತ್ರ ಮುಕ್ತರಾಗಿಲ್ಲ.

ನಗರ ಪ್ರದೇಶದಲ್ಲಿರುವ ಹೆಚ್ಚಿನ ಕೊರಗರು ಕೊಂಚ ಅಕ್ಷರಸ್ಥರಾಗಿ, ನಗರದ ಥಳುಕಿಗೆ ಹೊಂದಿಕೊಂಡು ತಮ್ಮ ಅಳಿವು ಉಳಿವಿನ ಪ್ರಶ್ನೆ ಎದುರಾದಾಗ ಸರಕಾರದ ಅಥವಾ ಖಾಸಗಿ ಕ್ಷೇತ್ರದಲ್ಲಿ ಕೆಳದರ್ಜೆಯ ಕೆಲಸವನ್ನಾದರು ಪಡೆದುಕೊಂಡು ಅಥವಾ ಸರಕಾರ ಅವರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವ ಯೋಜನಗಳಲ್ಲಿ ಒಂದಷ್ಟನ್ನು ಆಯ್ಕೆ ಮಾಡಿಕೊಂಡು ತಮ್ಮ ಬಡತನವ[ನ್ನು] ನೀಗಿಸಿಕೊಳ್ಳುವ ಪ್ರಯತ್ನದಲ್ಲಿದ್ದರೆ ಹಳ್ಳಿಗಾಡಿನ ಕೊರಗರ ಆರ್ಥಿ[ಕ] ಸ್ಥಿತಿ, ಬಡತನದ ತೀವ್ರತೆ ತೀರಾ ಶೋಚನೀಯವಾದುದು.

ಅಂದು ಉಳ್ಳವರ ಅಂಗಳದಲ್ಲಿ ಜೀತವನ್ನೋ ಅಜಲ[ು] ಚಾಕರಿಯನ್ನೋ ಮಾಡಿಕೊಂಡಿದ್ದ ಕೊರಗರನ್ನು ತೀ[ರಾ] ಹೀನಜಾತಿಯ ಅಸ್ಪೃಶ್ಯರು ಎಂಬ ಕಾರಣಕ್ಕಾಗಿ ಭೂಮಾಲೀಕ[ರು] ಕೃಷಿ ಕೆಲಸಕ್ಕೂ ಸೇರಿಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ಕೃಷಿ ಕ್ಷೇತ್ರ[ದ] ನೈಪುಣ್ಯತೆಯೂ ಅವರಿಗೆ ದೊರಕಿರಲಿಲ್ಲ. ಕಾಡಲ್ಲಿ ದೊರೆವ ಬಿ[ದಿರು,] ಬಿಡಿರು, ಬೀಳಲು, ಬೆತ್ತಗಳನ್ನು ಬಳಸಿಕೊಂಡು ಬುಟ್ಟಿ, ಮೊ[ರ,] ತೊಟ್ಟಿಲು, ಕುತ್ತರಿಗಳನ್ನು ತಯಾರಿಸಿಕೊಂಡು ಜೀವನ ನಿರ್ವಹಣ[ೆಯ] ದಾರಿ ಕಂಡುಕೊಂಡಿದ್ದರು. ಕಾಡಿನ ಉತ್ಪನ್ನಗಳಾದ ಜೇನು, ಮೇ[ಣ,] ಔಷಧೀಯ ಬೇರು–ನಾರು–ತೊಗಟೆ–ಹಣ್ಣುಗಳು ಕೂಡಾ ಅವ[ರ] ಹೊಟ್ಟೆಗಷ್ಟು ಗಂಜಿ ತಿಳಿಯನ್ನು ಒದಗಿಸುತ್ತಿದ್ದವು. ಆದರೆ ಸ್ವತಂ[ತ್ರ] ಭಾರತದಲ್ಲಿ ನಮ್ಮ ಸರ್ಕಾರ ಕೈಗಾರೀಕರಣಕ್ಕೇ ಹೆಚ್ಚಿನ ಒತ್ತು ಕೊ[ಡ] ತೊಡಗಿದಾಗ ಕಾಡುನಾಶದ ಪ್ರಕ್ರಿಯೆ ಆರಂಭಗೊಳ್ಳತೊಡಗಿತ[ು.] ಕಾಡುನಾಶವಾಗಿ ಕಾಂಕ್ರೀಟ್ ಕಾಡುಗಳು ನಿರ್ಮಾಣವಾಗತೊಡ[ಗಿ]ದಾಗ ಅತ್ತ ಕಾಡೂ ಇಲ್ಲದೆ ಇತ್ತ ಸ್ವಂತ ಭೂಮಿಯೂ ಇಲ್ಲ[ದೆ] ಕೊರಗರ ಬದುಕು ಅಧೋಗತಿಗಿಳಿಯಿತು.

ಕಾಡು ಇದ್ದೆಡೆ ಸಾಗಿ ಅರಣ್ಯ ಉತ್ಪನ್ನಗಳನ್ನು ತರಬೇಕೆಂದ[ರೆ] ಅರಣ್ಯ ಇಲಾಖೆಯ ನಿರ್ಬಂಧ. ಹಾಗೋ ಹೀಗೋ ಅರಣ[್ಯ] ಇಲಾಖೆಯವರ ಕಣ್ತಪ್ಪಿಸಿ ಅರಣ್ಯದಿಂದ ಬಿದಿರು ಬೆತ್ತಗಳನ್ನು ತಂದ[ು] ಬುಟ್ಟಿ, ಮೊರ ಹೆಣೆದರೆ ನಾಡಿನ ಮಾರುಕಟ್ಟೆಯಲ್ಲಿ ಅವುಗಳಿ[ಗೆ] ಬೇಡಿಕೆಯಿಲ್ಲ.

ಊರಿನ ಅಜಲನ್ನು ನಿರಾಕರಿಸುವ ಕೊರಗರ ಬುಟ್ಟಿಯು[ೂ] ಬೇಡ, ಮೊರವೂ ಬೇಡ ಎಂದು ಕೆಲವರು ಅವರಿಂದ ಕರಕುಶ[ಲ] ಉತ್ಪನ್ನಗಳನ್ನು ಕೊಳ್ಳಲು ನಿರಾಕರಿಸಿದರೆ, ಮತ್ತೆ ಕೆಲವರು "ಬಾಳ[ಿ]

ಜನಾಂಗ

ದಾರುಣ ಹಸಿವಿನ ಜತೆ ಅಮಾನವೀಯವಾದ ಅಸ್ಪೃಶ್ಯತೆಯ ಕರಾಳ ನಾಡಿಗಿಂತ ನಮ್ಮನ್ನು ಪ್ರೀತಿಯಿಂದ ಸಹ ಬಾಳ್ವೆಗೆ ಕರೆಯುತ್ತಿರುವ ಕಾಡು ಮತ್ತು ಕಾಡಿನ ಪ್ರಾಣಿಗಳೇ ಬಲು ಮಿಗಿಲು ಎಂದು ಕಾಡಿನಂಚಿಗೇ ಸೇರಿ ಅಲ್ಲೇ–ಜೀವನ ಸಾಗಿಸ ತೊಡಗಿದ್ದ ಕೊರಗರನ್ನು ಮನುವಿನ ವರ್ಣವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಂತಹ ಜಾತಿ ಶ್ರೇಷ್ಠರು ನೆಮ್ಮದಿಯಲ್ಲಿರಲು ಬಿಟ್ಟಾರೆಯೇ? ವರ್ಣಾಶ್ರಮ ವ್ಯವಸ್ಥೆಯು ಸೂಚಿಸಿರುವ ದೇವರ ಮತ್ತು ಉಳ್ಳವರ ಮನೆಯ ಜೀತ ಮತ್ತು ಅಜಲಿನಂತಹ ಸಾಂಪ್ರದಾಯಿಕ ಬಿಟ್ಟಿಚಾಕರಿಯನ್ನು ಮಾಡುವವರಾರು?

○ಡಾ|| ಎಚ್.ನಾಗವೇಣಿ

ಕೇಳುವವರಿಲ್ಲದ ಕೊರಗರು

೧

ರುವ ರಬ್ಬರು, ಪ್ಲಾಸ್ಟಿಕ್ ಬುಟ್ಟಿ ಮೂರು ಕಾಸಿಗೆ ಗುವಾಗ, ಆರು ಕಾಸಿಗೆ ಕೊರಗರ ಬುಟ್ಟಿ ಯಾರಿಗೆ ೕಕು" ಎಂದು ಹೀಗಳೆದು ಕೊನೆಗೆ ಮೂರು ಕಾಸಿನ ಲೆಗೇ ಅವುಗಳನ್ನು ಪಡೆದುಕೊಳ್ಳುತ್ತಿದ್ದಾರೆ ಎಂಬ ಳಲು ಈ ಹಸಿದ ಹೊಟ್ಟೆಯ ಕೊರಗರುದ್ದು.

ನಮ್ಮ ಗಾಂಧಿಯವರಿಗೊಂದು ಕನಸಿತ್ತು. ಜಾತಿ ತ್ತು ಅಸ್ಪೃಶ್ಯತೆ ಮಾನವ ಕುಲದ ನಿಜವಾದ ಶತ್ರುಗಳು ಂದೇ ನಂಬಿದ್ದ ಗಾಂಧಿಯವರಿಗೆ, ಭಾರತದ ತಿವ್ಯವಸ್ಥೆಯಲ್ಲಿದ್ದ ಮೇಲುಕೀಳು, ಅಸ್ಪೃಶ್ಯತೆಯ ಬಗ್ಗೆ ವ್ರ ವಿರೋಧವಿದ್ದರೂ, ಹಿಂದೂ ಸಮಾಜದ ರ್ಣವ್ಯವಸ್ಥೆಯನ್ನು ಆಧರಿಸಿರುವ ಸಾಂಪ್ರದಾಯಿಕ ವೃತ್ತಿ ಥವಾ ಶ್ರಮದ ಬಗ್ಗೆ ಅವರಿಗೆ ಅಪಾರವಾದ ಬಿಕೆಯಿತ್ತಲ್ಲದೆ, ಆ ಸಾಂಪ್ರದಾಯಿಕ ಕಸುಬುಗಳನ್ನು ಧರಿಸಿಯೇ ತಾನು ರಾಮರಾಜ್ಯವನ್ನು ಕಟ್ಟಬೇಕೆಂಬ ಕಸನ್ನು ಅವರು ಕಾಣುತ್ತಿದ್ದರು.

ತನ್ನ ಜೀವನಾರ್ಥಕ್ಕಾಗಿ, ತನ್ನ ಕುಲದ ಅಧಿಕೃತ ಸುಬನ್ನೇ ಒಬ್ಬ ನಿರ್ವಹಿಸಿಕೊಂಡು ಬರಬೇಕೆಂದು ನಮ್ಮ ದೂ ಸಮಾಜದ ವರ್ಣವ್ಯವಸ್ಥೆ ಹೇಳುತ್ತಿದ್ದರೆ, ಂಧಿಯವರು ಆ ವ್ಯವಸ್ಥೆಯಲ್ಲಿನ ಸಾಂಪ್ರದಾಯಿಕ ಸುಬಿನ ನಿರ್ವಹಣೆಯನ್ನು ಸಮರ್ಥಿಸುತ್ತರಾದರೂ, "ಆ ವಸ್ಥೆಯಲ್ಲಿರುವ ಎಲ್ಲ ಕಸುಬುಗಳಿಗೂ ಸಮಾನವಾದ ನತೆ ಇರಬೇಕು ಎಂಬ ಅರಿವಿನೊಂದಿಗೆ ನಾವು ಂದುವರಿದಲ್ಲಿ ಮಾತ್ರವೇ ಇದು ನಮ್ಮ ಸಮಾಜದ ಹಾರ್ದತೆಯನ್ನು ಉಳಿಸಿಕೊಳ್ಳುವ ಹಾಗೂ ವ್ಯಕ್ತಿಗಳ ಕ್ಯೋದ್ಧಾರಕ್ಕೂ ಕಾರಣವಾಗಬಲ್ಲದು" ಎಂಬ ಮತವನ್ನೂ ಅವರು ಉಳ್ಳವರಾಗಿದ್ದರು.

ಆದರೆ ಗಾಂಧಿಯವರ ಜೀವಿತಕಾಲದಲ್ಲಿಯೇ ಆ ಣೀಕೃತ ಜಾತಿ ವ್ಯವಸ್ಥೆಯಡಿ ಒಬ್ಬ ಬ್ರಾಹ್ಮಣನ ರೋಹಿತ್ಯಕ್ಕೆ ದಕ್ಕಿದ ಘನತೆ, ಒಬ್ಬ ಕಮ್ಮಾರನಿಗೆ ಲಿಲ್ಲ. ಒಬ್ಬ ಕಮ್ಮಾರನಿಗೆ ದಕ್ಕಿದ ಘನತೆ ಒಬ್ಬ ಸನಿಗೆ ದಕ್ಕಲಿಲ್ಲ. ಅಂತಹ ವ್ಯವಸ್ಥೆಯಲ್ಲಿ ಊರ ಲಿನ ಕೆಲಸ ನಿರ್ವಹಿಸಬೇಕಾದ ಕೊರಗನ ಕತೆ, ಘನತೆ ಸಮಾಜದಲ್ಲಿ ಹೇಗಿದ್ದೀತು?

ಲ್ಯದ ಕಣ್ಣಲ್ಲಿ ಅಜಲು

ಊರ ಅಜಲಿನ ಕೊರಗರ ದಯನೀಯ ಯನ್ನು ನಾನು ಬಾಲ್ಯದಿಂದಲೇ ಕಂಡವಳು. ಊರಿಗೆ ಹರಿದಿನ, ಜಾತ್ರೆ, ಕೋಲ, ಕಂಬಳ, ನೇಮ ರಿಪೂಜೆಯ ಸಂಭ್ರಮ ಏರಲಿದೆ ಎಂದರೆ ಸಾಕು – ಲಿನ ಮುದರ ಎರಡು ದಿನಕ್ಕಿಂತ ಮುಂಚೆಯೇ ತನ್ನ ಯೊಂದಿಗೆ ಹೆಣಬಾರದ ಡೋಲನ್ನು ರಳಿಗೇರಿಸಿಕೊಂಡು, ಕೊಳಲೂದಿಕೊಂಡು ಊರಿಡೀ ಊರವರಿಗೆ 'ಹಬ್ಬ–ಉತ್ಸವದ ಮರ್ಯಾದೆ'ಯನ್ನು ಸುವುದರ ಜತೆಗೆ ತನ್ನ ದುಡಿಮೆಗೆ ತಕ್ಕ ಪ್ರತಿಫಲವನ್ನು ರ ಮನೆ ಮನೆಯವರಿಂದ ತಾನೇ ಬೇಡಿ ಯಬೇಕು.

ಊರ ಪ್ರಮುಖರು ಊಳ್ಳವರು ಣಹೊಂದಿದರೆ ಸಾಕು – ಅಜಲಿನ ಮುದರ ೕಲು ಬಾರಿಸುತ್ತ ಊರವರಿಗೆ ಮರಣಸೂಚನೆ ತೊಡಗುತ್ತಾನೆ. ಬೊಜ್ಜದ ದಿನದವರೆಗೂ ಈ ದಿನ ಡೋಲು' ಮುಂದುವರಿಯುತ್ತದೆ.

ಊರಿನ ಕಂಬಳದ ಹಿಂದಿನ ದಿನವೆ 'ಕಂಬಳದ ರ್ಯಾದೆ'ಯನ್ನು ಊರವರಿಗೆ ತನ್ನ ಕೊಳಲು, ಡೋಲಿನ ಮೂಲಕ ಸಾರಿಬರುವ ಅಜಲಿನ ಮುದರನ ಪಡೆ, ರಾತ್ರಿಯಿಡೀ ತಮ್ಮ ಕೊರತಿಯರೊಂದಿಗೆ ಕಂಬಳದ ಗದ್ದೆಯಲ್ಲಿ 'ಪನಿಕುಲ್ಲುನ' ಕ್ರಿಯೆಯನ್ನು ನಿರ್ವಹಿಸಿ ಮರುದಿನ ಆ ಕಂಬಳದ ಕೆಸರುಗದ್ದೆಯಲ್ಲಿ ಕೋಣಗಳಂತೆ ಓಡಿ ಊರದೈವಕ್ಕೆ 'ಅಣಕು ಕೋಣಗಳ ಓಟ'ದ ಸೇವೆ ನೀಡಬೇಕಾಗುತ್ತದೆ.

ಮಾರಿಪೂಜೆಯ ದಿನ ಊರಮಾರಿಯನ್ನು ಊರಿಂದ ಅಟ್ಟಿಸುವ ಸಂದರ್ಭದಲ್ಲಿ ಮಾರಿಗಿಂತ ಮೊದಲೇ ತಮ್ಮ ಕೊರಳಿಗೆ ಆ ಹೆಣಭಾರದ ಡೋಲನ್ನು ನೇತು ಹಾಕಿಕೊಂಡು ಊರಿನಂಚಿನವರೆಗೆ ಓಡಬೇಕಾದವರು ಈ ಅಜಲಿನ ಮುದರ ಕೊರಗನ ಪಡೆಯವರು.

ಊರ ಮನೆಗಳಲ್ಲಿ ಜಾನುವಾರುಗಳು ಸತ್ತಾಗ ಆ ಜಾನುವಾರಗಳನ್ನು ಕಾಡಿನಂಚಿಗೆ ಎಳೆದೊಯ್ದು ಅದಕ್ಕೊಂದು ಮೋಕ್ಷ ಒದಗಿಸಬೇಕಾದವರು ಅಜಲಿನ ಕೊರಗರು. ನಾನು ಕಂಡಂತೆ ಅಜಲಿನ ಕೊರಗರು ಆ ಸತ್ತ ಜಾನುವಾರಿನ ಚರ್ಮ ಸುಲಿದು, ಚರ್ಮವನ್ನು ಚೆನ್ನಾಗಿ ಒಣಗಿಸಿ ಹದಮಾಡಿ ತಮ್ಮ ಡೋಲುಗಳಿಗಾಗಿ ತೆಗೆದಿರಿಸಿ, ಮಾಂಸವನ್ನು ಆ ದಿನಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು ಮಿಕ್ಕುಳಿದುದನ್ನು ಉಪ್ಪು ಹಾಕಿ ಒಣಗಿಸಿ ಮುಂದಿನ ದಿನಗಳಿಗಾಗಿ ಸಂರಕ್ಷಿಸಿಡುತ್ತಿದ್ದರು.

ಕಾಡಲ್ಲಿ ಕೊರೆವ ವಿವಿಧ ಬಿದಿರು, ಬೀಳಲು, ಬೆತ್ತಗಳನ್ನು ಬಳಸಿಕೊಂಡು ಬುಟ್ಟಿ, ಮೊರ, ತೊಟ್ಟಿಲು, ಕುತ್ತರಿಗಳನ್ನು ತಯಾರಿಸಿ ಕೊಂಡು ಜೀವನ ನಿರ್ವಹಣೆಗೆ ದಾರಿ ಕಂಡುಕೊಂಡಿದ್ದರು. ಕಾಡಿನ ಉತ್ಪನ್ನಗಳಾದ ಜೇನು, ಮೇಣ, ಔಷಧೀಯ ಬೇರೆ–ನಾರು –ತೊಗಟೆ–ಹಣ್ಣುಗಳು ಕೂಡಾ ಅವರ ಹೊಟ್ಟೆಗಷ್ಟು ಗಂಜಿ ತಿಳಿಯನ್ನು ಒದಗಿಸು ತ್ತಿದ್ದವು. ಆದರೆ ಸ್ವತಂತ್ರ ಭಾರತದಲ್ಲಿ ನಮ್ಮ ಸರ್ಕಾರ ಕೈಗಾರೀಕರಣಕ್ಕೇ ಹೆಚ್ಚಿನ ಒತ್ತು ಕೊಡ ತೊಡಗಿದಾಗ ಕಾಡುನಾಶದ ಪ್ರಕ್ರಿಯೆ ಆರಂಭಗೊಳ್ಳತೊಡಗಿತು. ಕಾಡುನಾಶವಾಗಿ ಕಾಂಕ್ರೀಟ್ ಕಾಡುಗಳು ನಿರ್ಮಾಣವಾಗ ತೊಡಗಿದಾಗ ಅತ್ತ ಕಾಡೂ ಇಲ್ಲದೆ ಇತ್ತ ಸ್ವಂತ ಭೂಮಿಯೂ ಇಲ್ಲದೆ ಕೊರಗರ ಬದುಕು ಅಧೋಗತಿಗಿಳಿಯಿತು.

ಊಳ್ಳವರ ಅಂಗಳದಲ್ಲಿ ಮದುವೆ–ಮುಂಜಿಗಳ ಸಂಭ್ರಮವೆದ್ದಾಗ ಲೇಸಿನೂಟದ ಎಂಜಲೆಲೆ ಹಿಡಿಯಲು ಬರಬೇಕಾದವರು – ಊರ ಅಜಲಿನ ಕೊರಗನ ಕೊಟ್ಟದವರು, ಕೊರಗನ ಕೊಟ್ಟದ ಸಮಸ್ತ ಸದಸ್ಯರು ಆ ಎಂಜಲೆಲೆ ಎಸೆಯುವ ಬೈಲಗದ್ದೆಗಳಲ್ಲಿ ಕಾದು ಕೂತು, ಪಂಕ್ತಿಯೂಟ ಮುಗಿದು ಗದ್ದೆಗೆ ಎಂಜಲೆಲೆ ಎಸೆಯುತಿದ್ದಂತೆ 'ಕೊಳೆತ ಕರುಳಿನ ಮೇಲೆ ಮುಗಿಬೀಳುವ ಕಾಗೆಗಳಂತೆ' ಎಂಜಲೆಲೆಗಳ ಮೇಲೆ ಮುಗಿಬಿದ್ದು ಅನ್ನ, ತರಕಾರಿ ಹೋಳುಗಳನ್ನು ಪ್ರತ್ಯೇಕಿಸತೊಡಗುತ್ತಾರೆ. ಕೊನೆಗೆ ಅಲ್ಲೇ ಹರಿಯುವ ತೋಡಿನ ನೀರಲ್ಲಿ ಬುಟ್ಟಿಯಲ್ಲಿದ್ದ ಅನ್ನವನ್ನೆಲ್ಲ ತೊಳೆದು, ಬಸಿದು, ಬೆಟ್ಟುಗದ್ದೆಯಲ್ಲಿ ಚಾಪೆ ಹಾಸಿ ಆ ಅನ್ನವನ್ನು ಒಣಗಿಸತೊಡಗುತ್ತಾರೆ; ಅದು ಮುಂದಿನ ದಿನಗಳಿಗಾಗಿ. ತೊಳೆದ ತರಕಾರಿ ಹೋಳುಗಳನ್ನು ಮರುದಿನದ ಬಳಕೆಗಾಗಿ ತೆಗೆದಿರಿಸುತ್ತಾರೆ.

ಆ ಎಂಜಲೆಲೆಗಳಲ್ಲದೆ ಅಂಗಳದ ಅಜಲಿನ ಕೊರಗರ ಪಾಲಿಗೆ ನೀಡಬೇಕಾದ ಅನ್ನ ಸಾರುಗಳನ್ನು ಒಡೆಯನ ಮನೆಯವರು ನೀಡುವಾಗ "ಕೊಟ್ಟದವರನ್ನೆಲ್ಲ ಗುಡಿಸಿಕೊಂಡೇ ಬಂದಿದ್ಯೆನೋ" ಎಂದು ಅಜಲಿನ ಕೊರಗನಿಗಷ್ಟು ಗದರಿ, ಬಯಲಿನ ಕಟ್ಟಹುಣಿಯಲ್ಲೆ ಅನ್ನವನ್ನೆಲ್ಲ ಅವರ ಬುಟ್ಟಿಗಳಿಗೆ ಸುರಿದು, ಸಾರು ಸಾಂಬಾರು, ಪಲ್ಯಗಳನ್ನೆಲ್ಲ ಕಲಸಿ ಹಸುವಿಗೆ ಅಕ್ಕಚ್ಚಿಡುವ ಕೊರಾಯಿಯಲ್ಲಿ ಹಾಕಿ ತಂದಿಟ್ಟರೆ ಅಲ್ಲಿಗೆ ಅಜಲಿನ ಕೊರಗರ ಅನ್ನದಾನ ಮುಗಿದಂತೆ. ಮುದರನಿಂದೇ ನಾದರೂ ಪಾಯಸ ಪರಮಾನ್ನದ ಬೇಡಿಕೆ ಬಂದರೆ, ಒಡತಿ ಕಣ್ಣು ಕೆಂಪೇರಿಸಿಕೊಂಡೇ ಮತ್ತೊಂದು ಸಣ್ಣ ಕೊರಾಯಿಯಲ್ಲಿ ಪಾಯಸ ತಂದಿಟ್ಟವರೇ "ಮುಂದಿನ ಸಲದಿಂದ ಪರಮಾನ್ನ ಕೇಳಬೇಡ" ಎಂದು ಪ್ರತಿಬಾರೀ ಎಚ್ಚರಿಸುವಂತೆ ಎಚ್ಚರಿಸಿಯೇ ಹಿಂದಿರುಗುತ್ತಿದ್ದರು.

ಪ್ರತೀ ಅಮಾಸೆಗೆ ಅಥವಾ ಯಾವುದೇ ಶನಿವಾರದಂದು ಅಜಲಿನ ಕೊರತಿ ಬೈಯ್ಯು ಕರೆ ಬಂದ ಒಡೆಯರ ಅಂಗಳವೇರಿ ಬಂದು "ಒಡೆಯರ ಮನೆ ಗ್ರಹಚಾರಬಾಧೆಯಿಂದ ಮುಕ್ತವಾಗುವುದಕ್ಕಾಗಿ" ಒಡತಿ ನೀಡುವ 'ನೀಚಾನ್ನದಾನ' ಪಡೆಯಬೇಕಿತ್ತು. ಮನೆಯ ಎಳೆಕೂಸುಗಳು ಕಾಯಿಲೆ ಬಿದ್ದಾಗ ಇದೇ ಬೈಯ್ಯು 'ಮಗು ಹಗರಿಸುವ' ಕ್ರಿಯೆಯಲ್ಲಿ ಪಾಲ್ಗೊಂಡು ತಲೆಗೆ ಎಣ್ಣೆ ಎರೆಸಿಕೊಳ್ಳುವ ಮೂಲಕ, ಮಗುವನ್ನು ಕಾಡುವ ಶನಿಯನ್ನು ತಾನು ಆವಾಹಿಸಿಕೊಳ್ಳುತ್ತಿದ್ದಳು

ಮನೆಯಲ್ಲಿ ಪದೇ ಪದೇ ಕಾಯಿಲೆ ಬೀಳುವವರಿಗೆ ಕಾಯಿಲೆ ಪರಿಹಾರಕ್ಕಾಗಿ ರಕ್ಷಣಾ ಮಾಟವಾಗಿಯೂ ಅಜಲಿನ ಕೊರತಿ ಬೈಯ್ಯುವನ್ನು ಬಳಸಿಕೊಳ್ಳಲಾಗುತ್ತಿತ್ತು. ಮಣ್ಣಿನ ಪಾತ್ರಯೊಂದಕ್ಕೆ ದಿನವೂ ಮುಂಜಾನೆ ಎಣ್ಣೆ ಎರೆದು ಆ ಎಣ್ಣೆಯಲ್ಲಿ ದಿನಾ ಕಾಯಿಲೆ ಬಿದ್ದವರು ತಮ್ಮ ಮುಖದ ಪ್ರತಿಬಿಂಬ ನೋಡಿಕೊಳ್ಳುತ್ತ, ಆ ಎಣ್ಣೆಗೆ ತಮ್ಮ ಒಂದು ತಲೆಕೂದಲು ಮತ್ತು ಕಾಲ ಉಗುರಚೂರನ್ನು ಹಾಕಿ ಅಮಾವಾಸ್ಯೆಯ ದಿನ ಆ ಎಣ್ಣೆಯನ್ನು ಪಾತ್ರೆ ಸಮೇತ ಕೊರತಿಗೆ ದಾನಮಾಡುವುದು, ಕೊರತಿ ಆ ಶನಿಯನ್ನು ತಾನು ಆವಾಹಿಸಿಕೊಳ್ಳುವುದು.... ಇವೆಲ್ಲವೂ ನಾನು ಬಾಲ್ಯದಲ್ಲಿ ಹಲವು ಅಂಗಳಗಳಲ್ಲಿ ಕಂಡಿದ್ದ ಚಿತ್ರಣ.

ಅಂದು ನನ್ನಬಾಲ್ಯದ ಕಣ್ಣುಗಳಿಗೆ ಅಜಲಿನ ಕ್ರೂರತೆಯನ್ನು ಅಳೆಯಲಾಗದಿದ್ದರೂ, ಇಂದು ಅದರ ಕ್ರೂರತೆಯನ್ನು ನೆನಪಿಸಿಕೊಂಡರೆ ತಟ್ಟನೆ ನೆನಪಾಗುವುದು ನಮ್ಮ ಅಜಲಿನ ಮುದರನ ಅಂತ್ಯದ ದಿನಗಳು.

ಊರಲ್ಲಿ ಜಾತ್ರೆ ನೇಮದಂತಹ ಉತ್ಸವಗಳ ಕಳೆ ಎದ್ದರೆ ಸಾಕು ಅಲ್ಲಿ ಜೀವಹಾನಿ ತಂದೊಡ್ಡ ಬಹುದಾದಂತಹ ಕದನಿ, ಗರ್ನಾಲು, ಬೆಡಿಗಳನ್ನು ಸಿಡಿಸಿ ಊರವರಿಗೆ ಸದ್ದಿನ ಮನರಂಜನೆ ಕೊಡಬೇಕಾದವರು ಊರಿನ ಅಜಲಿನ ಕೊರಗರು. ಕೊರಗರ ಜೀವಕ್ಕೆ ಬೆಲೆ ಇಲ್ಲದಿದ್ದ ಆ ಕಾಲದಲ್ಲಿ ಅಜಲಿನ ಕೊರಗರನ್ನು ಕಳ್ಳು, ಸಾರಾಯಿಯ ಮತ್ತಿನಲ್ಲಿರಿಸಿ, ತಮ್ಮಿಂದ ನಿರ್ವಹಿಸಲಾಗ ದಂತಹ ಎಲ್ಲ ತಲೆಹಾರುವ ಕೆಲಸಗಳನ್ನೂ ಕೊರಗರಿಂದ

ಮಾಡಿಸಿಕೊಳ್ಳುವ ಪರಿಪಾಠವಿತ್ತು. ನನ್ನ ಬಾಲ್ಯ ಮುಗಿಯು ವಷ್ವರಲ್ಲೇ ನಮ್ಮ ಅಜಲಿನ ಮುದರ ಊರ ದೇವಸ್ಥಾನದ ಜಾತ್ರೆಯಂದು ಕದನಿ ಸಿಡಿಸಲು ಹೋದವ, ಕದನಿ ಯೊಂದಿಗೆ ತಾನೂ ಸಿಡಿದುಹೋಗಿ, ಸುಟ್ಟು ಕರಕಲಾಗಿ, ಜೀವನ್ಮರಣದ ಮಧ್ಯೆ ತಿಂಗಳುಗಟ್ಟಲೆ ಹೋರಾಡಿ, ಕೊನೆಗೂ ಉಸಿರೆಳೆವ ಮಾಂಸದ ಮುದ್ದೆಯಂತೆ ಆತ ಮುಂದೆ ನಾಕೈದು ವರ್ಷ ಯಾತನಾಮಯವಾಗಿ ಬದುಕಿ ಕೊನೆಯುಸಿರೆಳೆದ ಚಿತ್ರಣ ಈಗಲೂ ನಮ್ಮನ್ನು ಹನಿಗಣ್ಣಾ ಗಿರಿಸುವಂತಹದ್ದು.

ಇದೀಗ ಸಾಮಾಜಿಕ ಉನ್ನತೀಕರಣ, ಶಿಕ್ಷಣ, ನೌಕರಿ ಹಾಗೂ ಸ್ವ ಉದ್ಯೋಗದಿಂದ ಪಡೆಯುತ್ತಿರುವ ಆರ್ಥಿಕ ಸ್ವಾತಂತ್ರ್ಯದ ಫಲವಾಗಿ ಕೊರಗ ಸಮುದಾಯ ದಲ್ಲಿ ಸ್ವಾಭಿಮಾನ ಹಾಗೂ ಸ್ವತಂತ್ರವಾಗಿ ದುಡಿದು ತಿನ್ನುವ ಛಲ ಬೆಳೆದಿದೆ.

ನನ್ನ ಬಾಲ್ಯದ ಅರಿವಿನ ಜಗತ್ತಿಗೆ ಈ ಅಜಲು ಹಾಗೂ ಅಜಲಿನ ಕೊರಗರು ಪ್ರವೇಶ ಪಡೆಯುವುದಕ್ಕಿಂತ ಸುಮಾರು 14 ವರುಷಗಳ ಹಿಂದೆಯೇ ಈ ಸಮುದಾ ಯದ ಮೊದಲ ಪದವೀದರನೊಬ್ಬ ಸರಕಾರಿ ನೌಕರಿ ಯನ್ನೂ ಗಿಟ್ಟಿಸಿಕೊಂಡಿದ್ದ – ಎಂಬ ವಿಚಾರ ತಿಳಿದದ್ದು ಇದೀಗ ಎಪ್ಪತ್ತರ ಇಳಿಸಂಜೆಯಲ್ಲಿರುವ, ಆದರೆ ಒಬ್ಬ ಕ್ರಾಂತಿಕಾರಿ ಯುವಕನಂತೆ ವಿಚಾರದ ಕಿಡಿ ಹಾರಿಸುವ ಕೊರಗರ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಗೋಕುಲದಾಸ ಅವರನ್ನು ಭೇಟಿ ಮಾಡಿದ ನಂತರವಷ್ಟೆ.

1935 ರಲ್ಲಿ ಜನಿಸಿದ ಗೋಕುಲದಾಸ್ ಅವರ ಬಾಲ್ಯದ ಹೆಸರು ಗೋಂಕ. ಕಿತ್ತುತಿನ್ನುವ ಬಡತನ, ಅವಮಾನ, ಅಸ್ಪೃಶ್ಯತೆಯ ನಡುವೆಯೇ ಸ್ವಂತ ಪ್ರತಿಭೆ, ಛಲದಿಂದ 1954 ರಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿ, ಯಾವುದೇ ಮೀಸಲಾತಿ ಇಲ್ಲದೆ ಕೇಂದ್ರ ಸರಕಾರಿ ನೌಕರಿ ಪಡೆದ ಕೊರಗ ಜನಾಂಗದ ಪ್ರಥಮ ವ್ಯಕ್ತಿ ಇವರು. ಪೋಸ್ಟ್‌ಮಾಸ್ಟರ್ ವೃತ್ತಿಯಿಂದ ನಿವೃತ್ತಿ ಹೊಂದಿದ ಬಳಿಕ ಜಿಲ್ಲೆಯ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ನಿಸ್ವಾರ್ಥ ನಾಯಕತ್ವವನ್ನು ಇವರು ವಹಿಸಿಕೊಂಡವರು.

ಇವರಲ್ಲಿ ಕೊರಗ ಸಮುದಾಯದ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಪ್ರಶ್ನಿಸಿದರೆ, ಅದಕ್ಕೆ ಪೂರಕವಾಗಿ ಮಾತಿನುದ್ದಕ್ಕೂ ಅವರಿಂದ ಹಾರಿಬಂದ ಕೆಲವು ವಿಚಾರ ಮತ್ತು ಆಕ್ರೋಶದ ಕಿಡಿಗಳನ್ನು ಇಲ್ಲಿ ದಾಖಲಿಸಲಾಗಿದೆ.

■ ನಮ್ಮ ಈ ಹಿಂದೂಸ್ಥಾನದಲ್ಲಿ, ಹಿಂದೂ ಸಂಸ್ಕೃತಿ ಯಲ್ಲಿ ಅಧರ್ಮ ಹೊರತು ಬೇರೇನೂ ಇಲ್ಲ. ಈ ಸಂಸ್ಕೃ ತಿಯಲ್ಲಿಗೋವನ್ನು ಮಾತೆ ಎಂದು ಕರೆಯಲಾಗಿದೆ. ನಾಗರವನ್ನು ದೇವರೆಂದು ಪೂಜಿಲಾಗಿದೆ. ಆದರೆ ಕೊರಗ ಮನುಷ್ಯರನ್ನು ಈ ಸಂಸ್ಕೃತಿಯಲ್ಲಿ ಅತ್ಯಂತ ಹೀನಾಯ ವಾಗಿ ನಡೆಸಿಕೊಳ್ಳಲಾಗಿದೆ.

■ Outright ಆಗಿ ನಾನು ಬ್ರಾಹ್ಮಣರನ್ನು ದೂರುವುದಿಲ್ಲ. ಆದರೆ ಅವರೊಳಗಿನ 'ಮನು'ವನ್ನು ನಾನು ದ್ವೇಷಿಸುತ್ತೇನೆ. ಅವನು ಇನ್ನೂ ಅವರಲ್ಲಿ ಜೀವಂತವಿದ್ದಾನೆ. ಅದು ಸ್ವತಃ ಅವರಿಗೇ ಗೊತ್ತಿದೆ.

■ ನಮಗೆ ಕೊರಗರಿಗೆ ನಮ್ಮದೇ ಆದ ಭಾಷೆಯಿದೆ. ಧ್ವನಿ ಯಿಲ್ಲದ ನಾವು ಈ ಭಾಷೆಯನ್ನು ನಮ್ಮನ್ನು ಶೋಷಿಸು ವವರನ್ನು ಬಯ್ಯಲು ಬಳಸುತ್ತೇವೆ. ಯಾಕೆಂದರೆ ಆ ಭಾಷೆ ಇತರರಿಗೆ ಅರ್ಥವಾಗುವುದಿಲ್ಲ. ನಮ್ಮ ಕೊರಗರ ಭಾಷೆ ಕಲಿಯುವ ಅಗತ್ಯ ಅವರಿಗೂ ಇಲ್ಲ.

> **ಊರ ಮನೆಗಳಲ್ಲಿ ಜಾನುವಾರಗಳು ಸತ್ತಾಗ ಆ ಜಾನುವಾರಗಳನ್ನು ಕಡಿನಂಚಿಗೆ ಎಳೆದೊಯ್ದು ಅದಕ್ಕೊಂದು ಮೋಕ್ಷ ಒದಗಿಸಬೇಕಾದವರು ಅಜಲಿನ ಕೊರಗರು. ಆ ಸತ್ತ ಜಾನುವಾರಿನ ಚರ್ಮಸುಲಿದು, ಚರ್ಮವನ್ನು ಚೆನ್ನಾಗಿ ಒಣಗಿಸಿ ಹದಮಾಡಿ ತಮ್ಮ ದೋಲುಗಳಿಗಾಗಿ ತೆಗೆದಿರಿಸಿ, ಮಾಂಸವನ್ನು ಆ ದಿನಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು ಮಿಕ್ಕುಳಿದುದನ್ನು ಉಪ್ಪು ಹಾಕಿ ಒಣಗಿಸಿ ಮುಂದಿನ ದಿನಗಳಿಗಾಗಿ ಸಂರಕ್ಷಿಸಿಡುತ್ತಿದ್ದರು.**

■ ನಮ್ಮ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ನ... ಜನಾಂಗದಿಂದ ಎಂತಹ ಪ್ರತಿನಿಧಿಗಳನ್ನು ಆ... ಮಾಡುತ್ತಾರೆಂದರೆ, ಸಮುದಾಯದ ಒಳಿತಿನ ಪ್ರ... ಇಲ್ಲದವರನ್ನು, ಹೆಬ್ಬೆಟ್ಟಿನವರನ್ನು. ಸಮುದಾಯದ ಸಮ... ತಿಳಿದಿರುವ ಪ್ರಜ್ಞಾವಂತ ಕೊರಗರನ್ನು ಪ್ರಬಲ ಪಾರ್ಟಿಗ... ತಮ್ಮೊಳಗೆ ಸೇರಿಸಿಕೊಳ್ಳುವುದಿಲ್ಲ; ಸಂಘಟನೆಯ... ಇರುವವರಿಗೂ ಟಿಕೆಟ್ ನೀಡುವುದಿಲ್ಲ. ಕೊಕ್ಕರ್ಣೆಯ... ಐದು ಮಂದಿ ಶಿಕ್ಷಿತ ಕೊರಗ ಹೆಣ್ಣುಮಕ್ಕ... ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂ... ಬಂದರು. ಆದರೆ ಪಕ್ಷ ಅವರಿಗೆ ಟಿಕೆಟ್ ನೀಡಲಿಲ್ಲ.

■ ನಮ್ಮನ್ನು 'ಹಿಂದೂ' ಎನ್ನುವ ಬೇಲಿಯೊಳಗೆ ಯಾ... ಹಾಕುತ್ತೀರಿ? ಎಲ್ಲಿದೆ ಹಿಂದೂಧರ್ಮ? ಸೆನ್ಸಸ್‌ನವರು ಬಂದಗಾ ನಾವು ಹೇಳುವುದು 'ಕೊರಗ ಧರ್ಮ' ಎಂದು, ಹಿಂದೂ ಅಲ್ಲ. ಹಿಂದೂ ಧರ್ಮವೇ ಸುಳ್ಳು. ನಾವ... ಅನಾಮಿಕರು ಹರಿಶ್ಚಂದ್ರ ಕಾವ್ಯದಲ್ಲಿ ಬರುವ... ಅನಾಮಿಕರಂತೆ.

■ ಬಸವಣ್ಣನ ಆಧ್ಯಾತ್ಮಿಕತೆಗೂ, ಅಷ್ಟಮಠಗಳ... ಆಧ್ಯಾತ್ಮಿಕತೆಗೂ ಎತ್ತಣ ಸಂಬಂಧ? ಬಸವಣ್ಣ ಎಲ್ಲಿ, ಅಷ್ಟಮಠಗಳ ಅಧಿಪತಿಗಳೆಲ್ಲಿ? ಆದರೆ ಈಗ ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವು ಮಠಾಧಿಪತಿಗಳೂ ಈ ಭಂಡ ಪರಿವಾರದೊಂದಿಗೆ ಸೇರಿದ್ದಾರೆ. ನಿಜವಾದ ಟೆರರಿಸ್ಟ್‌ಗಳೆಂದರೆ ಈ ಸಂಘ... ಪರಿವಾರದವರು. ಇವರ ಮಧ್ಯೆ ನಾವೇನು ಮಾಡಬಹುದು? ಈ ಪರಸ್ಥಿತಿಯಲ್ಲಿ ಈ ಭೂಮಿಯಲ್ಲಿ ಬದುಕುವ ಹಕ್ಕು ನಮಗೆ ಸಿಗಬಹುದೇ? ಆದರೆ "As an Indian I am bound to hold the land. It is my right. I can only talk of what are all the things denied, and what are all glorified."

ಮಾನವೀಯತೆ, ಸಾಮಾಜಿಕ ನ್ಯಾಯ, ಸಾಮಾಜಿಕ ಮೌಲ್ಯಗಳನ್ನು ಎಂದೆಂದೂ ಪುರಸ್ಕರಿಸದ ವೈದಿಕ ಸಂಸ್ಕೃತಿಯನ್ನು ಸಾರಾಸಗಟಾಗಿ ನಿರಾಕರಿಸುತ್ತ, ಈ ವೈಚಾರಿಕ ಯುಗದಲ್ಲೂ ಈ ಸಂಸ್ಕೃತಿ ಇನ್ನೂ ಬಲಿಷ್ಠವಾಗಿ ಅಸ್ತಿತ್ವದಲ್ಲಿರುವ ಬಗ್ಗೆ ದುಃಖ, ಆಕ್ರೋಶ ವ್ಯಕ್ತಪಡಿಸುವ ಈ ಕೊರಗ ಸಮುದಾಯ, ಇದೀಗ ನಿರೀಕ್ಷಿಸುತ್ತಿರುವ ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ, ವೈಚಾರಿಕತೆಯ ಮೂಲಕ ಮನುಷ್ಯ-ಮನಷ್ಯರ ನಡುವೆ ಪ್ರೀತಿ, ಗೌರವ ಸಹಬಾಳ್ವೆಯನ್ನು ಹುಟ್ಟುಹಾಕಬೇಕಾದ 'ಮನುಷ್ಯಧರ್ಮ'ವೊಂದನ್ನು.

ಮನುಷ್ಯ ಕುಲದ ಅಭ್ಯುದಯಕ್ಕೆ ಕಾರಣವಾ ಗಬೇಕಿದ್ದ 'ಅಕ್ಷರ ಸಂಸ್ಕೃತಿ'ಯ ಗುರಿಕಾರರು ದಲಿತತ್ವದ ದಾರುಣತೆಯನ್ನು ಅರ್ಥೈಸಿಕೊಳ್ಳದೆ, ನಿರಂತರ ಶೋಷಿತ ಅನಕ್ಷರಸ್ಥ ದಲಿತರ ನಿಷ್ಕ್ರಿಯತೆಯನ್ನು ತಮ್ಮ 'ಸಮಾಜೋ ದ್ಧಾರ'ಕ್ಕಾಗಿ ಬಳಸಿಕೊಂಡಿದ್ದನ್ನು ಇದೀಗ ಈ ಸಮುದಾಯ ಅರ್ಥೈಸಿಕೊಳ್ಳುತ್ತಿದೆ.

ಇದುವರೆಗೂ ಮೂಕವೇದನೆಯನ್ನಷ್ಟೇ ಅನುಭವಿ ಸುತ್ತಿದ್ದ ಕೊರಗ ಸಮುದಾಯ, ಇದೀಗ ತನಗಾಗುತ್ತಿರುವ ಅನ್ಯಾಯ, ಶೋಷಣೆ, ದೌರ್ಜನ್ಯದ ವಿರುದ್ಧ ದನಿ ಎತ್ತುತ್ತಿ ರುವುದು ತಮ್ಮ ಹಕ್ಕನ್ನು ಮರಳಿ ಕೇಳುತ್ತಿರುವುದು ಆ ಸಮುದಾಯವಿನ್ನೂ ನಿಸ್ತೇಜಗೊಂಡಿಲ್ಲ, ಜೀವಚೈತನ್ಯವನ್ನು ತುಂಬಿಸಿಕೊಳ್ಳುತ್ತಿದೆ ಎನ್ನುವುದಕ್ಕೆ ಸಾಕ್ಷಿ. (ಮುಗಿಯಿತು)□

ಮೂಢನಂಬಿಕೆಗಳಿಗೆ ಬೆಂಕಿ

೩

ಡಾ|| ಸರಜೂ ಕಾಟ್ಕರ್

ದೇವರಾಯ

'ನೀನು ಒಬ್ಬನೇ ಅಥವಾ ನಾಲ್ಕೆಂಟು ಜನರು ಕೂಡಿ ಸಂಘರ್ಷಕ್ಕಿಳಿಯುವುದಕ್ಕಿಂತ ಒಂದು ಸಂಘಟನೆಯನ್ನು ಕಟ್ಟಿಕೊಂಡು ಹೊಡೆದಾಡಬಾರದೇಕೆ? ಸಂಘಟನೆಯಲ್ಲಿ ಯಾವಾಗಲೂ ಶಕ್ತಿ ಇರುತ್ತದೆ.' ಫಾದರ್ ಡಿಸಿಲ್ವಾ ದೇವರಾಯನಿಗೆ ಹೇಳುತ್ತಿದ್ದರು.

ಫಾದರ್ ಡಿಸಿಲ್ವಾ ಬೆಳಗಾವಿಯ ಚರ್ಚೊಂದರಲ್ಲಿ ಧರ್ಮ ಬೋಧಕರಾಗಿದ್ದರು. ಅವರು ಪೂರ್ವಜರು ಹಿಂದೂಗಳಾಗಿದ್ದರು. ಕಾಲಾಂತರದಲ್ಲಿ ಕ್ರಿಶ್ಚಿಯನ್‌ರಾಗಿ, ಮತಾಂತರಗೊಂಡಿದ್ದರು. ಮೂರನೆಯ ತಲೆಮಾರಿನ ಹುಡುಗ ಫಾದರ್ ಡಿಸಿಲ್ವಾ, ಇಂಗ್ಲೆಂಡಿಗೆ ಹೋಗಿ ಕಲಿತು ಬಂದಿದ್ದರು. ಭಾರತದ ದಲಿತರ ದೀನ ಪರಿಸ್ಥಿತಿಗೆ ಹಿಂದೂ ಧರ್ಮದ ಕಟ್ಟಳೆಗಳೇ ಕಾರಣವೆಂದು ಅವರು ನಂಬಿದ್ದರು. ಈ ಜನಾಂಗವನ್ನು ಎತ್ತಿ ನಿಲ್ಲಿಸಿದರೆ ಅವರು ತಾವಾಗಿಯೇ ನಡೆದಾಡಬಹುದೆಂದೂ ಫಾದರ್ ಡಿಸಿಲ್ವಾ ಭಾವಿಸಿದ್ದರು. ಇಂತಹ ಸಂದರ್ಭದಲ್ಲಿಯೇ ಅವರಿಗೆ ದೇವರಾಯ ಪರಿಚಿತನಾಗಿದ್ದ. ದೇವರಾಯನ ಕಳಕಳಿ ಅವರಿಗೆ ಸಂತೋಷವನ್ನು ತಂದಿತ್ತು. ಅದೇ ಕಾಲಕ್ಕೆ ಆತ ಏಕಾಂಗಿಯಾಗಿ ಹೋರಾಡುತ್ತಿರುವುದರ ಬಗ್ಗೆಯೂ ಅವರಿಗೆ ವ್ಯಸನವಿತ್ತು. ಅದಕ್ಕಾಗಿಯೇ ದೇವರಾಯ ಒಂದು ಸಂಘಟನೆಯನ್ನು ಹುಟ್ಟುಹಾಕಬೇಕೆಂದು ಅವರು ಬಯಸಿದ್ದರು.

'ನನಗೂ ಹಾಗೆಯೇ ಅನ್ನಿಸುತ್ತಿದೆ ಫಾದರ್' ದೇವರಾಯ ಹೇಳಿದ.

'ಹಾಗಾದರೆ ಈ ಕಾರ್ಯ ಇಂದಿನಿಂದಲೇ ಆರಂಭಗೊಳ್ಳಲಿ' ಎಂದರು ಫಾದರ್ ಡಿಸಿಲ್ವಾ ಸಂತೋಷದಿಂದ.

ದೇವರಾಯ ಮತ್ತೆ ಕೆಲವರ ಜೊತೆ ಚರ್ಚೆ ಮಾಡಿ Depressed Classes Education Society (ಭಾರತೀಯ ಬಹಿಷ್ಕೃತ ಸಮಾಜ ಶಿಕ್ಷಣ ಪ್ರಸಾರಕ ಮಂಡಳಿ) ಎಂಬ ಸಂಸ್ಥೆಯನ್ನು ೧೯೨೭ ರಲ್ಲಿ ಹುಟ್ಟುಹಾಕಿದ. ಅದರ ಮೊದಲ ಸಭೆ ೧೫-೫-೧೯೨೭ ರಲ್ಲಿ ಗವನಾಳ ಗ್ರಾಮದಲ್ಲಿ ಜರುಗಿತ್ತು. ಚಿಕ್ಕೋಡಿ ತಾಲೂಕಿನ ಮತ್ತು ದಕ್ಷಿಣ ಮಹಾರಾಷ್ಟ್ರದಿಂದ ಅನೇಕ ಜನರು ಈ ಸಭೆಗೆ ಹಾಜರಾದರು. ಬೆಳಗಾವಿಯಿಂದ ಫಾದರ್ ಡಿಸಿಲ್ವಾ ಖುದ್ದಾಗಿ ಆಗಮಿಸಿದ್ದರು.

೧೯೨೭ ರಲ್ಲಿ ಬೆಳಗಾವಿ ಜಿಲ್ಲಾ ವತನದಾರ್ ಮಹಾರ್ ಸಂಘವೆಂಬ ಇನ್ನೊಂದು ಸಂಸ್ಥೆಯನ್ನು ದೇವರಾಯ ಆರಂಭಿಸಿದ. ಈ ಎರಡೂ ಸಂಘಗಳನ್ನು ರಜಿಸ್ಟರ್ ಮಾಡಿಸಲಾಗಿತ್ತು. ದಲಿತರನ್ನು ಸಂಘಟಿಸಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಈ ಎರಡೂ ಸಂಘಗಳ ಉದ್ದೇಶವಾಗಿತ್ತು. ತಮ್ಮ ಸಂಘದ ಧ್ಯೇಯೋದ್ದೇಶಗಳನ್ನು ಕಾಲಕಾಲಕ್ಕೆ ದೇವರಾಯ ಬಾಬಾಸಾಹೇಬರಿಗೆ ತಿಳಿಸುತ್ತಿದ್ದ. ಅವರಿಂದ ಪ್ರೋತ್ಸಾಹಕರ ಪ್ರತಿಕ್ರಿಯೆಯೂ ಬರುತ್ತಿತ್ತು.

ದಲಿತರು ಸತ್ತ ದನದ ಮಾಂಸವನ್ನು ತಿನ್ನುವುದು ಆಗ ವ್ಯಾಪಕವಾಗಿ ಬಳಕೆಯಲ್ಲಿತ್ತು. ಯಾರದ್ದಾದರೂ ಮನೆಯಲ್ಲಿ ಎತ್ತು, ಎಮ್ಮೆ, ಕೋಣಗಳು ಸತ್ತರೆ ಅವುಗಳ ವಿಲೇವಾರಿಗಾಗಿ ದಲಿತರನ್ನು ಕರೆಯಲಾಗುತ್ತಿತ್ತು. ಇವರಾದರೂ ಅಲ್ಲಿ ಹೋಗಿ ಅವುಗಳನ್ನು ಹೇರಿಕೊಂಡು ಬಂದು ಅದರ ಮಾಂಸವನ್ನು ಭಕ್ಷಿಸುತ್ತಿದ್ದರು. ಇಡಿ ದಲಿತ ಕೇರಿಗೆ ಈ ಮಾಂಸದ ವಿತರಣೆಯಾಗುತ್ತಿತ್ತು. ಈ ಪ್ರಥೆ ಅಮಾನುಷವಾಗಿದ್ದು ಇದರಿಂದ ಅಸಾಧ್ಯವಾದ ರೋಗರುಜಿನುಗಳು ಬರುವ ಸಂಭವವನ್ನು ಬಾಬಾಸಾಹೇಬರು ಮನಗಂಡಿದ್ದರು. ಸತ್ತ ದನದ ಮಾಂಸ ಭಕ್ಷಣೆಯ ವಿರುದ್ಧ ಬಾಬಾಸಾಹೇಬರು ದಲಿತರಿಗೆ ವಿನಂತಿ ಮಾಡಿಕೊಂಡಿದ್ದರೂ ದಲಿತರು ಇನ್ನೂ ಈ ಪ್ರಥೆಯನ್ನು ಮುಂದುವರೆಸಿದ್ದರು. ದೇವರಾಯ ಈ ಸಮಸ್ಯೆಯನ್ನು ತನ್ನ ಚಳವಳಿಯ ಮುಂದಿನ ಹೆಜ್ಜೆಯಾಗಿ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದ. ಭಾರತೀಯ ಬಹಿಷ್ಕೃತ ಸಮಾಜ ಸಂಸ್ಥೆಯಿಂದ ಈ ಚಳವಳಿಯನ್ನು ಕೈಗೆತ್ತಿಕೊಳ್ಳಲಾಯಿತು. ದೇವರಾಯ ಮತ್ತು ಆತನ ಗೆಳೆಯರು ಊರೂರಿಗೆ ಹೋಗಿ ಸತ್ತ ದನದ ಮಾಂಸ ತಿನ್ನುವುದರಿಂದ ಆಗುವ ಅನಾರೋಗ್ಯದ ಬಗ್ಗೆ ಜನರಿಗೆ ತಿಳುವಳಿಕೆಯನ್ನು ನೀಡಲು ಯತ್ನಿಸಿದರು. ಕೆಲವರಿಗೆ ಇದು ಅರ್ಥವಾಯಿತು; ಇನ್ನು ಹಲವರಿಗೆ ಇವರ ವಿಚಾರ ಅಪಥ್ಯವಾಯಿತು.

'ಒಂದ್ ವೇಳೆ ಸತ್ತ ದನದ ಮಾಂಸ ತಿನ್ನೋದನ್ನ ನಾವು ಬಿಟ್ಟೇವಂತ ತಿಳಿ; ನಾಳೆ ಮಾಂಸ ತಿನ್ನಬೇಕಂತ ಅನ್ನಿಸಿದ್ರ ನಾವೇನು ಮಾಡೋಣ?' ಎಂದು ದಲಿತರು ಅವನನ್ನು ಪ್ರಶ್ನಿಸಿದರು.

'ನಿಮ್ಗ ಕೈ ಮುಗಿತೇನಿ; ಕಾಲಿಗೆ ಬೀಳ್ತೇನಿ. ದನಕ್ಕ ರೋಗ ಬಂದಿದ್ದಕ್ಕ ಅವು ಸತ್ತಿರ್ತಾವ. ಅದರ ಮಾಂಸ ನೀವು ತಿಂದ್ರ ಆ ರೋಗ ನಿಮ್ಮ ಶರೀರ ಪ್ರವೇಶ ಮಾಡ್ತೇತಿ' ಎಂದು ದೇವರಾಯ ಉತ್ತರಿಸಿದ.

'ಸತ್ತ ದನಾ ತಿನ್ನೋದು ನಮ್ಮ ವತನಿ ಹಕ್ಕು' ಒಬ್ಬ ಮುದುಕ ಹೇಳಿದ.

ದಲಿತರು ಸತ್ತ ದನದ ಮಾಂಸವನ್ನು ತಿನ್ನುವುದು ಆಗ ವ್ಯಾಕಪಕವಾಗಿ ಬಳಕೆಯಲ್ಲಿತ್ತು. ಯಾರದ್ದಾದರೂ ಮನೆಯಲ್ಲಿ ಎತ್ತು, ಎಮ್ಮೆ, ಕೋಣಗಳು ಸತ್ತರೆ ಅವುಗಳ ವಿಲೇವಾರಿಗಾಗಿ ದಲಿತರನ್ನು ಕರೆಯಲಾಗುತ್ತಿತ್ತು. ಇವರಾದರೂ ಅಲ್ಲಿ ಹೋಗಿ ಅವುಗಳನ್ನು ಹೇರಿಕೊಂಡು ಬಂದು ಅದರ ಮಾಂಸವನ್ನು ಭಕ್ಷಸುತ್ತಿದ್ದರು. ಇಡಿ ದಲಿತ ಕೇರಿಗೆ ಈ ಮಾಂಸದ ವಿತರಣೆಯಾಗುತ್ತಿತ್ತು. ಈ ಪ್ರಥೆ ಅಮಾನುಷವಾಗಿದ್ದು ಇದರಿಂದ ಅಸಾಧ್ಯವಾದ ರೋಗರುಜಿನುಗಳು ಬರುವ ಸಂಭವವನ್ನು ಬಾಬಾಸಾಹೇಬರು ಮನಗಂಡಿದ್ದರು.ಸತ್ತ ದನದ ಮಾಂಸ ಭಕ್ಷಣೆಯ ವಿರುದ್ಧ ಬಾಬಾಸಾಹೇಬರು ದಲಿತರಿಗೆ ವಿನಂತಿ ಮಾಡಿಕೊಂಡಿದ್ದರು ದಲಿತರು ಇನ್ನೂ ಈ ಪ್ರಥೆಯನ್ನು ಮುಂದುವರೆಸಿದ್ದರು. ದೇವರಾಯ ಈ ಸಮಸ್ಯೆಯನ್ನು ತನ್ನ ಚಳವಳಿಯ ಮುಂದಿನ ಹೆಜ್ಜೆಯಾಗಿ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದ.

...ೇವರಾಯ ಕೆಲವರ ...ೊತೆ ಚರ್ಚೆ ಮಾಡಿ ...ಾರತೀಯ ಬಹಿಷ್ಕೃತ ...ಮಾಜ ಶಿಕ್ಷಣ ಪ್ರಸಾರಕ ...ಂಡಳ) ಎಂಬ ಸಂಸ್ಥೆ ...ಯನ್ನು ೧೯೨೭ ರಲ್ಲಿ ...ಟ್ಟುಹಾಕಿದ. ಅದರ ...ೊದಲ ಸಭೆ ೧೫-೫- ...೨೭ ರಲ್ಲಿ ಗವನಾಳ ...್ರಾಮದಲ್ಲಿ ಜರುಗಿತ್ತು. ...ಕ್ಕೋಡಿ ತಾಲೂಕಿನ ...ತ್ತು ದಕ್ಷಿಣ ಮಹಾ ...ಷ್ಟ್ರದಿಂದ ಅನೇಕ ...ನರು ಈ ಸಭೆಗೆ ...ಜರಾದರು. ೧೯೨೭ ...ಲ್ಲಿ ಬೆಳಗಾವಿ ಜಿಲ್ಲಾ ...ತನದಾರ್ ಮಹಾರ್ ...ಘವೆಂಬ ಇನ್ನೊಂದು ...ಸ್ಥೆಯನ್ನು ದೇವ ...ಯ ಆರಂಭಿಸಿದ. ಈ ...ಡೂ ಸಂಘಗಳನ್ನು ...ಸ್ಟರ್ ಮಾಡಿಸಲಾ ...ತ್ತು. ದಲಿತರನ್ನು ...ಘಟಿಸಿ ಅವರ ...ಮಾಜಿಕ, ಶೈಕ್ಷಣಿಕ ...ತ್ತು ಆರ್ಥಿಕ ಪರಿಸ್ಥಿತಿ ...ನ್ನು ಸುಧಾರಿಸುವುದು ... ಎರಡೂ ಸಂಘಗಳ ...ದ್ದೇಶವಾಗಿತ್ತು.

जाहीर विनंती

महाराष्ट्र व कर्नाटक भागातील सुप्रसिद्ध हरिजन समाजातील अत्यंत तळमळीचे कार्यकर्ते श्री. देवराय रामराय इंगळे यांच्या वयास येत्या जुलै १९६९ ला ऐंशी वर्षे पूर्ण होत असलेने या प्रसंगी समारंभपूर्वक त्यांची हल्लीची हलाखीची परिस्थीती विचारात घेऊन सहानुभुतीपूर्वक विचार करून दलीत समाजातील काही होतकरु मंडळींनी सदर इंगळे यांच्या भावी आयुष्यास मदत करणेचा विचार करून एक निधी अर्पण करणेचा समारंभ अयोजित केला असून येत्या रविवार ता. २२-६-६९ रोजी निपाणी येथे डाक बंगल्यात औपचारिक सभा नियोजित केली आहे. तरी आपण आगत्यपूर्वक उपस्थित रहावे ही विनंती.

टीप :– सभेची वेळ दुपारी ३ वाजता निपाणी डाक बंगला

निमंत्रक

डॅ. एस्. एन्. माने	रामचंद्र तुळसीदास कांबळे
आमदार श्री मातंग सरगुर	श्रीमंत आण्णा रत्नाकर
एस्. एस्. रायबोले (ऑ. मॅजि.)	नामदेव म्हटकर (ऑ. मॅजि.)

अरुण प्रेस कोल्हापूर.

ಜಾಹೀರ ವಿನಂತಿ.

[illegible]

ಸ್ವಾಗತ ಮಂಡಳಿ

(೧) ದೇವರಾಯ ರಾಮರಾಯ ಇಂಗಳೆ, ಸ್ವಾಗತಾಧ್ಯಕ್ಷ

[illegible]

'ಅಜ್ಜಾ, ಹೀಂಗ ತಿಳಕೊಂಡs ನಾವ ಹಾಳಾಗ್ತಿದ್ದೇವೆ. ನಾಯಿ ನರಿ ತಿನ್ನುವ ಸಾಮಾನು ನಾವ ತಿನ್ತಾ ಇದ್ದೇವೆ. ದೊಡ್ಡ ಜಾತಿಯ ಜನಾ ಇದು ನಿಮ್ಮ ಹಕ್ಕು ಅಂತ ಹೇಳಿದ್ದು, ಅದನ್ನು ನಾವು ಸಂತೋಷದಿಂದ ಹೇಳಿಕೊಳ್ತಾ ಇದ್ದೇವೆ. ಒಂದು ವೇಳೆ ಸತ್ತ ದನಾ ತಿನ್ನೋದು ಖರೇನ ಛಲೋ ಇದ್ರ, ಈ ದೊಡ್ಡ ಜಾತಿ ಜನ ಯಾಕ ಅದನ್ನ ತಿನ್ನೂದಿಲ್ಲಾ?' ದೇವರಾಯ ಪ್ರಶ್ನಿಸುತ್ತಿದ್ದ. ಭಾರತೀಯ ಬಹಿಷ್ಕೃತ ಸಂಘ ಸಂಸ್ಥೆಯ ಹುಡುಗರು ಈ ಕಾರ್ಯದಲ್ಲಿ ಪ್ರಶಂಸಾರ್ಹ ಕೆಲಸ ಮಾಡಿದರು.

ದೇವರಾಯನ ಹಾಗೂ ಈ ಹುಡುಗರ ಅಂಜಿಕೆ ಯಿಂದ ಹಲವೆಡೆ ರಹಸ್ಯವಾಗಿ ಸತ್ತದನದ ಮಾಂಸವನ್ನು ತಿನ್ನಲಾಗುತ್ತಿತ್ತು. ಈ ಸುದ್ದಿ ದೇವರಾಯನಿಗೆ ಗೊತ್ತಾದಾಗ ಆತನಿಗೆ ದುಃಖವೂ ಆಯ್ತು; ಸಿಟ್ಟೂ ಬಂದಿತು. ಕೂಡಲೇ ತನ್ನ ಸಂಸ್ಥೆಯ ಹುಡುಗರಿಗೆ ಬರಲು ಹೇಳಿದ.

'ಹೇಳುವಷ್ಟು ಇವರಿಗೆ ಹೇಳಿದರೂ ಈ ಜನ ದಾರಿಗೆ ಬರುತ್ತಿಲ್ಲ; ಇನ್ನು ಇಂತಹ ಘಟನೆಗಳಾದರೆ ಅಲ್ಲಿ ಹೋಗಿ ಅವರನ್ನು ಒದ್ದು ಬರೋಣ' ಎಂದು ಸಿಟ್ಟಿನಿಂದ ದೇವರಾಯ ನುಡಿದ.

'ನಮ್ಮ ನಮ್ಮಲ್ಲಿ ಬಡಿದಾಟ ಸರಿಯಲ್ಲ. ಈ ರೀತಿ ಸುದ್ದಿ ಬಂದರೆ ನಾವು ಅಲ್ಲಿ ಹೋಗೋಣ. ಸತ್ತ ದನದ ಮ್ಯಾಗೆ ಚಿಮಣಿ ಎಣ್ಣಿ ಗೊಜ್ಜೋಣ' ಎಂದು ಒಬ್ಬ ಸಲಹೆ ನೀಡಿದ.

ಈ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು.

ಖಡಕಲಾಟದಲ್ಲಿ ಸಂಜೆ ಸತ್ತ ದನದ ಮಾಂಸ ಹಂಚಿಕೊಳ್ಳುವ ಕಾರ್ಯಕ್ರಮವಿದೆಯೆಂದು ಈ ಗುಂಪಿಗೆ ಗೊತ್ತಾದಾಗ ಎಲ್ಲರೂ ಅಲ್ಲಿ ಹೋದರು. ಸತ್ತ ದನದ ಮಾಂಸಕ್ಕೆ ಚಿಮಣಿ ಎಣ್ಣಿ ಮತ್ತು ಮಣ್ಣನ್ನು ಗೊಜ್ಜಲಾ ಯಿತು. ಆರಂಭದಲ್ಲಿ ಅದನ್ನು ವಿರೋಧಿಸಿದ ಖಟಕಲಾಟ ದಲಿತರು ನಂತರ ಇವರ ಕಳಕಳಿಯನ್ನು ಅರ್ಥ ಮಾಡಿ ಕೊಂಡರು. 'ಇನ್ನು ಮೇಲೆ ಸತ್ತ ದನದ ಮಾಂಸ ತಿನ್ನುವು ದಿಲ್ಲ'ವೆಂದು ಬಾಬಾಸಾಹೇಬರ ಹೆಸರಿನಲ್ಲಿ ಆಣೆ ಮಾಡಿದರು.

ಈ ರೀತಿಯ ಘಟನೆ ನಾಲ್ಕೆಂಟು ಊರುಗಳಲ್ಲಿ ಆದವು. ದೇವರಾಯನ ಪ್ರಾಮಾಣಿಕತೆ ಮತ್ತು ಸಮಾಜದ ಬಗೆಗಿನ ಕಳಕಳಿ ಜನರಿಗೆ ಅರ್ಥವಾಗಿತ್ತು. ತನ್ನ ಮನೆ-ಮಾರು, ಹೆಂಡತಿ-ಮಕ್ಕಳನ್ನು ಬಿಟ್ಟು ನಿಸ್ವಾರ್ಥ ರೀತಿಯಲ್ಲಿ ದೇವರಾಯ ಅಡ್ಡಾಡುವುದನ್ನು ಜನ ಕಂಡಿದ್ದರು. ಅವನ ಮಾತುಗಳನ್ನು ಧಿಕ್ಕರಿಸಿದರೆ ಅದು ಬಾಬಾಸಾಹೇಬರಿಗೆ ಮಾಡುವ ಅಪಚಾರವೆಂಬುದನ್ನು ಜನ ಅರಿತಿದ್ದರು. ಹೀಗಾಗಿ ದೇವರಾಯನ ಮಾತುಗಳು ಜನರ ಮೇಲೆ ಮಾಂತ್ರಿಕ ಶಕ್ತಿಯನ್ನು ಬೀರುತ್ತಿದ್ದವು. ಬರುಬರುತ್ತ ಎಲ್ಲ ಊರುಗಳಲ್ಲಿ ದಲಿತರು ಸತ್ತ ದನದ ಮಾಂಸ ಸೇವನೆ ಯನ್ನು ಪೂರ್ತಿಯಾಗಿ ಬಿಟ್ಟು ಬಿಟ್ಟರು.

ದಲಿತರ ಈ ನಿರ್ಧಾರದಿಂದ ಫಾದರ್ ಡಿಸಿಲ್ವಾಗೆ ತುಂಬ ಸಂತೋಷವಾಯಿತು. 'ಇವರಲ್ಲಿ ಸ್ವಚ್ಛತೆ ಬಗ್ಗೆ ಮತ್ತು ಮೂಢನಂಬಿಕೆಗಳ ವಿರುದ್ಧ ಅರಿವು ಮೂಡಿಸಿರಿ' ಎಂದು ಅವರು ದೇವರಾಯನಿಗೆ ಹೇಳಿದರು.

ತನ್ನ ಮುಂದಿನ ಹೆಜ್ಜೆಯ ಬಗ್ಗೆ ದೇವರಾಯ ಬಾಬಾಸಾಹೇಬರಿಗೆ ಪತ್ರ ಬರೆದ. ಅಲ್ಲಿಂದಲೂ ಅವನಿಗೆ ಹಸಿರು ನಿಶಾನೆಯ ಸಂಕೇತ ಸಿಕ್ಕಿತು.

ದಲಿತರು ವಾಸಿಸುವ ಕೇರಿಗಳು ನರಕದ ಪ್ರತಿ ರೂಪಗಳಂತಿದ್ದವು. ಒಂದಾನೊಂದು ಕಾಲದಲ್ಲಿ ಇಡೀ ಭಾರತವನ್ನು ಆಳಿದ ಈ ಜನರ ಈಗಿನ ಪರಿಸ್ಥಿತಿಯನ್ನು ನೋಡಿ ದೇವರಾಯನ ಕಣ್ಣಿಂದ ನೀರುಬಂತು. ರಾವಣ, ಬಲಿ ಚಕ್ರವರ್ತಿ, ಮಹಿಷಾಸುರ, ಜಾಲಂಧರ ಮುಂತಾದ ಪರಾಕ್ರಮಿ ರಾಜರ ಪರಂಪರೆಯ ಈ ಜನ; ಹರಪ್ಪಾ ಮೋಹೆಂಜೋದಾರೋ ಸಂಸ್ಕೃತಿಯನ್ನು ಸ್ಥಾಪಿಸಿ ಅತ್ಯಂತ ಉಚ್ಚಾಯ ಸ್ಥಿತಿಯಲ್ಲಿದ್ದ ಈ ಜನರು ಈಗ ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿ ಯಾವ ನಾಗರಿಕ ಸೌಲಭ್ಯಗಳಿಲ್ಲದೆ ವಾಸಿಸುತ್ತಿರುವ ದೌರ್ಭಾಗ್ಯಕ್ಕೆ ದೇವರಾಯನ ಹೃದಯ ಮಿಡುಕಿತು. ಈ ಜನರಿಗೆ ತಾವು ಯಾರು? ತಮ್ಮ ಇತಿಹಾ ಸವೇನು? ಎಂಬ ಕಲ್ಪನೆಯೆ ಇಲ್ಲವಲ್ಲ ಎಂಬ ದುಃಖವೂ ಆಯಿತು. 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂದು ಬಾಬಾಸಾಹೇಬರು ಹೇಳಿದ್ದು ಇವರಿಗೆ ಗೊತ್ತಿಲ್ಲವಲ್ಲ. ಎಂದೂ ಆತ ದುಃಖಿಸಿದ. ಈ ಜನರು ಎದ್ದರೆ ಕಳೆದುಕೊಂಡಿದ್ದ ತಮ್ಮ ವೈಭವವನ್ನು ಖಂಡಿತವಾಗಿಯೂ ಮರಳಿ ಪಡೆಯುತ್ತಾರೆಂದೂ ಆತನಿಗೆ ಗೊತ್ತಿತ್ತು.

ದಲಿತ ಕೇರಿ ಅಸ್ವಚ್ಛತೆಯ ಆಗರವಾಗಿತ್ತು. ದೇವ ರಾಯ ಅಲ್ಲಿದ್ದ ಜನರಿಗೆ ಸ್ವಚ್ಛತೆಯ ಮಹತ್ವ ತಿಳಿಹೇಳಿದ. ಪ್ರತಿದಿನ ಸ್ನಾನ ಮಾಡಬೇಕೆಂದು ಪ್ರತಿಪಾದಿಸಿದ. ತಿನ್ನುವ ಮತ್ತು ಉಡುವಲ್ಲಿ ಒಂದು ಶಿಸ್ತು ಪಾಲಿಸಬೇಕೆಂದು ಹೇಳಿದ. ಮೂಢನಂಬಿಕೆಗಳಲ್ಲಿ ನಂಬಿಕೆಯನ್ನು ಇಡಕೂಡ ದೆಂದೂ ಅವರಿಗೆ ಮನವರಿಕೆ ಮಾಡಿಕೊಟ್ಟ.

ದೇವದಾಸಿ ಪದ್ಧತಿ ಆಗ ವ್ಯಾಪಕವಾಗಿ ಬಳಕೆಯ ಲ್ಲಿತ್ತು. ಸವದತ್ತಿ ಎಲ್ಲಮ್ಮಳಿಗೆ ಮಗಳನ್ನು ಬಸವಿ ಬಿಟ್ಟರೆ ಅದರಿಂದ ದೇವಿ ಸಂತುಷ್ಟಳಾಗುತ್ತಾಳೆಂದು ದಲಿತರು ಭಾವಿಸಿದ್ದರು. ಈ ದೇವದಾಸಿ ಹುಡುಗಿ ಲಗ್ನ ಮಾಡಿಕೊ ಳ್ಳುವಂತಿರಲಿಲ್ಲ. ಊರ ಜನರಿಗೆ ಸೆರಗು ಹಾಸುತ್ತ ಆಕೆ ತನ್ನ ಜೀವನವನ್ನು ಕಳೆಯಬೇಕಾಗುತ್ತಿತ್ತು. ವಾರ್ಧಕ್ಯದಲ್ಲಿ ಈ ದೇವದಾಸಿಯ ಪಾಡು ನಾಯಿ ಪಾಡಾಗಿರುತ್ತಿತ್ತು. ಅನೇಕ ರೋಗಗಳಿಗೆ ಬಲಿಯಾದ ಈ ದೇವದಾಸಿಯರು ತಮ್ಮ ಇಳಿವಯಸ್ಸಿನಲ್ಲಿ ಹುಚ್ಚಿಯರಾಗುತ್ತಿದ್ದರು. ಇವರು ಹಡೆಯುವ ಮಕ್ಕಳಿಗೆ ಸಮಾಜದಲ್ಲಿ ಯಾವ ಸ್ಥಾನವೂ ಇರಲಿಲ್ಲ.

ದಲಿತರು ವಾಸಿಸುವ ಕೇರಿಗಳು ನರಕದ ಪ್ರತಿ ರೂಪಗಳಂತಿದ್ದವು. ಒಂದಾನೊಂದು ಕಾಲ ದಲ್ಲಿ ಇಡೀ ಭಾರತವನ್ನು ಆಳಿದ ಈ ಜನರ ಈಗಿನ ಪರಿಸ್ಥಿತಿಯನ್ನು ನೋಡಿ ದೇವರಾ ಯನ ಕಣ್ಣಿಂದ ನೀರುಬಂತು. ರಾವಣ, ಬಲಿ ಚಕ್ರವರ್ತಿ, ಮಹಿಷಾಸುರ, ಜಾಲಂಧರ ಮುಂತಾದ ಪರಾಕ್ರಮಿ ರಾಜರ ಪರಂಪರೆಯ ಈ ಜನ; ಹರಪ್ಪಾ ಮೋಹೆಂಜೋದಾರೋ ಸಂಸ್ಕೃತಿಯನ್ನು ಸ್ಥಾಪಿಸಿ ಅತ್ಯಂತ ಉಚ್ಚಾಯ ಸ್ಥಿತಿಯಲ್ಲಿದ್ದ ಈ ಜನರು ಈಗ ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿ ಯಾವ ನಾಗರಿಕ ಸೌಲಭ್ಯ ಗಳಿಲ್ಲದೆ ವಾಸಿಸುತ್ತಿರುವ ದೌರ್ಭಾಗ್ಯಕ್ಕೆ ದೇವ ರಾಯನ ಹೃದಯ ಮಿಡುಕಿತು. ಈ ಜನರಿಗೆ ತಾವು ಯಾರು? ತಮ್ಮ ಇತಿಹಾಸವೇನು? ಎಂಬ ಕಲ್ಪನೆಯೆ ಇಲ್ಲವಲ್ಲ ಎಂಬ ದುಃಖವೂ ಆಯಿತು.

ಈ ಪದ್ಧತಿಗೆ ಕೊಡಲಿಯೇಟು ಹಾಕಬೇಕೆಂದು ದೇವರಾಯ ನಿರ್ಧರಿಸಿದ. ಜನರನ್ನು ಸೇರಿಸಿ ಈ ಪದ್ಧ ತಿಯ ಹಿಂದಿರುವ ದೊಡ್ಡ ಜಾತಿ ಜನರ ಕುತಂತ್ರವನ್ನು ದೇವರಾಯ ಬಯಲುಗೊಳಿಸಲಾರಂಭಿಸಿದ.

'ಒಂದು ವೇಳೆ ನಾವು ಈ ಪದ್ಧತಿಯನ್ನು ನಿಲ್ಲಿಸಿದ್ರ, ದೇವಿ ಸಿಟ್ಟಿಗೆ ಬಂದ್ರ ಆಗ ಏನ್ ಮಾಡ್ತಿ?' ಎಂದು ಕೇಳಿದ ಬಸಪ್ಪ. ಆತ ತನ್ನ ಮಗಳನ್ನು ಮುಂದಿನ ತಿಂಗಳು ದೇವದಾಸಿ ಬಿಡುವವನಿದ್ದ.

'ದೇವಿಗೆ ನಾವು ತಾಯಿ ಅಂತೇವಿ; ಅವ್ವ ಅಂತೇವಿ; ಜಗತ್ತಿನಲ್ಲಿಯ ಯಾವುದೇ ಅವ್ವ ಅಥವಾ

ಯಿ ತನ್ನ ಮಗಳು ಹಾಳಾಗಬೇಕಂತ ಬಯಸ್ತಾ ನ್?' ಪ್ರಶ್ನಿಸಿದ ದೇವರಾಯ.

'ಇಲ್ಲ' ಎಂದ ಬಸಪ್ಪ.

'ಹಾಗಾದರೆ ಈ ತಾಯಿ ಯಾಕ ಸಿಟ್ಟಿಗೆ ಬರ್ತಾಳ? ವು ಅಕೀನ್ನ ಪೂಜಾ ಮಾಡೋಣ. ನಮ್ಮ ಭಕ್ತಿ ರ್ಸೋಣ. ಆದ್ರ ನಮ್ಮ ಮನಿ ಹುಡುಗಿಯರನ್ನು ದೇವ ಸಿ ಬಿಟ್ಟು ಅವರನ್ನು ಸೂಳೆಯರಾಗಿ ಮಾಡೋದು ಡ' ಎಂದ ದೇವರಾಯ.

'ಇಷ್ಟ ವರ್ಷ ನಡಕೊಂತ ಬಂದ ಪದ್ಧತಿ ಮುರ ರ ದೇವಿ ಶಾಪಾ ಕೊಡುದಿಲ್ಲೇನು?' ಕಲ್ಲಪ್ಪ ಕೇಳಿದ.

'ಹಂಗಾಂದ್ರ ನಾ ಒಂದು ಪ್ರಶ್ನೆ ಮಾಡ್ತೇನಿ. ಇಷ್ಟ ನ ನಾವ ಈ ಪದ್ಧತಿ ನಡೆಸಿಕೊಂಡ ಬಂದ್ವಿ ಸುಮಾರು ಮಾರುಗಳು ದೇವದಾಸಿಯರಾದರು, ಇದರಿಂದ ಷಿಗೊಂಡ ದೇವಿ ನಮ್ಮ ಬಡತನವನ್ನೇಕೆ ಕಿತ್ತು ಹಾಕ ಲ್ಲ? ಪ್ರಾಣಿಗಳಂತೆ ಬಾಳುವ ಶಿಕ್ಷೆಯನ್ನೇಕೆ ಅವಳು ಮಗೆ ಕೊಡುತ್ತಿದ್ದಾಳೆ? ಇಲ್ಲಿರುವ ಒಬ್ಬರಾದರೂ ಹೇಳ್ರಿ: ದಾ ದರೂ ನೀವು ಎರಡು ಹೊತ್ತು ಹೊಟ್ಟೆ ತುಂಬ ಟ ಮಾಡಿದ್ದೀರಾ? ಎಂದಾದರೂ ನೀವು ಮೈಮುಚ್ಚು ಷ್ಟು ಅರಿವೆ ಹಾಕಿಕೊಂಡಿದ್ದೀರಾ? ಎಂದಾದರೂ ನೀವು ತೋಷವಾಗಿದ್ದೀರಾ? ಹೇಳಿ' ಎಂದ ದೇವರಾಯ.

ಅವನ ಮಾತುಗಳು ಜನರ ಮೇಲೆ ನೇರವಾಗಿ ಣಾಮ ಬೀರಿದವು. 'ಹೌದಲ್ಲ, ಇಷ್ಟು ವರ್ಷ ತಪ್ಪದೆ ವು ಸೇವಾ ಮಾಡಿದ್ದರೂ ನಮಗೆ ಒಂದು ಕ್ಷಣದ ಖಾನೂ ಸಿಗಲಿಲ್ಲ. ಅದೇ ದೊಡ್ಡ ಜಾತಿಯ ಜನ ದೂ ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯರಾಗಿ ಡಲಿಲ್ಲ. ಅವರು ಮಾತ್ರ ಸುಖದಿಂದ ಇದ್ದಾರೆ. ನಮ್ಮ ಣ್ಣುಮಕ್ಕಳೂ ರೋಗರುಜಿನುಗಳಿಂದ ಸಾಯುತ್ತಿದ್ದಾರೆ, ದು ಅಲ್ಲಿ ನೆರೆದ ದಲಿತರು ವಿಚಾರ ಮಾಡಹತ್ತಿದ್ದರು.

'ಬಾಬಾಸಾಹೇಬರೂ ಈ ವಿಷಯದ ಬಗ್ಗೆ ಸ್ಪಷ್ಟ ಯವನ್ನು ಹೊಂದಿದ್ದಾರೆ. ಇನ್ನು ಮೇಲೆ ಯಾರೂ ಮ್ಮ ಮಕ್ಕಳನ್ನು ದೇವದಾಸಿಯರನ್ನಾಗಿ ಬಿಡುವಂತಿಲ್ಲ ದು ಅವರೇ ಹೇಳಿದ್ದಾರೆ' ಎಂದು ಸಮಯ ನೋಡಿ ರಿಗೆ ಬಾಬಾಸಾಹೇಬರ ಅಭಿಪ್ರಾಯವನ್ನು ದೇವರಾಯ ಳಿದ.

'ದೇವರ ಪೂಜೆಗೆ ನನ್ನ ಅಭ್ಯಂತರವೇನೂ ಇಲ್ಲ; ದರೆ ಎಲ್ಲ ರೀತಿಯ ಮೂಢನಂಬಿಕೆಗಳಿಂದ ನಾವು ರಬರಬೇಕಾಗಿದೆ. ದೊಡ್ಡ ಜಾತಿಯ ಜನರಿಗೆ ಇಲ್ಲದ ರ್ಮಿಕ ಬಂಧನಗಳು ನಮಗೇಕೆ? ಅವರ ಎಲ್ಲ ಕೆಲಸಗ ೂ ನಾವು ಬೇಕು; ಆದರೆ ನಮ್ಮನ್ನು ಮುಟ್ಟಿಸಿಕೊಳ್ಳಲು ರಿಗೆ ಧರ್ಮ ಅಡ್ಡ ಬರುತ್ತದೆ. ಅಂತಹ ಧರ್ಮಕ್ಕೆ ಬಂಧಪಟ್ಟ ಎಲ್ಲ ಆಚರಣೆಗಳನ್ನು ನಾವು ತ್ಯಜಿಸೋಣ' ದ ದೇವರಾಯ.

ಮುಂದಿನ ದಿನಗಳಲ್ಲಿ ದಲಿತರ ಜೀವನ ಕ್ರಮದಲ್ಲಿ ಹತ್ತರ ಬದಲಾವಣೆಗಳಾದವು. ಸತ್ಯ, ಸೂರ್ಯನಂತೆ ರ ಎದುರಿಗೆ ಬಂದು ನಿಂತಿದ್ದ; ಅದನ್ನು ಒಪ್ಪಿಕೊಂಡ ಲಿತರು ಮೂಢನಂಬಿಕೆಗಳಿಗೆ ತಿಲಾಂಜಲಿಯನ್ನು ಡಲು ನಿರ್ಧರಿಸಿದರು. ಕೆಲ ಹಳ್ಳಿಗಳಲ್ಲಿ ದೇವರ ಜಗುಲಿ ನ್ನೇ ವಿಸರ್ಜಿಸುವ ಕ್ರಿಯೆಯೂ ನಡೆಯಿತು. ಇಡೀ ವರ ಜಗುಲಿಯನ್ನು ನದಿಗೆ ಬಿಟ್ಟು ಬಂದರು.

'ಇದು ಮನು ಸಂಸ್ಕೃತಿಗೆ ದೊಡ್ಡ ಹೊಡೆತ' ದುಕೊಂಡ ದೇವರಾಯ. (ಮುಂದುವರಿಯುವುದು)

ನಾಗಬೆತ್ತದ ಹುಡುಗಿ

ಲಕ್ಕೂರು ಸಿ. ಆನಂದ



ಮಾತು ಸೂತಕದ ಮುನ್ನ
ಮೌನ ಗುಡಾರದ ತುಂಬ ಹರಿದಾಡಿ
ಮಾತಗುತ್ತದೆ ತುಟಿಯಲ್ಲಿ

ಶಬ್ದ ನಿಶ್ಯಬ್ದದ ಹಂಗಿನ ತುದಿಯಲ್ಲಿ
ಸೆಳೆತ ತಪ್ಪುತ್ತದೆ ಮತ್ತೆ-ಮತ್ತೆ
ಮಾತಿಗೆ ಮೈಯಾನಿಸಿ
ಅದೇ ಬಯಲಿನ ಮೇಲೆ ದೀಪವಾಗುತ್ತೆ

ಮೂರನೇ ಜಾವದ ನಿದ್ದೆಗೆ
ಮುತ್ತಿನರಮನೆ ಕಟ್ಟಿ,
ಮೋಹದ ಲೊಲಕದ ಶಬುದ ಮೆಟ್ಟಿ
ಸುತ್ತು ಬಳಸಿ ಮೌನ ಮುರಿಯಯತ್ತದೆ
ಮತ್ತೆ ಬೆಳಕರಿದಂತೆ ಮಾತಾಗುತ್ತದೆ

ಕವುಚಿ ನಿಂತ ಬಯಲ ಬಾಗಿಲ ತುಂಬ
ಒತ್ತುವರಿಯೆಂದು ಒತ್ತಾಗಿ ಮೇಳೈಸಿ
ಹೊತ್ತು ಹೊತ್ತಿಗೂ ಹಂಬಲದ ದೀವುರಿಸಿ
ಮಸಣದ ಹಾದಿಗೆ ಹೆಜ್ಜೆಯಾಗುತ್ತದೆ
ಸರಹೊತ್ತು ಸರಿದಂಗೆ

ನಿಟಾರನೆ ನಿಂತು ಬಿರುಗಣ್ಣು ಬೀರುತ್ತ
ಗಾಳಿ ಮಾರೆಮ್ಮನಂತೆ ಕುಣಿಕುಣಿದು
ನೆಲದೊಡಲಿನ ತುಂಬ ಕಾಯವಾಗುತ್ತದೆ

ನುಡಿಯಾಗಿ ಸಿರಿಯಾಗಿ
ನೆಲ ಬದುಗಳ ಬಂಧುವಾಗಿ
ಬಾಡಿದೆದೆಯ ಮೈಯ ಆಭರಣವಾಗಿ
ಕಣ್ಣಕಾವಡಿ ತುಂಬ ನಿಗುರಿ ಹೊಳೆವ
ಮಿಂಚಾಗಿ ಕೊನೆಗೆ ಮಾದತಾಗುತ್ತದೆ

ಪಹಣಿ ಬರೆದಿಟ್ಟು ಹಿಡಿಯಲಾಗದು ಶಬುದ
ತಹಶೀಲು ಮಾಡಿ ಮಡಚಲಾಗದ ಜಲುಮ
ಮೈಯ ಕಾವಲಿನೊಳಗೆ ಮರೆತ ಮರ್ತ್ಯ
ಗಂಧಿಯ ಹಾಡು ಮೈಯಾಗಿ ಕಾಯವಾಗಿ

ಅಗ್ನಿ ಗರ್ಭದ ಹಗಲು ಜೋಳಿಗೆಯಲ್ಲಿ
ಅರ್ಧ ನರಸತ್ತ ಅಧಮರ ಅರವಟ್ಟಿಗೆ
ಆರು ಮೂರಾಗಿ ಮೂರು ನೂರಾಗಿ

ಊರೆಲ್ಲಾ ನೂರುಸೊಲ್ಲು ನುಡಿಯಾಗಿ
ಪರರ ನುಡಿಯಂಚಿಗೆ ಎಳ್ಳುದೀಪವನುರಿಸಿ
ಒಂದೊಂದು ಮಾತಗಿ,
ಮಾತಿಗೆ ಮೈಯಾನಿಸಿದ ನಾಗಬೆತ್ತದ
ಹುಡುಗಿಯ ಮೈಯಲ್ಲಿ ನೂರೆಂಟು ಕಣ್ಣು.

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

○ಡಾ॥ ಬಂಜಗೆರೆ ಜಯಪ್ರಕಾಶ
○ಡಾ॥ ಲಕ್ಷ್ಮೀಪತಿ ಸಿ.ಜಿ
○ಡಿ. ಡೊಮಿನಿಕ್
○ಡಾ॥ ಜೋಗನ್ ಶಂಕರ್

ಅಹಿಂದ ಚಳುವಳಿ: ಅನಿವಾರ್ಯ ಚಾರಿತ್ರಿಕ ಸನ್ನಿವೇಶ

ಸಾಂಪ್ರದಾಯಿಕ ಚೌಕಟ್ಟಿನಲ್ಲಿ ವಿವರಿಸಿವುದಾದರೆ, 'ಅಹಿಂದ ಚಳುವಳಿ' ಒಂದು ಚಳುವಳಿಯೇ ಅಲ್ಲ. ಅದು ಮುಂದೊಂದು ದಿನ ಚಳುವಳಿಯಾಗಿ ರೂಪುಗೊಳ್ಳಲಿರುವ ಹೂತುಕೊಂಡಿರುವ ಆಶಯಗಳ, ಚದುರಿದ ಪ್ರಜ್ಞೆಯ ಬೀಜರೂಪದಂತೆ ಕಾಣಿಸುತ್ತಿದೆ. ಇಲ್ಲವೇ ಈ ಕಾಲಘಟ್ಟದ "ಚಳುವಳಿ"ಯ ಸ್ವರೂಪ ಈ ರೀತಿಯಲ್ಲಿಯೇ ಇರಬಹುದೇನೋ?

ರೈತ, ದಲಿತ, ಮಹಿಳ ಮತ್ತಿತರ ಚಳುವಳಿಗಳ ಕಡಿಮೆಯಾದ ಕಾವು, ಜಾತಿ ಐಡೆಂಟಿಟಿಯ ಹುಡುಕಾಟ, ನಕ್ಸಲ್ ಚಟುವಟಿಕೆಗಳ ಸೀಮಿತ ಪರಿಧಿಯ ತೀವ್ರತೆ, ನಿಜವಾಗಿಯೂ ಕರ್ನಾಟಕದಲ್ಲಿ "ಅಹಿಂದ"ಕ್ಕೆ ಅಗಾಧವಾದ "space" ನ್ನುಂಟುಮಾಡಿವೆ. ಈ ಸ್ಪೇಸ್ ಅಹಿಂದಕ್ಕೆ ಚಳುವಳಿಯಾಗುವ ಸಾಧ್ಯತೆಯನ್ನು ದಟ್ಟವಾಗಿಸಿದೆ.

ಅಹಿಂದ ಸಂಘಟನೆ ಕೋಲಾರದಲ್ಲಿ ಪ್ರಗತಿಪರ ಗೆಳೆಯರ ಬಳಗದಿಂದ ರೂಪುಗೊಂಡಾಗ ಅದೊಂದು ಪಾರಂಪರಿಕ ಚಳುವಳಿಯ ಆಶಯ ಹೊಂದಿದ್ದು ನಿಜವಾದರೂ, ಮುಂದುವರೆದು ತಾನೇ ಒಂದು ಬೃಹತ್ ಚಳುವಳಿಯಾಗುವ ಸ್ವರೂಪ ಮಾತ್ರ ಪಡೆಯಲಾಗಿರಲಿಲ್ಲ.

ಅಹಿಂದವು ಯಾವುದೇ ನಿರ್ದಿಷ್ಟ ಬೇಡಿಕೆ, ಆಶಯವಿಲ್ಲದೆ, ಸಂವಿಧಾನರಹಿತವಾಗಿ ಕೈಗಾರಿಕೆಗಳಲ್ಲಿ ಕಂಡುಬರುವ 'wild cat strike' (ಕಾಡುಬೆಕ್ಕಿನ ಆಕ್ರಮಣ) ನಂತೆ, ತನ್ನ ರಾಜಕೀಯ ಎದುರಾಳಿಯನ್ನು ದುರುಗಟ್ಟಿ ನೋಡಿ ಬೆಚ್ಚಿ ಬೀಳಿಸಿತು.

ಈ ಬೆಚ್ಚಿ ಬೀಳಿಸುವಿಕೆಯು ಸದ್ಯದ ಸಂದರ್ಭದಲ್ಲಿ ಅವಕಾಶವಾದಿ ರಾಜಕಾರಣದ ಒಂದು ಭಾಗವಾಗಿ ಕಂಡು ಬರುತ್ತದೆ. ಆದರೆ 'ಅವಕಾಶವಾದಿ ರಾಜಕಾರಣ'ವೆಂಬುದು ಶುದ್ಧ ಮಾರ್ಕ್ಸಿಸ್ಟ್ ಪರಿಭಾಷೆಯಲ್ಲಿ ಒಂದು ನಕಾರಾತ್ಮಕ ಪದವಾದರೂ ಕೂಡ ಪ್ರಜಾಪ್ರಭುತ್ವ ಪರಿಭಾಷೆಯಲ್ಲಿ ದುರ್ಬಲ ಜನಸಮುದಾಯಗಳ ಆಶಯಗಳನ್ನು ಪ್ರತಿನಿಧಿಸುವ ಶಕ್ತಿಯನ್ನು ಹೊಂದಿದೆ. ಅಂದರೆ, ಅಹಿಂದ ಅವಕಾಶವಾದಿ ರಾಜಕಾರಣದ ಬಿಂದುವಿನಿಂದ ಆರಂಭಗೊಂಡು ತನ್ನ ಕ್ಷೇತ್ರವೆಂದು ಊಹಿಸಲಾಗಿರುವ ಅಥವಾ ಜನಸಮುದಾಯ ಭಾವಿಸುತ್ತಿರುವಂತೆ ಅದು ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಸಮುದಾಯಗಳನ್ನು ಪ್ರತಿನಿಧಿಸುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಆಗಿದೆ? ಎಂಬ ಪ್ರಶ್ನೆ ಸದ್ಯ ನಮ್ಮೆದುರಿದೆ.

'ಅಹಿಂದ' ಸಾರ್ವಜನಿಕವಾಗಿ ಕಾಣಿಸಿಕೊಂಡದ್ದು ಮೂರು ತಿಂಗಳ ಹಿಂದಷ್ಟೆ. ರಾಜಕೀಯ ಚಳುವಳಿಯ ಸಂದರ್ಭವನ್ನು ಈ ಅವಧಿ ಚಿಕ್ಕದಾದರೂ ಸಹ – concrete ಆದ ಒಂದು ಆಶಯ ಸಾಂಕೇತಿಕವಾಗಿಯಾದರೂ ಕಾಣಿಸಿಕೊಳ್ಳಬೇಕಿತ್ತು. (ಅಂದರೆ ಗಾಂಧಿ ಸಮುದ್ರ ದಂಡೆಯಲ್ಲಿನ ಹಿಡಿ ಉಪ್ಪನ್ನು ಮುಟ್ಟಿದ್ದಾಗಲೀ, ಅಂಬೇಡ್ಕರ್ ಚೌದರ್ ಕೆರೆಯ ನೀರನ್ನು ಮುಟ್ಟಿದ್ದಂತಹ ಸಾಂಕೇತಿಕ ಕ್ರಿಯೆಯಾಗಲೀ ಇಲ್ಲಿ ಇಲ್ಲ).

ಇತರ ರಾಜಕೀಯ ಪಕ್ಷಗಳಂತೆ ಅಹಿಂದವು ಎಲ್ಲಾ ಕಡೆಯ ಸಮಾವೇಶ ನಡೆಸುತ್ತಾ ಇರುವುದು ಚಳುವಳಿ ಎಂದು ಕರೆಯುವುದಾದರೆ ಅದರ ಅನಿವಾರ್ಯತೆಯನ್ನು ಪ್ರಶ್ನಿಸುತ್ತದೆ. ಆದರೆ ಈ ಸಮಾವೇಶಗಳಲ್ಲಿ ಜನಸಮುದಾಯಗಳ ಅರಿವನ್ನು ರಾಜಕೀಯವಾಗಿ ಎಚ್ಚರಿಸಿರುವುದಂತು ಹೌದು.

ಹಾಗಾದರೆ ಅಹಿಂದದ ಚಾರಿತ್ರಿಕ ವಿಶ್ಲೇಷಣೆ ಸಾಧ್ಯವೇ? ಕರ್ನಾಟಕದಲ್ಲಿ ಆಗುತ್ತಿರುವ ಸಮಜೋ–ರಾಜಕೀಯ ಬದಲಾವಣೆಯನ್ನು ಚಾರಿತ್ರಿಕವಾಗಿ ಅರ್ಥೈಸುವುದು ಹೇಗೆ? ಈ ಬದಲಾವಣೆಗಳಲ್ಲಿ ಜಾತಿಪದ್ಧತಿ ತನ್ನ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುತ್ತಿದೆಯೇ? ಅಥವಾ ಪ್ರಸ್ತುತದಲ್ಲಿ ಜನ ತಮ್ಮ ಸಾಮುದಾಯಿಕ 'ಐಡೆಂಟಿಟಿ'ಗಳನ್ನು ಹೊಸದಾಗಿ ಬಳಸಿಕೊಂಡು, ತಮ್ಮ ನಾಗರಿಕ ಆಶೋತ್ತರಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆಯೇ? ಈ ಪ್ರಶ್ನೆಗಳಿಗೆ ಚಾರಿತ್ರಿಕವಾಗಿ ಉತ್ತರಗಳನ್ನು ಹುಡುಕಿಕೊಳ್ಳುವ ಅನಿವಾರ್ಯತೆಯಂತು ಇಂದು ನಮ್ಮೆದುರು ಇದೆ.

> **ಚರ್ಚೆ**
>
> **ಅಹಿಂದದ ಚಾರಿತ್ರಿಕ ವಿಶ್ಲೇಷಣೆ ಸಾಧ್ಯವೇ? ಕರ್ನಾಟಕದಲ್ಲಿ ಆಗುತ್ತಿರುವ ಸಮಜೋ–ರಾಜಕೀಯ ಬದಲಾವಣೆಯನ್ನು ಚಾರಿತ್ರಿಕವಾಗಿ ಅರ್ಥೈಸುವುದು ಹೇಗೆ? ಈ ಬದಲಾವಣೆಗಳಲ್ಲಿ ಜಾತಿಪದ್ಧತಿ ತನ್ನ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುತ್ತಿದೆಯೇ? ಅಥವಾ ಪ್ರಸ್ತುತದಲ್ಲಿ ಜನ ತಮ್ಮ ಸಾಮುದಾಯಿಕ 'ಐಡೆಂಟಿಟಿ'ಗಳನ್ನು ಹೊಸದಾಗಿ ಬಳಸಿಕೊಂಡು, ತಮ್ಮ ನಾಗರಿಕ ಆಶೋತ್ತರಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆಯೇ? ಈ ಪ್ರಶ್ನೆಗಳಿಗೆ ಚಾರಿತ್ರಿಕವಾಗಿ ಉತ್ತರಗಳನ್ನು ಹುಡುಕಿಕೊಳ್ಳುವ ಅನಿವಾರ್ಯತೆಯಂತು ಇಂದು ನಮ್ಮೆದುರು ಇದೆ.**

ಚಾರಿತ್ರಿಕ ವಿಶ್ಲೇಷಣೆ:

ಯಾವುದೇ ದೇಶ, ಸಮಾಜ ಮತ್ತು ಸಮುದಾಯಗಳು ಸಾರ್ವತ್ರಿಕವಾಗಿ ಒಪ್ಪಿರುವ ಒಂದು ಸಂಗತಿಯಂದರೆ "ಅಭಿವೃದ್ಧಿ". ತಾವು ಆದಷ್ಟು ಬೇಗ ಈ "ಅಭಿವೃದ್ಧಿ" ಪಥದಲ್ಲಿ ಮುಂದುವರೆಯಬೇಕೆಂಬ ಹಂಬಲವೂ ಸದಾ ವ್ಯಕ್ತವಾಗುತ್ತಲೇ ಇರುತ್ತದೆ. ಆದರೆ, ಭಾರತ/ ಕರ್ನಾಟಕದಂತಹ ದೇಶ/ರಾಜ್ಯಗಳಲ್ಲಿ ಈ ಅಭಿವೃದ್ಧಿ/ಪ್ರಗತಿ ಎನ್ನುವ ಪರಿಕಲ್ಪನೆಗಳು ಹಾಗೂ ಆಧುನಿಕತೆಯ ಸವಲತ್ತುಗಳು ನಮಗೆ ಅರ್ಥವಾಗುವುದೇ ಜಾತಿಯಾಧಾರಿತ ಶ್ರೇಣೀಕೃತ ಮೌಲ್ಯಗಳಲ್ಲೇ. ಆದ್ದರಿಂದ ಈ ಏಣಿ–ಶ್ರೇಣಿ ವ್ಯವಸ್ಥೆಯಡಿ ಮುದುಡಿಕೊಂಡಿರುವ, ಇನ್ನೂ ಶೈಕ್ಷಣಿಕ ಅವಕಾಶಗಳಿಂದ ದೂರವೇ ಇರುವ ಸಮುದಾಯಗಳೆಲ್ಲಾ ಮೇಲ್ಮುಖ–ಚಲನೆಯಲ್ಲಿರುವ ಪ್ರಬಲ ಜಾತಿಗಳನ್ನೆ ಮಾದರಿಯಾಗಿಟ್ಟುಕೊಂಡು ಸಾಗುತ್ತಿರುವುದಂತು ಸಾಮಾನ್ಯವಾಗಿದೆ. ಅಂದರೆ ಅವುಗಳಂತೆ ತಾವೂ ಸಹ ಪ್ರಬಲ ಜಾತಿಗಳಾಗಬೇಕೆಂದು ಈ ಎಲ್ಲಾ ಸಮುದಾಯಗಳು ಸಾಧ್ಯವಾದಷ್ಟು ಪ್ರಯತ್ನಿಸುತ್ತಿವೆ. 'ತಾವು' ಸಹ ಮೇಲ್ಜಾತಿಗಳಲ್ಲಿ ಹುಟ್ಟಿದಲ್ಲಿ/ಅವರಂತಾಗಿ ಬಿಟ್ಟಲ್ಲಿ 'ಎಷ್ಟು ಚೆನ್ನಾಗಿರುತ್ತಿತ್ತಲ್ಲಾ' ಎಂದು ಕನವರಿಸುತ್ತಿರುತ್ತವೆ. ಅಲ್ಲದೆ, ತಳಸ್ತರ ಸಮುದಾಯಗಳಲ್ಲೆ ಎದ್ದು ಕಾಣುವ 'ಭಿನ್ನತೆ'ಗಳನ್ನು ಅಣಕ ಮಾಡುತ್ತಾ ಅವನ್ನು ಸಾಧ್ಯವಾದಷ್ಟು ಮಟ್ಟಿಗೆ ಮುಚ್ಚಿಡುವ ಅಥವಾ ಏಕೀಕರಿಸುವ ಪ್ರಯತ್ನವನ್ನೂ ಸಹ ನಾವು ಕಾಣುತ್ತಿದ್ದೇವೆ. ಇಂತಹ ಪ್ರಯತ್ನಗಳಲ್ಲಿ 'ಸಾಮಾಜಿಕ ನ್ಯಾಯ'ದ ನಿರೀಕ್ಷೆಗಳು ಇರುತ್ತವೆ ಎನ್ನುವುದನ್ನು ತಳ್ಳಿಹಾಕಲಾಗದು.

ಹೀಗಿರುವಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯನಿಂದ ರಾಜಕುಮಾರನವರೆಗೆ ಪ್ರತಿಯೊಬ್ಬ ಪ್ರಜೆ/ಸಮುದಾಯ ತನ್ನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಮಾನ ಅವಕಾಶಗಳಿರುತ್ತವೆ ಎಂದು ಭಾವಿಸಲಾಗಿದೆ. ಇದು ಎಲ್ಲರಿಗೂ ಸಮಾನ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಾನ–ಮಾನ ಮತ್ತು ಅವ

ಶಗಳನ್ನು ಒಳಗೊಂಡಿರುತ್ತದೆ ಎಂದೂ ಸಹ ನಂಬು ವೆ. ಈ ಕಾರಣದಿಂದಲೇ ಕಳೆದ ಹಲವು ತಲೆಮಾರುಗ ಂದಲೂ ಹಿಂದುಳಿದ ಜಾತಿ-ಸಮುದಾಯಗಳು ವಿಶೇಷ ಳುವಳಿ ಒತ್ತಾಯಗಳ ಮೂಲಕ ಸಮಾನತೆಯನ್ನು ಡೆಯುವ ಅಧಿಕಾರಯುತ ಬೇಡಿಕೆಯನ್ನು ಮುಂದಿಡು ಲೇ ಬಂದಿವೆ. ಈ ಬೇಡಿಕೆ ಮತ್ತು ರಾಷ್ಟ್ರೀಯ ಅಭಿವೃ ಗೆ ಅಗತ್ಯವಾಗಿರುವ ದಕ್ಷತೆಗಳ ನಡುವಿನ ಸಂಧಾನಕ್ಕೆ ರುವ ಒಂದು ತಂತ್ರವೆಂದರೆ - ಮುಂದುವರೆದಿರುವ ಾತಿಗಳ ಜನರಿಗೆ ದಕ್ಷತೆಯ ಆಧಾರದ ಮೇಲೆ ಸಮಾನ ವಕಾಶಗಳನ್ನು ಕಲ್ಪಿಸಿಕೊಡುವುದು ಮತ್ತು ಹಿಂದುಳಿದ ು ಅವರೊಡನೆ ಸರಿಸಮಾನರಾಗಿ ಸ್ಪರ್ಧಿಸಲು ಅವಕಾ ಾಗುವಂತೆ 'ಸಕಾರಾತ್ಮಕ ಕ್ರಿಯೆ' (ಮೀಸಲಾತಿ)ಯನ್ನು ಜ್ಯ ನೀತಿಯನ್ನಾಗಿ ಮಾಡುವುದು. ಇಂತಹ ಸಾಮಾಜಿಕ ಥಾರ್ಥತೆಯ ಒತ್ತಾಯವೇ ಮಾಜಿಕ ನ್ಯಾಯ'ವೆಂದು ಸಂವಿ ನದಲ್ಲಿ ಪರಿಕಲ್ಪಿಸಲಾಗಿದೆ. (All dia Reporter 1968, SC 12) ಇದನ್ನೆ 'ವಿತರಣಾಬದ್ಧ' ಯ (Distributive Jus- e) ಎಂದೂ ಕರೆಯಲಾಗಿದೆ.

ಆದರೆ ಈ ಮೇಲಿನ ಪರಿಕಲ್ಪ ಳು ಇನ್ನೂ ಸಹ ಕಾರ್ಯಗತವಾ ೇ ಸಂವಿಧಾನದ ಚೌಕಟ್ಟಿನಲ್ಲೇ ಳಿದುಬಿಟ್ಟಿವೆ. ಇದಕ್ಕೆ ಬಹುಮುಖ್ಯ ರಣವೆಂದರೆ ನೌಕರಶಾಹಿ. ಇದು ಸನಗಳನ್ನು ಕಾರ್ಯಗತಗೊಳಿಸು ು ಮತ್ತು ಅವುಗಳನ್ನು ರೂಪಿಸಿ, ಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ ಮಹ ಪಾತ್ರವನ್ನು ವಹಿಸುತ್ತದೆ. ಪ್ರೌಢ ಶ್ಯವಸ್ಥೆಯ ಗೈರುಹಾಜರಿಯಲ್ಲಿ ರ್ಕಾರ ಹಮ್ಮಿಕೊಳ್ಳುವ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಕಾರ್ಯಗ ತಗೊಳಿಸುವ ಕರಶಾಹಿ ಸ್ವೇಚ್ಛೆಯಿಂದ ಹಾಗೂ ಅನಿ ಯಂತ್ರಿತವಾಗಿ ರ್ಯಸುತ್ತದೆ. ಈ ಮೂಲಕ ಜನ-ಸಮು ದಾಯಗಳಿಗೆ ಕಾದ ಸವಲತ್ತುಗಳನ್ನು ನೀಡುವ 'ಧಣಿ' ತಾನೇ ಎಂಬ ುಯನ್ನು ಹುಟ್ಟುಹಾಕುತ್ತದೆ.

ಐತಿಹಾಸಿಕವಾಗಿ 19ನೇ ಶತಮಾನದ ಕೊನೆಯಲ್ಲಿ ಸೂರು ಮಹಾರಾಜರ ಆಳ್ವಿಕೆಯಲ್ಲಿ ಈ ಮೇಲಿನ ವಣಿಗೆಗೆ ಸ್ಪಷ್ಟತೆಗಳನ್ನು ಕಂಡುಕೊಳ್ಳಬೇಕಾಗುತ್ತದೆ. ದರೆ ಅಂದೇ 'ಒಂದು ಮಾದರಿ ಪ್ರಜಾಪ್ರಭುತ್ವದ ್ರೋಗವನ್ನು ಜಾರಿಗೆ ತರಲಾಗುತ್ತದೆ. ಯಾವುದೇ ಮಾಜಿಕ ಆಂದೋಲನದ ಹಿನ್ನಲೆ ಇಲ್ಲದ ಪ್ರಜಾಪ್ರಭುತ್ವ ಸ್ಥೆ ಕೇವಲ ಆಳುವವರ ರಾಜಕೀಯ ತಂತ್ರವಾದಾಗ ತಹ ರಾಜಕೀಯ ವ್ಯವಸ್ಥೆ ತನ್ನ ಉಳುವಿಗಾಗಿ ಪ್ರಬಲ ುದಾಯಗಳೊಡನೆ 'ರಾಜಕೀಯ ಹೊಂದಾಣಿಕೆ' ಡಿಕೊಳ್ಳಬೇಕಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಂಭವಾದ "ಪ್ರಜಾಪ್ರತಿನಿಧಿ ಸಭೆ"ಯು ಅಂತಹ ಲ ಶಕ್ತಿಗಳನ್ನು ಪ್ರಜಾಪ್ರತಿನಿಧಿಗಳೆಂದು ಒಪ್ಪಿಕ್ಕೊಂಡು ಅಧಿಕಾರ ತೆಕ್ಕೆಯೊಳಗೆ ತೆಗೆದುಕೊಂಡು, ಸಾಮಾಜಿಕ ಾನತೆಯ ಯಾವುದೇ ಸಿದ್ಧಾಂತ, ತತ್ವವನ್ನು ತಿರಸ್ಕರಿ ದೆ. ಇಲ್ಲಿ ಜನಪ್ರತಿನಿಧಿಗಳು ಎಂದರೆ ವಿವಿಧ ಜಾತಿ ುದಾಯಗಳ ಪ್ರಭಾವಿ ಜನರೆಂದೇ ಅರ್ಥೈಸತಕ್ಕದ್ದು.

ಆದ್ದರಿಂದ ಸಾಮಾಜಿಕ ಶಕ್ತಿಗಳು ರಾಜಕೀಯ ಸಂಸ್ಥೆಗಳ ಮೇಲೆ ಹೇಗೆ ತಮ್ಮ ಪ್ರಭಾವಳಿಯನ್ನು ಬೀರುತ್ತವೆ ಮತ್ತು ಅವನ್ನು ಸಂಘಟಿಸುತ್ತವೆ ಎನ್ನುವುದಕ್ಕೆ 1881 ರಿಂದ 1947ರ ನಡುವಿನ ಮೈಸೂರು ರಾಜಕೀಯ ಒಂದು ಉತ್ತಮ ನಿದರ್ಶನವಾಗುತ್ತದೆ. ಈ ಸಾಮಾಜಿಕ ಶಕ್ತಿಗಳ ಅಂಕಿ-ಅಂಶಗಳನ್ನು ಅಂದಿನ ವಸಾಹತುಶಾಹಿ ಜನಗಣತಿಯಲ್ಲೇ ಕಾಣಬಹುದಾಗಿದೆ. ಅಂತಹ ಪ್ರಬಲ ಗುಂಪುಗಳೆಂದರೆ 1) ಬ್ರಾಹ್ಮಣ(3.8%), 2) ಲಿಂಗಾಯತ (12%), 3) ಒಕ್ಕಲಿಗ (20.4%), 4) ಇತರ ಕೆಳಜಾತಿಗಳು (15.1%), 5) ಮುಸ್ಲೀಮರು(5.8%) ಹಾಗೂ 6) ಇತರರು. (1931 ರ ಜನಗಣತಿ)

ಬ್ರಾಹ್ಮಣರು ಕೇವಲ 3.8%ರಷ್ಟಿದ್ದರೂ ಸಹ ಅವರು ಬೌದ್ಧಿಕ ಸಂಸ್ಥೆಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದರು. ಇದಕ್ಕೆ ಪ್ರಮುಖ ಕಾರಣವೆಂದರೆ ವಸಾಹತುಶಾಹಿ ಆರಂಭಿಸಿದ ಇಂಗ್ಲಿಷ್ ಶಿಕ್ಷಣವನ್ನು ಪಡೆದು ಸರ್ಕಾರಿ ನೌಕರಿಯ ಮೇಲೆ ಇವರು ಪೂರ್ಣ ಹತೋಟಿ ಸಾಧಿದ್ದು. ಇವರು ಉನ್ನತ ಶಿಕ್ಷಣ, ನೌಕರಿಶಾಹಿಯ ಹಿಡಿತ ಮತ್ತು ತಮ್ಮ ಉನ್ನತ ಜಾತಿಯಿಂದಾಗಿ ನಗರಗಳಲ್ಲಿ ನಿಯಂತ್ರಣವನ್ನು ಸಾಧಿಸುತ್ತಾರೆ. ಉದಾಹರಣೆಗೆ 1890-1891ರ ಅವಧಿಯಲ್ಲಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇ.80 ವಿದ್ಯಾರ್ಥಿಗಳು ಬ್ರಾಹ್ಮಣರಾಗಿದ್ದರು. ಉಳಿದವರೆಲ್ಲರ ಪ್ರಮಾಣ ಸೇ.19. ಅದರಲ್ಲೂ ಕ್ರಿಶ್ಚಿಯನ್ ವಿದ್ಯಾರ್ಥಿಗಳ ಸಂಖ್ಯೆ ಶೇ.9 ಎಂದ ಮೇಲೆ ಶೇ.93ರಷ್ಟು ಜನಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಕೇವಲ 10% ಮಾತ್ರ ಪ್ರತಿನಿಧಿಸಲಾಗಿತ್ತು. (ಎಸ್. ಚಂದ್ರಶೇಖರ್: 1991: ಪು.10). ಅಂದಿನ ಇಡೀ ಭಾರತವನ್ನು ಗಮನಿಸುವಾಗ ಪ್ರತಿ ಒಂದು ಸಾವಿರ ಬ್ರಾಹ್ಮಣ ಪುರುಷರ ಪೈಕಿ 895 ಮಂದಿ ನಿರಕ್ಷರಿಗಳಾಗಿದ್ದರೆ, ದಕ್ಷಿಣದಲ್ಲಿ ಅದಕ್ಕೆ ಸಂವಾದಿಯಾದ ಸಂಖ್ಯೆ ಕೇವಲ 278 ಆಗಿತ್ತು, ಅಂದರೆ ಪ್ರತಿ 1000 ಮಂದಿಗೆ ದಕ್ಷಿಣ ಭಾರತದಲ್ಲಿ 722 ಮಂದಿ ಬ್ರಾಹ್ಮಣ ಪುರುಷರು ಸಾಕ್ಷರತೆಯನ್ನು ಗಳಿಸಿದ್ದರು. ಒಟ್ಟು ಭಾರತದ ಸಂದರ್ಭದಲ್ಲಿ ಆ ಸಂಖ್ಯೆ ಕೇವಲ 105 ಆಗಿತ್ತು.

ಆದ್ದರಿಂದಲೇ ವಸಾಹತುಶಾಹಿ ಆಡಳಿತದಲ್ಲಿ ನೌಕರಿಯನ್ನು ಗಿಟ್ಟಿಸಿದ ಬ್ರಾಹ್ಮಣ ಶಿರಸ್ತೇದಾರರು, ಇತರ ಉದ್ಯೋಗಗಳನ್ನು ಭರ್ತಿ ಮಾಡುವಾಗ ತಮ್ಮ ಶಿಫಾರಸ್ಸಿನಂತೆ ತುಂಬುತ್ತಿದ್ದರು. ಸಾಮಾನ್ಯವಾಗಿ ರಕ್ತಸಂಬಂಧಿಗಳಿಗೇ ಸರಕಾರಿ ಉದ್ಯೋಗಗಳನ್ನು ತಮ್ಮ ಸ್ವಂತ ಆಸ್ತಿ ಎಂಬಂತೆ ಹಂಚುತ್ತಿದ್ದರು. ಎರಡು ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ ಡಿ.ಕೃಷ್ಣರಾವ್ ಎಂಬುವವರು ಜಿಲ್ಲಾಧಿಕಾರಿಗಳ ಕಛೇರಿಗೆ ತನ್ನ ಸಂಬಂಧಿಕರ ಪೈಕಿ ಎರಡು ಜಿಲ್ಲೆಗಳಲ್ಲಿ ಕ್ರಮವಾಗಿ 117 ಮತ್ತು 108 ಮಂದಿಯನ್ನು ನೇಮಿಸಿಕೊಂಡಿದ್ದರು (ಎಸ್. ಚಂದ್ರಶೇಖರ್.1999.ಪು.10).

ಹೀಗೆ ವಸಾಹತುಶಾಹಿ ಸಂದರ್ಭದಲ್ಲಿ ಬೆಳೆಯಲಾರಂಭಿಸಿದ ನಗರಗಳಲ್ಲಿ ಈ ಬ್ರಾಹ್ಮಣ ಸಮುದಾಯ ಆಂಗ್ಲ ಭಾಷೆ ಮಾತನಾಡುವ ಆಧುನಿಕ ಕುಲೀನ ಜನರಾಗಿ ಶೋಭಿಸುತ್ತಾರೆ. ಈ ಜನರೇ ಅಂದಿನ ಬ್ರಿಟಿಷ್ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಿಂಹಪಾಲನ್ನು ಪಡೆದುಕೊಳ್ಳುತ್ತಾರೆ. ಆದರೆ ಇದೇ ಸಂದರ್ಭದಲ್ಲಿ ಸಾಮಾಜಿಕ ಚಲನೆಯನ್ನು ಆರಂಭಿಸಿದ ಇತರೆಲ್ಲಾ ಸಮುದಾಯಗಳು ತಮ್ಮ ತಮ್ಮ ಜಾತಿ ಸಂಘಟನೆಗಳ ಮೂಲಕ ರಾಜಕೀಯ ಮಾನ್ಯತೆಯನ್ನು ಗಳಿಸಿಕೊಳ್ಳಲಾರಂಭಿಸಿದಾಗ 'ರಾಷ್ಟ್ರೀಯ ಚಳುವಳಿ'ಯೆಂದು ಈ ಸಮುದಾಯಗಳನ್ನು ದಿಕ್ಕು ತಪ್ಪಿಸಿ, ಆಧುನಿಕ ಅವಕಾಶಗಳಿಂದ ವಂಚಿತಗೊಳಿಸಿದ್ದೇ ಈ ಮೇಲ್ಜಾತಿಯ ಜನ ಪ್ರತಿನಿಧಿಗಳು ಎಂದರೆ ತಪ್ಪಾಗಲಾರದು.

1901ರಲ್ಲಿ ಶೈಕ್ಷಣಿಕವಾಗಿ ಮುಂದುವರೆದ ಸಮುದಾಯಗಳ ಅಂಕಿ-ಅಂಶಗಳನ್ನು ಗಮನಿಸಿದಲ್ಲಿ ಮೇಲಿನ ಸಂಗತಿಗೆ ಮತ್ತಷ್ಟು ಸ್ಪಷ್ಟತೆ ಸಿಗುತ್ತದೆ. 1901ರಲ್ಲಿ ಬ್ರಾಹ್ಮಣರ ಸಾಕ್ಷರತೆ ಶೇ.68ರಷ್ಟಿದ್ದು 1941ರ ವೇಳೆಗೆ ಅದು ಶೇ.87.1 ಕ್ಕೇರುತ್ತದೆ. ಇದೇ ಕಾಲದಲ್ಲಿ ಇದನ್ನು ಇತರ ಸಮುದಾಯಗಳಿಗೆ ಹೋಲಿಸಿ ನೋಡುವುದಾದರೆ, ಲಿಂಗಾಯಿತರಲ್ಲಿ ಶೇ.14.1 ರಿಂದ ಶೇ.32.6ಕ್ಕೆ ಏರುತ್ತದೆ. ಒಕ್ಕಲಿಗರಲ್ಲಿ ಶೇ.4 ರಿಂದ ಶೇ.15.2ಕ್ಕೆ ನಿಲ್ಲುತ್ತದೆ. ಇದೇ ಅವಧಿಯಲ್ಲಿ ಇವರ ಜನ ಸಂಖ್ಯೆ ಕ್ರಮವಾಗಿ ಶೇ.12 ಮತ್ತು ಶೇ.20.4 ರಷ್ಟು ಇತ್ತು. ಹಾಗೆಯೇ ಇಂಗ್ಲಿಷ್ ಬಲ್ಲವರ ಸಂಖ್ಯೆ ಈ



ಅಹಿಂದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡುತ್ತಿರುವ ಸಿದ್ಧರಾಮಯ್ಯ

ಕೆಳಗಿನಂತೆ ಇತ್ತು: ಬ್ರಾಹ್ಮಣರಲ್ಲಿ ಶೇ.10.2 ಇದ್ದದ್ದು ಶೇ.36.2ಕ್ಕೇರುತ್ತದೆ (1901 ಮತ್ತು 1941). ಇದೇ ಕಾಲದಲ್ಲಿ ಲಿಂಗಾಯತರಲ್ಲಿ ಆ ಸಂಖ್ಯೆ ಶೇ.0.13 ಮತ್ತು ಶೇ.2.34 ಆಗಿದ್ದರೆ, ಒಕ್ಕಲಿಗರಲ್ಲಿ ಅದು ಶೇ.0.07 ಮತ್ತು ಶೇ.1.09 ಮಾತ್ರ ಆಗಿರುತ್ತದೆ. ಇದನ್ನು ಅನುಸರಿಸಿಯೇ ಆಧುನಿಕ ಅವಕಾಶಗಳೂ ಸಹ ಅದೇ ಸಮುದಾಯಗಳಲ್ಲಿ ಏಣಿ-ಶ್ರೇಣಿಯೋಪಾದಿಯಲ್ಲಿ ವಿತರಣೆಗೊಳ್ಳುತ್ತವೆ.

ಹೀಗಿರುವಲ್ಲಿ 1917ರಲ್ಲಿ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ಬ್ರಾಹ್ಮಣೇತರರು "ಪ್ರಜಾಮಿತ್ರ ಮಂಡಲಿ"ಯನ್ನು ಸ್ಥಾಪಿಸಿಕೊಳ್ಳುತ್ತಾರೆ. ಈ ಬ್ರಾಹ್ಮಣೇತರರು ಏನ್ನೋ ಹೆಸರಿನಡಿ ಉಳಿದೆಲ್ಲಾ ಕುಲ-ಸಮುದಾಯಗಳು ಪ್ರತಿನಿಧೀಕರಣಗೊಳ್ಳುತ್ತವೆ. ಇದಕ್ಕೆ ಬಹುದೊಡ್ಡ ಪ್ರೇರಣೆ ದೊರೆತದ್ದು 1916ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಆರಂಭವಾದ ಜಸ್ಟೀಸ್ ಪಾರ್ಟಿಯಿಂದ. ಇದು ನೌಕರಿ ಮತ್ತು ಶಿಕ್ಷಣದಲ್ಲಿ ಅವಕಾಶಗಳು ಬ್ರಾಹ್ಮಣೇತರರಿಗೂ ಸಿಗಬೇಕೆಂಬ ಬೇಡಿಕೆಯನ್ನು ಪ್ರತಿಪಾದಿಸಿತ್ತು. ಈ ಎಲ್ಲಾ ಪ್ರಕ್ರಿಯೆಗಳು ಕೇವಲ ಉದಯೀಮಾನ ನಗರಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಮೀಸಲಾತಿಯ ಒತ್ತಡ ಏರ್ಪಟ್ಟಾಗ ವಿಶ್ವೇಶ್ವರಯ್ಯನವರು ರಾಜಿನಾಮೆ ನೀಡಬೇಕಾಗುತ್ತದೆ. ಹಾಗೆಯೇ ಮೊದಲ ಬ್ರಾಹ್ಮಣೇತರ ದಿವಾನರನ್ನು ಮೈಸೂರಿನಲ್ಲಿ ನೇಮಿಸಲಾಗುತ್ತದೆ. ಅಲ್ಲದೆ, ಸಕಾರಾತ್ಮಕ ಕ್ರಿಯೆಯಾದ ಮೀಸಲಾತಿ ಬೇಡಿಕೆಯ ಬಗ್ಗೆ ಏರುತ್ತಿದ್ದ ಒತ್ತಡವನ್ನು ಪರಿಹರಿಸಿಕೊಳ್ಳಲು ಸರ್ ಲೆಸ್ಲಿ ಮಿಲ್ಲರ್ ಸಮಿತಿಯನ್ನು (1918) ನೇಮಿಸಲಾಗುತ್ತದೆ.

ಇದಕ್ಕೆ ಮುಖ್ಯ ಕಾರಣವೆಂದರೆ ಸಂಸ್ಕೃತ ಪರಂಪರೆಯಲ್ಲಿನ ತಾರತಮ್ಯ ನೀತಿಯೆಂಬುದನ್ನು ಲಿಂಗಾಯಿತರು, ಒಕ್ಕಲಿಗರು ಮತ್ತು ಮುಸ್ಲೀಮರು ಗುರುತಿಸತೊಡಗುವುದು. ಅಲ್ಲದೆ ಅದೇ ಸಂಸ್ಕೃತ ಪರಂಪರೆಯ ಜಾತಿ-ಗುರುತುಗಳನ್ನು ಈ ಸಮುದಾಯಗಳು ರಾಜಕೀಯವಾಗಿ ಸಂಘಟನೆಗೊಳ್ಳಲು ಬಳಸಿಕೊಳ್ಳುತ್ತವೆ. ಆದರೆ ಹೀಗೆ ಸಂಘಟನೆಗೊಳ್ಳತೊಡಗಿದ ಲಿಂಗಾಯಿತ, ಒಕ್ಕಲಿಗ ಮತ್ತು ಇತರ ಸಮುದಾಯಗಳು ತಮ್ಮ ಜಾತಿ ಗುರುತನ್ನು ಒಂದು ಅಖಂಡ-ಕ್ಷೇತ್ರವಾಗಿ ತಮ್ಮೊಳಗೆ ಮತ್ತು ಹೊರಗೆ ಎಚ್ಚರಗೊಳ್ಳುತ್ತಿದ್ದ ಸಮುದಾಗಳನ್ನು ತಮ್ಮ ತೆಕ್ಕೆಯೊಳಗೆ ಸೆಳೆದುಕೊಳ್ಳುತ್ತವೆ. ಉದಾಹರಣೆಗೆ ಲಿಂಗಾಯತರಲ್ಲಿ ಜಂಗಮರು, ಬಣಜಿಗರು, ನೊಣಬರು, ಸಾದರು, ಆರಾಧ್ಯರು, ಪಟೇಲರು ಮುಂತಾದವರು ಲಿಂಗಾಯತರಲ್ಲಿ ಗುರುತಿಸಿಕೊಳ್ಳುತ್ತಾರೆ. ಇವರೆಲ್ಲಾ ಸಾಂಸ್ಕೃತಿಕವಾಗಿ ವೀರಶೈವರೆಂದೂ, ಪ್ರಗತಿಪರರೆಂದೂ ಕರೆದುಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಲಿಂಗಾಯತ ಮಠಗಳು ತಮ್ಮ ಹಿಂಬಾಲಕರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುತ್ತವೆ ಮತ್ತು ಸ್ವಾಮಿಗಳು ನಾಯಕತ್ವವನ್ನು ವಹಿಸುತ್ತಾರೆ.

ಅನಂತರದಲ್ಲಿ ಒಕ್ಕಲಿಗರಲ್ಲೂ ನಡೆಯುತ್ತದೆ. 1920ರ ವೇಳೆಗೆ ಒಕ್ಕಲಿಗ ಎನ್ನುವುದು ಒಂದು ಅಖಂಡ ಜಾತಿ ಕ್ಷೇತ್ರವಾಗಿ ಮಾರ್ಪಟ್ಟು, ಅದರೊಳಗೆ ಗಂಗಡಿಕಾರ, ಮೊರಸು ಒಕ್ಕಲಿಗ, ಕುಂಚಟಿಗ, ರೆಡ್ಡಿ, ಹಾಲೊಕ್ಕಲಿಗ, ಹಳ್ಳಿಕಾರ, ಮುಂತಾದ ಸಮುದಾಯಗಳು ಸೇರಿಕೊಳ್ಳತ್ತವೆ. ಇವರೂ ಸಹ ತಮ್ಮ ಮಠಗಳನ್ನು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುತ್ತಾರೆ.

ಈ ಎರಡೂ ಜಾತಿಗಳು ಹಳ್ಳಿಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡು ರಾಜಕೀಯವಾಗಿ ಪ್ರಬಲವೆನಿಸಿಕೊಳ್ಳುತ್ತವೆ. ಆದರೆ ಅಸ್ಪೃಶ್ಯರೆನಿಸಿಕೊಂಡ ದಲಿತ ಸಮುದಾಯಗಳು ಬಹುಸಂಖ್ಯರಾಗಿದ್ದರೂ ಸಹ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ನಗಣ್ಯರಾಗೇ ಉಳಿದುಕೊಂಡುಬಿಡುತ್ತವೆ. ಆದ್ದರಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಇವರ ಅಕ್ಷರಸ್ತ ಪ್ರತಿನಿಧಿಗಳು ಕಾಣಿಸಿಕೊಳ್ಳಲು ದಶಕಗಳೇ ಹಿಡಿಯುತ್ತವೆ. ಅಸ್ಪೃಶ್ಯರಲ್ಲಿ ಮೊಟ್ಟಮೊದಲಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೊದಲನೆಯವರು 1918ರಲ್ಲಿ ಕಾಣಿಸಿಕೊಂಡರೆ, ಪದವಿ ಮುಗಿಸಿದ ಮತ್ತೊಬ್ಬರು 1925ರಲ್ಲಿ ಕಾಣಿಸುತ್ತಾರೆ.

ಸಂಸ್ಕೃತ ಪರಂಪರೆಯಲ್ಲಿನ ತಾರತಮ್ಯ ನೀತಿಯೆಂಬುದನ್ನು ಲಿಂಗಾಯಿತರು, ಒಕ್ಕಲಿಗರು ಮತ್ತು ಮುಸ್ಲೀಮರು ಗುರುತಿಸತೊಡಗುವುದು. ಅಲ್ಲದೆ ಅದೇ ಸಂಸ್ಕೃತ ಪರಂಪರೆಯ ಜಾತಿ-ಗುರುತುಗಳನ್ನು ಈ ಸಮುದಾಯಗಳು ರಾಜಕೀಯವಾಗಿ ಸಂಘಟನೆಗೊಳ್ಳಲು ಬಳಸಿಕೊಳ್ಳುತ್ತವೆ. ಆದರೆ ಹೀಗೆ ಸಂಘಟನೆಗೊಳ್ಳತೊಡಗಿದ ಲಿಂಗಾಯಿತ, ಒಕ್ಕಲಿಗ ಮತ್ತು ಇತರ ಸಮುದಾಯಗಳು ತಮ್ಮ ಜಾತಿ ಗುರುತನ್ನು ಒಂದು ಅಖಂಡ-ಕ್ಷೇತ್ರವಾಗಿ ತಮ್ಮೊಳಗೆ ಮತ್ತು ಹೊರಗೆ ಎಚ್ಚರಗೊಳ್ಳುತ್ತಿದ್ದ ಸಮುದಾಗಳನ್ನು ತಮ್ಮ ತೆಕ್ಕೆಯೊಳಗೆ ಸೆಳೆದುಕೊಳ್ಳುತ್ತವೆ. ಲಿಂಗಾಯತರಲ್ಲಿ ಜಂಗಮರು, ಬಣಜಿಗರು, ನೊಣಬರು, ಸಾದರು, ಆರಾಧ್ಯರು, ಪಟೇಲರು ಮುಂತಾದವರು ಲಿಂಗಾಯತರಲ್ಲಿ ಗುರುತಿಸಿಕೊಳ್ಳುತ್ತಾರೆ. ಇವರೆಲ್ಲಾ ಸಾಂಸ್ಕೃತಿಕವಾಗಿ ವೀರಶೈವರೆಂದೂ, ಪ್ರಗತಿಪರರೆಂದೂ ಕರೆದುಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಲಿಂಗಾಯತ ಮಠಗಳು ತಮ್ಮ ಹಿಂಬಾಲಕರಿಗೆ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುತ್ತವೆ ಮತ್ತು ಸ್ವಾಮಿಗಳು ನಾಯಕತ್ವವನ್ನು ವಹಿಸುತ್ತಾರೆ.

ಆದ್ದರಿಂದ ಅಂತಿಮವಾಗಿ ಸ್ವಾತಂತ್ರ್ಯ ಚಳುವಳಿ ರೂಪುಗೊಂಡದ್ದು ಅಥವಾ ಕರ್ನಾಟಕದ ಏಕೀಕರಣ ಎಂಬ ಚಳುವಳಿಯೊಳಗೆ ಎದ್ದು ಕಾಣುವ ಒಂದು ಮುಖ್ಯ ಸಂಗತಿಯಂದರೆ ಪ್ರಬಲ ಜಾತಿಸಮುದಾಯಗಳು ತಮ್ಮನ್ನೇ ತಾವು ಆ ಮೂಲಕ ಸಂಘಟಿಸಿಕೊಂಡು ಸಾರ್ವಜನಿಕವಾಗಿ ಅಖಂಡವೆಂದು ತೋರಿಸಿಕೊಂಡವಷ್ಟೆ. ಈ ಜಾತಿಗಳು ಪ್ರತಿಪಾದಿಸಿದ್ದನ್ನೇ ದೇಶ ಪ್ರೇಮ, ಸಂಸ್ಕೃತಿ ಮತ್ತು ಅಭಿವೃದ್ಧಿಯೆಂದು ಪ್ರಚಾರಮಾಡಿದ್ದು. ಈ ಸಂಕೀರ್ಣತೆಯಿಂದ ಬಿಡಿಸಿಕೊಳ್ಳಲು ತಳಮಟ್ಟದಲ್ಲಿದ್ದ ಸಮುದಾಯಗಳು ದೇವರಾಜು ಅರಸುರವರ ಕಾಲಕ್ಕಾಗಿ ಕಾಯುತ್ತವೆ ಎಂಬುದು ಚಾರಿತ್ರಿಕ ದುರಂತವೆಂದೇ ಹೇಳಬೇಕಾಗುತ್ತದೆ. ನಂತರದಲ್ಲಿ ದಲಿತ ಚಳುವಳಿ ಕಾಣಿಸಿಕೊಂಡು ತಮ್ಮ ಭಿನ್ನತೆಗಳನ್ನು ಶ್ರೇಣೀಕೃತ ಏಣಿಯಲ್ಲಿ ಗುರುತಿಸಿಕೊಳ್ಳದೆ, ಭಿನ್ನತೆಗಳನ್ನು "Horizontal" ನೆಲೆಯಲ್ಲಿ ವಿವರಿಸಿಕೊಳ್ಳುತ್ತವೆ. ಇದೇ ಅಂಶ ಇವತ್ತಿನ ಅಹಿಂದ ಚಳುವಳಿಯ ರೂಪುರೇಷೆಗಳನ್ನು ಹಾಗೂ ಭ[ವಿ]ಷ್ಯದ ಹೆಜ್ಜೆಯನ್ನು ನಿರ್ಧರಿಸಿತ್ತದೆ ಎಂಬುದನ್ನು ವಿವರಿ[ಸಿ]ಕೊಳ್ಳಬೇಕಾಗುತ್ತದೆ.

ಪ್ರಸ್ತುತ ಪಕ್ಷ ರಾಜಕಾರಣದ ವಿಶ್ಲೇಷಣೆ:

ಈ ಮೇಲಿನ ವಿಶ್ಲೇಷಣೆಯನ್ನು ಕರ್ನಾಟಕ[ದ] ರಾಜಕೀಯ ಪಕ್ಷಗಳಿಗೆ ಅನ್ವಯಿಸಿ ನೋಡ[ಲು] ಸಾಧ್ಯವಿದೆಯೇ?

ಆಂಧ್ರ, ತಮಿಳುನಾಡು, ಬಿಹಾರ, ಉತ್ತರಪ್ರದೇ[ಶ] ಮುಂತಾದ ಕಡೆ ಇರುವ ರಾಜಕೀಯ ಪಕ್ಷಗಳು ಹೆಚ[್ಚು] ಕಡಿಮೆ ಜಾತಿ ಗುಂಪುಗಳ ಆಧಾರದಲ್ಲಿ ವಿಂಗಡಿತವಾಗಿರು[ವು]ವುದನ್ನು ನೋಡಬಹುದು. ತೆಲುಗು ದೇಶಂ ಪಕ್ಷ ಮುಖ್ಯ[]ವಾಗಿ ಕಮ್ಮ ಜಾತಿಯ ಪ್ರಾಬಲ್ಯದ ಪಕ್ಷ. ಪಟ್ಟಾಳಿ ಮಕ್ಕಳ್ ಕಚ್ಚಿ ವಣ್ಣಿಯಾರರ ಪಕ್ಷ. ಆರ್.ಪಿ.ಐ. ಹಾಗೂ ಬಿ.ಎಸ್.ಪಿ.ಗಳು ದಲಿತರ ಪಕ್ಷಗಳು.

ಒಂದು ಜಾತಿಯನ್ನು ಪ್ರಧಾನವಾಗಿ ಆಧರಿಸಿದ ಪ[ಕ್ಷ] ಎಂದೊಡನೆ ಅದರಲ್ಲಿ ಇತರೆ ಜಾತಿಗಳ ನಾಯಕರ[ು] ಅಥವಾ ಮತ ಬ್ಯಾಂಕ್ ಇರುವುದಿಲ್ಲ ಎಂದಲ್ಲ. ಆ ಜಾ[ತಿ] ಬೆಂಬಲದ ಸಮೀಕರಣ ಸಂದರ್ಭಾನುಸಾ[ರ] ಬದಲಾಗುತ್ತಿರುತ್ತದೆ.

ಕಾಂಗ್ರೆಸ್ ಪಕ್ಷವನ್ನು ಯಾವುದೇ ಒಂದು ಜಾತಿಗ[ೆ] ಸೇರಿದ ಪಕ್ಷವೆನ್ನಲು ಆಗುವುದಿಲ್ಲ. ಅದರರ್ಥ ಅದು ಜಾತ್ಯ[]ತೀತ ಪಕ್ಷವೆಂದಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಸಮಯಾ[]ನುಸಾರ ಕೆಲವು ಜಾತಿ ಸಮುದಾಯಗಳ ಬೆಂಬಲವನ್ನು ತೆಕ್ಕೆಗೆ ತೆಗೆದುಕೊಂಡು ಅದು ರಾಜಕೀಯ ಮಾಡುತ್ತದೆ. ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಕೋಮುವಾದ ಪ್ರತಿಪಾದ[]ನೆಯ ಅಂಶವನ್ನು ಬಿಟ್ಟರೆ ಈ 'ಅಖಿಲ ಭಾರತ ಸ್ವಭಾವ[]' ಸಾಮಾನ್ಯವಾದ ಲಕ್ಷಣ.

ಈ ಹಿನ್ನೆಲೆಯಲ್ಲಿ ಈಗಿರುವ ರಾಜಕೀಯ ಪಕ್ಷಗಳ[] ಸಮುದಾಯಾಧಾರಿತ ನೆಲೆಗಳನ್ನು ಗಮನಿಸಿದರೆ ಕರ್ನಾಟ[]ಕದ ಸಂದರ್ಭವನ್ನು ಸ್ಥೂಲವಾಗಿ ಹೀಗೆ ಪರಿಗಣಿಸ[]ಬಹುದು. ಬಿಜೆಪಿ ಪ್ರಧಾನವಾಗಿ ಲಿಂಗಾಯತ ಮತ[]ಬ್ಯಾಂಕನ್ನು ಬಳಸಿಕೊಂಡಿರುವ ಪಕ್ಷ. ಜಾತ್ಯತೀತ ಜನತಾ ದಳ ಮುಖ್ಯವಾಗಿ ಒಕ್ಕಲಿಗರ ಮತಬ್ಯಾಂಕನ್ನು ಆಧರಿಸಿ[]ರುವ ಪಕ್ಷ. ಕಾಂಗ್ರೆಸ್ ಸದ್ಯದ ಪರಿಸ್ಥಿತಿಯಲ್ಲಿ ಹಿಂದುಳಿದ[] ವರ್ಗಗಳು, ದಲಿತರು ಹಾಗೂ ಅಲ್ಪಸಂಖ್ಯಾತರ ಮತ[]ಗಳನ್ನು ಅವಲಂಬಿಸಿರುವ ಪಕ್ಷ.

ಜಾತಿ ಸಮುದಾಯಗಳ ಸಮೀಕರಣದ ಬಗ್ಗೆ ಚೆನ್ನಾಗಿ ಅಂದಾಜಿದ್ದು, ಆಯಾ ಜಾತಿಗಳ ಮತಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯಬಲ್ಲ ನಾಯಕರನ್ನು ತನ್ನ ಪಕ್ಷದೊಳಗೆ ಇಟ್ಟುಕೊಂಡು ಚುನಾವಣೆಯನ್ನು ಎದುರಿಸುತ್ತಿರುವ ರೀತಿಯನ್ನು ಎಲ್ಲಾ ಪಕ್ಷಗಳ ವಿಷಯದಲ್ಲಿ ಕಳೆದ ಎರಡು ಚುನಾವಣೆಗಳಿಂದ ಗಮನಿಸುತ್ತಿದ್ದೇವೆ.

1980ರ ನಂತರದಿಂದ ಕರ್ನಾಟಕದಲ್ಲಿ ಜಾತಿ ಗುಂಪುಗಳ ಧ್ರುವೀಕರಣ ಬಹಳ ತೀವ್ರವಾಗಿ ನಡೆಯುತ್ತಿದೆ. ಬ್ರಾಹ್ಮಣ, ಲಿಂಗಾಯತರ ಧ್ರುವೀಕರಣ ಪ್ರಕ್ರಿಯೆ ಇದಕ್ಕಿಂತಲೂ ಸ್ವಲ್ಪ ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಜಾತಿ ಆಧಾರಿತ ಮತಬ್ಯಾಂಕ್‌ಗಳ ನಿರ್ಣಾಯಕ ಸ್ವಭಾವ ಈ ಮೊದಲು ಆಗೊಮ್ಮೆ ಈಗೊಮ್ಮೆ ಕಂಡುಬರುತ್ತಿತ್ತಾದರೂ ಅದು 1980ರ ದಶಕದಿಂದೀಚೆಗೆ ಹೆಚ್ಚು ಬಲಗಳಿಸಿಕೊಂಡಿದೆ.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರನ್ನು ಚಿತ್ರದುರ್ಗ ಜಿಲ್ಲೆಯ ಒಂದು ಕ್ಷೇತ್ರದಲ್ಲಿ ಸಾದರು ಸೋಲಿ

ವರು. ಸಾದರಿಗೂ ಬಣಜಿಗ ಲಿಂಗಾಯತರಿಗೂ ಇದ್ದ ರಾತನ ಸ್ಪರ್ಧೆ ಇದಕ್ಕೆ ಕಾರಣ. ಇದೊಂದು ಆರಂಭಿಕ ದಾಹರಣೆ.

ಹಳೆ ಮೈಸೂರಿನ ಒಕ್ಕಲಿಗರು ಪ್ರಧಾನವಾಗಿ ನತಾ ಪಕ್ಷ ಮೂಲದಿಂದ ಅವತಾರ ತಳೆದ ಜನತಾದಳ ದ ಜೊತೆ ಗುರುತಿಸಿಕೊಂಡವರು. ತುರ್ತು ಪರಿಸ್ಥಿತಿಯ ಲಾವಧಿಯ ನಂತರ ಬಂದ ಬೆಳವಣಿಗೆ ಇದು. ರಂಭದಲ್ಲಿ ಜನತಾಪಕ್ಷ ಒಕ್ಕಲಿಗರು ಹಾಗೂ ಲಿಂಗಾಯ ದ ಕೆಲವು ಬಣಗಳ ಸಂಯೋಜನೆಯಂತಿತ್ತು. ದೇವೇ ಡರು ಹೊಸ ಪಕ್ಷ ಆರಂಭಿಸಿದ ನಂತರ ಹಳೆ ಸೂರು ಪ್ರಾಂತ್ಯದ ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿ ದರ ಬೆಂಬಲಿಗರಾದರು.

ಹಳೆ ಮೈಸೂರಿನಲ್ಲಿ ಒಕ್ಕಲಿಗರ ಪ್ರಧಾನ ಮತ ಬ್ಯಾಂಕ್ ಇದೆಯಾದರೂ ಂಗ್ರೆಸ್ಸನ್ನು ಹಿಂದಿಕ್ಕಲು ತರೆ ಹಿಂದುಳಿದ ಜಾತಿಗಳ ತಗಳ ಅವಶ್ಯಕತೆ ನತಾದಳ (ಜಾ)ಕ್ಕಿದೆ. ಗಾಗಿ ಸಿದ್ಧರಾಮಯ್ಯ, ಟ ಜಯ ಕುಮಾರ್ ಂತಾದವರ ಮುಖಾಂತರ ರುಬರು, ಪರಿವಾರದವರು ಸ್ತರು) ಮುಂತಾದವರ ತಗಳನ್ನು ಜಾತ್ಯತೀತ ನತಾದಳ ಪಡೆದು ಂಡಿತು. ಮೊನ್ನೆ ನಡೆದ ಧಾನಸಭಾ ಚುನಾವಣೆ ಲ್ಲಿ ಶ್ರೀನಿವಾಸ್ ಪ್ರಸಾದ್ ಖಾಂತರ ದಲಿತರ ಮತ ನ್ನೂ ಸಾಕಷ್ಟು ಪ್ರಮಾಣ ಲ್ಲಿ ಜಾತ್ಯತೀತ ದಳ ಈ ಪ್ರದೇಶದಲ್ಲಿ ಪಡೆದು ಂಡಿತು.

ಈ ಸಮೀಕರಣ ದೀರ್ಘಕಾಲ ತಾಳಿಕೆ ಬರುವ ವ್ಯತೆಯಿತ್ತೇ ಎಂಬುದನ್ನು ಗಮನಿಸಿದರೆ ಅದು ಕಷ್ಟ ವ್ಯವೆಂದು ಹೇಳಬೇಕಾಗುತ್ತದೆ. ಹಿತಾಸಕ್ತಿಗಳ ಪ್ರಶ್ನೆ ದಾಗ ಒಕ್ಕಲಿಗರು, ದಲಿತರು, ಇತರೆ ಹಿಂದುಳಿದವರು ಂದೇ' ಆಗಿ ಇರಲು ಸಾಮಾಜಿಕ ಪರಿಸ್ಥಿತಿಗಳು ಬುವುದಿಲ್ಲ.

ಒಕ್ಕಲಿಗರ ಜೊತೆ ನೇರ ವೈರುಧ್ಯಗಳಿರದ ಮುಸ್ಲಿಂ ಮುದಾಯದ ಮತಗಳನ್ನು ಖಾತ್ರಿ ಮಾಡಿಕೊಂಡರೆ ತಾದಳದ ರಾಜಕೀಯ ಚೌಕಾಸಿ ಶಕ್ತಿ ನಿರ್ಣಾಯಕ ಗಬಲ್ಲದು. ಅಥವಾ ಅತಿ ಹಿಂದುಳಿದ ಜಾತಿ ಬಣಗಳ ತ ಬ್ಯಾಂಕ್ ಒಲಿದರೂ ಆದೀತು.

ಈ ಹಿನ್ನೆಲೆಯಲ್ಲಿ ದೇವೇಗೌಡರು ಸಿದ್ಧರಾಮಯ್ಯ ರ ನಾಯಕತ್ವವನ್ನು ಮುಂದು ಮಾಡಿದರು. ಅಂದರೆ, ರಾಮಯ್ಯನವರು ಎರಡನೇ ಶ್ರೇಣಿಯ ನಾಯಕರಾ ಕೊಂಡೆ ಜೆಡಿಎಸ್‌ನಲ್ಲಿ ಮುಂದುವರೆಯಬೇಕೆಂಬ ಯೋಜಿತ ಸನ್ನಿವೇಶ ಇತ್ತು. ಇದು ಕೇವಲ ವ್ಯಕ್ತಿಗಳು ಗೂ ಪಕ್ಷದ ಮಿತಿ ಅಲ್ಲ. ಈ ವಿಷಯಕ್ಕಾಗಿ ದೇವೇಗೌ ನ್ನು ಅಥವಾ ಕುಮಾರಸ್ವಾಮಿಯವರನ್ನು ವ್ಯಕ್ತಿಗತವಾಗಿ ಸಿದರೆ ಹೆಚ್ಚು ಉಪಯೋಗವಿಲ್ಲ.

ಜಾತ್ಯತೀತ ಜನತಾದಳದ ಮತಬ್ಯಾಂಕ್ ಸಂಯೋಜನೆಯಲ್ಲಿ ಸಿದ್ಧರಾಮಯ್ಯನವರ ವತಿಯಿಂದ ಪಕ್ಷಕ್ಕೆ ಒದಗಿರುವ ಬಲ ಎಷ್ಟು ಎಂಬುದು ಪರಿಗಣನೆಗೆ ಬರುತ್ತದೆ. ವ್ಯಕ್ತಿಯಾಗಿ ಸಿದ್ಧರಾಮಯ್ಯನವರಿಗಿರುವ ಖ್ಯಾತಿ, ಅವರ ವರ್ಚಸ್ಸು ಇವೆಲ್ಲವೂ ಸೇರಿ ಅವರನ್ನು ಜಾತ್ಯತೀತ ದಳದಲ್ಲಿ ಪ್ರಮುಖ ನಾಯಕರನಾಗಿ ಮಾಡಬಲ್ಲವೇ ಹೊರತು, ಅವರನ್ನು ನಿರ್ಣಾಯಕ ನಾಯಕನನ್ನಾಗಿಸುವುದು ಕಷ್ಟ.

ಹಾಗೆ ಅವರು ಜಾತ್ಯತೀತ ದಳದ ನಿರ್ಣಾಯಕ ನಾಯಕನಾಗಬೇಕೆಂದರೆ, ದೇವೇಗೌಡರ ಕೃಪಾಕಟಾಕ್ಷ ಅನಿವಾರ್ಯ. ಯಾಕೆಂದರೆ ಪಕ್ಷಕ್ಕೆ ದೊರೆತಿರುವ ಮತ ಗಳಿಕೆಯಲ್ಲಿ ಅವರ ಪಾಲು ನೂರಕ್ಕೆ 70ರಷ್ಟಿದೆ. ಅವರಿಬ್ಬರ ಮಧ್ಯೆ ಸಂಘರ್ಷ ಬಂದರೆ ಸಹಜವಾಗಿ ಈಗ ನಡೆದಂತಹ ಬೆಳವಣಿಗೆಗಳು ನಡೆದು,ಅಧಿಕಾರ ಕಳೆದುಕೊಳ್ಳುವುದು, ಬೇರ್ಪಡುವುದು ಇತ್ಯಾದಿ ಸಂಭವಿಸುತ್ತದೆ.

ಚಿಂತನ ಅಹಿಂದ ಕಾರ್ಯಕ್ರಮದಲ್ಲಿ ಯು.ಆರ್ ಅನಂತ ಮೂರ್ತಿ, ಲಕ್ಷ್ಮೀಸಾಗರ್, ಸಿದ್ಧರಾಮಯ್ಯ

ಈ ಅಂಶದಲ್ಲಿ ನಾನು ಸಾಮಾಜಿಕ ವಾಸ್ತವಗಳ ವಿಶ್ಲೇಷಣೆ ಮಾಡುತ್ತಿದ್ದೇನೆ. ದೇವೇಗೌಡರು ವ್ಯಕ್ತಿಯಾಗಿ ತಪ್ಪು ಮಾಡುವುದಿಲ್ಲವೆಂದಲ್ಲ. ಆದರೆ, ಸನ್ನಿವೇಶದ ಇಕ್ಕಟ್ಟು ಏನು? ಅವರು ಒಕ್ಕಲಿಗರ ನಾಯಕರು ಎಂದು ಬಿಂಬಿತವಾದಷ್ಟೂ ಅವರ ಪಕ್ಷದ ಬಲ ಹೆಚ್ಚುತ್ತದೆ. ಆದರೆ ಒಕ್ಕಲಿಗರ ಸಮುದಾಯದ ಮತ ಗಳಿಕೆಯ ವಿಷಯದಲ್ಲಿ ಸಿದ್ಧರಾಮಯ್ಯನವರ ವರ್ಚಸ್ಸನ್ನು ಅವಲಂಬಿಸಲು ಬರುವುದಿಲ್ಲ. ಹಾಗೆ ಒಂದು ವೇಳೆ ನಿಜವಾದ ಅರ್ಥದಲ್ಲಿ ಸಿದ್ಧರಾಮಯ್ಯನವರೇ ನಿರ್ಣಾಯಕ ಮುಖಂಡರು ಎಂದು ಮಾಡಿದಲ್ಲಿ ಒಕ್ಕಲಿಗರ ಮತ ಬ್ಯಾಂಕ್ ಕಾಂಗ್ರೆಸ್ ಕಡೆಗೋ ಅಥವಾ ಬೇರೆ ಕಡೆಗೋ ಒಲಿಯಬಹುದು.

ಒಕ್ಕಲಿಗ ಸಮುದಾಯದ ನಡುವೆ ದೇವೇಗೌಡರು ಏಕೈಕ ನಾಯಕರಲ್ಲ. ಅವರಿಗೆ ಸಾಕಷ್ಟು ಪೈಪೋಟಿ ಇದೆ. ಹಾಗಾಗಿ ತಮ್ಮ ಒಕ್ಕಲಿಗ ಸಮುದಾಯದ ನಾಯಕ ಎಂಬ 'ಬಣ್ಣ'ವನ್ನು ಕಳೆದುಕೊಳ್ಳಲು ಅವರಿಗೆ ಇಷ್ಟವಿಲ್ಲ. ಅವರ ಜಾತ್ಯತೀತತೆಯ ನಿಲುವು ಅವರಿಗೆ ತಂದುಕೊಡುವ ಮತಗಳಿಗಿಂತ ಈ ನಾಯಕತ್ವದ 'ಬಣ್ಣ' ತಂದುಕೊಡುವ ಮತಗಳು ಹೆಚ್ಚು ಖಾತ್ರಿ, ತಮಗೇ ನಷ್ಟ ಮಾಡಿಕೊಂಡು ಅವರು ಸಿದ್ಧರಾಮಯ್ಯನವರನ್ನು ಕಾಪಾಡಿಕೊಳ್ಳುವ ಕಷ್ಟ ಯಾಕೆ ತಂದುಕೊಳ್ಳುತ್ತಾರೆ. ಆದ್ದರಿಂದ ಆ ದಿಸೆಯಲ್ಲಿ ಅವರು ಹೆಚ್ಚು ಮುಂದುವರೆಯುವುದು ಕಷ್ಟ. ಸಿದ್ಧರಾಮಯ್ಯನವರು ಮತ್ತು ಅವರ ಸ್ನೇಹಿತರು ಏನೇ ಟೀಕೆ ಮಾಡಿದರೂ ಜಾತ್ಯತೀತ ದಳದ ಪ್ರಸ್ತುತ ಸಾಮಾಜಿಕ ಬೆಂಬಲ ನೆಲೆಯ ವಾಸ್ತವತೆಯಲ್ಲಿ ಸಿದ್ಧರಾಮಯ್ಯನವರು ಎರಡನೇ ಶ್ರೇಣಿಯ ನಾಯಕರಾಗಿರಲು ಮಾತ್ರ ಸಾಧ್ಯ. ಯಾಕೆಂದರೆ ಪ್ರಧಾನವಾಗಿ ಒಕ್ಕಲಿಗ ಸಮುದಾಯದ ಮತ ಸೆಳೆಯಬಲ್ಲ ಪಕ್ಷ ಅದರ ನಾಯಕತ್ವಕ್ಕೆ ಮತ್ತೊಬ್ಬ ಒಕ್ಕಲಿಗನನ್ನು ಆಶಿಸುವುದು ಇಂದಿನ ರಾಜಕಾರಣದ ವಾಸ್ತವ.

ಈ ವಾಸ್ತವಾಂಶ ಸೂಚಿಸುತ್ತಿರುವುದೇನೆಂದರೆ ಸಿದ್ಧರಾಮಯ್ಯನವರು ಜಾತ್ಯತೀತ ದಳದಲ್ಲಿರಲಿ ಅಥವಾ ಬೇರೆ ಪಕ್ಷಕ್ಕೆ ಹೋಗಲಿ, ಅವರ ಸಾಮಾಜಿಕ ಬೆಂಬಲದ ನೆಲೆಯನ್ನು ಬಲಪಡಿಸದ ಹೊರತು, ಅವರಿಗೆ ರಾಜ್ಯದ ನಿರ್ಣಾಯಕ ನಾಯಕರಲ್ಲೊಬ್ಬರಾಗಿ ವ್ಯವಹರಿಸಲು ಸಾಧ್ಯವಾಗುವುದು ಕಷ್ಟ.

ಬಂಗಾರಪ್ಪನವರ ಉದಾಹರಣೆಯ ಮೂಲಕ ಇದನ್ನು ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶ ದಲ್ಲಿ ಇರುವ ದೀವರ ಮತಸಂಖ್ಯಾಬಲ, ಆ ಮತ ಬ್ಯಾಂಕಿನ ಮೇಲೆ ಬಂಗಾರಪ್ಪನವರಿಗಿರುವ ನಿರ್ಣಾಯಕ ನಿಯಂತ್ರಣ ಇವುಗಳ ಮುಖಾಂತರ ಅವರು ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ಗೆಲ್ಲಿಸಬಲ್ಲರು. ಹಾಗೆಯೇ ಗೆಲ್ಲಿಸಲು ಸಾಧ್ಯವಿಲ್ಲದಿರುವ ಎಷ್ಟೋ ಕಡೆ ಕೆಲವರ ಸೋಲಿಗೆ ಕಾರಣವಾಗಬಲ್ಲರು. ಈ ಕಾರಣದ ಜೊತೆಗೆ ಶಿವಮೊಗ್ಗ ಜಿಲ್ಲೆಯ ಮುಸ್ಲಿಂ ಸಮುದಾಯದ ಜೊತೆ ಅವರಿಗಿರುವ ರಾಜಕೀಯ ಬಾಂಧವ್ಯವೂ ಸೇರಿ ಕೊಳ್ಳುತ್ತದೆ. ಇದರಿಂದಾಗಿ ಪಕ್ಷ ತೊರೆದು ಪಕ್ಷಕ್ಕೆ ಹೋದಾಗಲೂ ಬಂಗಾರಪ್ಪನವರಿಗೆ ಹೆಚ್ಚಿನ ಪ್ರಮಾಣದ ಹಾನಿಯಾಗಿಲ್ಲ.

ಈ ಎಲ್ಲಾ ಅಂಶಗಳ ಮೇಲೆ ಸ್ಪಷ್ಟವಾಗುವ ಅಂಶವೆಂದರೆ, ಯಾವ 'ಅಹಿಂದ'ವನ್ನು ಸಿದ್ಧರಾಮಯ್ಯನವರು ತಮ್ಮ ಶಕ್ತಿ ಎಂದು ಭಾವಿಸುತ್ತಿದ್ದಾರೋ ಅದು ಇನ್ನೂ ಸಂಚಯೀಕೃತ ಶಕ್ತಿಯಲ್ಲ. ಆಶಯಾತ್ಮಕವಾಗಿ 'ಅಹಿಂದ' ಬಹಳ ಉದಾತ್ತವಾದ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಇಟ್ಟುಕೊಂಡಿರಬಹುದು. ಆದರೆ, ಅದು ಅಗೋಚರವಾಗಿ ಒಂದು ಸಮಾನಮನಸ್ಕ ಮತ ಬ್ಯಾಂಕ್ ಆಗಿದೆಯೇ? ಹಾಗೆ ಅದು ನಿದರ್ಶನಪೂರ್ವಕವಾಗಿ ರುಜುವಾತುಗೊಳ್ಳುವವರೆಗೆ 'ಅಹಿಂದ' ಆಶಯಗಳ ಜೊತೆ ಸ್ಪಂದಿಸುವವರಿಗೆ ಇರುವ ಮುಖ್ಯವಾದ ಕೆಲಸವೆಂದರೆ, ಆ ಬಗೆಯ ಒಂದು ಮತ ಬ್ಯಾಂಕನ್ನು ರೂಪುಗೊಳಿಸುವುದು.

'ಅಹಿಂದ'ದಲ್ಲಿ ಸಮಾವೇಶಗೊಳ್ಳುತ್ತಿರುವ ಅಲ್ಪಸಂಖ್ಯಾತರು ಒಂದು ಮತ ಬ್ಯಾಂಕ್ ಆಗಿ ವರ್ತಿಸಬಲ್ಲಷ್ಟು ಸಾಮೂಹಿಕ ಮನೋಭಾವ ಹೊಂದಿದ್ದಾರೆ. ದಲಿತರು ಕೂಡ ದಲಿತ ಸಂಘಟನೆಗಳು ಹಾಗೂ ಇತರೆ ಸಾಮಾಜಿಕ

ಪರಿಸ್ಥಿತಿಗಳ ಒತ್ತಡದಲ್ಲಿ ಒಂದು ಮತಬ್ಯಾಂಕಾಗಿ ವರ್ತಿಸ ಬಲ್ಲಷ್ಟು ಸಾಮೂಹಿಕ ಮನೋಭಾವದ ನೆಲೆಗಟ್ಟು ಹೊಂದಿದ್ದಾರೆ. ಕ್ರಮೇಣ ದಲಿತರು ಬಿ.ಎಸ್.ಪಿ. ಅಥವಾ ಅಂತಹ ನೆಲೆಗಟ್ಟಿನ ಬೇರೆ ಒಂದು ಪಕ್ಷಕ್ಕೆ ಮತ ಬ್ಯಾಂಕಾಗಿ ಪರಿವರ್ತನೆಗೊಳ್ಳುವುದು ಕ್ರಮೇಣ ಸಂಭವಿಸುವ ಒಂದು ಸಾಧ್ಯತೆಯಾಗಿದೆ: ಈ ಎರಡೂ ಬಣಗಳ ಜೊತೆ ಸಿದ್ಧರಾಮಯ್ಯನವರು ಸೌಹಾರ್ದ ಸಂಬಂಧ ಹೊಂದಿದವರಾಗಿದ್ದಾಗಲೂ ಕೂಡ ಅದು ಅವರ ಸ್ವಂತ ನಾಯಕತ್ವದ ಶಕ್ತಿಯಾಗಲು ಸಾಧ್ಯವಿಲ್ಲ. ಈ ಅಂಶವನ್ನು ನಾವು ಕೇವಲ ಆದರ್ಶಾತ್ಮಕ ನೆಲೆಯಿಂದ ಅಳೆಯಬಾರದು.

ಹೀಗಿರುವಾಗ ವಾಸ್ತವವಾಗಿ ಅವರು ಪ್ರತಿನಿಧಿಸುತ್ತಿರುವ ಹಿಂದುಳಿದ ವರ್ಗಗಳ ಸಂಘಟನೆಯ ಮುಖಾಂತರ ಮಾತ್ರ ಅವರೂ ಒಬ್ಬ ನಿರ್ಣಾಯಕ ನಾಯಕರಾಗಿ ಮಾರ್ಪಡಬಹುದು. ಹಿಂದುಳಿದ ಜಾತಿಗಳ ಸಂಘಟನೆಯೆಂಬುದು ಸುಲಭವಾದ ಪ್ರಶ್ನೆಯೇನಲ್ಲ. ಯಾಕೆಂದರೆ, ಆ ಸಮುದಾಯವು ನೂರಾರು ಜಾತಿಗಳ ಒಂದು ಗುಂಪಾಗಿದ್ದು, ಹಲವಾರು ಮತ ಕ್ಷೇತ್ರಗಳಲ್ಲಿ ಹಂಚಿಹೋಗಿವೆ. ಎಷ್ಟೋ ಜಾತಿಗಳಿಗೆ ಯಾವುದೇ ಒಂದು ಮತಕ್ಷೇತ್ರದಲ್ಲಿ ಹೇಳಿಕೊಳ್ಳಬಹುದಾದಂತಹ ಯಾವ ಶಕ್ತಿಯೂ ಇಲ್ಲ. ಆದರೆ ಇವರನ್ನೆಲ್ಲ ಒಟ್ಟಾಗಿ ಪರಿಗಣಿಸಿದರೆ ಹಾಗೂ ಹಾಗೆ ಒಟ್ಟಾಗಿಡಬಲ್ಲಂತಹ ವೇದಿಕೆಯೊಂದನ್ನು ಬಲಗೊಳಿಸಿದರೆ ರಾಜಕೀಯವಾಗಿ ಆಗ ಮತ್ತೊಂದು ಶಕ್ತಿ ಬಣ ನಿರ್ಮಾಣವಾಗುತ್ತದೆ.

ಒಂದು ಅಂದಾಜಿನಲ್ಲಿ ಕರ್ನಾಟಕದ ಗೋಚರ ಜಾತಿ ಸಮುದಾಯಗಳ ಸಂಖ್ಯಾವಾರು ಶಕ್ತಿಯನ್ನು ಲೆಕ್ಕಹಾಕಿದರೆ ಅದು ಹೀಗಿರುತ್ತದೆ. ಲಿಂಗಾಯತರು– ಶೇ.15; ಒಕ್ಕಲಿಗರು– ಶೇ.13(ರೆಡ್ಡಿ ಹಾಗೂ ಕುಂಚಿಟಿಗರನ್ನೂ ಸೇರಿಸಿ); ಮುಸ್ಲಿಮರು– ಶೇ.11; ದಲಿತರು– ಶೇ. 15; ಪರಿಶಿಷ್ಟ ಬುಡಕಟ್ಟುಗಳು– ಶೇ.3; ಬ್ರಾಹ್ಮಣರು, ಜೈನರು ಇತ್ಯಾದಿ– ಶೇ.5; ಕ್ರಿಶ್ಚಿಯನ್ನರು– ಶೇ.1. ಇದು ಒಂದು ಸ್ಥೂಲ ಅಂದಾಜು. ಈಗಾಗಲೇ ಗುರುತಿಸಲ್ಪಡುವ ಮತ ಬ್ಯಾಂಕಿನಂತೆ ರೂಪುಗೊಂಡಿರುವ ಈ ಗುಂಪುಗಳನ್ನು ಹೊರತುಪಡಿಸಿದರೆ ಸುಮಾರು ಶೇ.35 ರಷ್ಟಾಗುವ ಸಮುದಾಯವೇ ಅತಿ ಹಿಂದುಳಿದ ಜಾತಿಗಳ ಗುಂಪು.

ಇದರಲ್ಲಿ ಶೇ. 9 ರಷ್ಟು ಸಂಖ್ಯೆಯಲ್ಲಿದ್ದಾರೆಂದು ಹೇಳಲಾಗುವ ಕುರುಬರನ್ನು ಬಿಟ್ಟರೆ ಅದಕ್ಕೆ ಸಾಟಿಯಾಗುವ ಸಂಖ್ಯಾಬಲದ ಜಾತಿ ಈ ಗುಂಪಿನಲ್ಲಿ ಬೇರೆ ಇಲ್ಲ. ಬೆಸ್ತರು, ಗೊಲ್ಲರು, ಉಪ್ಪಾರರು, ಕುಂಬಾರರು, ಪಾಂಚಾಳರು, ಗಾಣಿಗರು, ತಿಗಳ, ಬಲಿಜರು, ನೇಕಾರರು, ಅಗಸರು, ಕ್ಷೌರಿಕರು ಮುಂತಾದ ಜಾತಿ ಗುಂಪುಗಳಲ್ಲಿ ಈ ಸಮುದಾಯ ವಿಂಗಡಿತವಾಗಿದೆ. ಕುರುಬ ಸಮುದಾಯವು ತನ್ನ ಜಾತಿ ಅಸ್ಮಿತೆ(ಐಡೆಂಟಿಟಿ)ಯ ಬಗ್ಗೆ 90ರ ದಶಕದಿಂದೀಚೆಗೆ ಹೆಚ್ಚು ಜಾಗ್ರತವಾದಂತೆ ಕಂಡುಬರುತ್ತಿದ್ದರೂ ಅದಕ್ಕಿನ್ನೂ ಲಾಂಛನಪ್ರಾಯವಾಗಿ ಸೂಚಿಸಬಹುದಾದ ನಾಯಕತ್ವ ರೂಪುಗೊಂಡಿಲ್ಲ. ಇದ್ದು ದರಲ್ಲೇ ಹೆಚ್ಚು ವ್ಯಾಪಕತೆ ಹಾಗೂ ಹೆಸರು ಗಳಿಸಿರುವವರು ಸಿದ್ಧರಾಮಯ್ಯ.

ವಾಸ್ತವಾಂಶವೆಂದರೆ, ಕುರುಬ ಅಭ್ಯರ್ಥಿ ಗಳಿರುವ ಕಡೆ ಅವರಿಗೇ ಮತಹಾಕಬೇಕೆಂದು ನಿರ್ಧರಿಸುವ ಮಟ್ಟಿಗೆ ಈ ಚುನಾವಣೆಯಲ್ಲಿ ಬೆಳವಣಿಗೆ ಕಂಡುಬಂದಿದೆಯಾದರೂ ಒಬ್ಬ ಏಕಮೇವಾದ್ವಿತೀಯ ನಾಯಕನ

ಅತೀ ಹಿಂದುಳಿದ ಜಾತಿಗೆ ಸೇರಿದ ಗೊಲ್ಲ, ಬಲಿಜ, ತಿಗಳ, ನೇಕಾರ, ಕುಂಬಾರ, ಉಪ್ಪಾರ, ಬೆಸ್ತ ಮುಂತಾದ ಜಾತಿ ಗುಂಪುಗಳ ಜೊತೆ ಒಂದು ಸಮಾನ ಮನಸ್ಥಿತಿಯನ್ನು ಸಾಧಿಸಿ ಅದನ್ನು ಒಂದು ಏಕ ರಾಜಕೀಯ ಮನಸ್ಥಿತಿಯುಳ್ಳ ಸಂಯುಕ್ತ ಸಮುದಾಯವನ್ನಾಗಿ ರೂಪುಗೊಳಿಸಲು ಸಾಧ್ಯವಾದರೆ, ಅಹಿಂದಕ್ಕೆ ನಿಜವಾದ ರಾಜಕೀಯ ನಿರ್ಣಾಯಕ ಶಕ್ತಿ ಒದಗುತ್ತದೆ. ಹಾಗೆ ರೂಪುಗೊಳ್ಳುವ ಅತಿ ಹಿಂದುಳಿದವರ ಮತ ಬ್ಯಾಂಕ್ ಇತರೆ ಯಾವುದೇ ಒಂದು ಮತ ಬ್ಯಾಂಕ್‌ಗಿಂತ ಏಕೈಕ ಅತಿ ದೊಡ್ಡ ಗುಂಪಾಗುವುದರಿಂದ ಅದಕ್ಕೆ ಕರ್ನಾಟಕದ ರಾಜಕೀಯವನ್ನು ಸಮತೋಲನಗೊಳಿಸುವ ಶಕ್ತಿಯೂ ಒದಗುತ್ತದೆ.

ಹಿಂದೆ ಆ ಮತಗಳೆಲ್ಲ ಹೋಗುವ ಪರಿಸ್ಥಿತಿ ಕುರುಬರಲ್ಲಿ ಇನ್ನೂ ಬಂದಿಲ್ಲ. ಯಾವುದೇ ಜಾತಿ ಸಮುದಾಯಕ್ಕಾಗಲೀ ಶೇ. 100ಕ್ಕೆ 100 ರಷ್ಟು ಅಂತಹ ಏಕಮನಸ್ಕತೆ ರೂಪುಗೊಳ್ಳುವುದು ಕಷ್ಟ. ಏನೇ ಇದ್ದರೂ ಒಂದು ಪರಿಗಣನೀಯ ಸಂಖ್ಯೆಯ ಕುರುಬ ಸಮುದಾಯದ ಮತಗಳನ್ನು ತಮ್ಮ ಬೆಂಬಲಕ್ಕೆ ಪಡೆದುಕೊಳ್ಳುವ ಸಾಧ್ಯತೆಯಿರುವ ನಾಯಕರಾಗಿ ಸಿದ್ಧರಾಮಯ್ಯ ಇಂದು ಕಂಡು ಬರುತ್ತಿದ್ದಾರೆ. ಇದರ ಜೊತೆಗೆ ನಾನು ಮೇಲೆ ಸೂಚಿಸಿದ ಅತೀ ಹಿಂದುಳಿದ ಜಾತಿಗೆ ಸೇರಿದ ಗೊಲ್ಲ, ಬಲಿಜ, ತಿಗಳ, ನೇಕಾರ, ಕುಂಬಾರ, ಉಪ್ಪಾರ, ಬೆಸ್ತ ಮುಂತಾದ ಜಾತಿ ಗುಂಪುಗಳ ಜೊತೆ ಒಂದು ಸಮಾನ ಮನಸ್ಥಿತಿಯನ್ನು ಸಾಧಿಸಿ ಅದನ್ನು ಒಂದು ಏಕ ರಾಜಕೀಯ ಮನಸ್ಥಿತಿ ಯುಳ್ಳ ಸಂಯುಕ್ತ ಸಮುದಾಯವನ್ನಾಗಿ ರೂಪು ಗೊಳಿಸಲು ಸಾಧ್ಯವಾದರೆ, ಅಹಿಂದಕ್ಕೆ ನಿಜವಾದ ರಾಜಕೀಯ ನಿರ್ಣಾಯಕ ಶಕ್ತಿ ಒದಗುತ್ತದೆ. ಹಾಗೆ ರೂಪುಗೊಳ್ಳುವ ಅತಿ ಹಿಂದುಳಿದವರ ಮತ ಬ್ಯಾಂಕ್ ಇತರೆ ಯಾವುದೇ ಒಂದು ಮತ ಬ್ಯಾಂಕ್‌ಗಿಂತ ಏಕೈಕ ಅತಿ ದೊಡ್ಡ ಗುಂಪಾಗುವುದರಿಂದ ಅದಕ್ಕೆ ಕರ್ನಾಟಕದ ರಾಜಕೀಯ ವನ್ನು ಸಮತೋಲನಗೊಳಿಸುವ ಶಕ್ತಿಯೂ ಒದಗುತ್ತದೆ.

ಅಂತಹ ಸನ್ನಿವೇಶದಲ್ಲಿ ಒಕ್ಕಲಿಗರು, ಲಿಂಗಾಯತರು, ಅಲ್ಪಸಂಖ್ಯಾತರು, ದಲಿತರು, ಅತೀ ಹಿಂದುಳಿದವರು ಎಂಬ ಐದು ಸ್ಥೂಲ ವಾದ 'ಸಂಯುಕ್ತ ರಾಜಕೀಯ ಮನಸ್ಥಿತಿಯ' ಸಮುದಾಯಗಳು ಚಲಾವಣೆಗೆ ಬಂದು, ಒಂದ ಕ್ಕಿಂತ ಹೆಚ್ಚು ಗುಂಪುಗಳ ಜೊತೆ ರಾಜಕೀಯ ಒಪ್ಪಂದಕ್ಕೆ ಬರುವ ಸಾಧ್ಯತೆಯುಳ್ಳ ಪಕ್ಷ ಅಥವಾ ನಾಯಕ

ಕರ್ನಾಟಕದ ಮುಂಚೂಣಿ ನಾಯಕನಾಗಿ ರೂಪುಗೊಳ್ಳು ತ್ತಾನೆ. ಬಿಹಾರದಲ್ಲಿ ಹಾಗೂ ಉತ್ತರ ಪ್ರದೇಶದಲ್ಲಿ ಮುಲಾ ಯಂಸಿಂಗ್ ಹಾಗೂ ಲಾಲೂ ಪ್ರಸಾದ್ ಅನುಸರಿಸು ತ್ತಿರುವ ರಾಜಕೀಯ ಕಾರ್ಯತಂತ್ರ ಹೆಚ್ಚೂ ಕಡಿಮೆ ಇದಕ್ಕೆ ಸಮೀಪವಾಗಿದೆ. ಅತೀ ಹಿಂದುಳಿದ ಜಾತಿ ಸಮು ದಾಯಗಳ ಮತಬ್ಯಾ[illegible] ಸಹಜವಾಗಿ ದಲಿತರು ಹಾಗೂ ಅಲ್ಪಸಂಖ್ಯಾ[illegible] ಗುಂಪುಗಳನ್ನು ಸರೀಕ ನೆಲೆಯಲ್ಲಿ ತನ್ನೊಂ[illegible] ಸಂಯುಕ್ತಗೊಳಿಸಿಕೊಳ್ಳಬಲ್ಲದು.

ಈ ಬಗೆಯ ತರ್ಕಾಧಾರಿತ ರಾಜಕೀ[illegible] ವಿಶ್ಲೇಷಣೆ ಎಲ್ಲರಿಗೂ ಗೊತ್ತಿರುವಂತಾದ್ದೆ. ಮುಖ್ಯವಾ[illegible] ಸಮಸ್ಯೆಯೆಂದರೆ, ಹಲವಾರು ಸಣ್ಣಪುಟ್ಟ ಜಾತಿಗಳ[illegible] ವಿಂಗಡಿತವಾಗಿರುವ ಅತಿ ಹಿಂದುಳಿದ ಜಾತಿಗಳ ನಡು[illegible] ಸಂಯುಕ್ತ ರಾಜಕೀಯ ಮನಃಸ್ಥಿತಿಯನ್ನು ರೂಢಿಸುವು[illegible] ಹೇಗೆ? ಇದನ್ನು ಕೇವಲ ರಾಜಕೀಯ ಲೆಕ್ಕಾಚಾರಗಳಿಂ[illegible] ಸಾಧಿಸಲಾಗುವುದಿಲ್ಲ. ಬದಲಿಗೆ ಒಂದು ಸಾಂಸ್ಕೃತಿ[illegible] ಸಮೀಕರಣ ಮತ್ತು ಸಮಾನತೆಯ ಸ್ಪಂದನ ಈ ಜಾ[illegible] ಗುಂಪುಗಳನ್ನು ಹತ್ತಿರಕ್ಕೆ ತರಬಲ್ಲದು.

ಈ ಜಾತಿಗುಂಪುಗಳ ನಡುವೆ ಈವರೆಗೆ ಪ್ರಾತಿನಿ[illegible] ಪಡೆದಿರದ ಪರಿಗಣನೀಯ ಗುಂಪುಗಳಿಗೆ ನಾಯಕ[illegible] ಕಲ್ಪಿಸುವ ಪ್ರಯತ್ನಗಳೂ ಸೇರಿದಂತೆ ಆಯಾ ಜಾ[illegible] ಪಂಗಡಗಳ ಅಭಿವೃದ್ಧಿಗೆ ಬೇಕಾದ ಶೈಕ್ಷಣಿಕ ಹಾಗೂ ಆರ್ಥಿಕ ಕಾರ್ಯಕ್ರಮಗ ಳಿಗಾಗಿ ಬೇಡಿಕೆ ರೂಪಿ[illegible] ಹೋರಾಟ ಕಟ್ಟುವುದು, ಆಯಾ ಜಾತಿಗಳು ಸಮಾ[illegible] ನೆಲೆಯಲ್ಲಿ ತಮ್ಮ ಸಾಂಸ್ಕೃತಿಕ ಹೆಮ್ಮೆ ಹಾಗೂ ಜಾ[illegible] ಅಸ್ಮಿತೆಗಳನ್ನು ಬಲಪಡಿಸಿಕೊಳ್ಳಲು ಪರಸ್ಪರ ನೆರವಾಗ[illegible] ವುದು ಮುಂತಾದ ದೀರ್ಘಕಾಲೀನ ಯೋಜನೆಗಳ[illegible] ಇದಕ್ಕೆ ಅತ್ಯಾವಶ್ಯಕ.

ಇದಲ್ಲದೆ, ಪ್ರತೀ ಜಾತಿಗುಂಪಿನಿಂದಲೂ ಸಮರ್ಥ[illegible] ನಾಯಕರನ್ನು ಗುರುತಿಸಬೇಕು. ಅಂತಹವರಿಲ್ಲದ ಪಕ್ಷದಲ್ಲಿ ನಾಯಕತ್ವ ರೂಪುಗೊಳ್ಳಲು ಪ್ರೋತ್ಸಾಹಿಸಬೇಕು. ಇಂತಹ ಜಾತಿ ಸಮುದಾಯಗಳ ನಾಯಕರನ್ನೊಳಗೊಂಡ ಕೇಂದ್ರ ಮಂಡಳಿಯು ತನ್ನ ಪದಾಧಿಕಾರತ್ವದ ಹುದ್ದೆಗಳನ್ನು ನಿಗದಿತ ಅವಧಿಗೊಮ್ಮೆ ಬೇರೆಬೇರೆಯವರಿಗೆ ಪ್ರಾತಿನಿಧ್ಯ ಬರುವಂತೆ ಹಸ್ತಾಂತರಿಸುವ ಮೂಲಕ ಎಲ್ಲರಿಗೂ ಪಾಲ್ಗೊಳ್ಳುವಿಕೆಯ ಭಾವನೆಯನ್ನು ಅಭಿವೃದ್ಧಿಪಡಿಸ[illegible] ಬಹುದು. ನಾಗಾಲ್ಯಾಂಡಿನ ಹೋರಾಟನಿರತ ಬುಡಕಟ್ಟುಗಳು ತಮ್ಮತಮ್ಮ ನಡುವೆ ರಚಿಸಿಕೊಂಡಿರುವ ಅಂತರ್ಬುಡಕಟ್ಟು ಸಂಯೋಜನಾ ಮಂಡಳಿಯ ಸ್ವರೂಪ ಈ ದಿಸೆಯಲ್ಲಿ ಮಾರ್ಗದರ್ಶಕ ಮಾದರಿಯಾಗಬಲ್ಲದು.

ಸಾಮಾನ್ಯವಾಗಿ ಬೇರೆ ಬೇರೆ ಜಾತಿಯವರು ಒಂದು ಸಂಯುಕ್ತ ಗುಂಪಾಗಲು ಇರುವ ಮುಖ್ಯ ಅಡೆತಡೆಯೆಂದರೆ, ತಮ್ಮ ಪ್ರಾತಿನಿಧ್ಯ ಕಳೆದುಕೊಳ್ಳುವ ಭಯ. ಸೂಕ್ತ ಪ್ರಜಾತಾಂತ್ರಿಕ ನಡಾವಳಿಗಳ ಮುಖಾಂತರ ಬೇರೆ ಬೇರೆ ಗುಂಪುಗಳಿಗಿರುವ 'ಗುಂಪಿನಲ್ಲಿ ಗೋವಿಂದ' ವಾಗುವ ಭಯವನ್ನು ಎಷ್ಟು ಸಮರ್ಥವಾಗಿ ನಿವಾರಿಸಲಾಗುತ್ತದೆಯೋ ಅಷ್ಟರಮಟ್ಟಿಗೆ ಈ ಒಕ್ಕೂಟ ತನ್ನ ರಾಜಕೀಯ ಏಕಮನಸ್ಕತೆಯನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗುತ್ತದೆ.

ಕರ್ನಾಟಕದ ಹಲವಾರು ಹಿಂದುಳಿದ ಜಾತಿಗಳು ಮೂಲದಲ್ಲಿ ಒಂದೇ ಕಳ್ಳುಬಳ್ಳಿ ಸಂಬಂಧವನ್ನು ಹೊಂದಿದವುಗಳಾಗಿದ್ದವು ಎಂಬ ಬಗ್ಗೆ ಬೇಕಾದಷ್ಟು ಪುರಾವೆಗಳಿವೆ. ಕುರುಬರು, ಗೊಲ್ಲರು, ಬೇಡರು, ಬೆಸ್ತರು ಮುಂತಾದ ಪಂಗಡಗಳ ವಿಷಯದಲ್ಲಿ ಇದು ಬಹಳ ನಿಚ್ಚಳವಾಗಿದೆ. ಈ ಸಾಮುದಾಯಿಕ ಸಾಂಸ್ಕೃತಿಕ ಸಾಮ್ಯತೆಗಳ ಎಳೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ರಂಗವೊಂದು

ಘಟಿತಗೊಂಡು ಅವಿರತವಾಗಿ ಕ್ರಿಯಾಶಾಲಿಯಾಗ ೀಕು. ಇಂತಹ ಕಾರ್ಯಕ್ರಮಾಧಾರಿತ ಹಾಗೂ ತಕ್ಷಣದ ಾಜಕೀಯ ಲಾಭಗಳ ದೃಷ್ಟಿಯಿಂದ ಹೊರತಾದ ಸಂಘ ನೆಯ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲು ಈಗಿನ ನ್ನಿವೇಶ ಒಂದು ಸುಸಂದರ್ಭವಾಗಿದೆ.

ಇದರಲ್ಲಿ ಮುಚ್ಚುಮರೆ ಅಥವಾ ವೈಷಮ್ಯದ ಾಜಕಾರಣವೇನಿಲ್ಲ. ಸಮಾಜವು ಪ್ರಜಾತಂತ್ರಿಕ ಹಾದಿ ಯಲ್ಲಿ ಮುನ್ನಡೆಯುವಾಗ ಬೇರೆ ಬೇರೆ ಜಾತಿ ಗುಂಪು ಗಳು ಹಾಗೂ ಸಮುದಾಯಗಳು ತಮ್ಮ ಏಕಮನಸ್ಕತೆ ಯನ್ನು ರೂಢಿಸಿಕೊಳ್ಳಲು ನಡೆಸುವ ಪ್ರಯತ್ನಗಳಿಗೆ ಇತರೆ ಮಾನ ಮನಸ್ಕ ಗುಂಪುಗಳು ಬೆಂಬಲ ಸೂಚಿಸಬೇಕು. ಬೆಂಬಲಪೂರ್ವಕ ನಿಲುವು ನಂತರದ ದಿನಗಳಲ್ಲಿ ೇಹಪೂರ್ವಕ ಸಹಕಾರ ನೆಲೆಗೊಳ್ಳಲು ನೆರವಾಗುತ್ತದೆ.

ಈ ಅರ್ಥದಲ್ಲಿ ದೇವೇಗೌಡ ಹಾಗೂ ದ್ಧರಾಮಯ್ಯರ ನಡುವೆ ಏರ್ಪಟ್ಟಿರುವ ಭಿನ್ನಾಭಿಪ್ರಾಯ ನ್ನು ಸಹಜ ಸಾಮಾಜಿಕ ಬೆಳವಣಿಗೆ ಎಂದು ಅರ್ಥೈಸಿ ವರೆಗೆ ನೆರವೇರದೇ ಇರುವ ಅತಿ ಹಿಂದುಳಿದ ಂಗಡಗಳ 'ರಾಜಕೀಯ ಸಮಾನ ಮನಸ್ಕ' ಸಮುದಾ ಯವನ್ನು ರೂಪುಗೊಳಿಸಲು ಸಿದ್ಧರಾಮಯ್ಯ ಹಾಗೂ ವರ ಸ್ನೇಹಿತರು ಪ್ರಯತ್ನಿಸಬಹುದು. ಯಾಕೆಂದರೆ

ೇವೇಗೌಡ ಹಾಗೂ ಸಿದ್ಧರಾಮಯ್ಯರ ನಡುವೆ ಏರ್ಪಟ್ಟಿರುವ ಭಿನ್ನಾಭಿಪ್ರಾಯವನ್ನು ಸಹಜ ಸಾಮಾಜಿಕ ಳವಣಿಗೆ ಎಂದು ಅರ್ಥೈಸಿ ಈವರೆಗೆ ರವೇರದೇ ಇರುವ ಅತಿ ಹಿಂದುಳಿದ ಪಂಗಡಗಳ 'ರಾಜಕೀಯ ಸಮಾನ ಮನಸ್ಕ' ಸಮುದಾಯವನ್ನು ರೂಪುಗೊಳಿಸಲು ಸಿದ್ಧರಾಮಯ್ಯ ಹಾಗೂ ಅವರ ಸ್ನೇಹಿತರು ಪ್ರಯತ್ನಿಸಬಹುದು. ಯಾಕೆಂದರೆ ಯಾವುದೇ ಒಂದು ಮಹಾವೃಕ್ಷದ ೆರಳಿನಲ್ಲಿ ಮತ್ತೊಂದು ಮಹಾವೃಕ್ಷ ಬೆಳೆಯಲು ಸಾಧ್ಯವಿಲ್ಲ ಎನ್ನುತ್ತಾನೆ ಖಲೀಲ್ ಗಿಬ್ರಾನ್.

ಾವುದೇ ಒಂದು ಮಹಾವೃಕ್ಷದ ನೆರಳಿನಲ್ಲಿ ಮತ್ತೊಂದು ಹಾವೃಕ್ಷ ಬೆಳೆಯಲು ಸಾಧ್ಯವಿಲ್ಲ ಎನ್ನುತ್ತಾನೆ ಖಲೀಲ್ ಬ್ರಾನ್. ಹೀಗೆ ಅನಿವಾರ್ಯವಾಗಿ ಈ ದಶಕದಲ್ಲಿ ತನ್ನ ಮಾಜಿಕ ಗತಿ ತರ್ಕಾನುಸಾರ ಮೂಡಿ ಬಂದಿರುವ ಈ ವೇಶವನ್ನು ರಚನಾತ್ಮಕವಾಗಿ ಬಳಸಿಕೊಂಡರೆ ಈಗ ರ್ಪಟ್ಟಿರುವ ತಾತ್ಕಾಲಿಕ ಹಿನ್ನಡೆ ಎಂಬುದು ಒಂದು ಅವಕಾಶವಾಗಿ ಮಾರ್ಪಡುತ್ತದೆ. ಅದು ಹಿಂದುಳಿದ ಮುದಾಯಗಳ ದೃಷ್ಟಿಯಿಂದ ದೀರ್ಘಕಾಲೀನವಾದ ಪಕಾರವೂ ಆಗುತ್ತದೆ.

ಒಂದೇ ಛತ್ರಿಯಡಿಯಲ್ಲಿ ಆಶ್ರಿತರಾಗಿ ನಿಂತು ಸ್ಪರ ಸ್ಥಳಾವಕಾಶಕ್ಕಾಗಿ ತುಳಿದಾಡುವ ಹಾದಿ ಅಸಮಾಧಾನಗಳಿಗೆ ಕಾರಣವಾಗುತ್ತದೆ. ಅದರ ಬದಲಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಸಮೂಹ ಬಲದೊಂದಿಗೆ ಸಜ್ಜಿತರಾಗಿ, ಆಯಾ ಸನ್ನಿವೇಶಗಳು ಒದಗಿಸುವ ಅವಕಾಶಗಳಿಗನುಸಾರವಾಗಿ 'ಸಮಪಾಲು ಸಮಬಾಳಿನ' ಒಪ್ಪಂದಗಳಿಗೆ ಬರಲು ಸಿದ್ಧವಾಗುವುದಾದರೆ, ವೃಥಾ ವಂಚಿತರಾದೆವು ಎಂಬ ಕಹಿಭಾವನೆ ಹುಟ್ಟುವುದು ತಪ್ಪುತ್ತದೆ. ಸ್ವಂತ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಷ್ಟೂ ನಾಯಕತ್ವ ಹೆಚ್ಚು ಸದೃಢವಾಗುತ್ತದೆ.

ಇಲ್ಲದಿದ್ದರೆ ಎಷ್ಟೇ ಸ್ನೇಹಪೂರ್ವಕ ಆಶ್ರಯವಿದ್ದಾಗಲೂ ಆಶ್ರಯಧಾತನ ಮರ್ಜಿ ತನ್ನ ನಿಯಮ ನಿಬಂಧನೆಗಳನ್ನು ವಿಧಿಸುತ್ತಿರುತ್ತದೆ. ಆಶ್ರಯ ಪಡೆಯುವ ಮೊದಲೇ ಆ ಸನ್ನಿವೇಶದೊಳಗೆ ಅಂತರ್ಗತವಾಗಿರುವ ವೈರುಧ್ಯಗಳ ಅರಿವಿದ್ದು, ಅದಕ್ಕನುಸಾರವಾಗಿ ನಡೆಯಬೇಕು ಅಥವಾ ಆ ವೈರುಧ್ಯಗಳು ಬಲಗೊಳ್ಳಲೇಬೇಕಾದ ಸಾಮಾಜಿಕ ಒತ್ತಡಗಳಿದ್ದ ಪಕ್ಷದಲ್ಲಿ ಹೆಚ್ಚು ಸಂಘರ್ಷಗಳಾಗದಂತೆ ಅದನ್ನು ನಿರ್ಮಾಣಾತ್ಮಕವಾಗಿ ಬಗೆಹರಿಸಬೇಕು.

ಹಿಂದುಳಿದ ಜಾತಿಗಳ 'ರಾಜಕೀಯ ಏಕಮನಸ್ಕ' ಸಮುದಾಯದ ಸಂಘಟನೆ ರೂಪಿಸಿ ಅದನ್ನೊಂದು ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿ ಮುನ್ನಡೆಯುವುದಾದಲ್ಲಿ ಅಂತಹ ಸಮುದಾಯದ ಪ್ರತಿನಿಧಿಯಾಗಿ ಸಿದ್ಧರಾಮಯ್ಯನವರಿಗೆ ಅಥವಾ ಅವರ ಸಮಾನ ಮನಸ್ಕರಿಗೆ ಈಗಿನ ದಕ್ಕಿಂತ ಹೆಚ್ಚಿನ ಸ್ಥಾನಮಾನಗಳನ್ನು ಕೊಡಲು ಯಾರಾದರೂ ಮುಂದಾಗಲೇಬೇಕಾಗುತ್ತದೆ. ಯಾಕೆಂದರೆ ಆಗ ಅದು ವ್ಯಕ್ತಿ ಬಣಗಳ ನಡುವಿನ ಹೊಂದಾಣಿಕೆಯ ಪ್ರಶ್ನೆಯಾಗಿರದೆ ಸಾಮಾಜಿಕ ಬಣಗಳ ಹೊಂದಾಣಿಕೆಯ ಪ್ರಶ್ನೆಯಾಗಿರುತ್ತದೆ. ಇದಕ್ಕೆ ದೇವೇಗೌಡರೇನೂ ಹೊರತಲ್ಲ. ಯಾಕೆಂದರೆ, ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಬಣಗಳ ಜೊತೆ ಒಪ್ಪಂದಕ್ಕೆ ಬರುವುದು ಅವರು ಪ್ರತಿನಿಧಿಸುತ್ತಿರುವ ಒಕ್ಕಲಿಗ ರೈತಾಪಿ ಸಮುದಾಯದ ಬಣಕ್ಕೆ ಹೆಚ್ಚು ಸುಲಭ ಹಾಗೂ ಅಗತ್ಯ.

ಕೊನೆಯದಾಗಿ:

ಪ್ರಾದೇಶಿಕವಾಗಿ ಕಳೆದ ೩೦ ವರ್ಷಗಳಿಂದಲೂ ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳು ಮಟಿದೆದ್ದು ಕೂಡಲೇ ಕಣ್ಮರೆಯಾಗಿವೆ. ದೇವರಾಜು ಅರಸುರವರ ಕರ್ನಾಟಕ ಕ್ರಾಂತಿ ರಂಗದಿಂದ ಕರ್ನಾಟಕ ವಿಕಾಸ ಪಾರ್ಟಿಯವರೆಗೆ ಉದಾಹರಣೆಗಳು ದೊರೆಯುತ್ತವೆ.

ಇವುಗಳಲ್ಲಿ ಎದ್ದು ಕಾಣುವ ಒಂದು ಮುಖ್ಯ ಸಂಗತಿ ಯೆಂದರೆ ಅವೆಲ್ಲಾ ವೈಯಕ್ತಿಕ ನೆಲೆಯನ್ನು ಬಿಟ್ಟು ಮೇಲೇರದೆ ಹೋದದ್ದು. ೧೯೯೬ರಲ್ಲಿ ಜನತಾದಳವು ೨೮ ಲೋಕಸಭಾ ಕ್ಷೇತ್ರಗಳಲ್ಲಿ ೧೬ನ್ನು ಬಾಚಿಕೊಂಡದ್ದು ಕೇವಲ ಒಕ್ಕಲಿಗ ಮತ್ತು ಲಿಂಗಾಯತ ಮತಪೆಟ್ಟಿಗೆಗಳಿಂದ ಎಂದು ಹೇಳುವುದು ಸರಿಯಾಗುವುದಿಲ್ಲ. ಬದಲು ಜನಸಾಮಾನ್ಯರು ತಮ್ಮ ಭವಿಷ್ಯವನ್ನು ತಮ್ಮ ನಾಯಕರಿಗೆ ವರ್ಗಾಯಿಸಿ ಅವರಿಂದ ಒಂದಷ್ಟು ಒಳಿತಾಗಬಹುದೆಂದು ಬಯಸುತ್ತಾರೆ. ಅಂದರೆ ವರ್ತಮಾನದಲ್ಲಿ ಅಹಿಂದವು ಅಂತಹ ನಾಯಕತ್ವವನ್ನು ನೀಡಬಹುದೇ? ಅಥವಾ ಜನರೇ ತಮ್ಮ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಸಾಧ್ಯವಾಗುವಂತಹ ವೈಚಾರಿಕತೆಯನ್ನು ಬೆಳೆಸಬಲ್ಲುದೇ? ಈ ಸವಾಲುಗಳೊಡನೆ ಆರ್ಥಿಕ ವಿದ್ಯಮಾನಗಳು ಸೇರಿ ವಿಚಿತ್ರಗತಿಯಲ್ಲಿ ಸಾಮಾಜವನ್ನು ಬಾದಿಸುತ್ತಿರುವುದನ್ನು ಅಹಿಂದ ಸಮರ್ಥವಾಗಿ ಎದುರಿಸಬೇಕಾಗುತ್ತದೆ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು

ಮಹಿಳೆ

ಮಹಿಳೆಯನ್ನು ಪ್ರಕೃತಿಯನ್ನಾಗಿ, ಪುರುಷನನ್ನು ಸಂಸ್ಕೃತಿಯನ್ನಾಗಿ ಗುರುತಿಸಲಾಗುತ್ತದೆ. ಮಹಿಳೆಯ ಸ್ಥಾನಮಾನಗಳ ಹಿಂದೆ ಪುರುಷ ಪ್ರಧಾನ ವ್ಯವಸ್ಥೆ ಪ್ರಕೃತಿಯನ್ನು ನೋಡುವ ವಿಧಾನ ಮತ್ತು ವ್ಯಾಖ್ಯಾನಗಳ ಪ್ರಭಾವ ಇದೆ. ಪ್ರಕೃತಿಯ ಕುರಿತು ಪುರುಷರು ಯಾವ, ಯಾವ ದೃಷ್ಟಿಕೋನಗಳನ್ನು ರೂಪಿಸಿಕೊಂಡಿರುವರೋ ಅದೇ ದೃಷ್ಟಿಕೋನಗಳನ್ನು ಮಹಿಳಾ ಸಂಬಂಧಿತ ವಿಷಯಗಳಿಗೂ ವಿಸ್ತರಿಸಿಕೊಂಡಿರುವರು. ಪ್ರಕೃತಿಯಲ್ಲಿ ಬಂಜೆ ನೆಲ, ಬಂಜೆಗಿಡ, ಕಳ್ಳಹೂವು ಕಾಣಿಸಿಕೊಳ್ಳುವವು. ಆದರೆ ಸಂಸ್ಕೃತಿಯ ವಿಷಯದಲ್ಲಿ ಹಾಗಲ್ಲ. ಅಲ್ಲಿರುವುದೆಲ್ಲ ಶ್ರೇಷ್ಠವಾದುದ್ದು, ಇತ್ಯಾತ್ಮಕವಾದದ್ದು, ಮೌಲಿಕವಾದದ್ದು ಎನ್ನುವ ಗ್ರಹಿಕೆಗಳೇ ಪ್ರಬಲವಾಗಿವೆ.

ಡಾ|| ಶೈಲಜಾ ಹಿರೇಮಠ

೩

ಯಾರು ಯಾರಿಗಾಗಿ ಕಾಯುತ್ತಾರೆ ಎನ್ನುವ ಸಂಗತಿಯು ಯಾರು ನಿರೀಕ್ಷಿತರು, ಯಾರು ಶ್ರೇಷ್ಠರು, ಯಾರಿಗೆ ಮೌಲ್ಯವಿದೆ ಎನ್ನುವ ವಿಷಯವನ್ನು ನಿರೂಪಿಸುತ್ತಿರುತ್ತದೆ. ಗಂಡಂದಿರ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾದ ಹೆಂಡತಿಯರು ಸಮಾಜದ ಅವಹೇಳನಗೆ ಒಳಗಾಗುವರು. ಗಂಡನಿಂದ ಎಷ್ಟೇ ತಿರಸ್ಕಾರಕ್ಕೆ ಒಳಗಾದರೂ ಹೆಂಡತಿ ಯಾದವಳು ಕಾಯಾ, ವಾಚಾ, ಮನಸಾ ಗಂಡನಿಗಾಗಿ ಕಾಯಬೇಕು. ಆತನ ಒಲವನ್ನು ಸಂಪಾದಿಸಲು ಬೇರೆ, ಬೇರೆ ತಂತ್ರಗಳ ಮೂಲಕ ಅವಿರತವಾಗಿ ಪರಿಶ್ರಮಿಸಬೇಕಾಗುತ್ತದೆ. ಈ ಪ್ರಯತ್ನಕ್ಕೆ ತಕ್ಷಣ ಫಲ ದೊರೆಯಬಹುದು. ಇಲ್ಲವೆ ದೀರ್ಘ ಅವಧಿಯನ್ನು ತೆಗೆದುಕೊಳ್ಳಬಹುದು..

ಈ ದೀರ್ಘ ಅವಧಿಯು ಒಂದು ವರ್ಷವಾಗಬಹುದು ಇಲ್ಲವೆ ಹಲವು ದಶಕಗಳೇ ಕಳೆಯಬಹುದು. ಅಂತಿಮವಾಗಿ ಗಂಡನು ಹೆಂಡತಿಯ ಕಡೆಗೆವಾಲುತ್ತಾನೆ. ಗಂಡಂದಿರಿಗಾಗಿ ಹೆಂಡತಿಯರು ಕಾಯುವ ಆಪೇಕ್ಷೆಯು ವ್ಯಕ್ತಿನೆಲೆಯಿಂದ ಹುಟ್ಟಿಕೊಂಡದ್ದಲ್ಲ. ಇದು ಸಮಾಜದ ಆಪೇಕ್ಷೆಯಾಗಿರುತ್ತದೆ. ಪುರುಷನಿಷ್ಠ ಸಮಾಜದಲ್ಲಿ ಮಹಿಳೆಯರಿಗೆ ಅದರ ಮೌಲ್ಯಗಳನ್ನು ಪರಿಪಾಲಿಸುವುದು ಅನಿವಾರ್ಯವಾಗುತ್ತದೆ. ಈ ಮೌಲ್ಯಗಳನ್ನು ಪಾಲಿಸಲೇ ಬೇಕಾದ ಒತ್ತಡದಲ್ಲಿರುವ ಹೆಣ್ಣಿಗೆ ಗಂಡನಿಗಾಗಿ ಕಾಯಬೇಕೆ ಬೇಡವೇ ಎನ್ನುವ ಆಯ್ಕೆಯ ಪ್ರಶ್ನೆಯೇ ಬರುವುದಿಲ್ಲ. ಸಂಗಾತಿಯಾಗುವವನು ಇಲ್ಲವೆ, ಸಂಗಾತಿಯಗುವವನ ಹೆಸರಿನಲ್ಲಿ ತಾಳಿ ಕಟ್ಟಿಸಿಕೊಂಡ ಮೇಲೆ, ಮಹಿಳೆ 'ಹೆಂಡತಿ'ಯಾಗಿ ಗಂಡನ ಸ್ವತ್ತಾಗಿ ಬಿಡುತ್ತಾಳೆ.

ಹೀಗೆ ಗಂಡನ ಖಾಸಗಿ ಆಸ್ತಿಯಾಗಿ ಪರಿಗಣಿಸಲ್ಪಡುವ ಹೆಂಡತಿಯ ಮೇಲೆ ಕುಟುಂಬದ ಮಾನಾಪಮಾನಗಳನ್ನು ಕಾಯುವ ಜವಾಬ್ದಾರಿ ಇರುತ್ತದೆ. ಈ ಹೊಣೆ ಇರುವ ಹೆಂಡತಿಗೆ ಪುರುಷರ ನೀತಿ ಸಂಹಿತೆಯನ್ನು ಮುರಿಯಲಾಗುವುದಿಲ್ಲ. 'ಗಂಡನ ಗೌರವ'ವನ್ನು ಕಾಪಾಡುವ. ಹೆಂಡತಿ ತನ್ನ ಗೌರವವನ್ನು ಎಚ್ಚರದಿಂದ ಕಾಪಾಡಬೇಕಾಗುತ್ತದೆ. ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ನಿರ್ವಚಿಸಿರುವ 'ಗಂಡನ ಗೌರವ' ಮತ್ತು 'ಹೆಂಡತಿಯ ಗೌರವ' ಬೇರೆ-ಬೇರೆ ಆಗಿರುವುದಿಲ್ಲ. ಹೆಂಡತಿಯತ್ತ ಒಲವು ಕಳೆದುಕೊಂಡ ಇಲ್ಲವೇ ಸಂಸಾರದಲ್ಲಿ ನಿರಾಸಕ್ತನಾದ ಅಥವಾ ವಿಷಯ ಲಂಪಟನಾದ ಅಥವ ಮನೆ ತೊರೆದ ಗಂಡನ ಒಲುಮೆಯನ್ನು ತನ್ನತ್ತ ಹೊರಳಿಸಿಕೊಂಡು ಕುಟುಂಬದ ಹಿತಾಸಕ್ತಿಯನ್ನು ಕಾಪಾಡುವುದು ಮತ್ತು ಗಂಡನ ಕೌಟುಂಬಿಕ ಹಾಗೂ ಸಾಮಾಜಿಕ ಜೀವನಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳುವುದು 'ಗಂಡನ ಗೌರವ' ಕಾಪಾಡುವುದು ಎಂದು ಅರ್ಥೈಸಲಾಗಿದೆ. ಪಾತಿವ್ರತ್ಯವನ್ನು ಕಾಯ್ದುಕೊಂಡು ಹೋಗುವುದನ್ನು 'ಹೆಂಡತಿಯ ಗೌರವ'ವಾಗಿ ನಿರ್ವಚಿಸಲಾಗಿದೆ.

ಅಂದರೆ ಪಿತೃಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ನಿರ್ವಚಿಸಿದ ಹೆಂಡತಿಯ ಗೌರವ ಮತ್ತು ಗಂಡನ್ನು ಕೇಂದ್ರ ವಾಗಿಟ್ಟುಕೊಂಡು ಅರ್ಥೈಸಿದ 'ಗಂಡನ ಗೌರವ'ಗಳು ಒಂದೇ ನಾಣ್ಯದ ಎರಡು ಮುಖಗಳು. ಅವುಗಳು ಸರ್ವ ನಿಟ್ಟಿನಿಂದಲು ಪುರುಷ ಹಿತಾಸಕ್ತಿಗಳನ್ನು ಪೋಷಿಸುತ್ತಿರುತ್ತವೆ. ಮತ್ತು ಇವೆರಡೂ ಗೌರವಗಳನ್ನು ಕಾಪಾಡುವ ಜವಾಬ್ದಾರಿಯನ್ನು ಹೆಂಡತಿಯನ್ನು ಹೆಂಡತಿಯ ಮೇಲೆಯೇ ಹಾಕಲಾಗಿದೆ. ಗಂಡಸು ಸೂಳೆಯ ಹತ್ತಿರ ಹೋಗುವುದು, ಪರ ಹೆಣ್ಣಿಗೆ ಒಲಿಯುವುದು ಆತನ ವ್ಯಭಿಚಾರವನ್ನು ಸಾಬೀತು ಪಡಿಸುವುದಿಲ್ಲ. ಇವನ ಈ ಸ... ತೆಗೂ ಹೆಂಡತಿಯನ್ನೇ ಹೊಣೆಗಾರಳನ್ನಾಗಿಸಿದೆ. ಹೆಂಡತಿಯಿಂ... ಪೂರ್ಣ ಪ್ರಮಾಣದ ಲೈಂಗಿಕ ತೃಪ್ತಿಯನ್ನು ಹೊಂದದ ಗಂಡಸ... ಸೂಳೆಯತ್ತ ವಾಲುತ್ತಾರೆ ಎನ್ನುವುದು ಸಾಮಾಜಿಕ ನಂಬಿಕೆಯಾಗಿ...

ಗಂಡನಲ್ಲಿರುವ ವಿಷಯ ಲಂಪಟತನವು ಆತನ ಲೈಂಗಿ... ಸ್ವೇಚ್ಛಾಚಾರವನ್ನು ಹೇಳುವುದಿಲ್ಲ. ಬದಲು ಅದು ಹೆಂಡತಿಯಲ್ಲಿ... ಕೊರತೆಯಾಗಿ ನಿರ್ವಚಿತವಾಗುತ್ತದೆ. ಹೆಂಡತಿಯಾಗುವವಳ... ಗಂಡನ ಲೈಂಗಿಕ ಆಕರ್ಷಣೆಯನ್ನು ಕಾಯ್ದುಕೊಳ್ಳಬೇಕು, ಮಾನಸಿ... ನೆಮ್ಮದಿಯನ್ನು ಕಾಪಾಡಬೇಕು. ಇಂಥವಳು ಪರಿಪೂರ್ಣ ಹೆಂ... ತಿಯಾಗುವಳು. ಹೆಂಡತಿ ಗಂಡನ ಒಲವನ್ನು ಕಾಯ್ದುಕೊಳ್ಳಬೇ... ಕಾದರೆ ಬಹಳ ತೂಕಬದ್ಧವಾಗಿ ಗಂಡನೊಂದಿಗೆ ವರ್ತಿಸಬೇಕಾಗು... ತ್ತದೆ. ಕುಟುಂಬದೊಳಗಿನ ಸಮಸ್ಯೆಗಳನ್ನು ಆತನಿಗೆ ಹೇಳಕೂಡದು... ಇದರಿಂದಾಗಿ ಆತನ ಮಾನಸಿಕ ನೆಮ್ಮದಿ ಹಾಳಾಗುತ್ತದೆ. ಕುಟುಂಬದ... ಒಳಗಿನ ಹಾಗೂ ಹೊರಗಿನ ಜವಾಬ್ದಾರಿಯನ್ನು ನಿಭಾಯಿಸಬೇಕಾದ... ಗಂಡನ ಮೇಲೆ ತೀವ್ರವಾದ ಮಾನಸಿಕ, ಕೌಟುಂಬಿಕ ಹಾಗೂ... ಸಾಮಾಜಿಕ ಒತ್ತಡಗಳಿರುತ್ತವೆ. ಸಿಟ್ಟು ಮಾಡಿಕೊಂಡರೂ ಶಾಂತಿಯು... ತವಾಗಿ ಪ್ರತಿಕ್ರಿಯಿಸುತ್ತ ಆತನಿಗೆ ಹಿತವಾಗುವಂತೆ ನಡೆದು... ಕೊಳ್ಳಬೇಕು.

ಎಲ್ಲ ಕಡೆಯಿಂದ ಎದುರಾಗುವ ನೋವುಗಳನ್ನು, ಅಪಮಾನ... ಗಳನ್ನು, ದುಃಖ ದುಮ್ಮಾನಗಳನ್ನು ತನ್ನೊಳಗೆ ನುಂಗಿಕೊಂಡು... ನಗುತ್ತ ಗಂಡನನ್ನು ಉಪಚರಿಸಬೇಕು. ಇಲ್ಲದೆ ಹೋದರೆ 'ಮನೆಗೆ... ಹೋದರೆ ಇದೇ ರಗಳೆ' ಎಂದು ಗಂಡನು ಹೆಂಡತಿಯಿಂದ,... ಕುಟುಂಬದಿಂದ ವಿಮುಖವಾಗುತ್ತಾ ಹೋಗುವನು. ಆತನಿಗೆ ಆಕರ್ಷ... ಕವಾಗುವಂತೆ, ಸಂತೋಷವಾಗಿಸುವಂತೆ ಅಲಂಕರಿಸಿಕೊಳ್ಳಬೇಕು.

ಪ ಬಯಸಿದಾಗ ಹಾಸಿಗೆ ಸುಖವನ್ನು ನೀಡಬೇಕು. ನಳಪಿಕೆಯಿಂದ ನಡೆದುಕೊಳ್ಳುತ್ತ ಗಂಡನ ಭೋಗಾ ಗಳನ್ನು ಪೂರೈಸಬೇಕು. ಹೀಗಿದ್ದಾಗ ಗಂಡಸು ಅನ್ಯ ಯತ್ತ ದೃಷ್ಟಿ ಹಾಕುವುದಿಲ್ಲ. ಹೀಗೆ ಪುರುಷ ಪ್ರಧಾನ ಮಾಜವು ಗಂಡನ ವಿಷಯ ಲಂಪಟತನವನ್ನು ಹೆಂಡ ಯ ನಡವಳಿಕೆಯೊಂದಿಗೆ ತಳಕು ಹಾಕುತ್ತದೆ. ಒಳ್ಳೆಯ ಂಡತಿಯಾಗಬೇಕಾದರೆ ತನ್ನ ಬದುಕಿನ ಸಂಪೂರ್ಣ ವಧಿಯನ್ನು ಗಂಡನ ಸೇವೆಗೆ ಮೀಸಲಿರಿಸಬೇಕು. ಮಾಜದ ಈ ಆಪೇಕ್ಷೆಯು ಹೆಣ್ಣಿನ ಸಾಮಾಜಿಕ ಕರಿಯ ಅನ್ನು ನಿರಾಕರಿಸುತ್ತದೆ. ತನ್ನೊಳಗಿನ ಭಾವನೆಗಳನ್ನು, ಯಕೆಗಳನ್ನು ಹಾಗೂ ಆಸಕ್ತಿಗಳನ್ನು ಅದುಮಿಟ್ಟು, ಡನು ತನ್ನ ಮೇಲೆ ಎಸಗುವ ದೌರ್ಜನ್ಯಗಳನ್ನು, ಅಪ ಮಾನಗಳನ್ನು ನುಂಗಿಕೊಳ್ಳಬೇಕು. ಆತನ ನಿಲುವುಗಳಿಗೆ ನುಸರಿಸಿ ನಡೆಯಬೇಕಾದ ಹೆಂಡತಿಯ ಪಾತ್ರವು ಲಾಮ ಸ್ಥಿತಿಯಲ್ಲಿರುವುದನ್ನೇ ಹೇಳುತ್ತದೆ.

ಸ್ತ್ರೀಯರ ಕರ್ತೃತ್ವ :ಮಾನ್ಯತೆ

ಹೆಂಡತಿಯು ತನ್ನ ಕರ್ತೃತ್ವದ ಮೂಲಕ ಟುಂಬದಲ್ಲಿ, ಮಾನ್ಯತೆಯನ್ನು ಪಡೆದಿರುವಳೇ ಅಥವಾ ವಳ ಗೌರವಕ್ಕೂ ಆಕೆಯ ಗಂಡನ ಸ್ಥಾನಮಾನಗಳಿಗೂ ಬಂಧ ಕಲ್ಪಿಸಲಾಗಿದೆಯೇ ಎನ್ನುವುದನ್ನು ಕೆಳಗಿನ ತ್ರಿಪ ಯ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ತಿಂದೋಡಿ ನಿನಗಂಡ ತಿಂದೇನು ಮಾಡಂದ
ತಿಂದೇಳು ಮನೆಯ ತಿರುಗೆಂದ ॥ ಉಟಸಿರಿ
ಉಂಗಟಗ ಹಾಕಿ ಹರಿಯಂದ

ಕಟ್ಟಿಕೊಂಡ ಗಂಡನು ಬುದ್ಧಿಹೀನ ಮತ್ತು ಸಂಪಾ ನಾ ರಹಿತನಾಗಿದ್ದರೆ ಅವನ ಹೆಂಡತಿಯು ಕುಟುಂಬ ವರ, ಸಮಾಜದವರ ತಿರಸ್ಕಾರಕ್ಕೆ ಒಳಗಾಗಬೇಕಾಗು ೆ. 'ಹೆಂಡತಿ ಹೆಗ್ಗಡತಿಯಾದರೆ ಗಂಡ ಮೂಳೆನಾಯಿ ತ ಕಡೆ' ಎನ್ನುವ ಗಾದೆ ಮಾತು ಹೆಣ್ಣು ಯಜಮಾ ಸ್ಥಾನದಲ್ಲಿರುವುದನ್ನು ಮತ್ತು ಅವಳ ಕರ್ತೃತ್ವವನ್ನು ಾಕರಿಸುತ್ತದೆ. ಕುಟುಂಬದಲ್ಲಾಗಲಿ, ಸಮಾಜದಲ್ಲಾಗಲಿ, ಣ್ಣು ಗಂಡನ ಹೆಂಡತಿಯಾಗಿ ಗುರುತಿಸಿಕೊಳ್ಳಬಹುದೇ ಃ ವ್ಯಕ್ತಿಗತ (ಸ್ವತಂತ್ರ) ನೆಲೆಯಲ್ಲಿ ಅಲ್ಲ. ಹೆಂಡತಿ ಕರ್ತೃತ್ವವದ ಮೂಲಕ ಕುಟುಂಬದಲ್ಲಿ, ಸಮಾಜದಲ್ಲಿ ುತಿಸಿಕೊಳ್ಳುವುದೆಂದರೆ ಆತನ ಸ್ಥಾನವನ್ನು ಮತ್ತು ಿಕಾರವನ್ನು ಕಸಿದುಕೊಳ್ಳುವುದೇ ಆಗಿದೆ. ಹೆಂಡತಿಯಾ ದಳ ಕ್ರಿಯಾಶೀಲತೆಯು ಅವಳಿಗೆ ಮಾನ-ಸನ್ಮಾನಗ ನ್ನು ತಂದು ಕೊಡುವುದಿಲ್ಲ. ಗಂಡನು ಕುಟುಂಬದಲ್ಲಿ, ಮಾಜದಲ್ಲಿ, ಎಷ್ಟು ಪ್ರಬಲನಾಗಿರುವನು ಎನ್ನುವುದರ ೇಲೆ ಅವಳಿಗೆ ಮಾನ ಮಾರ್ಯಾದೆಗಳು ನಿರ್ಧರಿತವಾ ತ್ತವೆ.

ತ್ವದ ನಿರ್ವಚನದಲ್ಲಿ ಅಹಾರ, ಅಲಂಕಾರ

ಹೆಂಡತಿ ತೆಗೆದುಕೊಳ್ಳುವ ಆಹಾರಕ್ಕೂ. ಮಾಡಿ ಳ್ಳುವ ಅಲಂಕಾರಕ್ಕೂ ಪಿತೃಪ್ರಧಾನ ವ್ಯವಸ್ಥೆಯು ಾವ ನೀತಿ ನಿಯಮಗಳನ್ನು ಸೃಷ್ಟಿಸಿದೆ ಎನ್ನುವುದನ್ನು ದುಕೊಳ್ಳಬೇಕಾಗಿದೆ. ಈ ಕೆಳಗಿನ ತ್ರಿಪದಿಗಳ ಮೂಲಕ ಾರ ಮತ್ತು ಅಲಂಕಾರದ ವಿಷಯದಲ್ಲಿ ಹೆಂಡತಿ ಗೆ ಪ್ರತಿನಿಧೀಕರಿಸಲ್ಪಟ್ಟಿರುವಳು ಎನ್ನುವುದನ್ನು ಸಲಾಗಿದೆ.

ಯಾಲಕ್ಕಿ ಕಾಯ್ ಸುಲಿದು ಯಾವಡಗಿ ಮಾಡಲಿ
ಊರಿಗ್ಹೋದಾ ರಾಯರು ॥ ಜಾರದೆ
ಯಾವಡಗಿ ಮಾಡಿ ಫಲವೇನು



ಹೆಂಡತಿಯು ತನ್ನ ಕರ್ತೃತ್ವದ ಮೂಲಕ ಕುಟುಂಬದಲ್ಲಿ, ಮಾನ್ಯತೆಯನ್ನು ಪಡೆದಿರುವಳೆ ಅಥವಾ ಅವಳ ಗೌರವಕ್ಕೂ ಆಕೆಯ ಗಂಡನ ಸ್ಥಾನಮಾನಗಳಿಗೂ ಸಂಬಂಧ ಕಲ್ಪಿಸಲಾಗಿದೆಯಾ ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ತಿಂದೋಡಿ ನಿನಗಂಡ ತಿಂದೇನು ಮಾಡಂದ ತಿಂದೇಳು ಮನೆಯ ತಿರುಗೆಂದ ॥ ಉಟಸಿರಿ ಉಂಗಟಗ ಹಾಕಿ ಹರಿಯಂದ ಕಟ್ಟಿಕೊಂಡ ಗಂಡನು ಬುದ್ಧಿ ಹೀನ ಮತ್ತು ಸಂಪಾದನಾ ರಹಿತನಾಗಿದ್ದರೆ ಅವನ ಹೆಂಡತಿಯು ಕುಟುಂಬದವರ, ಸಮಾಜದವರ ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ. 'ಹೆಂಡತಿ ಹೆಗ್ಗಡತಿಯಾದರೆ ಗಂಡ ಮೂಳೆನಾಯಿಗಿಂತ ಕಡೆ' ಎನ್ನುವ ಗಾದೆ ಮಾತು ಹೆಣ್ಣು ಯಜಮಾನಿಕೆ ಸ್ಥಾನದಲ್ಲಿರುವುದನ್ನು ಮತ್ತು ಅವಳ ಕರ್ತೃತ್ವವನ್ನು ನಿರಾಕರಿಸುತ್ತದೆ. ಕುಟುಂಬದಲ್ಲಾಗಲಿ, ಸಮಾಜದಲ್ಲಾಗಲಿ, ಹೆಣ್ಣು ಗಂಡನ ಹೆಂಡತಿಯಾಗಿ ಗುರುತಿಸಿಕೊಳ್ಳಬಹುದೇ ವಿನಃ ವ್ಯಕ್ತಿಗತ (ಸ್ವತಂತ್ರ) ನೆಲೆಯಲ್ಲಿ ಅಲ್ಲ. ಹೆಂಡತಿ ತನ್ನ ಕರ್ತೃತ್ವವದ ಮೂಲಕ ಕುಟುಂಬದಲ್ಲಿ, ಸಮಾಜದಲ್ಲಿ ಗುರುತಿಸಿಕೊಳ್ಳುವುದೆಂದರೆ ಆತನ ಸ್ಥಾನವನ್ನು ಮತ್ತು ಅಧಿಕಾರವನ್ನು ಕಸಿದುಕೊಳ್ಳು ವುದೇ ಅಗಿದೆ. ಹೆಂಡತಿ ಯಾದವಳ ಕ್ರಿಯಾಶೀಲತೆಯು ಅವಳಿಗೆ ಮಾನ-ಸನ್ಮಾನಗಳನ್ನು ಕೊಡುವುದಿಲ್ಲ.

ವಾರೀಗ ರಾಯರು ಊರೀಗಿ ಹೋದರೆ
ಸೇರ ಬಂಗಾರ ತಗೆದ್ದಂಗ ॥ ಮಲ್ಲಿಗಿ
ಮುಡಿದು ಅಂಗಳಕ ಒಗೆದ್ದಂಗ

ಮಹಿಳೆ ಹೇಳಿದ ಈ ಮೇಲಿನ ಹಾಡುಗಳನ್ನು ಮಹಿಳೆ ಆಪೇಕ್ಷೆಗಳು ಎಂದು ಹೇಳಲಾಗುವುದಿಲ್ಲ. ಗಂಡ ನಿಲ್ಲದ ವೇಳೆಯಲ್ಲಿ ಹೆಂಡತಿಯಾದವಳು ಒಳ್ಳೆಯ ಅಡುಗೆ ಮಾಡಿ ಉಣ್ಣಕೂಡದು ಎನ್ನುವುದು ಸಮಾಜದ ಸಾಮಾನ್ಯ ನಂಬಿಕೆ. ಪುರುಷನ ದುಡಿಮೆಯು ಉತ್ಪಾದನಾ ನೆಲೆಯಲ್ಲಿ ಗುರುತಿಸಲ್ಪಟ್ಟಿದ್ದರಿಂದ, ಅದು ಶ್ರಮದ ಕೆಲಸವಾಗಿ ಪರಿಗಣಿಸಲ್ಪಟ್ಟಿದೆ. ಮಹಿಳೆ ಮಾಡುವ ಕೆಲಸವು ಅನುತ್ಪಾದಕ ನೆಲೆಯಲ್ಲಿ ಗುರುತಿಸಲ್ಪಟ್ಟಿದ್ದರಿಂದ ಸುಲಭದ ಕೆಲಸವಾಗಿ ನಿರ್ವಚಿತವಾಗಿದೆ. ಮಹಿಳೆಯರು ನಿಭಾಯಿಸುವ ಕೆಲಸವು ಸರಳ ಸುಲಭವಾಗಿದ್ದರಿಂದ, ಅದಕ್ಕೆ ಬೌದ್ಧಿಕ ಹಾಗೂ ದೈಹಿಕ ಶ್ರಮದ ಅಗತ್ಯವೇನೂ ಇಲ್ಲ ಎನ್ನುವ ಹುಸಿ ಚಿಂತನೆಗೆ ಪುರುಷ ಪ್ರಧಾನ ಸಮಾಜವು ಭಾರಿ ಮಾನ್ಯತೆಯನ್ನು ನೀಡಿದೆ.

ಹೆಣ್ಣು ಮಕ್ಕಳು ಹೊತ್ತಿದ್ದು ತಿನ್ನಬೇಕು. 'ಹೊತ್ತಿದ್ದು ತಿಂದರೆ ಹೊತ್ತು ಬಂದ ಹಾಗೆ ನಡೆಯುತ್ತಾರೆ' ಎಂದು ನನ್ನ ಅಜ್ಜಿ ಹೇಳುತ್ತಿದ್ದುದ್ದು ನೆನಪು. ಮಾವಂದಿರು ಉಂಡು ಹೋದ ಬಳಿಕ, ಉಳಿದ ಆಹಾರವನ್ನು ಅಜ್ಜಿ ಮತ್ತು ಅತ್ತೆಯರು ಊಟ ಮಾಡಿದ್ದನ್ನು ನೋಡಿದ್ದೇನೆ. ಸೀದು ಹೋದ, ಕರಕಲಾದ ಆಹಾರವನ್ನು ಅವರು ತೆಗೆದುಕೊಂಡದ್ದನ್ನು ನೋಡಿದ್ದೇನೆ ಆಹಾರ ಹಂಚಿಕೆಯಲ್ಲಿ ಲಿಂಗ ಅಸಮಾನತೆಯಿದೆ. ಗಂಡನಿದ್ದ ವೇಳೆಯಲ್ಲಿಯೇ ಆತನು ಬಿಟ್ಟ ಎಂಜಲನ್ನು, ಉಳಿದ ಬೀಕಲು ಪದಾರ್ಥವನ್ನು ಸೇವಿಸುವ ಹೆಂಡತಿಯು, ಆತನ ಗೈರು ಹಾಜರಿಯಲ್ಲಿ ಎಂಥಾ ಆಹಾರವನ್ನು ಸೇವಿಸಿಯಾಳು? ಗಂಡನಿಲ್ಲದ ವೇಳೆಯಲ್ಲಿ ಹೆಂಡತಿಯು ಉತ್ತಮ ಹಾಗೂ ವಿಶೇಷ ಆಹಾರ ತೆಗೆದುಕೊಳ್ಳುವುದನ್ನು ಪುರುಷಶಾಹಿ ಮೌಲ್ಯಗಳು ನಿಶ್ಯಬ್ದವಾಗಿಯೇ ನಿಷೇಧಿಸಿವೆ.

ಅಡುಗೆಯ ಹಾಗೆ ಅಂದವಾದ ಉಡುಗೆ ತೊಡುಗೆಗಳನ್ನು ಕೂಡ ಗಂಡನಿಲ್ಲದ ವೇಳೆಯಲ್ಲಿ ಧರಿಸುವಂತಿಲ್ಲ. ಪುರುಷ ಪ್ರಧಾನ ಸಮಾಜವು ಹೆಣ್ಣು ಮಾಡಿಕೊಳ್ಳುವ ಅಲಂಕಾರಕ್ಕೂ ಗಂಡನ ಸಂತೋಷಕ್ಕೂ ಸಂಬಂಧ ಕಲ್ಪಿಸಿದೆ. ಅವನಿಲ್ಲದ ವೇಳೆಯಲ್ಲಿ ಮಾಡಿಕೊಳ್ಳುವ ಅಲಂಕಾರವು ವ್ಯರ್ಥವಾಗಿಯೇ ಪರಿಗಣಿಸಲ್ಪಟ್ಟಿದೆ. ಗಂಡನ ಚಿತ್ತಾಕರ್ಷಣೆಯನ್ನು ಸೆಳೆದುಕೊಂಡು, ಅವನನ್ನು ಅನ್ಯ ಸ್ತ್ರೀಯತ್ತವಾಲದಂತೆ ಅವಳ ಅಲಂಕಾರವು ನೋಡಿಕೊಳ್ಳುತ್ತದೆ. ಗಂಡನ ಲೌಕಿಕ ಆಸಕ್ತಿಗಳನ್ನು ಪೋಷಿಸುವ ಉದ್ದೇಶ ಹೆಣ್ಣಿನ ಅಲಂಕಾರಿಕ ಕ್ರಿಯೆಯಲ್ಲಿದೆ. ಹೆಣ್ಣಿನ ಅಪೇಕ್ಷೆಗಳಿಗಾಗಿಯೇ ನಿರೂಪಿಸಲ್ಪಡುವ ಈ ಬಗೆಯ ಸಂಗತಿಗಳು, ವಾಸ್ತವದಲ್ಲಿ ಪುರುಷ ಪ್ರಧಾನ ಸಮಾಜವು ಹೇರಿದ ಒತ್ತಡಗಳಾಗಿವೆ.

ಪಾತಿವ್ರತ್ಯದ ದಿವ್ಯಗಳು.

ಬಹುಪಾಲು ಮಹಿಳಾ ಜನಪದ ಕಥೆಗಳು, ಕಾವ್ಯಗಳು, ಕಥನಗೀತೆಗಳು, ಪಾತಿವ್ರತ್ಯದ ಪರೀಕ್ಷೆಗೆ ಗುರಿಯಾದ ಮಹಿಳೆಯರು ಎದುರಿಸುವ ದಿವ್ಯಗಳನ್ನು ಹೇಳುತ್ತವೆ. ಮಲೆಯ ಮಾದೇಶ್ವರ ಕಾವ್ಯದಲ್ಲಿಯ ಸಂಕವ್ವೆಯ ಸತಿ ಪರೀಕ್ಷೆಯ ಕೆಲವು ಭಾಗಗಳನ್ನು ಆಯ್ದುಕೊಂಡು, ಪಾತಿವ್ರತ್ಯದ ಪರೀಕ್ಷೆಗಳ ಸ್ವರೂಪಗಳ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಹಜ್ಜೇನು ತುಪ್ಪಕಾದು ಉಗೋ ಅಂದು ಬೇಯುವಾಗ
ಉಕ್ಕುವ ಮೂರು ಗುಂಡು ಉರುಳುಸ್ತೀನಿ
ಗುಂಡು ಕಾದು ಗುಡುಗುವಾಗ
ಸಂಕಣ್ಣೆ ಮೂರು ಗುಂಡನ್ನ ಈಚೆಗೆ ತಂದು ಮಡಗಿದ್ರ
ನನ್ನ ಅರಮನೆ ಮುಂಭಾಗದಲ್ಲಿ ನಿನ್ನ ಮೊಕಾಡ್ನಾಗೆ
ಮಲ್ಗಿಸ್ತಿನಿ
ನಿನ್ನ ಬೆನ್ನಿನ ಮೇಲೆ ಗೋಟಡಿಕೆ ಮಡ್ಗಿ
ಕಬ್ಬಿಣದ ಕೊರ್ದ ತಕ್ಕೊಂಡು ಮೂರೇಟು ಹೊಡಿತೀನಿ
ಏಟಿಗೆ ಮೂರು ಚೂರು ಮೂರೇಟಿಗೆ ಒಂಬತ್ತು
ಚೂರು ಅಡಿಕೆ ಆಗ್ತದೆ
ಮೂರೇಟಿನಲ್ಲಿ ನಿನ್ನ ಪ್ರಾಣ ಹೋಗದೆ ಹೋದ್ರೆ
ನನ್ನ ಅರಮನೆ ಮುಂಭಾಗದಲ್ಲಿ
ಮೂರಾಳು ಮಟ ಗುಂಡಿ ತಗೀತಿನಿ
ಗುಂಡಿಯೊಳಗೆ ನಿನ್ನ ಕೂಡುಬಿಟ್ಟು
ಮ್ಯಾಲೆ ಮೂರು ಕಂಡುಗ ಗೆಜ್ಜಲು ಕೆಂಡ ಮಡುಗ್ತಿನಿ
ಮೂರು ಕಂಡುಗ ಮೆಣಸಿನ ಹಣ್ಣ ಊದ್ಬುಟ್ಟು
ಮ್ಯಾಲೆ ಚಪ್ಪಡಿ ಕಲ್ಲ ಮಡುಗ್ತಿನಿ
ಕೀರೇಪಾತಿಯನ್ನು ಕಟ್ಟಿ
ನೀರನ್ನ ಕಟ್ಟಿ ಬರ್ತೀನಿ ಮಡದಿ
ಕೀರೇ ಬೀಜ ಹನ್ನೆರಡು ದಿನ ಹದಿಮೂರು ದಿನಕ್ಕ
ಹುಟ್ಟು ಬರ್ತಾಯದೆ
ಕೀರೇ ಸೊಪ್ಪು ಹುಟ್ಟಿಬಂದ ಮೇಲೆ
ಸೊಪ್ಪನ್ನು ಕೂದು ಊಟ ಮಾಡಿಕೊಂಡು
ಪಟ್ಟಣದ ಕಲ್ಲು ತೆಗೆದು ಮುಸುಗು ತೆಗೆದು ಕೂಗ್ತಿನಿ
ಅಲ್ಲಿಯವರೆಗೂ ಗುಂಡಿನೊಳಗೆ ನಿನ್ನ ಪ್ರಾಣ ಹೋಗ್ದೆ
ಉಳುಕಂಡ್ರೆ

(ಕೇಶವನ್ ಪ್ರಸಾದ್ ಸಂ). ೧೯೯೭ ಪು. ೨೭೨-೨೮೨)

ನಿನ್ನನ್ನು ಪತಿವ್ರತೆ ಎಂದು ಒಪ್ಪಿಕೊಳ್ಳುತ್ತೇನೆ ಎಂದು ನೀಲೇಗೌಡನು ಹೇಳುವನು. ಇಂತಹ ಅನೇಕ ಪಾತಿವ್ರತ್ಯ ಪರೀಕ್ಷೆಗಳನ್ನು ಹೆಂಡತಿ ಸಂಕವ್ವೆಯ ಮೇಲೆ ನೀಲೇಗೌಡನು ನಡೆಸುವನು. ಪಾತಿವ್ರತ್ಯದ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಸಿದ ಅನೇಕ ಅಗ್ನಿ ಪರೀಕ್ಷೆಗಳು ಭಯಾನಕವಾಗಿದ್ದು, ಹೆಣ್ಣಿನ ಪ್ರಾಣಕ್ಕೆ ಸಂಚಕಾರ ತಂದೊಡ್ಡುವಂತವಾಗಿರುತ್ತವೆ. ಪಿತೃಪ್ರಧಾನ ವ್ಯವಸ್ಥೆ ಬಲಗೊಳ್ಳುವುದೇ ಅವಳು ಕಾಯ್ದುಕೊಂಡು ಹೋಗ ಬೇಕಾದ ಪತಿನಿಷ್ಠೆಯ ಮೂಲಕ.

ಪತಿನಿಷ್ಠೆ ಎನ್ನುವುದು, ಗಂಡನ ಸೇವೆಗಷ್ಟೆ ಸೀಮಿತವಾದುದಲ್ಲ. ಹೆಂಡತಿಯಾದವಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಗಂಡನಿಗೆ ಮೀಸಲಾಗಿರಬೇಕು. ಅನ್ಯ ಪುರುಷರೊಡನೆ ದೇಹ ಸಂಪರ್ಕ ಇಟ್ಟುಕೊಳ್ಳುವುದು ಘೋರ ಅಪರಾಧವಾಗಿಯೇ ಪರಿಗಣಿತವಾಗಿದೆ. ಅವಳು ಯಾಕೆ ಇಂತಹ ಪರಿಸ್ಥಿತಿಗೆ ಒಳಗಾಗ ಬೇಕಾಯಿತು, ನಡೆದ ಘಟನೆ ಏನು ಎನ್ನುವುದನ್ನು ತಿಳಿದುಕೊಳ್ಳುವ ತಾಳ್ಮೆ ಯಾರಲ್ಲಿಯೂ ಇರುವುದಿಲ್ಲ. ಹೆಣ್ಣು ಪತಿನಿಷ್ಠೆಯನ್ನು ಕಳೆದಕೊಂಡಿದ್ದಾಳೆ ಎನ್ನುವ ಸಂಶಯ ಬಂದರೆ ಸಾಕು, ಗಂಡನ ಮನಸ್ಸು ಅದೆಷ್ಟು ವ್ಯಗ್ರಗೊಳ್ಳುತ್ತದೆ ಎಂದರೆ ಅವಳ ಪ್ರಾಣದ ಜೊತೆ ಚೆಲ್ಲಾಟವಾಡಲು ಪ್ರಾರಂಭಿಸುತ್ತಾನೆ. ಅದಕ್ಕೆ ಪಾತಿವ್ರತ್ಯದ ದಿವ್ಯಗಳೆಂದು ಕರೆಯುತ್ತಾನೆ. ಪಾತಿವ್ರತ್ಯ ಎನ್ನುವುದು ಹೆಣ್ಣು ಪಾಲಿಸಲೇ ಬೇಕಾದ ಮೌಲ್ಯವಾಗಿ ಪರಿಗಣಿತವಾದ್ದರಿಂದ ಅದನ್ನು ಮುರಿದವರಿಗೆ, ಮುರಿದಿರುವರು ಎಂದು ಸಂಶಯಕ್ಕೊಳಗಾದವರಿಗೆ ಭೀಕರ ಶಿಕ್ಷೆಗಳು ಕಾಯ್ದಿರುತ್ತವೆ.

ಪಾತಿವ್ರತ್ಯ ಎನ್ನುವುದು ಗಂಡು–ಹೆಂಡತಿಗೆ ಸಂಬಂಧಿಸಿದ ಖಾಸಗಿ ವಿಷಯವಾಗಿ ಪರಿಗಣಿತವಾಗಿಲ್ಲ. ಪಾತಿವ್ರತ್ಯದ ಪರೀಕ್ಷೆಗಳು ನಾಲ್ಕು ಗೋಡೆಗಳ ಮಧ್ಯೆ ನಡೆಯುವುದಿಲ್ಲ. ಪಾತಿವ್ರತ್ಯ ಮೌಲ್ಯವನ್ನು ಸಾಮಾಜೀಕರಣ ಗೊಳಿಸಲಾಗಿದೆ. ಪಾತಿವ್ರತ್ಯದ ಹೆಸರಿನಲ್ಲಿ ಹೆಂಡತಿಯ ಮೇಲೆ ಗಂಡನ ನಡೆಸುವ ಹಲ್ಲೆಗೆ ಸಾಮಾಜಿಕ ಸಮ್ಮತಿಯಿದೆ. ಹೀಗಾಗಿ ಪಾತಿವ್ರತ್ಯ ಪರೀಕ್ಷೆಯು ಸಾರ್ವಜನಿಕರೆದುರಿನಲ್ಲಿಯೇ ನಡೆಯುವುದು. ಇಂತಹ ಸಂದರ್ಭಗಳಲ್ಲಿ ಹೆಂಡತಿ ಯಾದವಳು ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆಗಳನ್ನು ಎದುರಿಸುತ್ತಿರುತ್ತಾಳೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಇಂತಹ ಶಿಕ್ಷೆಗ ಭಾರಿ ಮಾನ್ಯತೆ ಇದೆ. ಪಾತಿವತ್ಯ ಎನ್ನುವುದು ಗಂ ಹೆಂಡತಿಗೆ ಸಂಬಂಧಿಸಿದ ಖಾಸಗಿ ವಿಷಯವಾಗಿ ಪ ಣಿತವಾಗಿಲ್ಲ. ಪಾತಿವ್ರತ್ಯದ ಪರೀಕ್ಷೆಗಳು ನಾಲ್ಕು ಗೋ ಗಳ ಮಧ್ಯೆ ನಡೆಯುವುದಿಲ್ಲ. ಪಾತಿವ್ರತ್ಯ ಮೌಲ್ಯವ ಸಾಮಾಜೀಕರಣಗೊಳಿಸಲಾಗಿದೆ. ಪಾತಿವ್ರತ್ಯದ ಹೆಸರಿನ ಹೆಂಡತಿಯ ಮೇಲೆ ಗಂಡನು ನಡೆಸುವ ಹಲ್ಲೆಗೆ ಸಾಮ ಜಿಕ ಸಮ್ಮತಿಯಿದೆ. ಹೀಗಾಗಿ ಪಾತಿವ್ರತ್ಯ ಪರೀಕ್ಷೆಯ ಸಾರ್ವಜನಿಕರೆದುರಿನಲ್ಲಿಯೇ ನಡೆಯುವುದು. ಇಂತ ಸಂದರ್ಭಗಳಲ್ಲಿ ಹೆಂಡತಿ ಯಾದವಳು ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆಗಳನ್ನು ಎದುರಿಸುತ್ತಿರುತ್ತಾ ಹೀಗೆ ಪಾತಿವ್ರತ್ಯದ ಹೆಸರಿನಲ್ಲಿ ಹೆಣ್ಣಿನ ಮೇಲೆ ದೈಹಿ ವಾಗಿ ಹಾಗೂ ಮಾನಸಿಕವಾಗಿ ನಡೆಯುವ ಹಲ್ಲೆಯ ಯಾರಿಗೂ ಹಿಂಸೆಯಾಗಿ, ಜೀವ ವಿರೋಧಿ ಸಂಗ ಯಾಗಿ ಕಾಣುವುದಿಲ್ಲ. ಪಿತೃನಿಷ್ಠ ಮೌಲ್ಯಗಳನ್ನು ಕಾಪಾಡ ವುದು ಸಾಮಾಜಿಕ ಹಾಗೂ ಧಾರ್ಮಿಕ ಹೊಣೆಗಾರಿ ಯಾಗಿ ಪರಿಗಣಿತವಾಗಿದೆ. ಹೆಣ್ಣಿನ ಮೇಲೆ ನಡೆಯು ಈ ಬಗೆಯ ಹಲ್ಲೆಗಳಿಗೆ ಸಮಾಜ ಕಲ್ಯಾಣದ ಹಾಗ ಧಾರ್ಮಿಕ ಕಲ್ಯಾಣದ ಮೆರಗು ಇರುತ್ತದೆ.

ಹಿಂಸೆ ಮಾಡುವವರು ಪಾತಿವ್ರತ್ಯ ದಿವ್ಯಗಳನ್ನು ಮೌಲ್ಯ ಪರೀಕ್ಷೆಗಳಾಗಿ ಪರಿಗಣಿಸಿದ್ದರಿಂದ, ಯಾವುದೇ ಪಾಪ ಪ್ರಜ್ಞೆ ಇಲ್ಲದೆ ಹೆಣ್ಣಿನ ಮೇಲೆ ಹಲ್ಲೆಯನ್ನು ನಡೆಸುತ್ತಿರುತ್ತಾರೆ. ಹಾಗೆಯೇ ಹಿಂಸೆ ನೋಡುವವರು ಕೂಡಾ ಪಾತಿವ್ರತ್ಯ ಪರೀಕ್ಷೆಗಳನ್ನು ಮೌಲ್ಯವಾಗಿಯೇ ಪರಿಗಣಿಸಿರುವರು. ಹೀಗಾಗಿ ಅವರು ಪಾತಿವ್ರತ್ಯ ದಿವ್ಯ ಳನ್ನು ಮೌನವಾಗಿ ನೋಡುತ್ತಿರುತ್ತಾರೆ. ಗಂಡ ಇಲ್ಲವ ಪುತ್ರನೊಡ್ಡಿದ ಪಾತಿವ್ರತ್ಯದ ದಿವ್ಯಗಳಲ್ಲಿ ಪಾಸಾದ ತಕ್ಷಣ ಪಾತಿವ್ರತ್ಯದ ಪರೀಕ್ಷೆಗಳು ಕೊನೆಗೊಳ್ಳುವುದಿಲ್ಲ. ಅಂದರೆ ಅವರಿಗೆ ಘಟನೆಗಳ ಸತ್ಯಾಂಶ ತಿಳಿದುಕೊಳ್ಳುವುದು ಬೇಕಾಗಿಲ್ಲ. ಪಾತಿವ್ರತ್ಯದ ಪರೀಕ್ಷೆಗಳ ಉದ್ದೇಶವೂ ಅದಾಗಿರುವುದಿಲ್ಲ. ಅದಕ್ಕಗಿಯೇ ಅವಳು, ಅವನ ಪರೀಕ್ಷೆಯಲ್ಲಿ ಪಾಸಾದಂತೆ ವ್ಯಗ್ರಗೊಳ್ಳುತ್ತ ಹೋಗುತ್ತಾನೆ. ಒಂದರ ಹಿಂದೊಂದರಂತೆ ಸರಣಿ–ಸರಣಿಯಾಗಿ ಪರೀಕ್ಷೆಗಳನ್ನು ನಡೆಸುತ್ತಲೇ ಹೋಗುತ್ತಾನೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಎಷ್ಟು ಅಸಹಾಯಕಳಾಗಿರುವಳು ಎಂದರೆ, ಯಾರು ತನ್ನ ಆತ್ಮಾಭಿಮಾನಕ್ಕೆ ಹಾಗೂ ಜೀವಕ್ಕೆ ಧಕ್ಕೆಯನ್ನು ತರುತ್ತಿರುತ್ತಾರೋ ಅವರೊಡ್ಡಿದ

ರೀಕ್ಷೆಗಳನ್ನು ಜಯಿಸುತ್ತ ಮತ್ತೆ ಮತ್ತೆ ಅವರೆದುರು ಬಂದು ನಿಂತು ಕೊಳ್ಳುತ್ತಾಳೆ.

ಪಾತಿವ್ರತ್ಯ ಪರೀಕ್ಷೆಗಳಿಂದ ಎದುರಿಸುವ ಅಪಮಾನಗಳಾಗಲಿ, ಜೀವ ಭಯವಾಗಲಿ, ಅವಳನ್ನು ಈ ವ್ಯವಸ್ಥೆಯಿಂದ ಪಲಾಯನ ಮಾಡಲು ಬಿಡುವುದಿಲ್ಲ. ಪ್ರತಿಭಟಿಸುವ ಶಕ್ತಿಯನ್ನು ತಂದುಕೊಡುವುದಿಲ್ಲ. ತನ್ನ ಮೇಲೆ ನಡೆಯುವ ಹಲ್ಲೆಗಳನ್ನು ಹಾಗೂ ಹಿಂಸೆ, ಅಪಮಾನಗಳನ್ನು ತುಟಿ ಕಚ್ಚಿ ಸಹಿಸಿಕೊಂಡು ಪಾತಿವ್ರತ್ಯ ಪರೀಕ್ಷೆಗಳಲ್ಲಿ ವಿಜಯಿಯಾಗುತ್ತಾಳೆ. ಇದನ್ನು ಪುರುಷನು ತನಗಾದ ಮುಖಭಂಗವೆಂದು ಸ್ವೀಕರಿಸುತ್ತಾನೆ. ಆದರೆ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸುವುದಿಲ್ಲ. ಗಂಡಸಿಗೆ ಹೆಂಡತಿಯ ಶೀಲದ ಕುರಿತು ಒಂದು ಬಾರಿ ಸಂಶಯ ಬಂದರೆ ಸಾಕು, ಅವಳಿಗೆ ಪಾತಿವ್ರತ್ಯ ಪರೀಕ್ಷೆಗಳನ್ನು ನಡೆಸುವನು. ಇದರಲ್ಲಿ ಸೋತರೆ ಅವಳು ಅವನ ಹೆಂಡತಿಯಾಗಿ ಉಳಿಯುವುದಿಲ್ಲ. ಒಂದು ವೇಳೆ ಗೆದ್ದರೂ ಆಕೆ ಹೆಂಡತಿಯಾಗಿರುವುದಿಲ್ಲ. ಅವಳನ್ನು ದೇವಿಯನ್ನಾಗಿ ರೂಪಾಂತರಗೊಳಿಸಲಾಗುವುದು. ಅಂದರೆ ಗಂಡನ ಸಂಶಯಕ್ಕೆ ಬಲಿ ಆದ ಹೆಣ್ಣು ಹೆಂಡತಿಯಾಗಿ

ಪಾತಿವ್ರತ್ಯ ಪರೀಕ್ಷೆಗಳಿಂದ ಎದುರಿಸುವ ಅಪಮಾನಗಳಾಗಲಿ, ಜೀವ ಭಯವಾಗಲಿ, ಅವಳನ್ನು ಈ ವ್ಯವಸ್ಥೆಯಿಂದ ತನ್ನ ಮೇಲೆ ನಡೆಯುವ ಹಲ್ಲೆಗಳನ್ನು ಹಾಗೂ ಹಿಂಸೆ, ಅಪಮಾನಗಳನ್ನು ತುಟಿ ಕಚ್ಚಿ ಸಹಿಸಿಕೊಂಡು ಪಾತಿವ್ರತ್ಯ ಪರೀಕ್ಷೆಗಳಲ್ಲಿ ವಿಜಯಿಯಾಗುತ್ತಾಳೆ. ಗಂಡಸಿಗೆ ಹೆಂಡತಿಯ ಶೀಲದ ಕುರಿತು ಒಂದು ಬಾರಿ ಸಂಶಯ ಬಂದರೆ ಸಾಕು, ಅವಳಿಗೆ ಪಾತಿವ್ರತ್ಯ ಪರೀಕ್ಷೆಗಳನ್ನು ನಡೆಸುವನು. ಇದರಲ್ಲಿ ಸೋತರೆ ಅವಳು ಅವನ ಹೆಂಡತಿಯಾಗಿ ಉಳಿಯುವುದಿಲ್ಲ. ಒಂದು ವೇಳೆ ಗೆದ್ದರೂ ಆಕೆ ಹೆಂಡತಿಯಾಗಿರುವುದಿಲ್ಲ.

ಉಳಿಯಲು ಸಾಧ್ಯವೇ ಇಲ್ಲ. ಈ ಕಾರಣಕ್ಕಾಗಿಯೇ ಪಾತಿವ್ರತ್ಯದ ದಿವ್ಯಗಳಲ್ಲಿ ಗೆದ್ದ ಹೆಂಡತಿಯನ್ನು ದೇವಿಯನ್ನಾಗಿ ರೂಪಾಂತರಗೊಳಿಸುವನು.

ಅಲೌಕಿಕ ನೆಲೆಯಲ್ಲಿ ಹೆಣ್ಣಿಗೆ ಗಂಡು ಶರಣಾಗತಿಯಾಗುವುದನ್ನು ಒಪ್ಪಲಾಗಿದೆ. ಹೀಗಾಗಿ ಪಾತಿವ್ರತ್ಯದ ದಿವ್ಯಗಳನ್ನು ಗೆದ್ದ ಹೆಂಡತಿಗೆ ಶರಣಾಗಲು ಇಚ್ಛಿಸುತ್ತ ಗಂಡಸು ಅವಳನ್ನು ದೈವಿಪಟ್ಟಕ್ಕೇರಿಸಿ ಬಿಡುತ್ತಾನೆ. ಗಂಡಸಿನ ಈ ಶರಣಾಗತಿಯಲ್ಲಿ ಎರಡು ತಂತ್ರಗಳು ಸ್ಪಷ್ಟವಾಗಿ ಗೋಚರಿಸುತ್ತವೆ. : ೧. ಈಗಾಗಲೇ ಹೇಳಿದಂತೆ ಅವಳನ್ನು ಪುನಃ ಹೆಂಡತಿಯಾಗಿ ಸ್ವೀಕರಿಸದ ಗಂಡಸಿನ ಮನಸ್ಥಿತಿ. ೨. ಗಂಡನಾಗಿ ಹೆಂಡತಿಗೆ ಶರಣಾಗಲು ಸಾಧ್ಯವಿಲ್ಲ. ಅದಕ್ಕಾಗಿ ಅವಳನ್ನು ದೇವಿಯನ್ನಾಗಿ ರೂಪಾಂತರಿಸಲಾಗಿದೆ. ಪಿತೃ ಪ್ರಧಾನ ವ್ಯವಸ್ಥೆಯ ಭಾಗವಾಗಿ ಮೂಡಿ ಬಂದ ಜನಪದ ಸಾಹಿತ್ಯವು ಪಾತಿವ್ರತ್ಯ ಪರೀಕ್ಷೆಗಳಲ್ಲಿ ಗೆದ್ದ ಹೆಣ್ಣು ಮಕ್ಕಳನ್ನು ದೇವಿಯರನ್ನಾಗಿ ಪ್ರತಿನಿಧೀಕರಿಸಿದೆ. ಇಂತಹ ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಪಾತಿವ್ರತ್ಯ ಪರೀಕ್ಷೆಗಳು ಮಹಿಳಾ ಹಾಡುಗಾರರಲ್ಲಿ ಹಾಗೂ ಅದನ್ನು ಕೇಳುವ ಮಹಿಳಾ ಶ್ರೋತೃಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಕುರಿತು ಅವ್ಯಕ್ತವಾದ ಭಯವನ್ನು ಸೃಷ್ಟಿಸುತ್ತ, ಅದು ನಿರೂಪಿಸಿದ ಮೌಲ್ಯಗಳನ್ನು ಪಾಲಿಸಿಕೊಂಡು ಹೋಗುವಂತೆ ಒತ್ತಾಯಿಸುತ್ತಿರುತ್ತವೆ. ಮತ್ತು ಪಿತೃನಿಷ್ಠ ಮೌಲ್ಯಗಳಿಗೆ ಹೆಣ್ಣು ವಿಧೇಯಳಾಗಿದ್ದಾಳೋ ಇಲ್ಲವೋ ಎನ್ನುವ ವಿಷಯದ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನು ಪುರುಷ ಶ್ರೋತೃಗಳಿಗೆ ಈ ಬಗೆಯ ಕಾವ್ಯಗಳು, ಕಥೆಗಳು ನೆನಪಿಸುತ್ತಿರುತ್ತವೆ. ಭಾರತೀಯ ಸಂಸ್ಕೃತಿಗಳಲ್ಲಿ ಪಾತಿವ್ರತ್ಯದ ದಿವ್ಯಗಳು ಜೀವ ವಿರೋಧಿ ಸಂಗತಿಗಳಾಗಿ

ಪ್ರತಿನಿಧೀಕರಣಗೊಂಡಿಲ್ಲ. ಹೆಂಡತಿಯರು ಎದುರಿಸುವ ಈ ದಿವ್ಯಗಳು ಅವರನ್ನು ದೈವಿ ನೆಲೆಗೆ ಏರಿಸುತ್ತವೆ.

"ನೋವಿನ ಸಮಸ್ಯೆಗೂ ಅಧಿಕಾರದ ಸಮಸ್ಯೆಗೂ ಇರುವ ಸಂಬಂಧವನ್ನು ಪರಿಶೀಲಿಸಬಹುದು. ನೋವಿಗೆ ಭಾಷಿಕ ರೂಪಗಳನ್ನು ಕೊಡುವುದು ಕಷ್ಟವಾಗಿರುವ ಸನ್ನಿವೇಶದಲ್ಲಿ ದೊರೆಯಬಹುದಾದ ವ್ಯಾಖ್ಯಾನಗಳೆಲ್ಲವೂ ಪ್ರಚಾರ ಪಡೆಯುವ ಭಾಷಿಕ ಕಲಾಕೃತಿಗಳೆಲ್ಲವೂ ಅಧಿಕಾರದಲ್ಲಿರುವ ವರ್ಗಗಳಿಂದಲೂ ನಿಯಂತ್ರಿತವಾಗಿರುತ್ತದೆ. ಉಳಿದವರ ವ್ಯಾಖ್ಯಾನಗಳು ಹತ್ತಿಕ್ಕಲ್ಪಡುತ್ತವೆ ಎಂದರೆ, ಸಾಮಾನ್ಯವಾಗಿ ನೋವಿನ ಬಗೆಗಿನ ಭಾಷಿಕ ಕೃತಿಗಳು ಹಾಗೂ ಅವುಗಳಿಗೆ ನೀಡಲಾಗಿರುವ ವ್ಯಾಖ್ಯಾನಗಳು ನೋವನ್ನು ಅನುಭವಿಸುತ್ತಿರುವುದರಿಂದ ಅಲ್ಲ, ನೋವನ್ನು ಕೊಡುತ್ತಿರುವುದರಿಂದಲೇ ರೂಪಿತವಾಗಿರುತ್ತವೆ" (ರಾಘವೇಂದ್ರರಾವ್ ೧೯೯೩, ಪು. ೪) ಹೀಗಾದಾಗ ಪಾತಿವ್ರತ್ಯದ ಹೆಸರಿನಲ್ಲಿ ಹೆಣ್ಣು ಅನುಭವಿಸುತ್ತಿರುವ ತೀವ್ರವಾದ ದೈಹಿಕ, ಮಾನಸಿಕ ನೋವುಗಳು ಅವಳನ್ನು ದೈವಿ ನೆಲೆಗೆ ಕೊಂಡೊಯ್ಯಲು ಸಾಧ್ಯವಾಗುತ್ತದೆ.

ಪಾತಿವ್ರತ್ಯದ ದಿವ್ಯಗಳು, ಸತಿ ಪದ್ಧತಿಗಳು ಆಕರ್ಷಕವಾಗಿ ವೈಭವೀಕರಿಸಲ್ಪಟ್ಟಿವೆ. ಈ ಕುರಿತಿರುವ ಜನಪದ ಕಥೆಗಳು, ಕಥನಗೀತೆಗಳು ಹೆಣ್ಣಿನ ನೋವನ್ನು ವಿಜೃಂಭಿಸುತ್ತಲೇ ಪಿತೃಪ್ರಧಾನ ವ್ಯವಸ್ಥೆಯ ಪರಕಾಷ್ಠತೆಯನ್ನು ಎತ್ತಿ ಹಿಡಿಯುತ್ತವೆ. ವೈಭವೀಕರಣದ ಹೆಸರಿನಲ್ಲಿ ಸ್ವೀಕೃತವಾದ ನೋವಿನಲ್ಲಿ ಅಸಹಾಯಕತೆ ಇರುತ್ತದೆ. ವಿನಃ ಪ್ರತಿರೋಧವಲ್ಲ. ಮಹಿಳೆಗೆ ಪರ್ಯಾಯ ಬದುಕಿನ ವ್ಯವಸ್ಥೆ ಇಲ್ಲದೆ ಇರುವುದರಿಂದ, ನೋವು ಅಪಮಾನಗಳ ದಾರಿಯಲ್ಲಿಯೇ ಮೌನವಾಗಿ ನಡೆಯಬೇಕಾದುದು ಅನಿವಾರ್ಯವಾಗಿದೆ.

(ಮುಂದುವರಿಯುವುದು)

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ

೩

ಜಿಜ್ಞಾಸೆ

ದಲಿತ ಸಮಾಜದ ಎಲ್ಲ ಆಯ್ಕೆಗಳಲ್ಲಿ ತಾರತಮ್ಯವಿದ್ದು ಅವುಗಳ ಆಯ್ಕೆಯೆ ಹುಸಿಯಾದದ್ದು. ಮೀಸಲಾತಿ ಎನ್ನುವ ಒಂದು ವ್ಯವಸ್ಥೆ ಸಂವಿಧಾನ ಬದ್ಧವಾಗಿ ಜಾತಿಯಾಗದೆ ಹೋಗಿದ್ದರೆ ಕಿಂಚಿತ್ ಆಯ್ಕೆಯ ದಲಿತರಿಗೆ ಸಾಧ್ಯವಾಗುತ್ತಿರಲಿಲ್ಲ. ಬುದ್ಧ ಈ ದೇಶದ ಸಾಮಾಜಿಕ ವ್ಯವಸ್ಥೆಯು ಭಗ್ನ ತತ್ವದ ಮೇಲೆ ಅಧಿಕಾರವನ್ನು ಚಲಾಯಿಸುತ್ತದೆ ಎಂದು ತಿಳಿದಿದ್ದರಿಂದಲೆ ಸಮಾಜದ ಲೋಭಿತನದ ಬಗ್ಗೆ ಸರಳವಾಗಿಯೆ ಆದರೆ ಗಾಢವಾದ ಮನುಷ್ಯತ್ವದ ದುರಂತ ಪ್ರಜ್ಞೆಯಿಂದಲೆ ಮನುಷ್ಯ ತನ್ನ ಮಿತಿಗಳನ್ನು ಮೀರಿದರೆ ತಾನೇ ತಾನಾಗಿ ಅಖಂಡ ಆಯ್ಕೆಯನ್ನು ಸ್ವಾತಂತ್ರ್ಯವನ್ನು ಪಡೆಯಬಲ್ಲ ಎಂದು ಸಾರಿದ ಬಸವಣ್ಣ.

○ಡಾ|| ಮೊಗಳ್ಳಿ ಗಣೇಶ್

ಮೇಲು ಜಾತಿಗಳು ಮಾತ್ರ ಅಪರಿಮಿತವಾದ ಸ್ವಾರ್ಥಾವಕಾಶವನ್ನು ಹೊಂದಿದ್ದು ಅವು ನಿರಂಕುಷ ಅವಕಾಶಗಳಿಂದ ಕೊಬ್ಬಿ ಹೋಗಿರುತ್ತವೆ. ಇದು ಆರೋಗ್ಯವಂತ ಸಮಾಜದ ಗುಣವಲ್ಲ. ದಲಿತ ಸಮಾಜದ ಎಲ್ಲ ಆಯ್ಕೆಗಳಲು ತಾರತಮ್ಯವಿದ್ದು ಅವುಗಳ ಆಯ್ಕೆಯೆ ಹುಸಿಯಾದದ್ದು. ಮೀಸಲಾತಿ ಎನ್ನುವ ಒಂದು ವ್ಯವಸ್ಥೆ ಸಂಪಿಧಾನಬದ್ಧವಾಗಿ ಜಾರಿಯಾಗದೆ ಹೋಗಿದ್ದರೆ ಕಿಂಚಿತ್ ಆಯ್ಕೆಯು ದಲಿತರಿಗೆ ಸಾಧ್ಯವಾಗುತ್ತಿರಲಿಲ್ಲ. ಆಯ್ಕೆಯ ಅವಕಾಶವನ್ನು ಕಸಿದುಕೊಳ್ಳುವ ವ್ಯವಸ್ಥೆಯು ಕುರುಡು ನ್ಯಾಯವನ್ನು ಮಾತ್ರ ಪಾಲಿಸಬಲ್ಲದು. ಬುದ್ಧ ಈ ದೇಶದ ಸಾಮಾಜಿಕ ವ್ಯವಸ್ಥೆಯು ಭಗ್ನತತ್ವದ ಮೇಲೆ ಅಧಿಕಾರವನ್ನು ಚಲಾಯಿಸುತ್ತದೆ ಎಂದು ತಿಳಿದಿದ್ದರಿಂದಲೆ ಸಮಾಜದ ಲೋಭಿತನದ ಬಗ್ಗೆ ಸರಳವಾಗಿಯೆ ಆದರೆ ಗಾಢವಾದ ಮನುಷ್ಯತ್ವದ ದುರಂತ ಪ್ರಜ್ಞೆಯಿಂದಲೆ ಮನುಷ್ಯ ತನ್ನ ಮಿತಿಗಳನ್ನು ಮೀರಿದರೆ ತಾನೇ ತಾನಾಗಿ ಅಖಂಡ ಆಯ್ಕೆಯನ್ನು ಸ್ವಾತಂತ್ರ್ಯವನ್ನು ಪಡೆಯಬಲ್ಲ ಎಂದು ಸಾರಿದ ಬಸವಣ್ಣ ಕೂಡ ಇದೇ ದಾರಿಯಲ್ಲಿ ಬಂದರೂ ಸಹ ಅವರು ತೋರಿದ ಆಯ್ಕೆ ಮಾತ್ರ ಪರಿಮಿತವಾದುದೇ ಆಗಿತ್ತು. ಕಾಯಕದ ಏಕೈಕ ಆಯ್ಕೆಯು ದೀರ್ಘಕಾಲೀನವಾದುದಲ್ಲ. ಬಸವಣ್ಣನವರು ನಿರ್ಮಿಸಿದ ಆಯ್ಕೆಗಳು ಸಮುದಾಯದ ವೃತ್ತಿಗೆ ಸಂಬಂಧಿಸಿದಂತೆ ಇದ್ದವೇ ಹೊರತು ಆ ವೃತ್ತಿ ವ್ಯಾಪ್ತಿಯನ್ನು ಮೀರಿದ ಆಯ್ಕೆಗಳು ಅವರ ಚಳುವಳಿಯಲ್ಲಿ ಇರಲಿಲ್ಲ. ವೃತ್ತಿಯನ್ನು ಬಲಪಡಿಸು ಆಯ್ಕೆಗಳು ಕಾಲಾ ನಂತರದಲ್ಲಿ ಹೊಸಯುಗದ್ದ ಅವಿಷ್ಕಾರಗಳಲ್ಲಿ ಅದೇ ಆಯ್ಕೆಗಳು ಆ ಸಮುದಾಯಕ್ಕೆ ಬಂಧನವೂ ಆಗಿಬಿಡಬಲ್ಲವು. ವೃತ್ತಿಯ ಆಯ್ಕೆಯು ಜಾತಿಯಾಗಿ ಮಾರ್ಪಟ್ಟ ದೊಡ್ಡ ಚರಿತ್ರೆಯೆ ನಮ್ಮ ಮುಂದೆ ಜೀವಂತವಾಗಿದೆ.

ಕರಕುಶಲ ಸಮುದಾಯಗಳೆಲ್ಲವೂ ವಿಶೇಷವಾಗಿ ಹಿಂದುಳಿದ ವರ್ಗಗಳು ಎಂಬುದನ್ನು ನೆನೆದು ಅವುಗಳ ನೆನ್ನೆಯ ಆಯ್ಕೆಯು ಹೀಗಾಗಿ ಹಿಂದುಳಿದ ಈ ಕರಕುಶಲ ಹಾಗೂ ದಲಿತ ಸಮು[...]ಯಗಳು ವೃತ್ತಿ ಕೌಶಲ್ಯದಲ್ಲಿ ಪಳಗಿದವೇ ಹೊರತು ವೃತ್ತಿಯ [...] ಬಾಧ್ಯತೆಗಳಲ್ಲಿ ಅವು ಮೌನ ವಹಿಸಿಕೊಂಡೇ ಬರ ಬೇಕಾಯಿತು.

ಚಾಣಕ್ಯನ ಅರ್ಥಶಾಸ್ತ್ರವೇ ಪರೋಕ್ಷವಾಗಿ ಕರಕುಶಲ ಸ[...] ದಾಯಗಳ ಪಾಲಿಗು ಜಾರಿಗೊಂಡಿದ್ದು ಸ್ವಾವ ಲಂಬನೆಗೆ [...] ಅವಕಾಶವೆ ಇರಲಿಲ್ಲ. ಹೀಗಾಗಿಯೆ ಉದ್ದಕ್ಕೂ ಹಿಂದು[...] ವರ್ಗಗಳಿಗೆ ಉತ್ಪಾದನಾ ಶಕ್ತಿ ಇದ್ದು ಕೂಡ ಅವು ಸ್ವಾವಲ[...] ಸಮುದಾಯಗಳಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಇಂದಿಗೂ ಕೂ[...] ಈ ಎಲ್ಲ ಹಿಂದುಳಿದ ವೃತ್ತಿ ಸಮೂಹಗಳು ಆರ್ಥಿಕವಾಗಿಯ[...] ಸಂಘಟಿತವಾಗಲಾರವು. ಈ ವೃತ್ತಿಗಳಿಗೂ ಜಾತಿ ಮತ್ತು ಲಿ[...] ತಾರತಮ್ಯಗಳ ಶಾಪವಿದೆ. ಪರಂಪರಾನು ಗತವಾಗಿ ಬ[...] ವೃತ್ತಿಯನ್ನು ಆಧುನಿಕ ಉತ್ಪಾದನ ವ್ಯವಸ್ಥೆಯಲ್ಲಿ ಅನ್ವಯಿಕಗೊ[...] ಅವುಗಳ ಸ್ವಾಮ್ಯವನ್ನು ಪಡೆಯುವುದೂ ಕೂಡ ಇವತ್ತಿನ ಬೃಹ[...] ಆರ್ಥಿಕ ಪ್ರವಾಹದಲ್ಲಿ ಈ ಸಮುದಾಯಗಳಿಗೆ ಅಸಾಧ್ಯವಾಗಿ[...] ಆಯ್ಕೆಯೇ ಎಷ್ಟೋ ಬಾರಿ ದಲಿತ ಸಮುದಾಯಗಳಿಗೆ ಶಿಕ್ಷೆಯಾ[...]ದ್ದಿದೆ. ಬದುಕಲು ಮಾಡಿಕೊಳ್ಳುವ ಆಯ್ಕೆಯೆ ದಂಡನೆ ಯಾಗು[...] ದುರಂತವನ್ನು ಸದಾ ಇಂತಹ ಸಮೂಹಗಳು ಅನುಭವಿಸುತ್ತ ಇರುತ್ತವೆ.

ಬುದ್ಧತ್ವವು ಆಯ್ಕೆಯ ಮೂಲಕವೆ ವ್ಯಕ್ತಿಯ ಸಾಕ್ಷಾತ್ಕಾರವ[...] ಎಂದು ನಂಬುತ್ತದೆ. ವ್ಯಕ್ತಿಗಳಿಗೆ ನೀಡುವ ಆಯ್ಕೆಯು ಸಾಮಾ[...]ಕವಾದ ಅವಕಾಶಗಳಾಗಿ ಮಾರ್ಪಡುತ್ತವೆ. ಅಂಬೇಡ್ಕರ್ ಮಾ[...]ಕೊಂಡ ಆಯ್ಕೆಯು ಸಮುದಾಯದ ಅವಕಾಶವಾಗಿ ಬೆಳೆಯಿತ[...] ಮಂಟೇಸ್ವಾಮಿ ಹಾಗೂ ಮಾದೇಶ್ವರರು ಮಾಡಿಕೊಂಡ ಆಯ್ಕೆಯ[...] ಸಾಂಸ್ಕೃತಿಕವಾದದಾಗಿತ್ತೆ ಹೊರತು ವರ್ತಮಾನದ ಭೌತಿಕ ಆಯ[...]ಯಲ್ಲಿ ಅವರು ಆಸಕ್ತಿವಹಿಸಲಿಲ್ಲ. ಸಂಸ್ಕೃತಿಯ ವಿಶ್ವಾತ್ಮಕ ನೆಲೆಯ[...] ಅಖಂಡ ವಿಶ್ವವೇ ಅವರಿಗೆ ಕಿರಿದು. ಜಗತ್ತನ್ನು ಮೀರಿ ಲೌಖಿಕ[...]

ಇಂದು ಯಾವ ಬಗೆಯ ಆರ್ಥಿಕ ಸ್ವಾತಂತ್ರ್ಯವನ್ನು ತಂದುಕೊಟ್ಟಿವೆ ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಕರಕುಶಲ ಸಮುದಾಯಗಳ ಆಯ್ಕೆಗಳು ಸ್ವಯಂ ಆಯ್ಕೆಗಳಾಗಿರಲಿಲ್ಲ. ಹೇರಲ್ಪಟ್ಟ ಆಯ್ಕೆಗಳಾಗಿದ್ದವು. ದಲಿತರ ಕಸುಬುಗಳು ಸ್ವಯಂ ಆಯ್ಕೆಯಾಗಿರಲಿಲ್ಲ. ಕೆಳ ಮಧ್ಯಮ ಜಾತಿಗಳ ಉತ್ಪಾದನಾ ಕೌಶಲ್ಯ ಕೂಡ ಊಳಿಗಮಾನ್ಯ ಸಮಾಜದ ನಿರ್ದೇಶನದಂತೆ ಆಯ್ಕೆ ಮಾಡಿಕೊಂಡಂತವೇ ಆಗಿದ್ದವು. ಕಮ್ಮಾರ, ಚಮ್ಮಾರ, ಕುಂಬಾರ, ಅಗಸ, ಭೋವಿ ತರದ ನೂರಾರು ವೃತ್ತಿ ಪಂಗಡಗಳ ಆಯ್ಕೆಯಲ್ಲಿ ಆರ್ಥಿಕ ಅಧಿಕಾರ ಇರಲೇ ಇಲ್ಲ. ಕರ್ಮಕ್ಕೆ ಮಾತ್ರ ಮಾನ್ಯತೆ ಇತ್ತೆ ವಿನಹ ಪ್ರತಿಫಲಕ್ಕೆ ಅವಕಾಶವಿರಲಿಲ್ಲ. ಕರ್ಮಸಿದ್ಧಾಂತದ ಈ ಆಯ್ಕೆಗಳೆಲ್ಲವೂ ಅಂತಿಮವಾಗಿ ಪರರ ಸುಖಕ್ಕಾಗಿಯೆ ಮೋಜಿಸಲ್ಪಟ್ಟದ್ದವು.

ಸೆಳೆತವನ್ನು ದಾಟಿ ಅಖಂಡವಾದ ಪ್ರ[...]ಯಲ್ಲಿ ಎಲ್ಲವೂ ತನ್ನದೇ ಈ ಎಲ್ಲವ[...] ತನಗೆ ಅಗತ್ಯವಿಲ್ಲ ಎಂಬ ಧಾರ್ಷ್ಟ್ಯ[...] ಅವರಿಗಿದ್ದ ಕಾರಣವಾಗಿಯೆ ಲೌಖಿಕದಲ್ಲಿ ಆಯ್ಕೆ ಮಾಡಿಕೊಳ್ಳುವುದಕ್ಕಿಂತ ಅಲೌಖಿ[...]ದಲ್ಲಿ ವಿಶ್ವಾತ್ಮಕವಾಗಿ ಆಯ್ಕೆ ಮಾಡಿಕೊಳ್ಳುವುದು ಮುಖ್ಯವೆನಿಸಿತು.

ಇಂತಹ ಧೋರಣೆಯು ಬಹು[...]ಪಾಲು ದಲಿತ ಪರಂಪರೆಯ ಉದ್ದಕ್ಕೂ[...]ಸಾಗಿ ಬಂದಿದೆ. ದಲಿತರ ತತ್ವ ಪದಗಳ[...]ಲ್ಲಂತು ಇಂಥ ಭಾವವು ಮುಡುಗಟ್ಟಿ[...] ನಿಂತಿದೆ. ಎಲ್ಲಿ ವರ್ತಮಾನದ ಆಯ್ಕೆಯು ಕ್ಷಣಿಕವಾದದ್ದು ಎಂದು ತಳ ಜಾತಿಗಳು ಆತ್ಯಂತಿಕವಾಗಿ ನಂಬುತ್ತ ಬಂದದ್ದು ಕೂಡ ಇಂದಿನ ಅವರ ಆಯ್ಕೆ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಿದ[...] ಮಂಟೇಸ್ವಾಮಿ ಮತ್ತು ಮಾದೇಶ್ವರರು

ಲಿತ ಸಮೂಹಕ್ಕೆ ನೀಡಿದ ಸಂದೇಶವು ವಿಶ್ವಾತ್ಮಕ ಯ್ಕೆಗೆ ಮಾತ್ರವೆ ತಮ್ಮನ್ನು ತಾವು ಹದಗೊಳಿಸಿ ಕೊಳ್ಳ ೇಕು ಎಂಬುದು ಅಮೂರ್ತವಾಗಿ ಅವರ ಬಗೆಗಿನ ವ್ಯಗಳಲ್ಲಿ ಕಾಣುತ್ತದೆ.

ತಳಪಾಯದ ಸಮಾಜಗಳಿಗಿರುವ ದೊಡ್ಡ ಶಾಪ ನೆಂದರೆ ಎಲ್ಲವನ್ನು ದೈವಿಕವಾಗಿ ಆರಾಧಿಸಿ ತನ್ನ ಯ್ಕೆಯನ್ನು ಆ ಬಗೆಯ ಭಾವನೆಯಲ್ಲಿ ಳೆದುಕೊಳ್ಳುವುದು. ಪರ ಹಿತದ ಈ ಆಶಯವು ರ್ತಮಾನದ ದಲಿತ ಸಮೂಹಗಳ ಮೇಲೆ ಳ್ಳೆಯ ಪರಿಣಾಮವನ್ನೇನು ಬೀರಿಲ್ಲ. ಆಧ್ಯಾತ್ಮಿಕವಾದ ಂಗೆಗಳಲ್ಲಿ ದಿಗ್ವಿಜಯಿಯಾಗುವ ದಲಿತ ಪರಂಪರೆಗಳು ರ್ತಮಾನದ ಲೌಖಿಕ ವ್ಯವಸ್ಥೆಯ ಮುಂದೆ ದೀನವಾಗಿ ೋಲುತ್ತಿರುತ್ತವೆ. ಮಾದೇಶ್ವರ ಮಂಟೇಸ್ವಾಮಿಯರು ಧ್ಯಾತ್ಮಿಕವಾದ ದಂಗೆಯಲ್ಲಿ ಯಶಸ್ವಿಯಾದರು ತಮ್ಮ ಮೂಹಗಳಿಗೆ ಲೌಖಿಕದ ಆಯ್ಕೆಗಳಲ್ಲಿ ಕುರುಹಗಳನ್ನು ಟ್ಟು ಹೋಗಲಿಲ್ಲ. ಅಂಬೇಡ್ಕರ್ ಲೌಖಿಕದ ಆಯ್ಕೆಯ ಮೂಲಕವೆ ಆಧ್ಯಾತ್ಮದ ದಂಗೆಗೆ ಬೇಕಾದ ಪರಿಸರವನ್ನು ರ್ಮಿಸಲು ಯತ್ನಿಸಿದರು. ಬೌದ್ಧಧರ್ಮಕ್ಕೆ ಮತಾಂತರ ಗುವ ಅವರ ಕ್ರಮವು ಆಧ್ಯಾತ್ಮಿಕ ದಂಗೆಯ ಒಂದು ಂತವಷ್ಟೆ. ಇಂತಹ ಸ್ಥಿತಿಯು ಆಯಾ ಮುದಾಯಗಳ ಆಯ್ಕೆಯ ಪ್ರವೃ ಯನ್ನು ಜಾಗೃತಗೊಳಿಸಿ ಆಧು ಕ ಜಗತ್ತಿನಲ್ಲಿ ಅಸ್ತಿತ್ವ ಯ್ದುಕೊಳ್ಳಲು ಬೇಕಾದ ಚ್ಛಾಶಕ್ತಿಯನ್ನು ಒಂದಿಷ್ಟಾ ದರೂ ತುಂಬಬಲ್ಲದು. ದ್ಧತ್ವವು ದಲಿತ ಸಮಾ ದ ತಳಹದಿಯಾಗಿ ನರ್ ರಚಿತವಾದಾಗ ದರ ಆಯ್ಕೆಗಳು ಅಪರಿಮಿತವಾಗಬಲ್ಲವು.



ಬುದ್ಧತತ್ವದಲ್ಲಿ ಅಂಬೇಡ್ಕರ್ ಅವರಿಗೆ ಸಮಾನತೆ ಡಿತ್ತು ಎಂದು ಹೇಳಿದರೆ ಸಾಲದು. ಅಖಂಡವಾದ ಾನವೀಯತೆ ಬುದ್ಧತ್ವದಲ್ಲಿ ಸರಳ ತತ್ವವಾಗಿ ಬೆಳಕಾ ತ್ತು. ಎಲ್ಲ ಗಡಿಗಳನ್ನು ಮೀರುವ ದರ್ಶನ ಬುದ್ಧತ್ವದ ತ್ತು. ಅದೇ ವೇಳೆಗೆ ಲೌಖಿಕದ ಆಯ್ಕೆಗಳಲ್ಲಿಯೆ ಮುಕ್ತಿ ದೆ ಎಂಬುದನ್ನು ಬುದ್ಧನ ನೀತಿಯು ಸೂಚಿಸಿತ್ತು. ಈ ಗೆಯ ಸ್ವಭಾವ ಹಿಂದೂ ಧರ್ಮದ ಯಾವ ರ್ಗದಲ್ಲು ಕಾಣಿಸಲು ಸಾಧ್ಯವಿರಲಿಲ್ಲ. ಭಗವದ್ಗೀತೆಯು ರ್ತವ್ಯದ ದಾಸನಾಗುವುದೆ ಪರಮ ಸುಖ ಎಂದು ಸುತ್ತಿ ಳಸಿ ಹೇಳುತ್ತದೆ. ಕರಕುಶಲ ಸಮುದಾಯಗಳು ಕರ್ತ ದ ದಾಸ್ಯಕ್ಕೆ ಒಳಗಾದವು. ಆ ಮೂಲಕ ಜಾತಿ ಪದ್ಧ ಯ ಭೇದವನ್ನು ಅನುಸರಿಸಿದವು. ಅವರವರ ಕರ್ಮವು ದರವರ ಪೂರ್ವಜನ್ಮದ ಫಲ ಎಂದು ಸಾರುವಲ್ಲಿಯೆ ಮುದಾಯಗಳ ಆಯ್ಕೆಗಳು ನಿಷೇಧಿಸಲ್ಪಟ್ಟಿರುತ್ತವೆ.

ಅಂಬೇಡ್ಕರ್ ಬುದ್ಧತ್ವವನ್ನು ಸಂವಿಧಾನದಲ್ಲಿ ಅಳವ ಸಿದರು. ಗಾಂಧೀಜಿಯ ಅಂತಃಕರಣದಲ್ಲು ಬುದ್ಧತತ್ವವು ಂತರ್ಗತವಾಗಿತ್ತು. ಇವರಿಬ್ಬರ ದಲಿತ ಪರ ಸಂವೇದ ೆಯು ಸ್ವರೂಪದಲ್ಲಿ ಭಿನ್ನವೆಂಬುವು ನಿಜವಿದ್ದರು ಕೆಲವು ಟನೆಗಳಲ್ಲಿ ವೈರುದ್ಯವಿದ್ದರು ಅಂತರಾಳದಲ್ಲಿ ಆತ್ಯಂತಿಕ ಡಿತದಿಂದಲೆ ಸಾಮಾಜಿಕ ನ್ಯಾಯದ ಆಧ್ಯಾತ್ಮವನ್ನು ಢವಾಗಿ ಪ್ರತಿಪಾದಿಸಿದರು. ಅಂಬೇಡ್ಕರ್ ತನ್ನ ನ್ನಗೊಂಡ ಸಮುದಾಯಗಳ ಬಿಡಿ ಅನನ್ಯತೆಯನ್ನು ಸಂವಿಧಾನದ ಕಕ್ಷೆಯ ಮೂಲಕ ಒಂದು ಮಾಡಲು ತೊಡಗಿದರು. ಇಡೀ ಸಂವಿಧಾನದ ತಿರುಳು ಬುದ್ಧತ್ವವೇ ಆಗಿದೆ. ಅಪರಿಮಿತ ಆಯ್ಕೆ ಮತ್ತು ಸ್ವಾತಂತ್ರ್ಯಗಳ ಕಡೆಗೆ ಸಮಾಜ ವಿಕಾಸವಾಗಬೇಕು ಎಂಬುದು ಸಂವಿಧಾನದ ಮೂಲ ಆಶಯ. ಇದು ಒಡ ಮೂಡಿದ್ದು ಬುದ್ಧತತ್ವದ ಮೂಲಕವೇ ಸಮಾಜಗಳು ಅಭಿವೃದ್ಧಿ ಆಗುವುದು ಎಂದರೆ; ಬದುಕುವ ಆಯ್ಕೆಯಲ್ಲಿ ಯಾವ ಬಗೆಯಲ್ಲು ಸಮುದಾಯಗಳಿಗೆ ಆತಂಕವಿರಬಾರದು ಹಾಗೂ ಅಪ್ರಮಾಣಿಕವಾದ ಪರಿಸರವಿರಬಾರದು. ಜಾತಿನಿಷ್ಠೆ ಸಮಾಜ ಆತಂಕ ಮತ್ತು ಅಪ್ರಮಾಣಿಕತೆಯಲ್ಲೆ ಸದಾ ಸಂಘರ್ಷದಲ್ಲಿರುತ್ತದೆ. ಇದು ಅಭಿವೃದ್ಧಿಗೆ ಮಾರಕ ಬುದ್ಧತ್ವವು ನಿರಾತಂಕವಾದ ಮಾನವ ಪ್ರೇಮದ ಸ್ವಚ್ಛ ವ್ಯಕ್ತಿತ್ವದ ವೈಚಾರಿಕ ನೀತಿಯನ್ನು ಅನುಸರಿಸಲು ಒತ್ತಾಯಿಸುತ್ತದೆ. ಅಂಬೇಡ್ಕರ್ ಅವರ ಚಿಂತನೆಯಲ್ಲು ಇಂತದೇ ಒಲವಿದೆ.

ಇಪ್ಪತ್ತೊಂದನೆಯ ಶತಮಾನದ ಜೊತೆ ಪಯಣಕ್ಕೆ ಸಿದ್ಧವಾಗಿರುವ ದಲಿತ ಸಮುದಾಯಗಳು ಚರಿತ್ರೆಯಿಂದ ಅನೇಕ ಪೆಟ್ಟುಗಳಿಂದ ಪಾಠವನ್ನು ಕಲಿತಿದೆ ರಾಜಕಾರಣವು ನಿರ್ಣಾಯಕವಾದ ಹೊಸದೊಂದು ಸಮ್ಮಿಶ್ರ ಒಕ್ಕೂಟಕ್ಕೂ ತನ್ನನ್ನು ತಾನು ಪರೀಕ್ಷಿಸಿಕೊಳ್ಳುತ್ತಿದೆ. ಒಕ್ಕೂಟ ರಾಜಕಾರಣವು ಬಿಡಿಯಾದ ಒಪ್ಪಂದಗಳಿಂದಲೆ ತಮ್ಮ ಅಸ್ತಿತ್ವಕ್ಕೆ ಬೇಕಾದ ಶಕ್ತಿಯನ್ನು ತಂದುಕೊಳ್ಳುತ್ತಿವೆ. ಇಂತಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳು ಸಾಂಪ್ರದಾಯಿಕ ಶಕ್ತಿ ರಾಜಕಾರಣದ ಜೊತೆ ಪೈಪೋಟಿ ಮಾಡುವುದು ಸೂಕ್ತವಾದ ಆಯ್ಕೆಯಲ್ಲ. ಶಕ್ತಿಗೆ ಬದಲು ಮುಕ್ತಿಯನ್ನೆ ದಲಿತ ರಾಜಕಾರಣವು ಅನುಸರಿಸಬೇಕಾಗಿದೆ ಈ ಮುಕ್ತಿಯು ಬುದ್ಧತತ್ವದ ಮೂಲಕ ಪರಿಸ್ಕಾರಗೊಳ್ಳಬೇಕು. ಜಾತಿ ವಿನಾಶವೊಂದೇ ದಲಿತ ರಾಜಕಾರಣದ ಗುರಿಯಾಗ ಬೇಕಾದ್ದಿಲ್ಲ. ಹಾಗೆ ನೋಡಿದರೆ ಅದು ಉಳಿದವರಂತೆ ಜಾತಿಗಳ ಮೂಲಕವೆ ರಾಜಕಾರಣದ ಮೊದಲ ಹಂತಗಳನ್ನು ದಾಟಬೇಕಾಗಿದೆ. ಜಾತಿ ವಿನಾಶದ ಹೋರಾಟದ ಮೂಲಕವೆ ದಲಿತರು ರಾಜಕೀಯದಲ್ಲಿ ಫಲಿತಾಂಶ ನಿರೀಕ್ಷಿಸಲು ಸಾಧ್ಯವೆ ಇಲ್ಲ. ಜಾತಿಯು ಎಲ್ಲೆಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೊ ಅಲ್ಲೆಲ್ಲ ದಲಿತ ರಾಜಕಾರಣವು ಬುದ್ಧನ ತಿಳುವಳಿಕೆಯನ್ನು ಬಿತ್ತಬೇಕಾಗುತ್ತದೆ. ಇಲ್ಲವಾದರೆ ಅದರ ತಾತ್ವಿಕತೆಯು ಕೇವಲ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿ ಜಾರಿ ಬೀಳುತ್ತದೆ.

ಬುದ್ಧನ ತತ್ವ ಯಾವತ್ತೂ ಅರಾಜಕತೆಯನ್ನು ಒಪ್ಪಲಾರದು. ಸಾಮಾಜಿಕ ವ್ಯವಸ್ಥೆಯು ಮಾನವೀಕರಣಗೊಳ್ಳುತ್ತಲೆ ಸಾಗಿ ನಾಗರೀಕತೆಯು ತನ್ನ ನೈತಿಕತೆಯನ್ನು ಎಂದಿಗೂ ಉಳಿಸಿಕೊಳ್ಳಬೇಕು ಎಂಬುದನ್ನು ಬುದ್ಧನ ಚಿಂತನೆಗಳು ಮಂಡಿಸಿವೆ. ದಲಿತ ಸಮುದಾಯಗಳು ಸಾಂಸ್ಕೃತಿಕವಾಗಿ ಬುದ್ಧನ ಧ್ಯಾನದಲ್ಲೆ ಸಾಗಬೇಕು. ಹಳೆಯ ಸಾಂಸ್ಕೃತಿಗಳು ಸೀಮಿತವಾದ ಆಯ್ಕೆಗಳಲ್ಲಿ ಸುಖವಾಗಿದ್ದವು. ಆಧುನಿಕ ಜಗತ್ತು ವಿಸ್ತರಿಸಿದಂತೆಲ್ಲ ಆಯ್ಕೆಗಳು ಮತ್ತೂ ಕಿರಿದಾಗಿ ಬಿಟ್ಟಿವೆ. ಬಹುಬಗೆಯ ಆಯ್ಕೆಗಳಿರುವಂತೆ ಕಂಡರೂ ವಾಸ್ತವದಲ್ಲಿ ಅವು ಹುಸಿ ಬಹು ಆಯ್ಕೆಗಳನ್ನೆ ತೋರುತ್ತಿರುತ್ತವೆ. ಆಧುನಿಕ ಸಮಾಜಗಳು ಬೆಳೆ ಯುವ ವೇಗದಲ್ಲೆ ದಲಿತ ಸಮಾಜವು ಬೆಳೆಯಲು ಆಗದಿರುವುದು ಈ ಕಾರಣದಿಂದಲೂ ಆಗಿದೆ.

ಬುದ್ಧತತ್ವವನ್ನು ಹಿಡಿಯಾಗಿ ರಾಜಕಾರಣದಲ್ಲಿ ವಿಲೀನಗೊಳಿಸುವುದು ಅಷ್ಟು ಸುಲಭ ಅಲ್ಲ ಎಂಬ ವಾಸ್ತವಾದ ಅರಿವಿನ ಜೊತೆಯಲ್ಲೆ ಹೇಗೆ ಇಡೀ ದಲಿತ ಸಮುದಾಯಗಳೆ ಬುದ್ಧತತ್ವದ ಕಡೆಗೆ ಪಯಣಿಸಬೇಕು ಎಂಬುದರ ಕಡೆಗೆ ನಮ್ಮ ಪ್ರಯತ್ನಗಳು ಮುಖ್ಯವಾಗುತ್ತವೆ. ಬುದ್ಧಧರ್ಮದ ಕಡೆಗೆ ದಲಿತರು ಮತಾಂತರವಾಗುವುದೆ ಎಲ್ಲ ಸಾಮಾಜಿಕ ಅನಿಷ್ಟಗಳಿಗೂ ಮದ್ದು ಎಂದು ಅಂಬೇಡ್ಕರ್ ಅವರು ಭಾವಿಸಿದ್ದರು. ಇವತ್ತಿಗೂ ಇಂತಹ ಮತಾಂತರದ ಯತ್ನಗಳು ನಡೆಯುತ್ತಲೆ ಇವೆ. ಹೀಗೆ ಬುದ್ಧಧಮ್ಮದಲ್ಲಿ ವಿಲೀನಗೊಂಡ ಮಾತ್ರಕ್ಕೆ ದೇಶದ ಎಲ್ಲ ದಲಿತರ ಸಮಸ್ಯೆ ಬಗೆಹರೆದು ಬಿಡುತ್ತವೆಯೇ ಎಂಬ ಪ್ರಶ್ನೆಗಳೂ ಇವೆ.

ಬುದ್ಧನ ತತ್ವ ಯಾವತ್ತೂ ಅರಾಜಕತೆಯನ್ನು ಒಪ್ಪಲಾರದು. ಸಾಮಾಜಿಕ ವ್ಯವಸ್ಥೆಯು ಮಾನವೀಕರಣಗೊಳ್ಳುತ್ತವೆ ಸಾಗಿ ನಾಗರೀಕತೆಯು ತನ್ನ ನೈತಿಕತೆಯನ್ನು ಎಂದಿಗೂ ಉಳಿಸಿಕೊಳ್ಳಬೇಕು ಎಂಬುದನ್ನು ಬುದ್ಧನ ಚಿಂತನೆಗಳು ಮಂಡಿಸಿವೆ. ದಲಿತ ಸಮುದಾಯಗಳು ಸಾಂಸ್ಕೃತಿವಾಗಿ ಬುದ್ಧನ ಧ್ಯಾನದಲ್ಲೆ ಸಾಗಬೇಕು. ಹಳೆಯ ಸಾಂಸ್ಕೃತಿಗಳು ಸೀಮಿತವಾದ ಆಯ್ಕಗಳಲ್ಲಿ ಸುಖವಾಗಿದ್ದವು. ಆಧುನಿಕ ಜಗತ್ತು ವಿಸ್ತರಿಸಿದಂತೆಲ್ಲ ಆಯ್ಕೆಗಳು ಮತ್ತು ಕಿರಿದಾಗಿ ಬಿಟ್ಟಿವೆ. ಬಹುಬಗೆಯ ಆಯ್ಕೆಗಳಿರು ವಂತೆ ಕಂಡರೂ ವಾಸ್ತವದಲ್ಲಿ ಅವು ಹುಸಿ ಬಹು ಆಯ್ಕೆ ಗಳನ್ನೆ ತೋರುತ್ತಿರುತ್ತವೆ. ಆಧುನಿಕ ಸಮಾಜಗಳು ಬೆಳೆ ಯುವ ವೇಗದಲ್ಲೆ ದಲಿತ ಸಮಾಜವು ಬೆಳೆಯಲು ಆಗದಿರುವುದು ಈ ಕಾರಣದಿಂದಲೂ ಆಗಿದೆ.

ಬುದ್ಧ ಧಮ್ಮದಲ್ಲು ಕೂಡ ದಲಿತ ಬೌದ್ಧರು ಎಂಬ ಪಂಗಡ ಇದೆಯೆಲ್ಲ ಎಂಬ ಹತಾಶೆಯೂ ನಮ್ಮ ವಿಚಾರಗಳ ಜೊತೆಯೇ ಇದೆ. ಅಲ್ಲದೆ ಈಗಾಗಲೆ ಬೌದ್ಧ ಧಮ್ಮ ಕೂಡ ಹಿಂದೂ ಪುರೋಹಿತಶಾಹಿ ವಿನ್ಯಾಸಗಳನ್ನು ತನ್ನಲ್ಲಿ ಅಳವಡಿಸಿಕೊಂಡಿಲ್ಲವೆ ಎಂಬ ಗಂಭೀರ ಆರೋಪವೂ ಇದೆ. ಇವೆಲ್ಲ ನಿಜಕೂಡ.

ಹೀಗೆ ವರ್ತಮಾನವು ದಲಿತ ವಿಮುಕ್ತಿಯ ಸಾಧ್ಯತೆಗಳನ್ನು ಕಬಳಿಸುತ್ತದೆ ಎಂದ ಕೂಡಲೆ ಹಿಂಜರಿಯಬೇಕಾದ್ದಿಲ್ಲ ದಲಿತ ಸಮುದಾಯಗಳ ಆಳದ ಸಾಂಸ್ಕೃತಿಕ ಭಿತ್ತಿಯಲ್ಲಿ ಬುದ್ಧತ್ವದ ಅಂತರ್ಜಲವಿದೆ. ದಲಿತ ಸಮುದಾಯಗಳ ಎಂದೂ ಯಾವುದಕ್ಕೂ ಅತಿಯಾಸೆಪಟ್ಟವಲ್ಲ. ಬೌತಿಕ ಜಗತ್ತಿನ ಆಯ್ಕೆಗಳು ಕ್ಷಣಿಕ ಎಂದು ನಿರಾಕರಿಸಿದ್ದಕ್ಕೆ ದಲಿತ ಪರಂಪರೆಯಲ್ಲಿ ಅಪಾರ ಸಾಕ್ಷ್ಯವಿದೆ. ಸ್ವತಃ ಸ್ವಯಂ ಬುದ್ಧನೇ ಸಾಮ್ರಾಜ್ಯದ ಸರ್ವಸ್ವವನ್ನು ತ್ಯಜಿಸಿ ಅನಾಥರ ಬದುಕಿನ ನರಕ ಕಂಡು ಬೆಳಕನ್ನು ಹುಡುಕುತ್ತ ಓಡಿ ಹೋಗಿ ಮರಳಿ ಜನಸಾಮಾನ್ಯರ ಮನೆಗಳಿಗೆ ಬಂದು ಬೆಳಕಾದವನು.

ದಲಿತರು ಆಸೆಯನ್ನು ತ್ಯಜಿಸಿ ಸರಳ ನೈಸರ್ಗಿಕ ಜೀವನದಲ್ಲಿ ಮುಕ್ತಿಯನ್ನು ಹುಡುಕಿದವರು. ಅವರ ಜಾನಪದ ಕತೆಗಳ ವಿನ್ಯಾಸದಲ್ಲೆ ಆಶಯದಲ್ಲೆ ಬುದ್ಧ ತನ್ನ ನೀತಿಯನ್ನು ಭೋದಿಸಿದ. ಜನಸಾಮಾನ್ಯರ ನುಡಿಗಟ್ಟಿನ ನಾಡಿ ಬಡತವನ್ನು ಬುದ್ಧ ತಿಳಿದಿದ್ದಂತೆಯೆ ಬುದ್ಧನ ಅಂತಃಸತ್ವವನ್ನು ಧಲಿತರು ಕೂಡ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಮಧ್ಯಕಾಲೀನ ಊಳಿಗಮಾನ್ಯ ವ್ಯವಸ್ಥೆಯು ದಲಿತರ ಮೇಲೆ ಕ್ರೂರ ಆಳ್ವಿಕೆಯನ್ನು ನಡೆಸುವಾಗಲೂ ದಲಿತರು ಹಿಂಸೆಗೆ ಬೀಳಲಿಲ್ಲ. ಅಹಿಂಸೆ ದಲಿತ ಜೀವನದ ಅವಿಬಾಜ್ಯ ಅಂಗ. ಅವರು ಬೇಟೆ ಆಡಿ ಮಾಂಸಾಹಾರ ಪದ್ಧತಿಯನ್ನು ಅನುಸರಿಸಿದ ಮಾತ್ರಕ್ಕೆ ಅವರು ಹಿಂಸೆಯನ್ನು ಪ್ರತಿನಿಧಿಸುತ್ತಾರೆ ಎಂದಲ್ಲ. ಹಿಂಸೆಯ ವ್ಯಾಖ್ಯೆಯೆ ಸರಿಯಾಗಿ ಆಗಿಲ್ಲ. ಜಾತಿ ವ್ಯವಸ್ಥೆಯಷ್ಟು ಬರ್ಬರ ಹಿಂಸೆ ಮತ್ತೊಂದಿಲ್ಲ.

ಬುದ್ಧ ಈ ಬರ್ಬರ ಹಿಂಸೆಯನ್ನು ಅಹಿಂಸಾ ನೆಲೆಯಲ್ಲಿ ವಿರೋಧಿಸಿದ. ದಲಿತ ಪರಂಪರೆಯ ಎಲ್ಲ ಸಾಂಸ್ಕೃತಿಕ ನಾಯಕರು ಕೇಡಿನ ವಿರುದ್ಧ ಅಹಿಂಸೆಯ ದಾರಿಯಲ್ಲೆ ಪರಿವರ್ತಿಸಲು ತೊಡಗಿದರು. ದಲಿತ ಸಮುದಾಯಗಳು ಒಂದು ವೇಳೆ ಹಿಂಸೆಯ ಮಾರ್ಗಕ್ಕೆ ಇಳಿದಿದ್ದರೆ ಈ ದೇಶವನ್ನು ಎಷ್ಟು ಬಾರಿ ಸುಟ್ಟುಬಿಡಲ್ಲವರಾಗಿದ್ದರೂ! ಎಲ್ಲ ಬಗೆಯ ಹಿಂಸೆಯನ್ನು ಸಹಿಸುವ ಅಪಾರವಾದ ತಾಳ್ಮೆಯು ಅವರಿಗೆ ತಮ್ಮ ಪರಂಪರೆಯಿಂದ ದತ್ತವಾಗಿದೆ. ಹಿಂಸಿಸುವುದಕ್ಕಿಂತಲೂ ಬಹುದೊಡ್ಡ ಶಕ್ತಿ ಯಾವುದೆಂದರೆ ಹಿಂಸೆಯನ್ನು ಸಹಿಸಿಕೊಳ್ಳುವುದು. ದ್ವೇಷಕ್ಕಿಂತ ದೈತ್ಯ ಶಕ್ತಿಯಾವುದೆಂದರೆ ಪ್ರೀತಿ. ಎಲ್ಲ ಸ್ಫೋಟಕ್ಕಿಂತ ಆತ್ಯಂತಿಕ ಶಕ್ತಿ ಯಾವುದೆಂದರೆ ತಾಳ್ಮೆ ಮಹಾತ್ಮ ಗಾಂಧಿಗೂ ಬಾಬಾಸಾಹೇಬ ಅಂಬೇಡ್ಕರ್ ಅವರಿಗೂ ಇಂತಹ ಶಕ್ತಿಯು ಇದ್ದಿದ್ದ ಕಾರಣದಿಂದಲೆ ಏಕಾಂಗಿಯಾಗಿಯೆ ಅವರು ಆಧುನಿಕ ಭಾರತವನ್ನು ಕಟ್ಟಲು ಸಾಧ್ಯವಾಗಿದ್ದು. ದಲಿತರು ವಹಿಸಿದ ಕಾಲಾಂತರದ ಅಹಿಂಸೆಯು ಈ ದೇಶವನ್ನು ಕಾಪಾಡಿದೆ. ಹಿಂದುಳಿದ ವರ್ಗಗಳು ತೋರಿದ ತಾಳ್ಮೆಯಿಂದ ಈ ದೇಶದ ಉತ್ಪಾದನಾ ಶಕ್ತಿ ಹೆಚ್ಚಿದೆ. ಈ ದೇಶದ ಅರ್ಧದಷ್ಟು ಮಹಿಳೆಯರು ತೋರಿದ ಪ್ರೀತಿಯಿಂದ ಈ ಸಮಾಜಗಳು ಬದುಕುಳಿದಿವೆ. ಇಂತಹ ನೀತಿಯೆ ಬುದ್ಧತ್ವವೂ ಹೌದು ದಲಿತತ್ವವೂ ಹೌದು.

ದಲಿತರು ಆಸೆಯನ್ನು ತ್ಯಜಿಸಿ ಸರಳ ನೈಸರ್ಗಿಕ ಜೀವನದಲ್ಲಿ ಮುಕ್ತಿಯನ್ನು ಹುಡುಕಿದವರು. ಅವರ ಜಾನ ಪದ ಕತೆಗಳ ವಿನ್ಯಾಸದಲ್ಲೆ ಆಶಯದಲ್ಲೆ ಬುದ್ಧ ತನ್ನ ನೀತಿಯನ್ನು ಭೋಧಿಸಿದ. ಜನಸಾಮಾನ್ಯರ ನುಡಿಗಟ್ಟಿನ ನಾಡಿ ಬಡತವನ್ನು ಬುದ್ಧ ತಳದಿದಂತೆಯೆ ಬುದ್ಧನ ಅಂತಃಸತ್ವ ವನ್ನು ದಲಿತರು ಕೂಡ ತಮ್ಮ ಬದುಕಿನಲ್ಲಿ ಅಳವಡಿಸಿ ಕೊಂಡಿದ್ದರು. ಮಧ್ಯಕಾಲೀನ ಊಳಿಗೆ ಮಾನ್ಯ ವ್ಯವಸ್ಥೆಯು ದಲಿತರ ಮೇಲೆ ಕ್ರೂರ ಆಳ್ವಿಕೆಯನ್ನು ನಡೆಸುವಾಗಲೂ ದಲಿತರು ಹಿಂಸೆಗೆ ಬೀಳಲಿಲ್ಲ. ಅಹಿಂಸೆ ದಲಿತ ಜೀವನದ ಅವಿಬಾಜ್ಯ ಅಂಗ. ಅವರು ಬೇಟೆ ಆಡಿ ಮಾಂಸಾಹಾರ ಪದ್ಧತಿಯನ್ನು ಅನುಸರಿಸಿದ ಮಾತ್ರಕ್ಕೆ ಅವರು ಹಿಂಸೆಯನ್ನು ಪ್ರತಿನಿಧಿಸುತ್ತಾರೆ ಎಂದಲ್ಲ.

ಅಹಿಂಸೆಯ ಮಹೋಪಮೆಗಳು ಜನಪದರ ಸಾಹಿತ್ಯದಲ್ಲಿ ಅಪಾರವಾಗಿವೆ. ಇಂತಹ ಪದಗಳನ್ನು ಕಟ್ಟಿ ಹಾಡಿ ಜೀವನಕ್ಕೆ ಅಳವಡಿಸಿಕೊಂಡ ದಲಿತ ಸಮಾಜವು ಜೀವನದ ಸಾಕ್ಷಾತ್ಕಾರಕ್ಕೆ ಅಹಿಂಸೆಯೆ ಮೂಲ ಎಂದು ನಂಬಿದವರು. ಅವರ ಉಗ್ರ ಆಚರಣೆಗಳು ಬೀಭತ್ಸವಾಗಿದ್ದರೂ ಅವುಗಳ ಹಿಂದಿನ ಆಶಯ ಅಪರಿಮಿತವಾದ ಮಾನವೀಯತೆಯನ್ನು ಹೊಂದಿರುತ್ತವೆ. ಹಿಂಸೆಯ ಆನಂದ ಮಾತ್ರ ಅತ್ಯಂತ ಕ್ರೂರವಾದ ಹಿಂಸೆ. ದಲಿತ ಸಮಾಜವು ತನ್ನ ಆಚರಣೆಗಳ ಸಂದರ್ಭದಲ್ಲಿ ಮಾಡುವ ಬಲಿ ವಿಧಾನಗಳು ಆನಂದಕ್ಕಾಗಿ ಮಾಡಿಕೊಂಡವಲ್ಲ. ನಿಸರ್ಗವನ್ನು ಆರಾಧಿಸುವ ಕಾರಣಕ್ಕಾಗಿ ಅಂತಹ ಆದಿಯ ವರ್ತನೆಗಳು ಉಳಿದುಕೊಂಡಿವೆ. ಇಲ್ಲ ಮುಖ್ಯವಾದದ್ದೇನೆಂದರೆ ಮಾನವತ್ವದ ವಿರುದ್ಧ ದಲಿತ ಸಮುದಾಯಗಳು ವರ್ತಿಸುತ್ತಿಲ್ಲ. ದಲಿತ ಸಂಸ್ಕೃತಿಯು ಕಾಲದಿಂದ ಕಾಲಕ್ಕೆ



ವಿಕಾಸಗೊಂಡು ಉದ್ದಕ್ಕೂ ತಾಳ್ಮೆಯಿಂದಲೆ ತನ್ನ ಸು ಪರಿಸರವನ್ನು ಮಮಕಾರದಿಂದ ಕಂಡಿದೆ. ಮಾನವ ದ್ವೇ ದಲಿತ ಸಮಾಜಕ್ಕೆ ಮುಖ್ಯವಾಗಿ ಬಿಟ್ಟದ್ದಿದ್ದರೆ ಅ ಪರಂಪರೆಯಲ್ಲಿ ಯಾವ ಬಂದು ಒಳ್ಳೆಯ ಅಂಶ ಉಳಿದಿರುತ್ತಿರಲಿಲ್ಲ. ಬುದ್ಧ ಈ ಕಾರಣಕ್ಕಾಗಿಯೆ ಜನ ಮ್ಯಾನ್ಯರ ಭಾಷೆಯ ನಾಡಿಯನ್ನು ಹಿಡಿದು ಅಹಿಂಸೆ ಇಂತಹ ಸಮುದಾಯಗಳ ದಾರಿಯಲ್ಲಿ ಸಾಗಿಬಂದುದು

ದಲಿತ ಸಮುದಾಯಗಳಲ್ಲಿದ್ದ ಅಹಿಂಸೆಯ ತಾ ಸ್ವಾಭಾವವನ್ನು ಬುದ್ಧ ತನ್ನ ತತ್ವದಲ್ಲಿ ಪುನರ್‌ಸೃಷ್ಟಿಸಿ ಹೀಗಾಗಿ ದಲಿತ ಸಮುದಾಯಗಳ ಇಂದಿನ ಸ್ಥಿತಿಗೆ ಬು ತತ್ವವೇ ಪರಮ ಆಯ್ಕೆ. ಇದನ್ನು ಬಿಟ್ಟು ಅನ್ಯ ಮಾಗ ವಿಲ್ಲ. ಬಹುಪಾಲು ಎಲ್ಲ ದಲಿತ ಸಮುದಾಯಗ ಮರಳಿ ತಮ್ಮ ಸಂಸ್ಕೃತಿಗೆ ಹಿಂತಿರುವುದು ಇಂದು ಸಾ ವಿಲ್ಲ. ಹಾಗೆ ಹಿಂತಿರುಗಿದರೆ ಅವು ಸನಾತನ ಹಿಂದು ಪದ್ಧತಿಯಲ್ಲೆ ಜೊತೆಗೂಡಿದಂತಾಗುತ್ತದೆ. ದಲಿ ಸಂಸ್ಕೃತಿಯ ಪೂರ್ವರೂಪಗಳು ಈಗ ಇನ್ನು ಅಪಮೌ ಗೊಂಡಿದೆ. ಸಂಸ್ಕೃತಿ ಮತ್ತು ನಾಗರೀಕತೆಗಳೆರಡನ್ ಒಂದು ಇನ್ನೊಂದರ ಅನಿವಾರ್ಯವಾಗುವಂತೆ ಹೊಂ ಸಿಕೊಳ್ಳಲು ಕೂಡ ಈ ಹೊತ್ತಿನ ಜಗದ ವರ್ತಮಾನಗಳ ಅಸಾಧ್ಯ. ಅಪಮೌಲ್ಯಗಳನ್ನೆ ಸಂಸ್ಕೃತಿ ಎಂದು ದಲಿ ಸಮುದಾಯಗಳಿಗೆ ಹಿಂದುತ್ವವು ಒಪ್ಪಿಸಿರುವ ಪ್ರಮಾ ಅಪಾರವಾಗಿದೆ.

ಹೀಗೆಯೆ ಹಿಂದುಳಿದ ವರ್ಗಗಳಿಗೂ ಖಚಿ ವಾದ ಸಂಸ್ಕೃತಿಯ ಮಾನದಂಡಗಳಿಲ್ಲ. ಮೇಲುಜಾತಿಗಳಿ ಅನುಕೂಲವಾಗುವಂತಹ ಮೌಲ್ಯಗಳನ್ನೆ ಹಿಂದುಳಿ ವರ್ಗಗಳು ತಮ್ಮ ಸಂಸ್ಕೃತಿ ಎಂದು ಒಪ್ಪಿಕೊಳ್ಳಬೇಕಾಗಿದ ವಕ್ಕಲು ಕಸುಬಿಗೆ ಹೊಂದಿಕೊಂಡ ಸಮುದಾಯಗಳ ತನ್ನ ಸಮೀಪದ ಕರಕುಶಲ ಸಮುದಾಯಗಳ ಸಂಸ್ಕೃ ತಿಯ ಮೇಲೆ ಊಳಿಗಮಾನ್ಯ ವ್ಯವಸ್ಥೆಯ ಭಾರವನ್ನು ಹೊರಿಸಿದೆ. ಇಂತಹ ಸಂಸ್ಕೃತಿಗಳು ಕೂಡ ಪರಿಮಿತ ವ್ಯಾಪ್ತಿಯಲ್ಲೆ ತಮ್ಮ ಆಯ್ಕೆಗಳನ್ನು ಕಳೆದುಕೊಂಡಿರುತ್ತವೆ ಬುದ್ಧನ ತತ್ವದಲ್ಲಿ ಯಾವುದೇ ಸಮಾಜಕ್ಕು ಹೊಂದುವ ಮಾನವೀಯ ಮೌಲ್ಯಗಳಿವೆ. ಇಷ್ಟೊಂದು ಮಾಯಾಜಾಲ ದಲ್ಲಿ ಆರ್ಥಿಕವಾಗಿ ತಂತ್ರಜ್ಞಾನದ ನೆಲೆಯಲ್ಲಿ ನಮ್ಮ ಸಮಾ ಜಗಳು ಮುನ್ನುಗ್ಗಿ ಮುಗ್ಗರಿಸಬೇಕಾದ್ದಿಲ್ಲ. ಆರ್ಥಿಕ ಅಭಿವೃದ್ಧಿಗಿಂತ ಮಾನವೀ ಕರಣಗೊಳ್ಳುವ ರಾಜಕಾರಣವೆ ನಿಜವಾದ ಸುಖ. ಇಂತಹ ರಾಜಕೀಯವನ್ನು ಗಾಂಧೀಜಿ ಕನಸಿದ್ದರಾದರೂ ಅದರ ರಾಜಕೀಯ ತತ್ವವನ್ನು ಹಿಂದು ಪದ್ಧತಿಗಳು ಅವರನ್ನು ವಂಚಿಸಿ ಸೇರಿಕೊಂಡಿದ್ದರಿಂದ ವರ್ತಮಾನದಲ್ಲಿ ಅಳವಡಿಸುವುದು ಕಠಿಣವಾಗುತ್ತದೆ. ದಲಿತರು ಹಿಂದುಳಿದವರು ಬುದ್ಧನ ದಾರಿಯಲ್ಲಿ ಸಾಗಿ ದಾಗ ಅವರು ತಮ್ಮದೆಂದು ಒಪ್ಪಿಕೊಂಡಿರುವ ಹುಸಿ ಸಂಸ್ಕೃತಿಗಳು ಹುಸಿ ದೈವಾಚಾರಗಳೂ ಮರೆಗೆ ಸರಿದು ಆಧುನಿಕ ಜಗತ್ತಿನಲ್ಲಿ ತಮ್ಮ ಅಸ್ತಿತ್ವಕ್ಕೆ ಅನುರೂಪವಾಗು ವಂತಹ ಆಯ್ಕೆಗಳು ಸ್ಥಾಪಿತವಾಗುತ್ತವೆ.

ಬುದ್ಧನ ನೀತಿಯು ದಲಿತ ಹಿಂದುಳಿದ ರಾಜಕಾರಣದ ಪ್ರಣಾಳಿಕೆಯಾಗಿ ಪ್ರಧಾನ ಜೀವನ ಧಾರೆಯಲ್ಲಿ ಬೆರೆತು ಹೋಗುವಂತಹ ವಾತಾವರಣವನ್ನು ಸಮಷ್ಠಿಯಾದ ಹೋರಾಟಗಳಿಂದಲೆ ಮಾಡಬೇಕಾಗುತ್ತದೆ. ಒಂಟಿ ಒಂಟಿಯಾಗಿ ಒಂದೊಂದು ಸಮುದಾಯವೂ ಪುಟ್ಟತೆಪ್ಪದಲ್ಲಿ ಮುರುಕು ದೋಣಿಯಲ್ಲಿ ಯಾವುದೂ ಮರದ ದಿಮ್ಮಿ ಮೇಲೆ ಕುಳಿತು ಸಮುದ್ರವನ್ನು ಹಾಯಲು

ಭಗ್ನ ಚಹರೆಯಲ್ಲಿ ದಿಕ್ಕು ತಪ್ಪಿರುವ ದಲಿತ ಹಿಂದುಳಿದ ಸಮೂಹಗಳಿಗೆ ಬೌದ್ಧಧರ್ಮವೇ ಅಖಂಡ ಚಹರೆಯನ್ನು ತಂದುಕೊಡಬಲ್ಲದು. ಆಧುನಿಕೋತ್ತರ ಸಮುದಾಯದ ಚಹರೆಗಳು ಆರ್ಥಿಕ ರಾಜಕಾರಣದಲ್ಲಿ ಕಲುಹಿತಗೊಂಡಿವೆ. ಆಧುನಿಕತೆಯು ಒಂದು ಹಂತದ ನಾಗರೀಕತೆಯ ಮುಕ್ತಿಯಾಗಿದ್ದರೂ ಅತ್ಯಾನಿಕತೆಯು ಹೆಚ್ಚಿದಂತೆಲ್ಲ ಆರ್ಥಿಕ ಯಾಜಮಾನ್ಯವು ಇಡೀ ಸಮೂಹಗಳ ವರ್ತನೆ ಚಹರೆ ಅಭಿರುಚಿಗಳನ್ನೆ ಬದಲಿಸಿಡಬಲ್ಲವು.

ಯಣಿಸುತ್ತಿರುವುದು ವಿಪರ್ಯಾಸಕರವಾಗಿದೆ. ಆಧುನಿ ೋತ್ತರ ಸಮಾಜಗಳು ಕಠಿಣವಾದ ವ್ಯಕ್ತಿನಿಷ್ಠೆಯನ್ನು ಪಹಿಡಿದು ಸಮರ್ಥಿಸುವುದು ಈ ಕಾಲದ ಧೋರಣೆ ಾದರೂ ಇದು ಅಖಂಡ ಪಯಣಕ್ಕೆ ತಕ್ಕುನಾದುದಲ್ಲ.

ಭಗ್ನ ಚಹರೆಯಲ್ಲಿ ದಿಕ್ಕು ತಪ್ಪಿರುವ ದಲಿತ ಹಿಂದು ರ ಸಮೂಹಗಳಿಗೆ ಬೌದ್ಧಧರ್ಮವೇ ಅಖಂಡ ಚಹರೆ ನ್ನು ತಂದುಕೊಡಬಲ್ಲದು. ಆಧುನಿಕೋತ್ತರ ಸಮುದಾ ದ ಚಹರೆಗಳು ಆರ್ಥಿಕ ರಾಜಕಾರಣದಲ್ಲಿ ಕಲುಷಿತ ಂಡಿವೆ. ಆಧುನಿಕತೆಯು ಒಂದು ಹಂತದ ನಾಗರೀಕ ು ಮುಕ್ತಿಯಾಗಿದ್ದರೂ ಅತ್ಯಾಧುನಿಕತೆಯು ಹೆಚ್ಚಿ ತೆಲ್ಲ ಆರ್ಥಿಕ ಯಾಜಮಾನ್ಯವು ಇಡೀ ಸಮೂಹಗಳ ರ್ತನೆ ಚಹರೆ ಅಭಿರುಚಿಗಳನ್ನೆ ಬದಲಿಸಿಬಿಡಬಲ್ಲವು. ತಲ್ಲಿ ಬಲವಿದ್ದ ಸಮುದಾಯಗಳು ಮಾತ್ರ ಮತ್ತಷ್ಟು ಗೊಳ್ಳುತ್ತಲೆ ಸಾಗುತ್ತಿರುತ್ತವೆ. ದುರ್ಬಲಗೊಂಡವು ಳಿಯುವುದೇ ದುಸ್ತರವಾಗುತ್ತದೆ. ಬೃಹತ್ ಬೌದ್ಧಿಕ ಮೆಗಳು ಕೂಡ ಒಂದು ಸಮಾಜದ ಸಂಪತ್ತು ದಲಿತ ಮಾಜದ ಪ್ರಾಚೀನ ರೂಪಕಗಳು, ಉತ್ಪಾದನೆಯ ಲ್ಯಗಳು, ಬುದ್ಧತ್ವದ ತಾತ್ವಿಕತೆಯಲ್ಲಿ ಪರಿಸ್ಕಾರಕ್ಕೆ ಪಡಬೇಕಾದ ಜರೂರಿದೆ.

ಬುದ್ಧತ್ವದ ಜೊತೆಯಲ್ಲೆ ಆಧುನಿಕ ಜಗತ್ತಿನ ುಗಡೆಯ ಸಾರ್ವತ್ರಿಕ ಕಥನಗಳನ್ನು ದಲಿತರು ತಮ್ಮ ೋರಾಟಕ್ಕೆ ತುಂಬಿಕೊಳ್ಳಬೇಕು. ಬುದ್ಧತ್ವವನ್ನು ಈ ದಿಯಲ್ಲಿ ಸಮಕಾಲೀನ ಜಗತ್ತಿನ ಪರಿಭಾಷೆಯಲ್ಲಿ ಆನ್ವ ಕಗೊಳಿಸದೆ ಹೋದರೆ ಬರಿಯ ಬುದ್ಧತತ್ವದ ಪತನ

ಂದು ಧರ್ಮದಿಂದ ಹಿಂಸೆ ತಪ್ಪಿಸಿಕೊಳ್ಳಲು ಇನ್ನೊಂದು ಧರ್ಮವನ್ನು ಅನುಸರಿಸಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅಂದರೆ ತಾಂತರವೆ ದಲಿತರ ಮುಕ್ತಿ ಮಾರ್ಗವಲ್ಲ. ದಲಿತರ ಸಂಖ್ಯೆಯನ್ನು ಅಳೆದರೆ ರೋಕ್ಷವಾಗಿ ಅಖಂಡ ದಲಿತ ಸಮೂಹವೆ ಂಬುದು ವೇದವಾಗುತ್ತದೆ. ಇಸ್ಲಾಂ, ಕ್ರೈಸ್ತ, ಬೌದ್ಧ ಧರ್ಮಗಳಿಗೆ ಮತಾಂತರಗೊಂಡ ದಲಿತರು ಅಲ್ಲಿ ಕೂಡ 'ದಲಿತ' ಪದವಿ ಯನ್ನು ಅಂಟಿಸಿಕೊಂಡೆ ಉಳಿಯಬೇಕಾಗಿದೆ.

ದಿಂದ ನಷ್ಟವೇ ಹೆಚ್ಚಾಗುವ ಸಾಧ್ಯತೆಯಿದೆ. ಬೌದ್ಧತತ್ವ ಕಾರ್ಯಶೀಲವಾದಾಗ ಮಾತ್ರವೆ ದಲಿತ ಸಮುದಾಯಗಳಿಗೆ ಆತ್ಮವಿಶ್ವಾಸ ಹೆಚ್ಚುವುದು. ಈ ಅರ್ಥದಲ್ಲಿ ಬುದ್ಧತ್ವ ಮುಖ್ಯವೇ ಹೊರತು ಆ ಬುದ್ಧತ್ವದ ಧಾರ್ಮಿಕ ಚಹರೆ ಅಂತಿಮ ಅಲ್ಲ. ಮತಾಂತರ ಎಂದರೆ ಜಾತಿ ಕಳೆದುಕೊಂಡು ಇನ್ನೊಂದು ಧಾರ್ಮಿಕ ಸಂಕೇತವನ್ನು ಕೊಟ್ಟುಕೊಳ್ಳುವುದು ಎಂದಲ್ಲ. ಈವರೆಗಿನ ಬಹುಪಾಲು ಎಲ್ಲ ಮತಾಂತರಗಳು ಜಾತಿ ಹಾಗೂ ಮತೀಯ ಧಾರ್ಮಿಕ ಭೀತಿಗಳಿಂದ ಆಗಿದೆಯೆ ಹೊರತು ಅವು ವಿಶ್ವಾಸ ಮತ್ತು ನಿಷ್ಠೆ ಹಾಗೂ ಪ್ರೀತಿಯಿಂದ ಆಗಿಲ್ಲ.

ಒಂದು ಧರ್ಮದಿಂದ ಹಿಂಸೆ ತಪ್ಪಿಸಿಕೊಳ್ಳಲು ಇನ್ನೊಂದು ಧರ್ಮವನ್ನು ಅನುಸರಿಸಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅಂದರೆ ಮತಾಂತರವೆ ದಲಿತರ ಮುಕ್ತಿ ಮಾರ್ಗವಲ್ಲ. ಹೀಗೆ ಹಲವು ಕಾಲಗಳಲ್ಲಿ ಹಲವು ಮತ ಧರ್ಮಗಳಿಗೆ ರಕ್ಷಣೆಗಾಗಿ ಪಲಾಯನ ಮಾಡಿದ ದಲಿತರ ಸಂಖ್ಯೆಯನ್ನು ಅಳೆದರೆ ಪರೋಕ್ಷವಾಗಿ ಅಖಂಡ ದಲಿತ ಸಮೂಹವೆ ಭಗ್ನಗೊಂಡು ಅಥವಾ ಕಳಚಿದ ಕೊಂಡಿಯಾಗಿ ತನ್ನ ಗುಂಪನ್ನೆ ಕಿರಿದಾಗಿಸಿಕೊಂಡಿದೆ ಎಂಬುದು ವೇದ್ಯವಾಗುತ್ತದೆ. ಇಸ್ಲಾಂ, ಕ್ರೈಸ್ತ, ಬೌದ್ಧ ಧರ್ಮಗಳಿಗೆ ಮತಾಂತರಗೊಂಡ ದಲಿತರು ಅಲ್ಲಿ ಕೂಡ 'ದಲಿತ' ಪದವಿಯನ್ನು ಅಂಟಿಸಿಕೊಂಡೆ ಪ್ರತ್ಯೇಕವಾಗಿ ಉಳಿಯಬೇಕಾಗಿದೆ. ಮತಾಂತರವಾಗಬೇಕಾಗಿದ್ದು ವ್ಯಕ್ತಿಗಳಲ್ಲ. ವ್ಯಕ್ತಿತ್ವವನ್ನೆ ತಮಗೆ ಬೇಕಾದ ತತ್ವಕ್ಕೆ ಪುನರ್‌ಸೃಷ್ಟಿಸಿಕೊಂಡಾಗ ಅದು ನಿಜವಾದ ರೂಪಾಂತರವಾಗುತ್ತದೆ. 'ಮತ'-ದ ಅಂತರ ಮತ್ತೊಂದು 'ಮತ' ಇರುವಿಕೆಯನ್ನೆ ಪ್ರತಿಪಾದಿಸುತ್ತದೆ. ವ್ಯಕ್ತಿಗಳು ಸಮುದಾಯಗಳು ಮತಾಂತರಗೊಂಡು ತಮ್ಮ ಮೂಲ ವ್ಯಕ್ತಿತ್ವದ ಸಾಂಸ್ಕೃತಿಕ ಚಹರೆಗಳನ್ನು ಆಳದಲ್ಲಿ ಉಳಿಸಿಕೊಂಡೇ ಇರುತ್ತವೆ.

ಇದುಕೂಡ ಆಧ್ಯಾತ್ಮದ ಆಯ್ಕೆಯಲ್ಲಿ ಗೊಂದಲವನ್ನೆ ಅಂತಹ ಸಮುದಾಯಗಳಿಗೆ ಸೃಷ್ಟಿಸಿರುತ್ತದೆ. ಮತಾಂತರಕ್ಕಿಂತ ವ್ಯಕ್ತಿತ್ವದ ಮರುಸೃಷ್ಟಿಯೇ ಪ್ರಧಾನವಾಗಬೇಕು.ಈ ಅರ್ಥದಲ್ಲಿ ಬುದ್ಧತ್ವವು ದಲಿತ ಹಿಂದುಳಿದ ಸಮುದಾಯಗಳಿಗೆ ಹೊಸ ಬಗೆಯ ವ್ಯಕ್ತಿತ್ವವನ್ನು ತಂದುಕೊಡುವಂತಾಗಬೇಕು. ಎಷ್ಟೊ ಬಾರಿ ಮತಾಂತರಗಳು ಧಾರ್ಮಿಕ ಯಾಜಮಾನ್ಯಕ್ಕೆ ಸಮುದಾಯಗಳನ್ನು ಸಿಲುಕಿಸುತ್ತಿರುತ್ತವೆ. ಬೇರೊಂದು ಧರ್ಮಕ್ಕೆ ಒಳಪಡುವುದು ಎಂದರೆ ಪರೋಕ್ಷವಾಗಿ ತನ್ನ ಹಳೆಯ ಆಯ್ಕೆಯ ಅವಕಾಶವನ್ನು ತಾನೇ ನಿರಾಕರಿಸಿ ಹೊಸದೂಗೊಂದು ಆಯ್ಕೆ ಹಾಗೂ ಜೀವನಾವಕಾಶದಲ್ಲಿ ಅಸ್ತಿತ್ವವನ್ನು ಹುಡುಕಿಕೊಳ್ಳುವುದು. ಹೊಸ ಧರ್ಮದಲ್ಲಿ ಮೊದಲೆ ಬೇರು ಬಿಟ್ಟ ಸಮುದಾಯಗಳು ಹೊಸದಾಗಿ ಸೇರ್ಪಡೆಗೊಂಡ ಸಮುದಾಯಗಳನ್ನು ಕೀಳಾಗಿ ಕಾಣುವುದು ಮನುಷ್ಯನ ಧೂರ್ತ ಸ್ವಭಾವ. ಈ ಸ್ವಭಾವ ಆದಿ ಕಾಲದಿಂದಲು ಬಂದು ಬಿಟ್ಟಿದೆ. ಹೊಸದೊಂದು ಧಾರ್ಮಿಕ ಪರಿಸರದಲ್ಲಿ ಮುಕ್ತವಾದ ಆಯ್ಕೆಗಳಿರುವುದಿಲ್ಲ. ಹೀಗಾಗಿಯೆ ದಲಿತ ಕ್ರೈಸ್ತರ ಸಮಸ್ಯಗಳನ್ನು ನೋಡಿದರೆ; ಅಂತಹ ಮುಕ್ತ ಧರ್ಮಕೂಡ ಹೊಸಬರನ್ನು ತೀರ ಕೀಳಾಗಿ ನೋಡುತ್ತಲೇ ಅವರ ಮೇಲೆಯ ಜಾತಿ-ವರ್ಗದ ಶ್ರೇಷ್ಠತೆಯ ಪ್ರಮಾಣಗಳನ್ನು ಹೇರಿ ಅವರನ್ನು ಕಡೆಗಣಿಸುತ್ತದೆ.

ಅಂದರೆ ಮತಾಂತರ ಎನ್ನುವುದೇ ದಲಿತರಿಗೆ ಮತ್ತೊಂದು ಬಗೆಯ ಸಂಕೋಲೆ. ಇದ್ದ ವ್ಯವಸ್ಥೆಯೂ ಅವರಿಗೆ ಆತಂಕದ ಮನೆ. ಹೊರಗಿನದು ಕೂಡ ಅವರಿಗೆ ಅನಿಶ್ಚಿತತೆಯ ನೆಲೆ ಇವೆರಡರ ಗೊಡವೆಯೂ ಇಲ್ಲದೆ ಅಲೆಮಾರಿಯಾಗಿ ಆದಿವಾಸಿಯಾಗಿ ಬದುಕುವ ನೂರಾರು ಸೂಕ್ಷ್ಮ ಸಮುದಾಯಗಳ ಕಥೆಯಂತು ಯಾವ ಮನದಂಡಕ್ಕೂ ಸಿಗದಂತೆ ನುಚ್ಚುನೂರಾಗಿವೆ. ಇಂತಲ್ಲಿ ಮತಾಂತರದ ಬಗ್ಗೆ ಠರಾವುಗಳನ್ನು ಹೊರಡಿಸುವ ಸ್ವಾಮೀಜಿಗಳೂ ಇದ್ದಾರೆ. ಮತಾಂತರದಿಂದ ಹಿಂದೂ ಧರ್ಮಕ್ಕೆ ಹೊಡೆತ ಉಂಟಾಗುತ್ತಿದೆ ಎಂದು ದಲಿತರನ್ನು ಹಿಂದೂ ಧರ್ಮದ ಬೋನಿ ನಲ್ಲೆ ಕೂಡಿ ಹಾಕಲು ತಂತ್ರಗಳೂ ನಡೆದು ಮತೀಯ ವಾದ ಮೂಲಭೂತವಾದಗಳು ಕೂಡ ತಮ್ಮ ಹೊಸ ಕವಚದಲ್ಲಿ ಹಿಂದುತ್ವದ ಕಹಳೆಯನ್ನು ಮೊಳಗಿಸುತ್ತಿವೆ. ಅತ್ತದರಿ ಇತ್ತ ಪುಲಿ ಎಂಬಂತೆ ದಲಿತರು ನಿಂತಿರುವಾಗ ಬುಧ್ಧತ್ವವೇ ಅವರಿಗೆ ಸದ್ಯದತಕ್ಕ ಆಯ್ಕೆಯಾಗಿ ಕಾಣುತ್ತಿದೆ.

ಆದರೆ ಇರುವ ಸಮಸ್ಯೆಯಾವುದೆಂದರೆ ಇಡಿಯಾಗಿ ದಲಿತ ಹಿಂದುಳಿದ ಸಮೂಹಗಳು ಹೇಗೆ ಬುದ್ಧತ್ವವನ್ನು ತಮ್ಮ ಸಮಾಜದ ವ್ಯಕ್ತಿತ್ವವಾಗಿಸಿಕೊಳ್ಳಬೇಕು ಎಂಬುದು. ಇದಕ್ಕೆ ಇಡೀ ದಲಿತ ಸಮುದಾಯಗಳ ಜೀವನ ವಿಧಾನದಲ್ಲಿ ಬುದ್ಧತತ್ವಕ್ಕೆ ಅವಕಾಶ ಉಂಟಾಗಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ರಾಜಕಾರಣದಲ್ಲಿ ನಮ್ಮ ಹೋರಾಟಗಳಲ್ಲಿ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಮ್ಮ ಸಮೂಹ ಮಾಧ್ಯಮಗಳಲ್ಲಿ ನಮ್ಮ ಆಚಾರ ವಿಚಾರಗಳಲ್ಲಿ ಮತ್ತು ನಮ್ಮ ನಮ್ಮ ಕೌಟುಂಬಿಕ ವ್ಯವಸ್ಥೆಯ ಒಳಗೆ ಬೌದ್ಧ ಧರ್ಮದ ತತ್ವಗಳು ಈ ಹೊತ್ತಿನ ಅಗತ್ಯದ ರೂಪದಲ್ಲಿ ಪುನರ್‌ಸೃಷ್ಟಿಗೊಂಡು ಬೆರೆತಾಗ ನಮ್ಮ ಸಮುದಾಯಗಳಿಗೆ ಬುದ್ಧತ್ವದ ಚಹರೆ ಏರ್ಪಡುತ್ತದೆ. ಆ ದಿಕ್ಕನಲ್ಲಿ ದಲಿತತತ್ವವೇ ಮರುಸೃಷ್ಟಿಗೊಂಡು ಅಖಂಡ ಸಮಾಜವನ್ನು ಕಟ್ಟುವ ಅದರ ಲೋಪವನ್ನು ತಿದ್ದಿ ಸರ್ವೋದಯದ ದಿಕ್ಕಿನಲ್ಲಿ ಪಯಣಿ ಸುವ ಕಾರ್ಯಕ್ಕೆ ತೊಡಗಬೇಕಾಗುತ್ತದೆ.

(ಮುಗಿಯಿತು) □

ನೈತಿಕತೆಯ ಪ್ರಶ್ನೆಗಳು!?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ



ಕಳೆದ ಅಕ್ಟೋಬರ್ ತಿಂಗಳ ಆರಂಭದಲ್ಲಿ ತಮಿಳು ನಾಡು ನೈತಿಕ ಪ್ರಶ್ನೆಯ ಸುಳಿಯಲ್ಲಿ ಸಿಲುಕಿಕೊಂಡಿತ್ತು. ೯೦ ರ ದಶಕದ ಸಿನಿಮಾ ತಾರೆಯಾಗಿ ವಿಜೃಂಭಿಸಿ, ಇದೀಗ ಟಿವಿಯಲ್ಲಿ 'ಹರಟೆ' ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವ ಖುಶ್ಬೂ ತನ್ನ ಕಾರ್ಯಕ್ರಮವೊಂದರಲ್ಲಿ ಹೀಗೆಂದು ತನ್ನ ಅಭಿಪ್ರಾಯವೊಂದನ್ನು ವ್ಯಕ್ತಪಡಿಸಿದಳು: "ಒಬ್ಬ ಶಿಕ್ಷಿತ ಗಂಡಸು ತನ್ನ ಹೆಂಡತಿ ಕನ್ಯೆಯಾಗಿರಬೇಕೆಂದು ನಿರೀಕ್ಷಿಸಬಾರದು". ಈ ಮಾತು ತಮಿಳು ಸಂಸ್ಕೃತಿಗೆ ಕಳಂಕವನ್ನುಂಟು ಮಾಡಿತೆಂದು ಡಿ.ಎಂ.ಕೆ.ಯ ಜಾತ್ಯತೀತ ಪತ್ರಿಕೆಯೊಂದು ವ್ಯಾಖ್ಯಾನಿಸಿತು. ದುಃಖಿತಳಾದ ಖುಶ್ಬೂ ಕ್ಷಮೆಯಾಚಿಸಬೇಕಾಯಿತು. ಪಕ್ಷಗಳು ಈ ಸಿನಿತಾರೆ ಮಹಿಳೆಯರನ್ನು ಅನೈತಿಕ ವರ್ತನೆಗೆ ಪ್ರೇರೇಪಿಸುವ ಮೂಲಕ ತಮಿಳು ಸಂಸ್ಕೃತಿಯನ್ನು ಅವಮಾನಿಸಿದಳೆಂದೇ ಎಲ್ಲಾ ರಾಜಕೀಯ ಪಕ್ಷಗಳು ಆಕೆಯನ್ನು ದೂರಿದವು.

ಹೀಗೆ ಒಂದು ನೈತಿಕ ನಿಯಮಾಳಿಯೊಂದನ್ನು ನಿರೂಪಿಸಲಾಯಿತು. ತಮಿಳು ಗೌರವವನ್ನು ತಮಿಳುನಾಡಿನ ಹೆಂಗಸರು ರಕ್ಷಿಸಬೇಕು. ಅಂದರೆ ಜೀನ್ಸ್ ತೊಡಕೂಡದು, ಡಿಸ್ಕೊ ಬಾರ್‌ಗಳಲ್ಲಿ ನೃತ್ಯ, ಕುಡಿತ ಮಾಡಬಾರದು, ಸಾರ್ವಜನಿಕವಾಗಿ ಚುಂಬಿಸಬಾರದು ಹಾಗೂ ಮದುವೆಗಿಂತ ಮೊದಲು ಲೈಂಗಿಕ ಕ್ರಿಯೆಯಲ್ಲಿ ತೊಡಗಬಾರದು. ತಮಿಳು ಸಂಸ್ಕೃತಿಯಾಗಲೀ ಅಥವಾ ಹಿಂದಿ, ತೆಲುಗು, ಗುಜರಾತಿ... ಎಲ್ಲರೂ ಸಹ ದಲಿತರ ಬಗ್ಗೆ ಪೂರ್ವಗ್ರಹಪೀಡಿತರಾದವರು.

ತಮಾಷೆಯ ಸಂಗತಿಯೆಂದರೆ ದಲಿತ ಸಮುದಾಯದ ಮುಖ್ಯ ವಕ್ತಾರನೆಂದು ಹೆಸರುಗಳಿಸಿರುವ ದಲಿತ ಪ್ಯಾಂಥರ್ಸ್ ಆಫ್ ಇಂಡಿಯಾ (ಡಿಪಿಐ) ಮಾತ್ರ ಮೇಲಿನ ಘಟನೆಯ ಬಗ್ಗೆ ಬಾತ್ ರೂಮ್ ಚಪ್ಪಲಿ ಧರಿಸಿ, ಕೈಯಲ್ಲಿ ಕಸ ಪೊರಕೆಯನ್ನು ಹಿಡಿದು ಪ್ರತಿ ಭಟನಾ ಮೆರವಣಿಗೆಯನ್ನು ನಡೆಸಿತು. ಈ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲು ಡಿಪಿಐ ತನ್ನ ಸಮಯ, ಹಣ ಮತ್ತು ಜ್ಞಾನವನ್ನು ವ್ಯಯಿಸಿರಬೇಕು. ಡಾ॥ ಅಂಬೇಡ್ಕರ್ ತತ್ವವನ್ನು ನಂಬಿರುವ ಈ ದಲಿತ ರಾಜಕೀಯ ಪಕ್ಷವು ಯಾವುದಾದರೂ ದಲಿತ ಮಾನವ ಹಕ್ಕುಗಳ ಪ್ರಶ್ನೆಯ ಬಗ್ಗೆ ತನ್ನ ಸಂಪನ್ಮೂಲಗಳನ್ನು ಬಳಸ ಬೇಕಾಗಿತ್ತು.

ಈ ವರ್ಷ ಏಪ್ರಿಲ್‌ನಲ್ಲಿ ಜಾಗತೀಕರಣದ ವಿರುದ್ಧ ಪ್ರಮುಖ ದಲಿತ ಸಂಘಟನೆಯೊಂದು ತನ್ನೆಲ್ಲಾ ಸಹೋದರ ಸಂಘಟನೆಗಳೊಡನೆ ಕೂಡಿ "ಜಾಗತೀಕರಣದ ವಿರೋಧಿ ಸಪ್ತಾಹ"ವನ್ನು ಏರ್ಪಡಿಸಿ ಸಾಮ್ರಾಜ್ಯಶಾಹಿಯನ್ನು ಖಂಡಿಸಿತು. ಹೀಗೆ ಮಾಡುವುದರಲ್ಲೂ ಈ ದಲಿತ ಸಂಘಟನೆ ಅಧಿಕ ಸಮಯ, ಹಣ, ಶಕ್ತಿ ಮತ್ತು ಜ್ಞಾನವನ್ನು ವ್ಯಯಮಾಡಿತು. ಹೀಗೆ ಜಾಗತೀಕರಣವನ್ನು ವಿರೋಧಿಸಿ ತನ್ನೆಲ್ಲಾ ಸಮಯ, ಹಣ ಮತ್ತು ಶಕ್ತಿಯನ್ನು ಖರ್ಚುಮಾಡುವ ಬದಲು, ಜಾಗತೀಕರಣಗೊಂಡ ಆರ್ಥಿಕತೆಯಲ್ಲಿ ದಲಿತರ ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದಲ್ಲಿ ಪ್ರಯೋಜನವಿರುತ್ತಿತ್ತು. ಜಾಗತೀಕರಣದ ವಿರೋಧಿ ಕೆಲಸವನ್ನು ಆರ್.ಎಸ್.ಎಸ್ ಮತ್ತು ಎಡಪಂಥೀಯರಿಗೆ ಬಿಡಬಾರದೇಕೆ?

ದಲಿತ ನಾಯಕರಾಗಿರುವ ಶ್ರೀ ರಾಮ್‌ವಿಲಾಸ್ ಪಾಸ್ವಾನ್ ಬಿಹಾರದಲ್ಲಿ ಮುಸ್ಲಿಂ ಮುಖ್ಯಮಂತ್ರಿಯಾಗಬೇಕೆಂದು ಹೋರಾಡುತ್ತಿದ್ದಾರೆ. ಇಡೀ ರಾಜ್ಯವೇ ತೂಗುಯ್ಯಾಲೆಯಲ್ಲಿರುವಾಗ ಪಾಸ್ವಾನ್ ತಾವೇ ಮುಖ್ಯಮಂತ್ರಿಯಾಗುವ ಒಳ್ಳೇ ಅವಕಾಶ ಒದಗಿಬಂದಿತ್ತು. ಅಥವಾ ಅವರು ಅಧಿಕಾರಕ್ಕಾಗಿ ಸ್ಪರ್ಧಿಸುತ್ತಿದ್ದ ಲಾಲೂ/ನಿತೀಶ್‌ರವರಿಗೆ ಬೆಂಬಲವನ್ನು ನೀಡಿ, ದಲಿತರ ಹಕ್ಕುಗಳಿಗಾಗಿ ಚೌಕಾಸಿ ನಡೆಸಬಹುದಾಗಿತ್ತು. ಈ ಸಂದರ್ಭದಲ್ಲಿ ಯಾವುದೇ ವಾಸ್ತವ ಬೇಡಿಕೆಯನ್ನು ಅಧಿಕಾರದಾಸೆಯಲ್ಲಿ ಕಾದಾಡುತ್ತಿದ್ದ ಲಾಲೂ/ನಿತೀಶ್‌ರವರು ಮನ್ನಿಸುತ್ತಿದ್ದರು. ಗೊಹಾನ್ ಹತ್ತಿ ಉರಿಯುವಲ್ಲಿ ಬ್ರಾಹ್ಮಣರ ಕೈಯಲ್ಲಿ ಮುಗ್ಧ ಜಾಟ್‌ರವರು ದಾಳವಾದರೆಂದು ಜ್ಞಾನೋ… ದಯಗೊಂಡ ಅನೇಕ ದಲಿ… ತರು ಭಾವಿಸಿದ್ದರು. ಈ… ತರ್ಕದ ಪ್ರಕಾರ ದಲಿತರು… ಜಾಟ್ ಅಪರಾಧಿಗಳನ್ನು… ಮರೆತುಬಿಟ್ಟು, ಪಿತೂರಿ… ಹೂಡಿದ ಕೆಲವು ಬ್ರಾಹ್ಮಣ… ರನ್ನು ಹಿಡಿದುಕೊಳ್ಳಬೇಕಾ… ಗಿತ್ತು. ಹೀಗೆ ದಲಿತರ ಉದಾರವಾದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

ಪ್ರತಿವಾರ ಭಾರತದ ಹಲವಾರು ಕಡೆಗಳಿಂದ ದಲಿತ ಕಾರ್ಯಕರ್ತರು ನನ್ನ ಮನೆಗೆ ಭೇಟಿ ನೀಡುತ್ತಾರೆ. ಅನೇಕ ಬಾರಿ ಅವರನ್ನೆಲ್ಲಾ ತಮ್ಮ ತಮ್ಮ ರಾಜ್ಯಗಳಲ್ಲಿ ಎಷ್ಟು ಮಂದಿ ದಲಿತ ಮಕ್ಕಳಿಗೆ ವಿದ್ಯಾರ್ಥಿ ವೇತನ ದೊರೆಯುತ್ತಿದೆ ಎಂದು ಕೇಳುತ್ತಿದ್ದೆ. ಅಥವಾ ಭೂರಹಿತ ಕೃಷಿ ಕಾರ್ಮಿಕರಿಗೆ ದಿನಗೂಲಿ ಎಷ್ಟು? ಈ ದಿನಗೂಲಿಯನ್ನು ಹಣದ ರೂಪದಲ್ಲಿ ಅಥವಾ ಕಾಳಿನ ರೂಪದಲ್ಲಿ ನೀಡುತ್ತಾರೋ ಎಂದು ಕೇಳಿದರೆ, ಅನೇಕ ಬಾರಿ ಅವರೆಲ್ಲಾ ಕಕ್ಕಾಬಿಕ್ಕಿಯಾಗುತ್ತಿದ್ದರು.

ಡಾ॥ ಅಂಬೇಡ್ಕರ್‌ರವರ ಬರಹಗಳ ಸಂಪುಟಗಳನ್ನು ನಾವು ಓದಿದಲ್ಲಿ, ಗಮನಿಸುವ ಮುಖ್ಯ ಸಂಗತಿಯಂದರೆ ಅವರು ಪ್ರಮುಖವಾಗಿ ಸಮುದಾಯ ಅಸ್ತಿತ್ವದ ದೈನಂದಿನ ಸಂಗತಿಗಳ ಬಗ್ಗೆ ಮನವಿಗಳು ಮತ್ತು ಚರ್ಚೆಗಳನ್ನು ಅಧಿಕವಾಗಿ ಮಾಡಿರುವುದು. ಆದರೆ ಬಾಬಾ ಸಾಹೇಬ್‌ರವರ ಎಲ್ಲಾ ನೋವಿನ ಪ್ರಯತ್ನಗಳಿಂದ ಪ್ರಯೋಜನ ಪಡೆದಿರುವ ಅವರ ಅನುಯಾಯಿಗಳು ಬದುಕಿನ ಅಸ್ತಿತ್ವದ ಸಮಸ್ಯೆಗಳನ್ನು ಬದಿಗೆ ಸರಿಸಿರುವುದು ದುರಂತವೆಂದೇ ಕಾಣುತ್ತದೆ.

ದಲಿತ್ ಡೈರಿ

ಈ ವರ್ಷ ಏಪ್ರಿಲ್‌ನಲ್ಲಿ ಜಾಗತೀಕರಣದ ವಿರುದ್ಧ ಪ್ರಮುಖ ದಲಿತ ಸಂಘಟನೆಯೊಂದು ತನ್ನೆಲ್ಲಾ ಸಹೋದರ ಸಂಘಟನೆಗಳೊಡನೆ ಕೂಡಿ "ಜಾಗತೀಕರಣದ ವಿರೋಧಿ ಸಪ್ತಾಹ"ವನ್ನು ಏರ್ಪಡಿಸಿ ಸಾಮ್ರಾಜ್ಯಶಾಹಿಯನ್ನು ಖಂಡಿಸಿತು. ಹೀಗೆ ಮಾಡುವುದರಲ್ಲಿ ಈ ದಲಿತ ಸಂಘಟನೆ ಅಧಿಕ ಸಮಯ, ಹಣ, ಶಕ್ತಿ ಮತ್ತು ಜ್ಞಾನವನ್ನು ವ್ಯಯಮಾಡಿತು. ಹೀಗೆ ಜಾಗತೀಕರಣವನ್ನು ವಿರೋಧಿಸಿ ತನ್ನೆಲ್ಲಾ ಸಮಯ, ಹಣ ಮತ್ತು ಶಕ್ತಿಯನ್ನು ಖರ್ಚು ಮಾಡುವ ಬದಲು, ಜಾಗತೀಕರಣಗೊಂಡ ಆರ್ಥಿಕತೆಯಲ್ಲಿ ದಲಿತರ ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದಲ್ಲಿ ಪ್ರಯೋಜನವಿರುತ್ತಿತ್ತು.

○ಅನು: ಡೊಮಿನಿಕ್

ಹೆಜ್ಜೆಗಳನ್ನು ಹಿಂದಕ್ಕಿಡುವುದು

ವ್ಯಾಸ್ತದಸಲ್ಲಿ ಅನೇಕ ದಲಿತ ಪ್ರತಿನಿಧಿಗಳು ಪರೋ
ಬಗಳಾಗಿ ಜೀವಿಸುತ್ತಿರುವುದು ಹೇಗಿದೆಯಂದರೆ
ದು ಆಧುನಿಕ ಕಾಲದ ಸಂತ ಕ್ಲಾಸ್‌ನಂತೆ ಕಾಣಿಸು
ಸಂತ ನಿಕೋಲಸ್ ಎಂದು ಖ್ಯಾತನಾಗಿರುವ
ಕ್ಲಾಸ್ ಅನುಕರಣೀಯವೆಂದರೆ ತಪ್ಪೇನಿಲ್ಲ: ಇವತ್ತಿನ
ಯಲ್ಲಿ ಕ್ರಿ.ಶ. ೩ನೇ ಶತಮಾನದಲ್ಲಿ ಜನಿಸಿದ ನಿಕೋ
ತಾನು ನೀಡಿದ ಮೊದಲ ಕೊಡುಗೆಯಲ್ಲೇ ಹೆಸರು
ಆಗಿಬಿಟ್ಟಿದ್ದ.

ಆತನ ನೆರೆಹೊರೆಯಲ್ಲೇ ಒಬ್ಬ ಭಯಭಕ್ತಿಯ
ಯನ್ ವ್ಯಕ್ತಿಯೋರ್ವ ಬದುಕಿದ್ದ. ಆತನ ದಟ್ಟ ಬಡತ
ದಾಗಿ ಆತನ ಮೂರು ಮಂದಿ ಹೆಣ್ಣು ಮಕ್ಕಳಿಗೆ
ವೆ ಮಾಡಿಸಲಾಗಲಿಲ್ಲ. ಈ ಮೂರು ಮಂದಿ
ಗಿಯರು ವೇಶ್ಯವಾಟಿಕೆಗೆ ದೂಡಿಬಿಡಬಹುದೆಂಬ
ಕೆಯಿಂದ ನಿಕೋಲಸ್ ಆ ಬಡ ಕ್ರಿಶ್ಚಿಯನ್‌ಗೆ
ಷ್ಟು ಹಣವನ್ನು ನೀಡಿದ.

ಹೀಗೆ ನಿಕೋಲಸ್ ಸಂಕಷ್ಟದಲ್ಲಿರುವವರಿಗೆ ಧನ
ಯ ಮಾಡುವುದನ್ನು ತನ್ನ ಹವ್ಯಾಸವನ್ನಾಗಿ ಮಾಡಿ
ಡಿದ್ದ. ಆತ ಅನಂತರದಲ್ಲಿ ಬಿಷಪ್ ಆಗುತ್ತಾನೆ. ಅದೇ
ರ್ಭದಲ್ಲಿ ಆತ ಮತ್ತಷ್ಟು ದಾನವನ್ನು ಮಾಡತೊಡಗು
ಹೀಗೆ ಆತ ತನ್ನ ಜೀವಿತ ಕಾಲದಲ್ಲೇ ದಂತಕಥೆ
ಗಿ, ಪರರಿಗೆ ಬಹುಮಾನದ ದಾನವೀಯುವುದರಲ್ಲಿ
ಮಾನಿಟಿಯ ಸೂಕ್ಷ್ಮ ಸಂವೇದನೆಯಾಗುವಂತೆ ಮಾಡಿ
ಆತ ಕ್ರಿ.ಶ.೩೪೩ ರ ಡಿಸೆಂಬರ್ ೬ ರಲ್ಲಿ ತೀರಿ
ತ್ತಾನೆ.

ಹೀಗೆ ಸಂತಕ್ಲಾಸ್ ಡಿಸೆಂಬರ್ ೬ ರಂದು ಕ್ರಿಶ್ಚಿ
ನಿಟಿಯ ಜಗತ್ತಿಗೆ ಸೇರ್ಪಡೆಯಾಗಿ, ಕ್ರಿಸ್ಮಸ್ ದಿನದ
ಬಾಜ್ಯ ಅಂಗವಾಗಿ ಮಾರ್ಪಾಟಾದ. ಆದ್ದರಿಂದ ಈ
ಕ್ಲಾಸ್‌ನನ್ನು ಅನುಸರಿಸಿ, ಬೇರೆಯವರಿಗೆ ಕೆಲಸ
ತುತ್ತಿರುವ ನಮ್ಮ ಪ್ರಾತಿನಿಧಿಕ ದಲಿತರಲ್ಲಿ ತಪ್ಪೇನು
ಅಲ್ಲೊಂದು ಬಹುಮುಖ್ಯ ವ್ಯತ್ಯಾಸವಿದೆ. ನಿಕೋಲ
ಪೋಷಕರು ದೊಡ್ಡ ಶ್ರೀಮಂತರಾಗಿದ್ದರಾದ್ದರಿಂದ,
ಮಗ ಆದರ್ಶ ಕ್ರಿಶ್ಚಿಯನ್ ಆಗಿ ಬೆಳೆಯುವಂತೆ
ಸಿದ್ದರು. ಅವರು ತಮ್ಮೆಲ್ಲಾ ಐಶ್ವರ್ಯವನ್ನು ಹಿಂದೆ
ಬೇಗನೆ ತೀರಿಕೊಳ್ಳುತ್ತಾರೆ. ಹೀಗೆ ನಿಕೋಲಸ್
ಕ್ಲಾಸ್ ಆಗಿ ಬೆಳೆಯುತ್ತಾನೆ. ಬಹುಸಂಖ್ಯಾತ ದಲಿ
ಸಂಕಷ್ಟದಲ್ಲಿ ಬೆಳೆಯುತ್ತಿರುವ ಸಂದರ್ಭದಲ್ಲಿ ಸಮು
ಯವು ಡಾ॥ ಅಂಬೇಡ್ಕರ್ ಅಥವಾ ಸಂತಕ್ಲಾಸ್‌ನನ್ನು
ಸರಿಸಬೇಕೆ? ಆಯ್ಕೆಗೆ ಮುಕ್ತ ಸ್ವಾತಂತ್ರ್ಯವಿದೆ.

೧೯೯೨-೯೩ ಮತ್ತು ೧೯೯೮-೯೯ರ
ಯ ಎಸ್‌ಸಿ/ಎಸ್‌ಟಿ ಸಮಿತಿಯ ಎರಡು ವರದಿಗ
ಪರಿಶೀಲಿಸಿದಾಗ ಸಮುದಾಯ ಎತ್ತ ಸಾಗುತ್ತಿದೆ
ವುದರ ಬಗ್ಗೆ ನನಗೆ ಒಳನೋಟ ದೊರಕಿತು.
೨-೯೩ ರ ವರದಿಯು ಕೇಂದ್ರ ಸರ್ಕಾರದಲ್ಲಿರುವ
ಕ್ತಿಯ ಸಂಖ್ಯೆ-೩೬.೫೯ ಲಕ್ಷಗಳೆಂದು ತೋರಿಸಿತು
ಲ್ಲಿ ಕಸಗುಡಿಸುವವರನ್ನು ಹೊರತುಪಡಿಸಿದೆ).
೮-೯೯ರ ವರದಿಯ ಪ್ರಕಾರ ಆ ಸಂಖ್ಯೆ ೩೩.೫೫
ಂದು ತೋರಿಸಿದೆ. ಅಂದರೆ, ಆರು ವರ್ಷಗಳಲ್ಲಿ
ರಷ್ಟು ಕಮ್ಮಿಯಾಗಿದೆ.

ಹಾಗೆಯೇ ೧೯೯೨-೯೩ ರ ವರದಿಯಲ್ಲಿ
ಜನಿಕ ಕ್ಷೇತ್ರಗಳಲ್ಲಿ ೨೧.೫೨ ಲಕ್ಷ ಮಂದಿ
ಉದ್ಯೋಗಿಗಳಿದ್ದರು. ಆ ಸಂಖ್ಯೆ ಆರು ವರ್ಷಗಳಲ್ಲಿ ೧.೫೬ ಲಕ್ಷಕ್ಕಿಳಿಯಿತು. ಆದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಶ್ರಮಶಕ್ತಿ ೧೩.೪೦ ಲಕ್ಷ ಹೆಚ್ಚಾಗಿದೆ.

೧೯೯೧ರಲ್ಲಿ ಆರ್ಥಿಕ ಉದಾರೀಕರಣ ಆರಂಭವಾಗಿ, ವಿ.ಆರ್.ಎಸ್(ಸ್ವಯಂ ನಿವೃತ್ತಿ ಯೋಜನೆ)ಯನ್ನು ಜಾರಿಗೆ ತರಲಾಯಿತು. ಈ ಯೋಜನೆ ೨೦೦೦ದ ಹೊತ್ತಿಗೆ ಜನಪ್ರಿಯವಾಗತೊಡಗಿತು. ಸಮಿತಿಯ ೨೦೦೪-೦೫ ರ ವರದಿಯು ಸರ್ಕಾರದ ಮುಂದಿದ್ದು, ಸಾರ್ವಜನಿಕರಿಗದು ಇನ್ನೂ ಬಿಡುಗಡೆಯಾಗಿಲ್ಲ.

ಹೊಸ ಆರ್ಥಿಕ ನೀತಿಯ ನಿಜ ಪರಿಣಾಮದ ಖಚಿತ ಅಂಕಿ-ಅಂಶಗಳು ೨೦೧೨-೨೦೧೩ ರ ವೇಳೆಗೆ ಸ್ಪಷ್ಟವಾಗಿ ದೊರೆಯಲಿದೆ. ಅದೇ ವೇಳೆಗೆ ಈ ಹೊಸ ಆರ್ಥಿಕ ನೀತಿಗೆ ೨೦ ವರ್ಷ ತುಂಬಲಿದೆ.

> **ಒಂದು ಅಂದಾಜಿನ ಪ್ರಕಾರ ಸರ್ಕಾರಿ ಕೆಲಸದಿಂದ ನಿವೃತ್ತರಾಗುವ ಪ್ರತಿ ೧೦ ಮಂದಿ ದಲಿತರಿಗೆ ಪ್ರತಿಯಾಗಿ ಕೇವಲ ೨ ಮಂದಿ ಮಾತ್ರ ಒಳ ಬರುತ್ತಾರೆ. ಅಂದರೆ ೨೦೩೩ರ ವೇಳೆಗೆ ಶೇ.೮೦ರಷ್ಟು ದಲಿತರು ಸರ್ಕಾರಿ ಉದ್ಯೋಗದಿಂದ ಹೊರಗೆ ದೂಡಲ್ಪಡುತ್ತಾರೆ.**

ಅನೇಕರಿಗೆ ಸರ್ಕಾರಿ ಶ್ರಮಶಕ್ತಿಯಲ್ಲಿ ಇಳಿಕೆ ಉಂಟಾಗಿರುವುದು ಒಗಟಾಗಿ ಕಾಣಬಹುದು. ಅದರೆ ಇದೇ ವೇಳೆ ಸರ್ಕಾರದ ಹಿಡಿತದಲ್ಲಿರುವ ಸಾರ್ವಜನಿಕ ಉದ್ದಿಮೆಗಳಾದ ಓ.ಎನ್.ಜಿ.ಸಿ, ಐಒಸಿ, ಎನ್‌ಟಿಪಿಸಿ, ಬಿ.ಹೆಚ್.ಇ.ಎಲ್.ನಂತಹವು ತಮ್ಮ ಬೆಳವಣಿಗೆಯಲ್ಲಿ ವಿಸ್ತಾರವನ್ನು ಕಾಣುತ್ತಿರುವಾಗ ಶ್ರಮಶಕ್ತಿಯಲ್ಲೇಕೆ ಇಳಿತ ಕಂಡುಬರುತ್ತಿದೆ? ಇವತ್ತಿನ ಸರ್ಕಾರವನ್ನು ನಡೆಸಲು ಕಮ್ಮಿ ಜನ ಸಾಕೆಂದು ಇದರರ್ಥವೇ?

ಅಮೆರಿಕಾದಲ್ಲಿ ವ್ಯವಹಾರವನ್ನು ಹೊರಗುತ್ತಿಗೆ ನೀಡುವ ಮೊದಲೇ ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರ ೧೯೯೧ರಲ್ಲಿ ಅಧಿಕಾರಕ್ಕೆ ಬಂದಾಕ್ಷಣವೇ ಹೊರಗುತ್ತಿಗೆ ನೀಡುವುದನ್ನು ಆರಂಭಿಸಿತ್ತು. ಅನೇಕ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯಗಳು ಖಾಸಗೀ ಗುತ್ತಿಗೆದಾರರು ಮತ್ತು ಕಂಪನಿಗಳನ್ನು ತಮ್ಮ ಕೆಲಸಕ್ಕಾಗಿ ತೆಗೆದುಕೊಳ್ಳತೊಡಗಿದವು.

ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಅನೇಕ ದಲಿತರು ೧೯೮೦ರ ಅವಧಿಯಲ್ಲಿ ನೇಮಕಗೊಂಡವರು. ಇವರೆಲ್ಲಾ ೨೦೧೩ರಲ್ಲಿ ನಿವೃತ್ತರಾಗುತ್ತಾರೆ. ಹಾಗೆಯೇ ೧೯೯೦ ರ ಅವಧಿಯಲ್ಲಿ ನೌಕರಿಗೆ ಸೇರಿದವರು ೨೦೨೩ರಲ್ಲಿ ನಿವೃತ್ತರಾಗುತ್ತಾರೆ. ಅಂದರೆ ನೌಕರಿ ಪಡೆದಿರುವ ಅನೇಕ ದಲಿತರು ೨೦೩೩ರ ಹೊತ್ತಿಗೆ ನಿವೃತ್ತರಾಗಲಿದ್ದಾರೆ.

ಇಂದು ಸಂಘಟಿತ ಹೌಸಿಂಗ್ ಸೊಸೈಟಿ ಅಥವ ಸರ್ಕಾರಿ ಕ್ವಾರ್ಟರ್ಸ್‌ಗಳಲ್ಲಿ ವಾಸಿಸುತ್ತಿರುವ ಬಹುತೇಕ ದಲಿತರು ಸಾರ್ವಜನಿಕ ವಲಯ, ರಾಷ್ಟ್ರೀಕೃತ ಬ್ಯಾಂಕ್ ಇಲ್ಲವೇ ಸರ್ಕಾರಿ ಇಲಾಖೆಗಳಲ್ಲಿ ತಮ್ಮ ನೆಂಟರಿಷ್ಟರನ್ನು ಹೊಂದಿರುತ್ತಾರೆ. ೨೦೩೩ರ ವೇಳೆಗೆ ಇವರಲ್ಲಿ ಎಷ್ಟು ಮಂದಿ ಇಂತಹ ಸಂಬಂಧಿಕರನ್ನು ಹೊಂದಿರುತ್ತಾರೆನ್ನುವುದು ಹೇಳಲು ಕಷ್ಟವಾದೀತು.

ಒಂದು ಅಂದಾಜಿನ ಪ್ರಕಾರ ಸರ್ಕಾರಿ ಕೆಲಸದಿಂದ ನಿವೃತ್ತರಾಗುವ ಪ್ರತಿ ೧೦ ಮಂದಿ ದಲಿತರಿಗೆ ಪ್ರತಿಯಾಗಿ ಕೇವಲ ೨ ಮಂದಿ ಮಾತ್ರ ಒಳ ಬರುತ್ತಾರೆ. ಅಂದರೆ ೨೦೩೩ರ ವೇಳೆಗೆ ಶೇ.೮೦% ದಲಿತರು ಸರ್ಕಾರಿ ಉದ್ಯೋಗದಿಂದ ಹೊರಗೆ ದೂಡಲ್ಪಡುತ್ತಾರೆ.

ಪ್ರಸ್ತುತ ಚರಿತ್ರೆಯಲ್ಲಿ ದಲಿತ ಸಮುದಾಯಗಳು ತೀವ್ರವಾದ ಬಿಕ್ಕಟ್ಟನ್ನು ಎದುರಿಸುವಂತಾಗಿದೆ. ಆದರಿದಕ್ಕೆ ದಲಿತ ರಾಜಕೀಯ ನಾಯಕತ್ವದ ಜವಾಬ್ದಾರಿ ಏನು? ಸುಮಾರು ೧೨೧ ಎಸ್‌ಸಿ/ಎಸ್‌ಟಿ ಎಂಪಿಗಳು ಲೋಕಸಭೆಯಲ್ಲಿ ಮೂಕರಾಗಿ ಕುಳಿತಿದ್ದಾರೆ. ಈ ಹಿಂದೆ ಈ ದಲಿತ ರಾಜಕಾರಣಿಗಳು ಏನು ಹೇಳುತ್ತಾರೆನ್ನುವುದನ್ನು ಮಾಧ್ಯಮಗಳು ವರದಿ ಮಾಡುತ್ತಿಲ್ಲ ಎಂದು ದೂರಲಾಗುತ್ತಿತ್ತು. ಆದರೆ, ಮಾಯಾವತಿ ಅಥವಾ ಪಾಸ್ವಾನ್ ಪತ್ರಿಕಾಗೋಷ್ಠಿ ನಡೆಸಿದಲ್ಲಿ, ಅದನ್ನು ನೇರ ಪ್ರಸಾರ ಮಾಡಲಾಗುತ್ತಿತ್ತು. ಆದರೆ ಇವರಿಗೆ ದಲಿತರ ಭವಿಷ್ಯದ ಬಗ್ಗೆ ಹೇಳಲು ಏನಿದೆ?

ಈಗ ಸಂಸತ್ತಿನ ಸದಸ್ಯರಾಗಿರುವ ಸಣ್ಣ ಮಟ್ಟದ ದಲಿತ ರಾಜಕಾರಣಿಗಳು ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಇತರ ಅನೇಕ ಮಾರ್ಗಗಳಿವೆ. ಉದಾಹರಣೆಗೆ ಅವರಲ್ಲಿ ೫೦ ಮಂದಿ ಎಸ್‌ಸಿ/ಎಸ್‌ಟಿ ಸಂಸತ್ ಸದಸ್ಯರು ಸಂಸತ್ತಿನ ಎದುರು ಧರಣಿ ಕುಳಿತರೆಂದರೆ ಮಾಧ್ಯಮಗಳು ಅವರನ್ನು ಅಸಡ್ಡೆ ಮಾಡಲಾದೀತೆ?

ದಲಿತ ಸ್ನೇಹಿತನೊಬ್ಬ ಈ ವಾರದ ಮೊದಲಲ್ಲಿ ನನಗೆ ಭೇಟಿ ನೀಡಿದ್ದ. ದಲಿತ ರಾಜಕಾರಣಿಗಳಿಗೆ ದ್ರೋಹ ಬಗೆದುದರ ಬಗ್ಗೆ ಆತನಿಗೆ ತೀವ್ರ ಸಂಕಟವಾಗಿತ್ತು. ಆದರೆ ಆತನೊದಿಗೆ ಪೂನಾ ಪ್ಯಾಕ್ಟ್‌ನಿಂದ ದಲಿತ ರಾಜಕಾರಣಿಗಳಿಗೆ ಎಷ್ಟು ಕಷ್ಟವಾಗಿದೆ ಎಂದು ನಾನು ವಾದಿಸತೊಡಗಿದೆ.

ಕೆಲವು ಬುಡಕಟ್ಟು ಕ್ಷೇತ್ರಗಳನ್ನು ಹೊರತುಪಡಿಸಿದಲ್ಲಿ ಎಲ್ಲಾ ದಲಿತ ಸಂಸದರನ್ನು ಸವರ್ಣೀಯ ಹಿಂದೂ ಬಹು ಸಂಖ್ಯಾತರೇ ಆರಿಸುತ್ತಾರೆ. ಈ ರಾಜಕಾರಣಿಗಳೇನಾದರೂ ಬಾಯಿಬಿಟ್ಟಲ್ಲಿ, ಅಂಥವರು ಮತ್ತೊಂದು ಚುನಾವಣೆಯಲ್ಲಿ ಆಯ್ಕೆಯಾಗುವುದಿಲ್ಲ. ನಾನು ನನ್ನ ಸ್ನೇಹಿತನಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿದ್ದಲ್ಲಿ ರ್‍ಯಾಡಿಕಲ್ ದಲಿತ ರಾಜಕಾರಣಿಗಳು ಆಯ್ಕೆಯಾಗುತ್ತಿದ್ದರು ಎಂದು ಹೇಳಲು ಪ್ರಯತ್ನಿಸುತ್ತಿದ್ದೆ.

ಇದಕ್ಕೆ ನನ್ನ ಸ್ನೇಹಿತನಲ್ಲಿ ಉತ್ತರವಿತ್ತು: "ಆ ಸಂದರ್ಭದಲ್ಲಿ ನಿನಗಿಂತಲೂ, ನನಗಿಂತಲು ಹೆಚ್ಚು ರ್‍ಯಾಡಿಕಲ್ ಆಗಿ ಈ ಸಾಧು ದಲಿತ ರಾಜಕಾರಣಿಗಳು ಕಾಣತೊಡಗುತ್ತಾರೆ. ಅವರು ಚುನಾವಣೆಗಳ ಸಂದರ್ಭದಲ್ಲಿ ಅತ್ಯಂತ ಕೆಟ್ಟ ಬೈಗಳನ್ನು ಸಂಶೋಧಿಸಿ, ಹೇರಳವಾಗಿ

ಬಳಸತೊಡಗುತ್ತಾರೆ. ಆದರೂ ಅವರು ಆಯ್ಕೆಗೊಳ್ಳುತ್ತಾರೆ. ಹೀಗೆ ಅವರು ಅದನ್ನೇ ನಿರಂತರವಾಗಿ ಮುಂದುವರೆಸುತ್ತಾರೆ. ಸಂಸತ್ತಿನೊಳಗೆ ಈ ದಲಿತ ಎಂಪಿಗಳು ಮೂಕರಾಗಿರುತ್ತಾರೆ ನಿಜ. ಆದರೆ ದಲಿತ ವೇದಿಕೆಗಳಲ್ಲಿ ಅವರೆಲ್ಲಾ ಸಿಂಹದಂತೆ ಗರ್ಜಿಸುತ್ತಾರೆ." ಎಂದಾಗ ನಾನು ಮೌನಿಯಾದೆ.

ನನ್ನ ಸ್ನೇಹಿತ ಮತ್ತೂ ಮುಂದುವರೆದು ದಲಿತ ರಾಜಕಾರಣಿಗಳನ್ನು ದೂರತೊಡಗಿ, ಇನ್ನೊಂದು ಉದಾಹರಣೆಯನ್ನು ಹೇಳಿದ. ಆತನ ಪ್ರಕಾರ ಸಮೀಕ್ಷೆಯೊಂದನ್ನು ನಡೆಸಿ, ದಲಿತರು ದ್ವೇಷಿಸುವ ಮೂರು ಸಂಗತಿಗಳು ಯಾವುವು ಎಂದಲ್ಲಿ "ದಲಿತ ರಾಜಕಾರಣಿಗಳು"(ಎಂಪಿ/ಎಂಎಲ್ಎ/ಮಂತ್ರಿಗಳು) ಆ ಮೂರರಲ್ಲಿ ಒಂದಾಗಿರುತ್ತಾರೆ.

ಇದು ದಲಿತ ಬಹುಸಂಖ್ಯಾತರ ಭಾವನೆಯಾಗಿದ್ದಲ್ಲಿ ದಲಿತ ಚರಿತ್ರೆ ಅವರನ್ನು ಕ್ಷಮಿಸಲಾರದು. ಆದ್ದರಿಂದ, ಈ ದಲಿತ ರಾಜಕಾರಣಿಗಳು ದಲಿತ ಜನರ ಬಗ್ಗೆ ಮಾತನಾಡದಿದ್ದರೆ ಚಿಂತೆಯಿಲ್ಲ. ಆದರೆ ದಲಿತ ಚರಿತ್ರೆಗಾದರೂ ಹೆದರಲೇ ಬೇಕಾಗುತ್ತದೆ.

ಕೆ.ಆರ್.ನಾರಾಯಣನ್ ದಲಿತರ ಏಕಮಾತ್ರ ನೈತಿಕ ಪ್ರಜ್ಞೆಯಾಗಿದ್ದವರು. ಆದರೆ ಈಗ ಅವರು ನಮ್ಮನ್ನು ಅಗಲಿದ್ದಾರೆ. ದಿವಂಗತರಾದ ನನ್ನ ಸ್ನೇಹಿತ ಡಾ.ಅರವಿಂದ್ ಎನ್ ದಾಸ್, ಜನವರಿ ೨೫, ೨೦೦೧ರಲ್ಲಿ ನನಗೆ ಹೇಳಿದ ಮಾತು ನೆನಪಿಗೆ ಬರುತ್ತದೆ. "ಲಂಡನ್ ಅರ್ಥಶಾಸ್ತ್ರ ಕಾಲೇಜ್ ಲೈಬ್ರರಿಯಲ್ಲಿ ಭಾರತೀಯರಿಬ್ಬರ ಭಾವಚಿತ್ರಗಳನ್ನು ಮಾತ್ರ ಕಾಣಬಹುದಾಗಿದೆ: ಡಾ. ಅಂಬೇಡ್ಕರ್ ಮತ್ತು ನಾರಾಯಣನ್‌ರವರದ್ದು." ಈ ಗ್ರಹಿಕೆಯಲ್ಲಿ ಕೊಚೇರಿ ರಾಮನ್ ನಾರಾಯಣನ್ ಡಾ. ಅಂಬೇಡ್ಕರ್‌ರವರ ವಿಸ್ತೃತ ವ್ಯಕ್ತಿತ್ವವೇ ಆಗಿದೆ.



ರಾಜತಾಂತ್ರಿಕನಾಗಿರದೆ, ಚೈನಾದೊಡನೆ ವ್ಯವಹರಿಸುವ ಚಾತುರ್ಯವನ್ನು ಹೊಂದಿರಬೇಕಿತ್ತು. ತುರ್ತುದಿನಗಳ ಆ ಸಂದರ್ಭದಲ್ಲಿ ಒಬ್ಬ ದಲಿತನನ್ನು ನೇಮಿಸುವ ವ್ಯವದಾನವೇನು ಇಂದಿರಮ್ಮನಿಗೆ ಇರಲಿಲ್ಲ. ಆಕೆಯ ಹುಡುಕಾಟದಿಂದಾಗಿ ನಾರಾಯಣನ್ ದೊರೆತು ಕೇವಲ ಎರಡೇ ವರ್ಷಗಳಲ್ಲಿ ಚೈನಾ-ಭಾರತ ದೇಶಗಳ ನಡುವೆ ರಾಜತಾಂತ್ರಿಕ ಬಾಂಧವ್ಯ ಮರುಸ್ಥಾಪಿಸುವಂತಾಯಿತು.

೧೯೮೦ರಲ್ಲಿ ಇಂದಿರಮ್ಮ ಮತ್ತೆ ಅಧಿಕಾರಕ್ಕೆ ಬರುತ್ತಾರೆ. ಆದರೆ ಆಗ ಆಕೆಗೆ ಸರಿಯಾದ ಇಮೇಜ್‌ನ ಕೊರತೆಯಿತ್ತು. ಅಲ್ಲದೆ ಸೋವಿಯತ್ ಒಕ್ಕೂಟವು ಕಠಿಣ ಪರಮಾಣು ರಾಷ್ಟ್ರವೆಂದೇ ಗುರುತಿಸಲಾಗಿದ್ದು, ಭಾರತ ಅದರೊಡನಿತ್ತು. ಆ ಸಂದರ್ಭದಲ್ಲಿ ತನ್ನ ಇಮೇಜ್ ಉತ್ತಮ ಪಡಿಸಿಕೊಳ್ಳುವ ಅಗತ್ಯ ಇಂದಿರಮ್ಮ ಹಾಗೂ ಭಾರತ ದೇಶಕ್ಕೂ ಇತ್ತು. ಹೀಗಿರುವಲ್ಲಿ ಮೊದಲ ಹೆಜ್ಜೆ

ಲೇಖನವೊಂದರ ಪ್ರಕಾರ, "ಆತ ಕೆಲವು (೧೯೪೩) ತನ್ನ ಅಲ್ಮಾಮಾತರ್ ತಿರುವನಂತ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸ ಮಾಡು ಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದವರಿಗೆ ಇಂಥ ನೇಮ ಮುಖ್ಯವಾದರೂ, ಈ ಪ್ರಕರಣದಲ್ಲಿ ಅದು ಕಾಲಿಕವಾಗಿತ್ತು. ಆಗಿನ ತ್ರಿವಂಕೂರ್ ದಿವಾನರಾದ ಸಿ.ಪಿ. ರಾಮ ಸ್ವಾಮಿ ಅಯ್ಯರ್ ದೀರ್ಘ ಕಾಲದ ಲೆ ಪದವಿಯನ್ನು ನೀಡುವ ಬದಲು ಗುಮಾಸ್ತನ ಕೆಲಸ ನೀಡುತ್ತಾರೆ."

ಈ ಅಯ್ಯರ್ ಭೇಟಿ ನೀಡುವ ವೇಳೆಯಲ್ಲಿ ನಾ ಯಣನ್ ಜುಬ್ಬ (ಅದನ್ನು ರೇಷ್ಮೆಯದ್ದೆಂದೇ ಅಯ ಭಾವಿಸುತ್ತಾನೆ)ವನ್ನು ಧರಿಸಿ, ಕೈಗೆ ರೋಲ್ಡ್-ಗೋಲ್ಡ್ ಗಡಿಯಾರ (ಬಹುಮಾನವಾಗಿ ದೊರೆತ ಆ ಗಡಿಯ ವನ್ನು ನಿಜವಾದ ಚಿನ್ನವೆಂದೇ ಅಯ್ಯರ್ ತಿಳಿದಿದ್ದ)ಪ ತೊಟ್ಟಿದ್ದರು. ಅಯ್ಯರ್ ಅಭಿಪ್ರಾಯದಲ್ಲಿ ದಲಿತನಾದ ಧರಿಸುವುದು ಅಸಂಬದ್ಧವಾಗಿತ್ತು. ತ್ರಿವಂಕೂರ್ ಮ ರಾಜರನ್ನು ಭೇಟಿಮಾಡಲು ನಾರಾಯಣನ್ ಇಚ್ಛಿಸಿದ ಅದನ್ನು ತಿರಸ್ಕರಿಸಲಾಗುತ್ತದೆ. ಆಗ ವಿಶ್ವವಿದ್ಯಾಲಯ ಘಟಿಕೋತ್ಸವ ಸಮಾರಂಭದಲ್ಲಿ ಪದವಿ ಪ್ರಮಾಣಪತ್ರವ ಸ್ವೀಕರಿಸದೆ ಪ್ರತಿಭಟಿಸುತ್ತಾರೆ ನಾರಾಯಣನ್. (ವರ್ಷಗಳ ಅನಂತರದಲ್ಲಿ ವಿಶ್ವವಿದ್ಯಾಲಯದ ಕ ಓಗೊಟ್ಟು ಪ್ರಮಾಣ ಪತ್ರವನ್ನು ಧನ್ಯತೆಯಿಂ ಸ್ವೀಕರಿಸುತ್ತಾರೆ.)

ಈ ಪ್ರತಿಭಟನಾಕಾರ ನಾರಾಯಣನ್ ಕೇವ ಒಂದು ಕಾಲಕ್ಕೆ ಮಾತ್ರ ತನ್ನ ಪ್ರತಿಭಟನೆಯನ್ನು ಸೀಮಿ ಗೊಳಿಸಿಕೊಳ್ಳಲಿಲ್ಲ. ಆತ ಎಡಪಂಥೀಯ - ಲಿಬರ ತಾತ್ವಿಕತೆಯನ್ನು ಅನುಸರಿಸುವಾಗಲೂ ಅಮೆರಿಕಾವ ದ್ವೇಷಿಸಲಿಲ್ಲ. ಜನವರಿ ೨೫, ೨೦೦೨ರ ಗಣರಾಜ್ಯೋ ವದ ಹಿಂದಿನ ಸಂಜೆಯ ತಮ್ಮ ರಾಷ್ಟ್ರಪತಿ ಭಾಷಣದ

ಒಳ್ಳೆಯ ಶಿಕ್ಷಕನನ್ನು ಕಳೆದುಕೊಂಡಾಗ

ಪ್ರತಿಯೊಬ್ಬ ಮಾನವ ಜೀವಿಯೂ ಸಹ ತನ್ನ ಅಂತರಾಳದ ಸೌಂದರ್ಯವನ್ನು ಕಂಡುಕೊಂಡು, ಹೊಸ ಸಮಾಜಕ್ಕಾಗಿ ಅರಳುವ ಸಾಧ್ಯತೆಯನ್ನು ಹುದುಗಿಸಿಟ್ಟುಕೊಂಡಿರುವ ಹೊಸ ಸಾಮಾಜಿಕ ದಾರ್ಶನಿಕನೆಂದರೆ ಡಾ. ಅಂಬೇಡ್ಕರ್. ಅವಕಾಶವೊಂದು ದೊರೆತಲ್ಲಿ ದಲಿತರೂ ಸಹ ಆದರ್ಶವ್ಯಕ್ತಿಗಳಾಗಬಹುದೆಂಬುದಕ್ಕೆ ನಾರಾಯಣನ್ ಸಾಕ್ಷಿಯಾಗಿದ್ದಾರೆ. ಇದನ್ನು ಡಾ. ಅಂಬೇಡ್ಕರ್ ಸಾಧಿಸಿ ಉಳಿದವರಿಗೆ ಮಾರ್ಗದರ್ಶಿಯಾಗಿದ್ದಾರೆ.

ರಾಷ್ಟ್ರಪತಿಯೆನ್ನುವ ಕಾರಣದಿಂದಾಚೆಗೆ ನಾರಾಯಣನ್‌ರವರನ್ನು ಕಾಣಬೇಕಾಗಿದೆ. ಭಾರತಕ್ಕೆ ನೆರೆಯ ಚೈನಾ ದೇಶ ಕಠಿಣ ಸವಾಲನ್ನೊಡ್ಡಿದೆ. ೧೯೬೨ರಲ್ಲಿ ನಡೆದ ಸೈನೋ-ಇಂಡಿಯನ್ ಯುದ್ಧದಿಂದಾಗಿ ಎರಡೂ ದೇಶಗಳ ರಾಜತಾಂತ್ರಿಕ ಸಂಬಂಧಗಳು ಕುಸಿದಿವೆ. ಈ ಕುಸಿದ ಸಂಬಂಧವನ್ನು ೧೯೭೬ರಲ್ಲಿ ಅಂದರೆ ಒಂದುವರೆ ದಶಕದ ಅಂತರದಲ್ಲಿ ಪುನರ್ ಸ್ಥಾಪನೆಯಾಗಿದೆ.

ಭಾರತ ಆಗ ಚೈನಾಕ್ಕೆ ಒಬ್ಬ ರಾಯಭಾರಿಯನ್ನು ನೇಮಕ ಮಾಡಬೇಕಿತ್ತು. ಆ ರಾಯಭಾರಿ ಕೇವಲ ಯಾಗಿ ಅಮೆರಿಕಾದೊಂದಿಗೆ ಆತ್ಮವಿಶ್ವಾಸದ ಸಂಬಂಧವನ್ನು ಕುದುರಿಸಿಕೊಳ್ಳಬೇಕಿತ್ತು. ಅದಕ್ಕಾಗಿ ಭಾರತ ರಾಜತಾಂತ್ರಿಕ ಸಂಬಂಧವನ್ನೇ ನಂಬಿಕೊಂಡಿತ್ತು. ಆದ್ದರಿಂದ ಮತ್ತೊಮ್ಮೆ ಭಾರತ ಅಂಥ ಶ್ರೇಷ್ಠ ವ್ಯಕ್ತಿಗಾಗಿ ಹುಡುಕಾಟ ನಡೆಸಿತ್ತು. ಇಂದಿರಮ್ಮ ಒಬ್ಬ ದಲಿತವ್ಯಕ್ತಿಯನ್ನು ನೇಮಿಸುವ ಅಗತ್ಯವೇನೂ ಇರಲಿಲ್ಲವಾದರೂ, ಅಮೆರಿಕಾದೊಡನೆ ವ್ಯವಹರಿಸುವಂಥ ಜವಾಬ್ದಾರಿಯನ್ನು ನಾರಾಯಣನ್‌ರವರ ಹೆಗಲಿಗೆ ವಹಿಸಲಾಯಿತು. ತಮ್ಮ ನಾಲ್ಕು (೧೯೮೦-೮೪) ವರ್ಷಗಳ ಅವಧಿಯಲ್ಲಿ ನಾರಾಯಣನ್‌ರವರು ಅಮೆರಿಕಾ ಮತ್ತು ಭಾರತ ದೇಶಗಳೆರಡೂ ಮತ್ತಷ್ಟು ಹತ್ತಿರ ಬರುವಂತೆ ದುಡಿದರು.

ಇಂಥ ಶ್ರೇಷ್ಠ ವ್ಯಕ್ತಿ ನಾರಾಯಣನ್ ತಮ್ಮ ಜೀವಿತದುದ್ದಕ್ಕೂ ಅಹಂಕಾರ ತಮ್ಮ ನಡಾವಳಿಯಲ್ಲಿ ನುಸುಳದಂತೆ ಜೀವಿಸುತ್ತಾರೆ. ಡಾ. ಅಂಬೇಡ್ಕರ್‌ರವರಂತೆ ನಾರಾಯಣನ್‌ರವರು ತಮ್ಮ ಸಂಬಂಧಗಳಲ್ಲಿ ಸಜ್ಜನಿಕೆಯ ಆದಿಮಶಕ್ತಿಯಾಗಿ ಕಾಣುತ್ತಾರೆ. ಇಂಥ ಸಜ್ಜನಿಕೆಯ ದೀನತೆಯಲ್ಲೂ ಕ್ರಾಂತಿಕಾರಿಯೊಬ್ಬ ಜೀವಿಸಿದ್ದನೆಂದರೆ ಅಚ್ಚರಿಯಾದೀತು.

ಹೇಳಿದ್ದೇನೆಂದರೆ, "ಪ್ರಸ್ತುತ ಮತ್ತು ಭವಿಷ್ಯದ ಆರ್ಥಿ ವ್ಯವಸ್ಥೆಯಲ್ಲಿ ವಂಚಿತ ಮತ್ತು ಅಸಮಾನತೆಗೊಳಗಾ ವರ್ಗಗಳು ಪ್ರಗತಿ ಮತ್ತು ಸಮಾನತೆಯನ್ನು ಸಾಧಿಸಲ ಖಾಸಗಿ ವಲಯ ಪ್ರಗತಿಪರ ಮತ್ತು ಸಮಾನತೆಯ ನೀತಿಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಆಗಲೆ ವಂಚಿತ ವರ್ಗಗಳಿಗೆ ನಾಗರಿಕ ಹಕ್ಕುಗಳು ದೊರೆತು ನಾಗರಿಕ ಪ್ರಜೆಗಳಾಗಲು ಸಾಧ್ಯ. ಅಂದರೆ ಖಾಸಗಿ ವಲಯ ಸಾಮಾಜವಾದವನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿಲ್ಲ. ಬದಲಾಗಿ ಅಮೆರಿಕಾದಂಥ ಬಂ ವಾಳಶಾಹಿ ದೇಶ ಅನುಸರಿಸುತ್ತಿರುವ ವೈವಿಧ್ಯತೆಯ (ಡೈವರ್ಸಿಟಿ) ಬಿಲ್‌ನ್ನು ಅನುಸರಿಸಿ ಸಕಾರಾತ್ಮಕ ಕಾರ್ಯವನ್ನು ಜಾರಿಯಾಗಿಸಬೇಕು."

ರಾಜ್ಯಾಂಗದ ಮುಖ್ಯಸ್ಥರಾಗಿ ನಾರಾಯಣನ್ ತಮ್ಮ ಛಾಪನ್ನು ಬಿಟ್ಟುಹೋಗಿದ್ದಾರೆ. ಗುಡಿಸಲಲ್ಲಿ ಹುಟ್ಟಿ ರಾಷ್ಟ್ರಪತಿ ಭವನ ಮತ್ತು ಆಧುನಿಕ ಕಾಲದ ಆತಂಕ ಗೊಂಡ ದಲಿತ ವ್ಯಕ್ತಿಗೆ ನೈತಿಕ ಪ್ರಜ್ಞೆಯಾಗಿ ನಾರಾಯ ಣನ್ ಉಳಿದುಬಿಡುತ್ತಾರೆ.

ನಮ್ಮ ಗರ್ಭದಲ್ಲೇಕೆ ಸಿಡಿಮದ್ದು?

ಲಿಬರಲ್ ಪ್ರಜಾಪ್ರಭುತ್ವ, ಗಣರಾಜ್ಯವಾದ, ಮತ್ತು ...ತಿಯ ಕೇಂದ್ರವಾದ ಫ್ರಾನ್ಸ್ ಇಂದು ಬಿಕ್ಕಟ್ಟಿನಲ್ಲಿದೆ. ...ೋಬರ್ ೨೭ರಂದು ಜನಾಂಗೀಯ ಅಲ್ಪಸಂಖ್ಯಾತ ...ರು ಬಾಲಕರು ವಿದ್ಯುತ್‌ಗೆ ಆಹುತಿಯಾದರು. ಅಂದಿ ...ಲೂ ಪ್ರತಿರಾತ್ರಿಯೂ ಪ್ಯಾರಿಸ್ ಹತ್ತಿ ಉರಿಯುತ್ತಿದೆ.

ಫ್ರಾನ್ಸ್‌ನಲ್ಲಿ ಶೇ. ೫.೪ರಷ್ಟು ಜನಾಂಗೀಯ ಅಲ್ಪ ...ಖ್ಯಾತರಿದ್ದಾರೆ. (ಜನಸಂಖ್ಯೆಯಲ್ಲಿಅವರ ಮೊತ್ತ ೬.೨ ...ಯನ್). ಅವರಲ್ಲಿ ೧.೪ ಆಫ್ರಿಕಾ ಮೂಲದವರು. ...ಮಂದಿ ಫ್ರಾನ್ಸ್ ವಸಾಹತುಗಳಾದ ಸ್ನೇಗಲ್, ...ರಿಯಾ, ಮಾಲಿ, ಮೊರಾಕ್ಕೋ ಮತ್ತು ಪಾಂಡಿಚೇರಿ ...ದ ಬಂದವರಾಗಿದಾರೆ. ಬಡತನದ ಬದುಕನ್ನು ...ತುವ ಈ ಜನಾಂಗೀಯ ಅಲ್ಪಸಂಖ್ಯಾತರು ನಗರಗಳ ...ರ ವಲಯದಲ್ಲಿ ಜೀವಿಸುತ್ತಾ ತಾರತಮ್ಯಕ್ಕೆ ತುತ್ತಾಗಿ ... ಫ್ರಾನ್ಸ್‌ನ ಬಂಡವಾಳ ಮಾರುಕಟ್ಟೆ, ಉದ್ಯೋಗ ... ಸಂಸ್ಕೃತಿಯೊಳಗೆ ಇವರ್‍ಯಾರು ಸೇರದವರಾಗಿರುವು ...ದ ಅವರ ನಡುವೆ ಅಂತರ ಮತ್ತಷ್ಟು ಹೆಚ್ಚಾಗುತ್ತಿದೆ.

> **ಐಟಿ ವಲಯ ಅಧಿಕ ಉದ್ಯೋಗಗಳನ್ನು ಸೃಷ್ಟಿಸಿದೆಯಾದರೂ ದಲಿತರನ್ನು ಅದು ತನ್ನೊಡನೆ ತೆಗೆದುಕೊಂಡಿದೆಯಾ? ಕೆಲವರು ಮಾತ್ರ ಪಿಯೋನ್‌ಗಳಾಗಿ, ಕಸಗುಡಿಸುವವರಾಗಿ, ಚಾಲಕರಾಗಿ ಅವಕಾಶ ಪಡೆದಿರಬಹುದು. ಹಾಗೆಯೇ ಭಾರತದ ಕೈಗಾರೀಕರಣವು ದಲಿತರನ್ನು ಫ್ಯಾಕ್ಟರಿ ಕೆಲಸಗಾರರನ್ನಾಗಿ, ಗುಮಾಸ್ತರನ್ನಾಗಿ, ಸ್ವಚ್ಛಮಾಡುವವರನ್ನಾಗಿ ತೆಗೆದುಕೊಳ್ಳಬಹುದು. ಇದು ಮಿಲಿಯನ್‌ಗಟ್ಟಲೆ ದಲಿತರಿಗೆ ವೇದನೆ ಇಲ್ಲದ ಬದುಕನ್ನು ನೀಡಬಹುದು.**

...ಚಿನವರೆಗೆ ಸಮಸ್ಯೆ ಕೇವಲ ಜನಾಂಗೀಯ ಅಲ್ಪ ...ಖ್ಯಾತರಿಗೆ ಮಾತ್ರ ಮೀಸಲಾಗಿತ್ತು. ಆದರೀಗ ಅದು ಫ್ರಾನ್ಸ್ ಸಮಾಜವನ್ನೆ ಆವರಿಸಿಕೊಂಡಿದೆ.

ನವೆಂಬರ್ ೪ ರಂದು ಫ್ರಾನ್ಸ್‌ನ ಅಧ್ಯಕ್ಷರಾದ ... ಚಿರಾಕ್ ತಮ್ಮ ಭಾಷಣದಲ್ಲಿ ಜನಾಂಗೀಯ ತಾರ ...ವನ್ನು ಕೊನೆಗೊಳಿಸಬೇಕೆಂದು ಕರೆ ನೀಡಿದ್ದರು. ...ನಾಂಗವಾದ, ಅಸಹನೆ ಮತ್ತು ಅವಹೇಳನದಿಂದ ...ೀನೂ ಶಾಶ್ವತವಾಗಿ ಕಟ್ಟಲಾಗದು" ಎಂದಿದ್ದರು. ತಾರ ...ವು ಸಾಮಾಜಿಕ ವಿಷ ವರ್ತುಲವೆಂದು ವಿವರಿಸಿದ್ದರು. ... ಆಲೋಚನೆಗಳು ಸ್ಪಷ್ಟವಾಗಿ ಈ ಹಿಂದೆ ಆತನಿಗೆ ...ದಿರಲಿಲ್ಲ.

ಅಮೆರಿಕಾವೂ ಸಹ ಇಂಥಪರಿಸ್ಥಿತಿಯನ್ನು ಎದುರಿ ... ೧೯೬೭ ರ ಜನಾಂಗೀಯ ಧಂಗೆಗಳು ಅಮೆರಿಕಾದ ...ಗಳನ್ನು ಕೆಂಪಾಗಿಸಿದಾಗ, ಕಪ್ಪು ಜನರಿಗಾಗಿ ಸಕಾರಾ ...ಕಾರ್ಯಕ್ರಮಗಳನ್ನು ಜಾರಿಯಾಗಿಸಲು ರಾಜಕೀಯ ...ುಕತ್ವ ನಿರ್ಧರಿಸಿತ್ತು. ವೈವಿಧ್ಯತೆಯನ್ನು ಒಳಗೊಳ್ಳುವ ...ಲಕ ಅಮೆರಿಕಾವು "ಹಂಚಿಕಾ-ಬಂಡವಾಳ"ದಲ್ಲಿ ...ಕೆಯನ್ನು ವ್ಯಕ್ತಪಡಿಸಿತು. ಇಂದು ಈ ಭಿನ್ನ ...ಂಗೀಯ ವೈವಿಧ್ಯತೆಯು ಅಮೆರಿಕಾದಲ್ಲಿ ಎದ್ದು ...ತ್ತಿದೆ.

ಈ ನಾಗರಿಕ ಅವ್ಯವಸ್ಥೆ ಅಮೆರಿಕಾದಲ್ಲಿ ಆಗದೆ ...ಗಿದಲ್ಲಿ ಏನಾಗುತ್ತಿತ್ತು? ಅಕ್ಟೋಬರ್ ೨ ಮತ್ತು ...ತರದ ಘಟನೆಗಳು ಫ್ರಾನ್ಸ್‌ನಲ್ಲಿ ನಡೆಯದೆ ...ಗಿದಲ್ಲಿ ಏನಾಗುತ್ತಿತ್ತು? ಜಗತ್ತನಲ್ಲಿ ಅಮೆರಿಕಾ ಮತ್ತು ...ದೇಶಗಳೆರಡೂ ಕೈಗಾರಿಕೆಯಲ್ಲಿ ಬಹಳಷ್ಟು ಪ್ರಗತಿ ... ಸಾಧಿಸಿರುವಂಥವು. ಇವೆರಡೂ ನಾಗರಿಕತೆಯಲ್ಲಿ ...ತ ಪ್ರಗತಿ ಕಂಡವಾದರೂ ಅತ್ಯಂತ ಹೇಯವಾದ ...ಂಗೀಯ ತಾರತಮ್ಯವನ್ನು ಆಚರಿಸುತ್ತಿವೆ. ಅದಕ್ಕಾಗಿ ...೭೦ರಲ್ಲಿ ಅಮೆರಿಕಾ ಬೆಲೆಯನ್ನು ತೆತ್ತರೆ, ಈಗ ಫ್ರಾನ್ಸ್ ...ನ್ನು ಅನುಭವಿಸುತ್ತಿದೆ.

ಭಾರತದಲ್ಲಿ ಪರಿಸ್ಥಿತಿ ಇನ್ನೂ ಭಯಂಕರವಾಗಿದೆ. ...ತಮ್ಯ ಮತ್ತು ಪ್ರತ್ಯೇಕಿಸುವಿಕೆ ಇಲ್ಲಿ ಅಮೆರಿಕಾ ಮತ್ತು

ಫ್ರಾನ್ಸ್‌ಗಳಿಗಿಂತ ನೂರುಪಟ್ಟು ಹೆಚ್ಚಾಗಿದೆ. ದಳ್ಳಾಲ್ ಬೀದಿಯಲ್ಲಿ ದಲಿತ CEO, ದಲಿತ ಶ್ರೀಮಂತ ಅಥವಾ ದಲಿತ ಕಂಪನಿಯೊಂದು ವಾಣಿಜ್ಯವನ್ನು ನಡೆಸುತ್ತಿಲ್ಲ. ಹಿಂದೂ ದೇವಾಲಯಗಳಂತೆ ದಲಿತರನ್ನು ಮಾಧ್ಯಮಗಳು ಮತ್ತು ಬಾಲಿವುಡ್ ಇನ್ನೂ ಆಚೆಗೆ ಇಟ್ಟಿವೆ. ಕನಸಿನ ಭಾರತ ಮತ್ತಷ್ಟು ಬೆಳೆಯುತ್ತಿರುವಾಗ ಅದು ತನ್ನೆಲ್ಲಾ ತಾರತಮ್ಯ ಮತ್ತು ಪ್ರತ್ಯೇಕ ನೀತಿಯೊಂದಿಗೆ ಬೆಳೆಯುತ್ತಿದೆ. ಅಮೆರಿಕಾ ಮತ್ತು ಫ್ರಾನ್ಸ್‌ದೇಶಗಳಂತೆ ಭಾರತವು ಬೆಳವಣಿಗೆಯನ್ನು ಸಾಧಿಸಿದರೂ ಸಹ ಅದು ತಾರತಮ್ಯವೆನ್ನುವ ವಿಷವನ್ನು ಕೀಳಲೇ ಬೇಕಾಗುತ್ತದೆ.

ಭಾರತೀಯ ಅರ್ಥಶಾಸ್ತ್ರಜ್ಞರ ಪ್ರಕಾರ ದೇಶದ ಬೆಳವಣಿಗೆ ಶೇ.೮-೧೦ವರೆಗೆ ಇನ್ನೊಂದು ದಶಕದವರೆಗೆ ಬೆಳೆಯುತ್ತಾ ಸಾಗಿದರೆ ಇಲ್ಲಿನ ನಿರುದ್ಯೋಗ ಸಮಸ್ಯೆ ಇಲ್ಲವಾಗುತ್ತದೆ. ಈ ಬೆಳವಣಿಗೆ ಕೈಗಾರಿಕೆಗೆ ಎಡೆಮಾಡಿ ಕೊಡುತ್ತದೆ ನಿಜ. ಆಗ ಮತ್ತಷ್ಟು ಅವಕಾಶಗಳು ಮಿಲಿಯಗಟ್ಟಲೆ ಜನಕ್ಕೆ ದೊರೆಯುತ್ತದೆ. ಆದರೆ ಈ ಅಭಿವೃದ್ಧಿಗೊಂಡ ಭಾರತದಲ್ಲಿ ದಲಿತರು ಎಲ್ಲಿರುತ್ತಾರೆಂದು ವಿವರಿಸಿಲ್ಲ.

ಐಟಿ ವಲಯದ ಬೆಳವಣಿಗೆ ಇದಕ್ಕೊಂದು ಅತ್ಯುತ್ತಮ ಉದಾಹರಣೆಯಾಗಿದೆ. ಐಟಿ ವಲಯ ಅಧಿಕ ಉದ್ಯೋಗಗಳನ್ನು ಸೃಷ್ಟಿಸಿದೆಯಾದರೂ ದಲಿತರನ್ನು ಅದು ತನ್ನೊಡನೆ ತೆಗೆದುಕೊಂಡಿದೆಯಾ? ಕೆಲವರು ಮಾತ್ರ ಪಿಯೋನ್‌ಗಳಾಗಿ, ಕಸಗುಡಿಸುವವರಾಗಿ, ಚಾಲಕರಾಗಿ ಅವಕಾಶ ಪಡೆದಿರಬಹುದು. ಹಾಗೆಯೇ ಭಾರತದ ಕೈಗಾರೀಕರಣವು ದಲಿತರನ್ನು ಫ್ಯಾಕ್ಟರಿ ಕೆಲಸಗಾರರನ್ನಾಗಿ, ಗುಮಾಸ್ತರನ್ನಾಗಿ, ಸ್ವಚ್ಛಮಾಡುವವರನ್ನಾಗಿ ತೆಗೆದುಕೊಳ್ಳಬಹುದು. ಇದು ಮಿಲಿಯನ್‌ಗಟ್ಟಲೆ ದಲಿತರಿಗೆ ವೇದನೆ ಇಲ್ಲದ ಬದುಕನ್ನು ನೀಡಬಹುದು. ಆದರೆ ಇದರಿಂದ ಭಯಾನಕ ಪರಿಣಾಮಗಳು ಇದಾಗಲಿವೆ. ಕೈಗಾರೀಕರಣ ನಾಗರಿಕರಣವನ್ನು ಪ್ರೇರೆಪಿಸುತ್ತದೆ. ದೂರಗಾಮಿಯಾಗಿ ನೋಡಿದಲ್ಲಿ ಎರಡು ಫಲಿತಾಂಶಗಳು ಕಾಣುತ್ತವೆ: ಒಂದು- ಖಾಸಗಿ ಸಂಸ್ಥೆಗಳು ಹೆಚ್ಚೆಚ್ಚು ಒಳಗೊಳ್ಳುವ ಸಂಸ್ಥೆಗಳಾಗಿ ಹೆಚ್ಚು ಕಾಲ ಉಳಿಯಲಾರವು. ಎರಡು- ದಲಿತರು ಹೆಚ್ಚೆಚ್ಚು ನಗರ ಪ್ರದೇಶಗಳಲ್ಲಿ ಅಸಂಘಟಿತ ವಲಯವಾಗಿ ಕೊಳಗೇರಿಗಳಲ್ಲಿ ಜೀವಿಸಲಾರಂಭಿಸುತ್ತಾರೆ.

ಅಂದರೆ, ಭಾರತ ಸಾಮಾಜಿಕ ವಿಘಟನೆಯಾಗಿ ಬೆಳೆಯುತ್ತದೆ. ಬಂಡವಾಳ ಮಾರುಕಟ್ಟೆಯಲ್ಲಿ ಮತ್ತು ನಿಗಮಗಳಲ್ಲಿ, ವಾಣಿಜ್ಯದಲ್ಲಿ ಪಾಲುಗೊಳ್ಳದ ನಗರದ ದಲಿತರು ಬಂಡವಾಳಶಾಹಿಯನ್ನು ಸಂದೇಹದಿಂದ ನೋಡಲಾರಂಭಿಸುತ್ತಾರೆ. ಭರವಸೆ ನಿರಾಸೆಯಾಗಿ, ನಿರಾಸೆ ಕೋಪವಾಗಿ ಪರಿವರ್ತನೆಗೊಳ್ಳುತ್ತದೆ. ಆಗ ಚರಿತ್ರೆ ತನ್ನೆಲ್ಲಾ ಭಯಾನಕತೆಯಲ್ಲಿ ಮರುಕಳಿಸುತ್ತದೆ.

ಇದೇ ರೀತಿಯಲ್ಲೇ ಅಮೆರಿಕಾ ಮತ್ತು ಫ್ರಾನ್ಸ್‌ಗಳಲ್ಲಿ ಆಗಿರುವುದು. ಅವಕಾಶಗಳಿಗಾಗಿ ಕಾದು ಅವು ಸಿಗದಾದಾಗ ಜನ ಸಿಡಿಯುತ್ತಾರೆ. ಈ ಎರಡೂ ದೇಶಗಳು ಜನಾಂಗೀಯ ಅಲ್ಪಸಂಖ್ಯಾತರನ್ನು ಪ್ರತ್ಯೇಕಿಸಿ, ಶ್ರೀಮಂತವಾಗಿ ಬೆಳೆದವು. ಈ ಪ್ರಕ್ರಿಯೆಯಲ್ಲಿ ಒಂದು ಸಣ್ಣ ಘಟನೆ ಸಿಡಿಮದ್ದಾಗಿ ಪರಿವರ್ತನೆಗೊಂಡು ಸಿಡಿಯಿತು. ಹೀಗೆಯೇ ಶ್ರೀಮಂತ ಭಾರತದಲ್ಲಿ ದಲಿತರ ನಿರಾಸೆ ಸಾಮುದಾಯಿಕ ಸಿಟ್ಟಾಗಿ, ಸಿಡಿಮದ್ದಾಗಿ ಪರಿವರ್ತನೆಗೊಳ್ಳುತ್ತದೆ. ಒಂದು ಸಣ್ಣ ಕಿಡಿ ಇಡೀ ತಳಹದಿಯನ್ನೇ ಅಲುಗಾಡಿಸೀತು!

ಜನಾಂಗೀಯ ಅಲ್ಪಸಂಖ್ಯಾತರಾದ ಆಫ್ರಿಕಾದ ವಲಸಿಗರು ಫ್ರಾನ್ಸ್‌ನಲ್ಲಿ ಕೇವಲ ಶೇ. ೨.೩ರಷ್ಟು ಇದ್ದರೂ ಫ್ರಾನ್ಸ್‌ನ್ನು ಬಿಡದೆ ಕಾಡುತ್ತಿದ್ದಾರೆ. ಹೀಗಿರುವಲ್ಲಿ ಶೇ.೨೪.೫ರಷ್ಟು ದಲಿತರು ಮತ್ತು ಬುಡಕಟ್ಟು ಜನ ಭಾರತದಲ್ಲಿದ್ದಾರೆ. ಅಂದರೆ ನಿಗಮೀಕರಣಗೊಳ್ಳುತ್ತಿರುವ ಭಾರತ ತನ್ನೊಡಲಲ್ಲಿ ಬಾಂಬ್‌ನ್ನು ನಾಟಿಮಾಡುತ್ತಿದೆಯಾ? □

ನಿಬ್ಬಾಣವೆಂದರೆ ಮುಕ್ತಿ ಅಲ್ಲ; ಪರಿಪೂರ್ಣ ಬದುಕು

ಬುದ್ಧಾಯಣ

೬

ನಿಬ್ಬಾಣ ಎಂದರೆ ಮೋಕ್ಷವಲ್ಲ, ಮುಕ್ತಿ ಅಲ್ಲ, ಸ್ವರ್ಗದಲ್ಲಿನ ಸ್ಥಾನವಲ್ಲ, ಅದೊಂದು ಮಧ್ಯಮ ಮಾರ್ಗ, ಧರ್ಮ ಮಾರ್ಗ, ರಾಗ-ಭಾವ ದಿಂದ ವಿಮೋಚನೆ, ಬದುಕಿನಲ್ಲಿಯೇ ನಾವು ಕಂಡುಕೊಳ್ಳುವ ಪರಿಪೂರ್ಣತೆ! ಆತ್ಮದ ಮೋಕ್ಷಕ್ಕಿಂತ ಲೌಕಿಕ ಜೀವಿಗಳ ಸಂತೋಷ ಭಿನ್ನ ಎಂಬುದು! ಮತ್ತು ಸಂತೋಷ ಇದೆ ಎಂಬುದು! ಆತ್ಮದ ವಿಚಾರ ಮತ್ತು ಸಾವಿನ ನಂತರ ಆತ್ಮದ ಮುಕ್ತಿ ಎಂಬುದು ಸಂಪೂರ್ಣ ವಿಚಾರ ಆಗಿದೆ.

○ಸಿ.ಎಚ್.ರಾಜಶೇಖರ್

ಮನುಷ್ಯ ವಿವೇಚನಾ ಶಕ್ತಿಯನ್ನು ಪಡೆದುಕೊಂಡ ನಂತರ ಅವನನ್ನು ಭವಿಷ್ಯದಲ್ಲಿ ಕಾಡಿದ ಮೊಟ್ಟ ಮೊದಲ ಪ್ರಶ್ನೆ ಎಂದರೆ "ಸೃಷ್ಟಿ" ಎಂದರೆ ಏನು? "ಪ್ರಕೃತಿ" ಎಂದರೆ ಏನು? "ದೇವರು" ಎಂದರೆ ಏನು? "ಧರ್ಮ" ಎಂದರೆ ಏನು? ಎಂಬುದೇ ಆಗಿದೆ. ಅದನ್ನೇ ನಾವು "ಮೂಲಭೂತ ಪ್ರಶ್ನೆ" ಎಂದು ಕರೆಯಲ್ಪಡುವುದು. ದೇವರೆಂಬ ಪರಿಕಲ್ಪನೆಯ ಜೊತೆ ಜೊತೆಗೆ ಧರ್ಮ ಉದಯಿಸುತ್ತದೆ. ಧರ್ಮದ ಹಿಂದೆ ಆಸ್ತಿಕವಾದ ಮತ್ತು ನಾಸ್ತಿಕವಾದ ಎಂಬ ತದ್ವಿರುದ್ಧ ದಿಕ್ಕಿನ ಉಭಯ ಸಂಕಟ ಪ್ರಾರಂಭವಾಗುತ್ತದೆ. ಇದನ್ನು ಲೌಕಿಕ ಮತ್ತು ಆಧ್ಯಾತ್ಮಿಕ ಎಂತಲೂ ಕರೆಯುತ್ತೇವೆ.

ಧರ್ಮದ ನಿಜ ಸ್ವರೂಪ ಅಥವಾ ಕರ್ತವ್ಯವೆಂದರೆ ಈ ಲೌಕಿಕ ಮತ್ತು ಅಲೌಕಿಕ ವಿಷಯಕ್ಕೆ ಸಂಬಂಧಿಸಿದ ಸಂಶಯಗಳು ಮತ್ತು ಕಗ್ಗಂಟನ್ನು ಬಿಡಿಸುವುದು ಮತ್ತು ವಿವರಿಸುವುದೇ ಆಗಿದೆ ಎಂದು ನಂಬುತ್ತೇವೆ. ಎಲ್ಲ ಧರ್ಮಗಳು ಅಂತಿಮವಾಗಿ ತನ್ನದೆ ಆದ ಒಂದು ಮಹಾ ಗುರಿಯನ್ನು ಹೊಂದಿವೆ. ಆ ಮಹಾ ಗುರಿಯೇ "ಮುಕ್ತಿ"! ಮೋಕ್ಷ ಅಥವಾ ತಾವು ನಂಬಿದ ದೇವರಲ್ಲಿ, ದೇವಪುತ್ರನಲ್ಲಿ ಒಂದಾಗುವುದು, ಲೀನವಾಗುವುದು, ಅದನ್ನೇ ಆತ್ಮದ ವಿಮೋಚನೆ ಎಂದು ಕರೆಯುತ್ತಾರೆ.

ಆದರೆ ಬುದ್ಧನ ಹಾದಿಯೇ ಪ್ರತ್ಯೇಕ. ಅವನು ಅಲೌಕಿಕವನ್ನು ತಿರಸ್ಕರಿಸುತ್ತಾನೆ! ಲೌಕಿಕವನ್ನು ಪುರಸ್ಕರಿಸುತ್ತಾನೆ! ಹಾಗೆಯೇ ಆತ್ಮವನ್ನು ತಿರಸ್ಕರಿಸುತ್ತಾನೆ! ಮನಸ್ಸನ್ನು ಪುರಸ್ಕರಿಸುತ್ತಾನೆ! ತನ್ನ ಧರ್ಮದಲ್ಲಿ ಮೋಕ್ಷವಾಗಲಿ, ಮುಕ್ತಿ ಆಗಲಿ ಇಲ್ಲ, ನಾನು ಮೋಕ್ಷವನ್ನು ಮತ್ತು ಮುಕ್ತಿಯನ್ನು ನೀಡುವ ಅಥವಾ ಕರುಣಿಸುವ ಮೋಕ್ಷದಾತನಲ್ಲ ಎಂದು ಸ್ಪಷ್ಟ ಪಡಿಸುತ್ತಾನೆ. ಅದೇ ಸಂದರ್ಭದಲ್ಲಿ "ನಿಬ್ಬಾಣ" ಎಂಬ ಪದವನ್ನು ನುಡಿಯುತ್ತಾನೆ. ನಿಬ್ಬಾಣವೆಂದರೆ ಆತ್ಮದ ವಿಮೋಚನೆಯಲ್ಲ; ಮನಸ್ಸಿನ ತರಬೇತಿ! ಮನಸ್ಸಿನ ಪರಿಶುದ್ಧತೆ ಮತ್ತು ಪರಿಪೂರ್ಣತೆಯೇ ನಿಬ್ಬಾಣವೆನ್ನುತ್ತಾನೆ! ಮುಂದುವರಿದು; ನಿಬ್ಬಾಣವೆಂದರೆ ಅಷ್ಟಾಂಗ ಮಾರ್ಗದ ಆಚರಣೆ ಅಲ್ಲದೆ ಬೇರೇನೂ ಅಲ್ಲ ಎನ್ನುತ್ತಾನೆ!!

"ನಿಬ್ಬಾಣ" ಎಂಬ ಪದದ ಬಗ್ಗೆ ಬುದ್ಧನ ಭೋದನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದ ಅಥವಾ ಸಹಿಸಿಕೊಳ್ಳಲಾಗದ ಅವನ ಸಮಕಾಲೀನರು ಮತ್ತು ನಂತರದ ಬೌದ್ಧ ಧರ್ಮದ ವಿರೋಧಿಗಳು ಆ ಪದವನ್ನು ದುರುಪಯೋಗ ಪಡಿಸಿದಷ್ಟು ಮತ್ಯಾವ ಪದವನ್ನು ದುರುಪಯೋಗ ಪಡಿಸಿಕೊಂಡಿಲ್ಲ! ಏಕೆಂದರೆ, ಬುದ್ಧನ ಅರ್ಥವ್ಯಾಪ್ತಿಯ ಎದುರು ಬೇರೆಲ್ಲ ತತ್ತ್ವ ಶಾಸ್ತ್ರಜ್ಞರು ಮತ್ತು ಮತ ಸ್ಥಾಪಕರು ಅರ್ಥಹೀನರಾಗುತ್ತಾರೆ! ಅಥವಾ ಕಳೆಗುಂದುತ್ತಾರೆ! ಇದನ್ನು ಸಮರ್ಥಿಸಲು ಮೂರು ಪ್ರತ್ಯೇಕ ಘಟನೆಗಳನ್ನು ಒಂದೆಡೆ ಕಥಾ ರೂಪದಲ್ಲಿ ಇಲ್ಲಿ ತರಲು ಪ್ರಯತ್ನಿಸುತ್ತೇನೆ. ಅದೆಂದರೆ ಬುದ್ಧ ನಿಬ್ಬಾಣದ ಬಗ್ಗೆ ತನ್ನ ಭಿಕ್ಷುಗಳನ್ನು ಉದ್ದೇಶಿಸಿ ಮಾಡಿದ ಉಪದೇಶ, ಎರಡನೆಯದು ಪೂಜ್ಯರಾದವರೊಂದಿಗೆ ನಡೆಸಿದ ಚರ್ಚೆ ಮತ್ತು ಸಾರಿಪುತ್ತರೊಂದಿಗಿನ ಸಂಭಾಷಣೆಯನ್ನು ಗಮನಿಸಿ

ಒಮ್ಮೆ ಬುದ್ಧನು ಗಯೆಯಲ್ಲಿ ತನ್ನ ಅಸಂಖ್ಯಾತ ಭಿಕ್ಷು ಸಹೋದರರ ಜೊತೆ ತಂಗಿದ್ದ. ಆ ಸಂದರ್ಭದಲ್ಲಿ ಒಬ್ಬ ಭಿಕ್ಷುವು ಬುದ್ಧನನ್ನು ಉದ್ದೇಶಿಸಿ ಹೀಗೆ ಪ್ರಶ್ನಿಸತೊಡಗಿದ;

"ಗುರುದೇವಾ, ನಿನ್ನ ತತ್ತ್ವದಲೆಲ್ಲ ಅತ್ಯಂತ ಕೇಂದ್ರವಾದ ವಿಷಯವೇನು?" ಎಂದ, ಅದಕ್ಕೆ ಬುದ್ಧನು ಹೀಗೆ ಉತ್ತರಿಸಿದ;

"ಎಲೈ ಗೆಳೆಯ, ಅದು "ನಿಬ್ಬಾಣವೇ ಕೇಂದ್ರ ವಸ್ತು!" ನಿಬ್ಬಾಣ ಮತ್ತಾವುದೂ ಸಹಜ ಸಂತೋಷವನ್ನು ಸುಖವನ್ನು ನೀಡಲಾರದು

"ಗುರುದೇವಾ, ನಿಬ್ಬಾಣ ಎಂದರೆ ಏನು? ಅದರ ಪರಿಕಲ್ಪನೆ ಏನ ಅದರ ಸ್ವರೂಪವೇನು?

"ಎಲೈ ಗೆಳೆಯಾ, ಅದು ಮೋಕ್ಷವಲ್ಲ, ಮುಕ್ತಿ ಅಲ್ಲ, ಸ್ವರ್ಗದ ಸ್ಥಾನವಲ್ಲ, ಅದೊಂದು ಮಧ್ಯಮ ಮಾರ್ಗ, ಧರ್ಮ ಮಾ ರಾಗ-ಭಾವದಿಂದ ವಿಮೋಚನೆ, ಬದುಕಿನಲ್ಲಿಯೇ ನಾವು ಕಂ ಕೊಳ್ಳುವ ಪರಿಪೂರ್ಣತೆ! ಇದೆ "ನಿಬ್ಬಾಣ"! ನನ್ನ ಪ್ರಕಾರ ನಿ ಣದ ಪರಿಕಲ್ಪನೆಯಲ್ಲಿ ಮೂರು ವಿಚಾರಗಳು ಅಡಕವಾಗಿವೆ. ಅ ಳೆಂದರೆ; ಆತ್ಮದ ಮೋಕ್ಷಕ್ಕಿಂತ ಲೌಕಿಕ ಜೀವಿಗಳ ಸಂತೋಷ ಭ ಎಂಬುದು! ಮತ್ತು ಸಂತೋಷ ಇದೆ ಎಂಬುದು! ಆತ್ಮದ ವಿಚ ಮತ್ತು ಸಾವಿನ ನಂತರ ಆತ್ಮದ ಮುಕ್ತಿ ಎಂಬುದು ಸಂಪೂರ "ಪರಕೀಯ" ವಿಚಾರವೆಂಬುದೇ ಆಗಿದೆ. ನಿಬ್ಬಾಣದ ನಿಜವಾ ಅರ್ಥವೆಂದರೆ, ಸದಾ ಉರಿಯುವ ರಾಗಭಾವಗಳ ಜ್ವಾಲೆಯ ಮೆ ನಿಯಂತ್ರಣ ಸಾಧಿಸುವುದೇ ಆಗಿದೆ. ಇದೇ ಅದರ ಸ್ವರೂಪ ಕೂಡ

"ಗುರುದೇವಾ, ಸದಾ ಬೆಂಕಿಯಲ್ಲಿ ನಾವು ಯಾವ ಉಪಾ ಯನ್ನು ಉರಿಸಿಕೊಳ್ಳಬೇಕು, ಮತ್ತು ಯಾವುವು ಉರಿಯುತ್ತಿವೆ?"

"ಎಲೈ ಭಿಕ್ಷುಗಳೇ ಕೇಳಿ, ಕಣ್ಣು ಉರಿಯುತ್ತಿವೆ, ನಾಮ ರೂಪಗ ಉರಿಯುತ್ತವೆ. ನಮ್ಮೆದುರಿನ ಕಣ್ನೋಟ ಉರಿಯುತ್ತವೆ. ಕಣ ಗ್ರಹಿಸಿದ ದೃಶ್ಯಗಳು ಉರಿಯುತ್ತಿವೆ. ಹಿತವಾದ, ಅಹಿತವಾದ, ಬೇ ವಾದ ದೃಶ್ಯಗಳನ್ನೆಲ್ಲಾ ಗ್ರಹಿಸಿದ ಕಣ್ಣು ಮತ್ತು ಅದರ ಸಂವೇದ ಉರಿಯುತ್ತಿವೆ!"

"ಗುರುದೇವಾ, ಇವುಗಳ ಜೊತೆಗೆ ಮತ್ತೆ ಯಾವುದನ್ನು ನಾ ನೀಗಿಕೊಳ್ಳಬೇಕು? ಅರಿವಿನ ಉರಿಯಲ್ಲಿ ದಹಿಸಿಕೊಳ್ಳಬೇಕು?"

"ಎಲೈ ಭಿಕ್ಷುಗಳೇ, ದ್ವೇಷ, ಮೋಹಗಳನ್ನು ನೀಗಿಕೊಳ್ಳಬೇಕು ನೋಡಿ ಅವುಗಳ ಜೊತೆ ಏನೇನು ಉರಿಯುತ್ತಿವೆ ಎಂಬುದನ ಹುಟ್ಟು, ಮುಪ್ಪು, ಸಾವು ಉರಿಯುತ್ತಿವೆ, ಕಿವಿ ಉರಿಯುತ್ತಿವೆ, ವ್ಯಸ ಮತ್ತು ನಿರಾಶೆ ಉರಿಯುತ್ತಿವೆ, ಕಿವಿ ಉರಿಯುತ್ತಿವೆ, ಶಬ್ದಗಳ ಉರಿಯುತ್ತಿವೆ, ಮೂಗು ಉರಿಯುತ್ತಿದೆ, ವಾಸನೆಗಳು ಉರಿಯುತ್ತಿ ನಾಲಗೆ ಉರಿಯುತ್ತಿದೆ, ರಸನೆಗಳು, ವಿಚಾರಗಳು ಉರಿಯುತ್ತಿವ

ಅವನು ಅಲೌಕಿಕವನ್ನು ತಿರಸ್ಕರಿಸುತ್ತಾನೆ! ತನ್ನ ಧರ್ಮದಲ್ಲಿ ಮೋಕ್ಷವಾಗಲಿ, ಮುಕ್ತಿ ಆಗಲಿ ಇಲ್ಲ, ನಾನು ಮೋಕ್ಷವನ್ನು ಮತ್ತು ಮುಕ್ತಿಯನ್ನು ನೀಡುವ ಅಥವಾ ಕರುಣಿಸುವ ಮೋಕ್ಷದಾತನಲ್ಲ ಎಂದು ಸ್ಪಷ್ಟ ಪಡಿಸುತ್ತಾನೆ. ಅದೇ ಸಂದರ್ಭದಲ್ಲಿ "ನಿಬ್ಬಾಣ" ಎಂಬ ಪದವನ್ನು ನುಡಿಯುತ್ತಾನೆ. ನಿಬ್ಬಾಣವೆಂದರೆ ಆತ್ಮದ ವಿಮೋಚನೆಯಲ್ಲ; ಮನಸ್ಸಿನ ತರಭೇತಿ! ಮನಸ್ಸಿನ ಪರಿಶುದ್ಧತೆ ಮತ್ತು ಪರಿಪೂರ್ಣತೆಯೇ ನಿಬ್ಬಾಣವೆನ್ನುತ್ತಾನೆ! ಮುಂದುವರಿದು; ನಿಬ್ಬಾಣವೆಂದರೆ ಅಷ್ಟಾಂಗ ಮಾರ್ಗದ ಆಚರಣೆ ಅಲ್ಲದೆ ಬೇರೇನೂ ಅಲ್ಲ ಎನ್ನುತ್ತಾನೆ!!

ಹ ಹೊತ್ತಿ ಉರಿಯುತ್ತಿದೆ. ಏನೇನು ಹಿತಕರ, ತಕರ, ಅನಾಸಕ್ತ ಸಂವೇದನೆ ಇದೆಯೋ ಅದು ನಸ್ಸು ಗ್ರಹಿಸಿದ ಪ್ರಭಾವದಿಂದ ಹುಟ್ಟಿ ಅದು ಕೂಡ ರಿಯುತ್ತಿದೆ. ಇವುಗಳು ರಾಗ ಜ್ವಾಲೆಯಲ್ಲಿ, ಷಾಗ್ನಿಯಲ್ಲಿ ಮತ್ತು ಮೋಹಾಗ್ನಿಯಲ್ಲಿ ಉರಿಯುತ್ತಿವೆ.

"ಗುರುದೇವಾ, ಇದರಿಂದ ನಾವು ಏನನ್ನು ತೆಯುತ್ತೇವೆ? ಏನನ್ನು ಹೊಂದುತ್ತೇವೆ?

"ಎಲೈ ಭಿಕ್ಷುಗಳೇ, ಅರಿವು, ವಿಮೋಚನೆ ಮತ್ತು ತ್ತಿಯನ್ನು ಪಡೆಯುವಿರಿ!!"

"ಗುರುದೇವಾ, ಅವುಗಳನ್ನು ವಿವರಿಸಿ ಹೇಳಿ?"

"ಓ ಭಿಕ್ಷುಗಳೇ! ಇದನ್ನು ಅರ್ಥ ಮಾಡಿಕೊಂಡ ದಾತ್ತ ಜ್ಞಾನಿ ಅರಿವನ್ನು ಪಡೆಯುತ್ತಾನೆ! ಈ ವಿನಿಂದ ಅವನು ರಾಗ-ಭಾವಗಳನ್ನು ನೀಗಿಕೊಳ್ಳು ನೆ! ಅದೇ ವಿಮೋಚನೆ!! ಯಾವಾತ ರಾಗ-ಭಾವಗ ದ ವಿಮೋಚನೆ ಪಡೆಯುತ್ತಾನೋ ಅವನು ದುಃಖ ದ ಬಿಡುಗಡೆಗೊಳ್ಳು ತ್ತಾನೆ ಅಥವಾ ಮುಕ್ತನಾಗುತ್ತಾನೆ. ಗೆ ಮುಕ್ತನಾದವನು ತಾನು ಸ್ವತಂತ್ರ್ಯನಾದೆ ಎಂಬ ತ್ತಿಯನ್ನು ಪಡೆಯುತ್ತಾನೆ. ಇದೇ "ನಿಬ್ಬಾಣ!"

"ಗುರುದೇವಾ, ಹಾಗಾದರೆ ಈ ನಿಬ್ಬಾಣ ಯಲು ಇರುವ ಮುಖ್ಯ ತೊಡಕೇನು?"

"ಓ ಭಿಕ್ಷುಗಳೆ, ಅತೃಪ್ತಿಯೇ ಮೂಲ ಕೊರತೆ! ೕ ಎಲ್ಲ ಜಾಡ್ಯಗಳ ತವರು. ಇದ್ದವರಿಗೂ, ಇಲ್ಲದ ಗೂ ದುರಾಸೆ ತಪ್ಪಿದ್ದಲ್ಲ! ನಾವು ಅರಿಯಬೇಕಾದದ್ದು, ನೀಗಿಕೊಳ್ಳಬೇಕಾದದ್ದು ಅಥವಾ ದಹಿಸಿಕೊಳ್ಳಬೇಕಾದದ್ದು "ಅದನ್ನೇ" ನಂತರವೇ ನಿಬ್ಬಾಣ!

"ಗುರುದೇವಾ, ಮನುಷ್ಯನ ಈ ಯಾತನೆಗೆ ಮೂಲವೇನು? ಬಿಡುಗಡೆ ಹೇಗೆ?"

"ಓ ಭಿಕ್ಷುಗಳೇ, ಮನುಷ್ಯನ ಎಲ್ಲಾ ಯಾತನೆಯ ಮೂಲವೇ ಲೋಭ! ಲೋಭದಿಂದ ಮನಸ್ಸು ಪ್ರಚೋದಿತಗೊಳ್ಳುತ್ತದೆ. ತಮ್ಮ ಅತೃಪ್ತಿ ಕೈಗೂಡದಾಗ ಸಿಟ್ಟಿನಿಂದ ಉಗ್ರನಾಗುತ್ತಾನೆ. ಇದನ್ನೆ "ಮೋಹ" ಎನ್ನುವುದು. ಮನುಷ್ಯ ಮೋಹದಿಂದ ಕುರುಡನಾಗುತ್ತಾನೆ. ಇದರಿಂದ ಮನಸ್ಸು ತನ್ನ ಚೇತನವನ್ನು ಕಳೆದುಕೊಳ್ಳುತ್ತದೆ. ಮೋಹದಿಂದ ಮನಸ್ಸು ಹೀಗೆ ಬಂಧಿತವಾಗುತ್ತದೆ. ಆಗ ಆತ ತನ್ನ ದುರುದೃಷ್ಟದ ಬಗ್ಗೆ ಯೋಚಿಸುತ್ತಾನೆ. ಜೊತೆಗೆ ಇತರರ ದುರದೃಷ್ಟದ ಬಗ್ಗೆಯೂ ಯೋಚಿಸಿ ತುಲನೆ ಮಾಡುತ್ತಾ ಮಾನಸಿಕವಾಗಿ ಝರ್ಜರಿತನಾಗುತ್ತಾನೆ. ಇದೇ ಯಾತನೆಯ ಮೂಲ, ದುರಾಸೆ, ಕೋಪ ಮತ್ತು ಭ್ರಾಂತಿಯಿಂದ ಹೊರಬಂದಾಗಲೇ ಬಿಡುಗಡೆ!"

"ಗುರುದೇವಾ. ಹೀಗೆ ನಿಬ್ಬಾಣಕ್ಕೆ ಅಡ್ಡಿಯಾಗುವ ರಾಗ-ಭಾವಗಳಲ್ಲಿ ಎಷ್ಟು ವಿಧ? ಅವುಗಳ ಸ್ವರೂಪವೇನು?"

"ಎಲೈ ಭಿಕ್ಷುಗಳೇ, ರಾಗ-ಭಾವಗಳಲ್ಲಿ ಮೂರು ವಿಧ. ಆಸೆಗಳಿಗೆ ದ್ವೇಷಗಳಿಗೆ ಮತ್ತು ಅಜ್ಞಾನಕ್ಕೆ ಸಂಬಂಧಪಟ್ಟವುಗಳು! ಕಾಮ, ಮೋಹ ಮತ್ತು ಲೋಭ ಎಲ್ಲ ಬಗೆಯ ಆಸೆಗಳಿಗೆ ಸಂಬಂಧಿಸಿದವುಗಳು! ಭ್ರಮೆ, ದಡ್ಡತನ, ಮೂರ್ಖತನ, ಮೋಹ ಮತ್ತು ಅವಿದ್ಯೆ ಎಲ್ಲ ಬಗೆಯ ಅಜ್ಞಾನಕ್ಕೆ ಸಂಬಂಧ ಪಟ್ಟವುಗಳು! ಓ ಭಿಕ್ಷುಗಳೇ, ಆದುದರಿಂದ ಪ್ರಾಪಂಚಿಕ ವಸ್ತುಗಳಲ್ಲಿ ನೀವು ಪಾಲುದಾರರಾಗಬೇಡಿ. ನನ್ನ ಸಿದ್ಧಾಂತದ ಪಾಲುದಾರರಾಗಿ. ನಿಮ್ಮ ಮೇಲಿನ ನನ್ನ ಸಹಾನುಭೂತಿಯಿಂದ ಇದನ್ನು ನಾನು ದೃಢ ಪಡಿಸುತ್ತೇನೆ" ಎನ್ನುತ್ತಾನೆ.

ಮತ್ತೊಂದು ಸಂದರ್ಭದಲ್ಲಿ ಸಾರಿಪುತ್ತನನ್ನು ಉದ್ದೇಶಿಸಿದ ಭಿಕ್ಷು ಸಹೋದರರು ಹೀಗೆ ಪ್ರಶ್ನಿಸುತ್ತಾರೆ;

"ಗುರುವೇ, "ನಿಬ್ಬಾಣ" ಎಂದರೆ ಏನು?" ಆಗ ಸಾರಿಪುತ್ತನು ಭಿಕ್ಷುಗಳನ್ನು ಉದ್ದೇಶಿಸಿ;

"ಭಿಕ್ಷು ಸಹೋದರರೇ, ದುರಾಸೆ ಕೆಟ್ಟದ್ದು, ಯಾವಾಗಲೂ ಕೆಟ್ಟದ್ದು ಅಸಹ್ಯಕರವಾದದ್ದು. ಈ ದುರಾಸೆ ಮತ್ತು ಅಸೂಯೆಯನ್ನು ನೀಗಿಕೊಳ್ಳಲು ಮಧ್ಯಮ ಮಾರ್ಗವೊಂದೇ ಸರಿಯಾದ ದಾರಿ. ಅದು ನಮಗೆ ನೋಡಲು ಕಣ್ಣುಗಳನ್ನು ದಯಪಾಲಿಸುತ್ತದೆ. ಅರ್ಥಮಾಡಿಕೊಳ್ಳಲು ಮನಸ್ಸು ನೆರವಾಗುತ್ತದೆ. ಇವು ನಮ್ಮನ್ನು ಶಾಂತಿ, ಒಳನೋಟ, ಜ್ಞಾನೋದಯ ಮತ್ತು ನಿಬ್ಬಾಣದತ್ತ ಮುನ್ನಡೆಸಲು ಸಹಕಾರಿ ಆಗುತ್ತದೆ."

"ಗುರುವೇ, ಈ ಮಧ್ಯಮ ಮಾರ್ಗ ಎಂದರೆ ಏನು?"

"ಭಿಕ್ಷು ಸಹೋದರರೇ, ಅದು ಬೇರೇನೂ ಅಲ್ಲ, ಆರ್ಯ ಅಷ್ಟಾಂಗ ಮಾರ್ಗವೇ ಸರಿ. ಅದೆಂದರೆ, ಋಜು ಗುರಿ, ಋಜು ನುಡಿ, ಋಜು ಕಾರ್ಯ, ಋಜು ಜೀವನ ವಿಧಾನ, ಋಜು ಪ್ರಯತ್ನ, ಋಜು ಮನಸ್ಸು ಮತ್ತು ಋಜು ಏಕಾಗ್ರತೆ, ಇದನ್ನೆ" ಮಧ್ಯಮ ಮಾರ್ಗ ಎನ್ನುವುದು.

"ಹೌದು, ಗುರುವೇ, ಕೋಪ, ಕೇಡೆಣಿಕೆ, ಅಸೂಯೆ, ಹೊಟ್ಟೆ ಕಿಚ್ಚು, ಜಿಪುಣತನ, ದುರಾಸೆ, ಢೋಂಗಿತನ, ವಂಚನೆ, ದುರಹಾಂಕಾರ ಮತ್ತು ಧನ ಲೋಭ ಹಾಗೂ ಆಲಸ್ಯ ಕೆಟ್ಟದು". ಎಂದಾಗ ಸಾರಿಪುತ್ತ ಮತ್ತೆ ಭಿಕ್ಷುಗಳನ್ನು ಉದ್ದೇಶಿಸಿ;

"ಓ ಭಿಕ್ಷುಗಳೇ, ಆದ್ದರಿಂದಲೇ ನಿಬ್ಬಾಣದಲ್ಲಿ ಸತ್ಯ ಪಥವಿದೆ", ಎನ್ನುತ್ತಾನೆ. ಇದೇ ರೀತಿ ಮತ್ತೊಂದು ಸಂದರ್ಭದಲ್ಲಿ ಪೂಜ್ಯ ರಾಧನು ಬುದ್ಧನನು ಸಂಧಿಸಿ ಹೀಗೆ ಪ್ರಶ್ನಿಸುತ್ತಾನೆ!.

"ತಂದೆಯೇ, "ನಿಬ್ಬಾಣದ" ಉದ್ದೇಶವೇನು? ಎನ್ನುತ್ತಾನೆ. ಅದಕ್ಕೆ ಬುದ್ಧನು ಹೀಗೆ ಉತ್ತರಿಸುತ್ತಾನೆ;

"ಎಲೈ ರಾಧನೇ, ಇದೊಂದು ಧರ್ಮ ಮಾರ್ಗ, ರಾಗ-ಭಾವದಿಂದ ವಿಮೋಚನೆ!"

"ತಂದೆಯೇ, "ನಿಬ್ಬಾಣದ" ಗುರಿ ಏನು?"

"ಎಲೈ ರಾಧನೇ, ನಿಬ್ಬಾಣ ಈ ಬದುಕಿನಲ್ಲಿ ಗೋಚರವಾಗುತ್ತದೆ! ಕೇವಲ ಮುಂದಿನ ಜೀವನದಲ್ಲಿ ಅಲ್ಲ. ವಿವೇಕಿ ಆದ ಅದು ಆಹ್ವಾನಿಸುತ್ತದೆ. ಆಕರ್ಷಿಸುತ್ತದೆ ಮತ್ತು ಸಮೀಪಕ್ಕೆ ಸೆಳೆದುಕೊಳ್ಳುತ್ತದೆ. ಏಕೆಂದರೆ, ಬದುಕಿನ ಬೇರು ನಿಬ್ಬಾಣದಲ್ಲಿ ಬಿಟ್ಟಿರುವುದರಿಂದಲೇ, ಧರ್ಮ ಮಾರ್ಗದಲ್ಲಿ ಬದಕಲು ಸಾಧ್ಯವಾಗಿದೆ. ನಿಬ್ಬಾಣವೇ ಅದರ ಗುರಿ. ನಿಬ್ಬಾಣವೇ ಅದರ ಅಂತ್ಯ." ಎನ್ನುತ್ತಾನೆ. ಆಗ ಪೂಜ್ಯ ರಾಧನು ತನ್ನ ಗುರುವಾದ ಬುದ್ಧನನ್ನು ಉದ್ದೇಶಿಸಿ ಹೀಗೆ ವಂದಿಸುತ್ತಾನೆ;

"ಹೌದು ಗುರುದೇವಾ, ನಿನ್ನ ದೃಷ್ಟಿಕೋನವೇ ಜೀವನ್ಮುಖಿಯಾದದ್ದು... ವಿವೇಕದಿಂದ ಕೂಡಿದ್ದು... ನಿನ್ನ ಗುರಿ ನಿಬ್ಬಾಣದಲ್ಲಿ ನೆಲೆನಿಂತಿದ್ದು...!" ಎನ್ನುತ್ತಾನೆ. □

'SAMVADA' Kannada Monthly, JANUARY 2006 RNI-KAR KAN/2002/9246 CPMG/KA/BGW-706/2003-05

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ.....

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು
ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆ (ರೂ.125/-)
* ಉದ್ಯೋಗದಲ್ಲಿ ಶೇಕಡ 5 ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್ ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ – ಉತ್ತೇಜನ ನೀಡಿ

ಕರ್ನಾಟಕ ವಾರ್ತೆ
Karnataka Information